
ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ

ಗಾಂಧೀ ಬಳಗದ ವಿದೇಶಿಯರು

ಕೆ. ಎಸ್. ನಾರಾಯಣಸ್ವಾಮಿ



ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಗಾಂಧೀ ಬಳಗದ ವಿದೇಶಿಯರು

ಕೆ. ಎಸ್. ನಾರಾಯಣಸ್ವಾಮಿ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು - 560001, ದೂರವಾಣಿ : 080-22261967

ಗಾಂಧಿ ಬಳಗದ ವಿದೇಶಿಯರು
ಲೇಖಕರು : ಕೆ.ಎಸ್. ನಾರಾಯಣ ಸ್ವಾಮಿ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಮೊದಲ ಮುದ್ರಣ : 1996

ಪರಿಷ್ಕೃತ ಎರಡನೆ ಆವೃತ್ತಿ : 2019


ಪ್ರತಿಗಳು : 1000

ಪುಟಗಳು : XVIII + 158

ಬೆಲೆ : 89/–

ISBN No : 978-81-941136-4-5

ಮುದ್ರಕರು : ಕ್ರಿಯೇಟಿವ್‌ಗೀಕ್ಸ್
ಯಾದವ ಕಾಲೇಜು ರಸ್ತೆ,
ಮಾಧವನಗರ
ಬೆಂಗಳೂರು – 560001
ದೂರವಾಣಿ : 080 40927049




ಅರ್ಪಣೆ

ದಕ್ಷಿಣ ಆಫ್ರಿಕಾದ ವರ್ಣಬೇಧ ನೀತಿ ವಿರುದ್ಧದ
ಹೋರಾಟದಲ್ಲಿ ಮಹಾತ್ಮ ಗಾಂಧಿ ಅವರ ಸಂಗಾತಿಯಾಗಿದ್ದ

ಡಾ. ಹೆರ್ಮನ್ ಕಾಲೆನ್‌ಬಾಕ್ ಅವರಿಗೆ

ಗೌರವಪೂರ್ವಕವಾಗಿ



ನಮ್ಮನಮ್ಮಲ್ಲಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ ಮಹಾತ್ಮಾ ಗಾಂಧಿ ಅವರ ವಿದೇಶಿ ಮಿತ್ರರ ಕುರಿತಾದ "ಗಾಂಧೀ ಬಳಗದ ವಿದೇಶಿಯರು" ಕೃತಿಯನ್ನು ಪ್ರಕಟಿಸಲು ನನಗೆ ಅತ್ಯಂತ ಹರ್ಷವಾಗುತ್ತದೆ.

ಗಾಂಧೀ ಬಳಗದ ವಿದೇಶಿಯರು ಕೃತಿಯನ್ನು ಶ್ರೀ ಕೆ.ಎಸ್. ನಾರಾಯಣಸ್ವಾಮಿ ಅವರು ಬರೆಯುವಾಗ "ಗಾಂಧಿ ಅವರ ಸತ್ಯಾಗ್ರಹ, ಜೀವನ, ಪ್ರಯೋಗಗಳಲ್ಲಿ ಪಾಲ್ಗೊಂಡ ವಿದೇಶಿ ಬಂಧುಗಳ ಜೀವನ ಪರಿವರ್ತನೆ ನಮಗೂ ಸ್ಫೂರ್ತಿ ನೀಡುತ್ತದೆ. ಈ ಬಳಗ, ಕಾಲಕ್ರಮೇಣ ಬೃಹತ್ ಪ್ರಮಾಣದಲ್ಲಿ ಬೆಳೆದು ಬಂದು ವಿಶ್ವಮಾನವ ಸಮಾಜ ರೂಪುಗೊಂಡೀತೆಂಬ ಸದಾಶಯದಿಂದ ಈ ಗ್ರಂಥವನ್ನು ಕನ್ನಡಿಗ ಸಹೃದಯರಿಗೆ ಸಮರ್ಪಿಸುತ್ತಿದ್ದೇನೆ." ಎಂಬ ಮಹತ್ತರವಾದ ಆಶಯದಿಂದ ಈ ಕೃತಿಯನ್ನು ರಚಿಸಿದ್ದಾರೆ. ಅವರ ಈ ಆಶಯ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಸಾಹಿತ್ಯ, ಕಲೆ, ಸಾಮಾಜಿಕ ರಂಗದಲ್ಲಿ ಭಾರತೀಯತೆಗೆ ಅಮೂಲ್ಯ ಕೊಡುಗೆ ನೀಡಿದ ನೂರಾರು ವಿದೇಶಿಯರು ನಮಗೆ ಸ್ವಗೋಚರವಾಗುವಂತೆ ಮಾಡಿದೆ. ಅಂಥಹವರಲ್ಲಿ ವಿಲಿಯಂ ಡಿಗ್ಬಿ, ಲಾರ್ಡ್‌ಮೆಟ್‌ಕಾಫ್, ಎ. ಓ. ಹ್ಯೂಂ, ಡಾ. ಅನಿಬೆಸೆಂಟ್, ಪಾರಸಿ ರುಸ್ತುಂ, ಮೌಲಾನಾ ಮಹ್ಮದ್ ಆಲಿ, ದಾದಾ ಬಾಯ್ ನವರೋಜಿ, ಮಿಸ್ ಮೇರಿ ಚೆಸ್ಲಿಂ ಇನ್ನು ಮುಂತಾದವರನ್ನುಇಲ್ಲಿ ಸ್ಮರಿಸಬಹುದು.

ಈ ಕೃತಿಗೆ ಮುನ್ನುಡಿಯನ್ನು ಬರೆದ ಚಿ.ನಾ. ಮಂಗಳಾ ಅವರು "ಶ್ರೀ ನಾರಾಯಣಸ್ವಾಮಿ ಅವರ ಸರಳ, ಸುಂದರ, ಶಕ್ತಿಶಾಲಿ ಶೈಲಿಯಲ್ಲಿ ಸಾಕಾರರೂಪ ತಾಳಿದ ಈ ಕೃತಿ ಇವರಲ್ಲಿನ ಜೀವನ ಚಿತ್ರಗಳನ್ನು ಬದುಕಿನ ಭಾಗವಾಗಿ ಪದಗಳಾಗುವ ಜೊತೆಗೆ ಓದುಗರಿಗೆ ಗಾಂಧಿ ಮಾರ್ಗದ ದರ್ಶನ ಮಾಡಿಸಿರುವುದೇ ಕೃತಿಯ ವೈಶಿಷ್ಟ್ಯ" ಎಂದು ದಾಖಲಿಸಿರುವ ಮಾತುಗಳು ಅಕ್ಷರಶಃ ಸತ್ಯವಾದುದಾಗಿದೆ. ಗಾಂಧಿ

ಬಳಗದ ವಿದೇಶಿಯರಲ್ಲಿ ದಕ್ಷಿಣ ಆಫ್ರಿಕಾದ ಹೆನ್ರಿ ಮತ್ತು ಮಿಲ್ಲಿ ಗ್ರಹಾಂ ಪೋಲಾಕ್ ಅವರಿಂದ ಆರಂಭವಾಗಿ ಏಳು ಜನರ ಜೀವನ ಚಿತ್ರಣದೊಂದಿಗೆ ಮ್ಯಾಡಲಿನ್ ಸ್ಲೇಡ್, ರೋಮೇನ್‌ರೋಲಾ, ಸಿ.ಎಫ್. ಆಂಡ್ರೋಸ್, ಅಲ್ಬರ್ಟ್ ವೆಸ್ಟ್, ಜೋಸೆಫ್ ಡೋಕ್, ಚಾರ್ಲಿ ಚಾಪ್ಲಿನ್, ಪಾದ್ರಿ ರೆವರೆಂಡ್ ಹೈಲ್ಸ್ ಹೋಮ್ಸ್, ರಿಚರ್ಡ್ ಗ್ರೆಗ್, ಕ್ಯಾಥರಿನ್ ಹಿಲ್‌ಮನ್, ಫ್ರಾನ್ಸಿನ ಶಾಂತಿಧೂತ ಸಿಸಿಲಿಯ, ಡಯಾನೋಡೋಲ್ಚಿ, ಅಮೇರಿಕಾದ ರೆವರೆಂಡ್ ರಾಲ್ಫ್ ರಿಚರ್ಡ್ ಖೈಥಾನ್‌ರವರೆಗೆ ಸುಮಾರು 20 ಜನರು ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾಗಿ ಸರಳ ಸುಂದರ ಸಮಾಜಮುಖಿ ಜೀವನವನ್ನು ಆರಿಸಿಕೊಂಡು ಬದುಕಿ ಬಾಳಿದ ಧೀಮಂತ ವ್ಯಕ್ತಿಗಳ ಜೀವನಗಳು ನಮ್ಮ ಸಂಕಷ್ಟಗಳ ಹಾದಿಯಲ್ಲಿ ಜೀವನೋತ್ಸಾಹ ತುಂಬುವ ಕೈದೀವಿಗೆಗಳಾಗಿವೆ.

ಈ ಕೃತಿಯನ್ನು ಓದಿದ ಮತ್ತು ಓದಿಸಿ ಕೇಳುವ ಪ್ರತಿಯೊಬ್ಬರೂ, ನೊಂದವರ ನೋವನ್ನು ನಿವಾರಿಸಲು ನಡುಕಟ್ಟಿ ನಿಲ್ಲಲಾರದೆ ಇರರು. ಹಾಗೆ ಆಕಾಶದಲ್ಲಿ ಮಿನುಗುವ ನಕ್ಷತ್ರಗಳಾಗಿ ವಿದೇಶಿ ಬಳಗದವರು ನಮಗೆ ಸದಾ ದಾರಿ ತೋರುವ ಬೆಳಕಾಗಿದ್ದಾರೆ ಎಂಬುದು ನಮ್ಮೆಲ್ಲರ ಸ್ಮೃತಿಪಟಲದಲ್ಲಿ ಅಚ್ಚೊತ್ತಿದೆ. ಇಂಥಹ ಅಪೂರ್ವ ವಜ್ರಗಳನ್ನು ಕನ್ನಡಿಗರಿಗೆ ಪರಿಚಯಿಸಿದ ಗಾಂಧೀ ಭವನದ ಹಿಂದಿನ ಕಾರ್ಯದರ್ಶಿಗಳಾದ ಕೆ.ಎಸ್. ನಾರಾಯಣಸ್ವಾಮಿ ಅವರಿಗೆ ನಾವೆಲ್ಲರೂ ಚಿರಋಣಿಗಳು. ಕೆ.ಎಸ್. ನಾರಾಯಣಸ್ವಾಮಿ ಅವರು ಕನ್ನಡ ನಾಡಿನ ಹೆಸರಾಂತ ಲೇಖಕರು ಸಾಹಿತಿಗಳಾಗಿ ಅವರು ರಚಿಸಿದ ಕೃತಿಗಳಾದ "ನನ್ನ ಆದರ್ಶ ಗ್ರಾಮ, ಗಾಂಧೀ ಮತ್ತು ಟಾಲ್ಸ್ ಟಾಯ್, ಸತ್ಯಾನ್ವೇಷಣೆಕನ ಜೈತ್ರಯಾತ್ರೆ, ನನ್ನ ಕನಸಿನ ಸ್ವರಾಜ್ಯ, ಭಾರತ ಸ್ವಾತಂತ್ರ್ಯ ಸಮರದ ಮೈಲಿಗಲ್ಲುಗಳು ಮತ್ತು ವಿಶ್ವಜ್ಯೋತಿಗಳು" ಅಂದಿಗೂ – ಇಂದಿಗೂ ಅಮೂಲ್ಯ ರತ್ನಗಳಾಗಿವೆ.

ಇಂತಹ ಮೇರು ಕೃತಿಯನ್ನು ಮರು ಮುದ್ರಣ ಮಾಡಿರುವುದು ಹಾಗೂ ಆಂಗ್ಲ ಭಾಷೆಗೆ ಅನುವಾದಿಸಿ ಪ್ರಕಟಣೆಗೆ ಸಜ್ಜುಗೊಳಿಸುತ್ತಿರುವ ಗಾಂಧಿ ಭವನದ ಗೌರವ ಕಾರ್ಯದರ್ಶಿಗಳಾದ ಶ್ರೀಮತಿ. ಇಂದಿರಾ ಕೃಷ್ಣಪ್ಪ ಅವರಿಗೆ ತುಂಬು ಹೃದಯದ ಧನ್ಯವಾದಗಳು.

ಈ ಪರಿಷ್ಕೃತ ಆವೃತ್ತಿಯನ್ನು ಅಂದವಾದ ವಿನ್ಯಾಸದೊಂದಿಗೆ ಮುದ್ರಿಸಿದ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಮತ್ತು ತಂಡದವರಿಗೆ ಗಾಂಧೀ ಭವನದ ಪರವಾಗಿ ನಮನಗಳು ಸಲ್ಲುತ್ತವೆ.

ಡಾ. ವೂಡೇ ಪಿ. ಕೃಷ್ಣ

ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ನಿಮ್ಮೊಂದಿಗೆ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, 'ಗಾಂಧೀ ಬಳಗದ ವಿದೇಶಿಯರು', ಈ ಕೃತಿಯನ್ನು ಲೋಕಾರ್ಪಣೆಮಾಡಲು ಹರ್ಷವೆನಿಸುತ್ತದೆ. ಮಹಾತ್ಮಾಜೀ ಅವರನ್ನು ತಿಳಿಯುವ ಅರ್ಥೈಸಿಕೊಳ್ಳುವ ಆಯಾಮಗಳಲ್ಲಿ ಅವರ ಒಡನಾಟದಲ್ಲಿದ್ದು, ಅವರ ಮಾರ್ಗವನ್ನೂ ಒಪ್ಪಿಕೊಂಡು ನಡೆದ, ನೂರಾರು ವಿದೇಶಿಗರ ಬದುಕು ಬರಹ, ಭಾಷಣಗಳೂ ಅತ್ಯಂತ ಪ್ರಮುಖವಾದುದಾಗಿದೆ. ಕರ್ನಾಟಕದಲ್ಲಿ ಗಾಂಧಿ ಮಾರ್ಗಿಯಾಗಿ ನುಡಿದು-ನಡೆದ ಕೆ.ಎಸ್. ನಾರಾಯಣಸ್ವಾಮಿ ಅವರು, ಅಂಥಹ ಆರು ಜನ ವಿದೇಶಿಯರ ಕುರಿತು ಜೀವನ ಚರಿತ್ರೆಯ ರೂಪದಲ್ಲಿ ಈ ಕೃತಿಯನ್ನು ರಚಿಸಿದ್ದಾರೆ. ಕೇವಲ ಮನೆ ಬದಲಾವಣೆ ಅಥವಾ ಸ್ಥಳಾಂತರವಾದರೆ, ಹುಯಿಲಿಡುವ ನಮಗೆ, ನಾಡು, ನುಡಿ, ಒಡನಾಡಿಗಳು, ಎಲ್ಲವನ್ನು ಬಿಟ್ಟು, ಭಾರತಕ್ಕೆ ಬಂದು ಗಾಂಧೀಜಿ ಅವರ ತತ್ವ-ಆದರ್ಶಗಳಿಗೆ ಮನಗೊಟ್ಟು, ಇಲ್ಲಿ ನೆಲೆಸಿ, ನಡೆದಾಡಿದ ಈ ವಿದೇಶಿಯರ ಜೀವನ ಬಹುದೊಡ್ಡ ಆದರ್ಶವಾಗಿ ಕಂಡು ಬರುತ್ತದೆ. ಅಂಥಹ ಆದರ್ಶರಾದ ವಿದೇಶಿ ಮಹಿಳೆಯರ ಜೀವನವೂ ಮನಸೂರೆಗೊಂಡಿದೆ. ಅಂಥಹವರಲ್ಲಿ ಈ ಕೆಳಕಂಡವರು ಪ್ರಮುಖರಾಗಿದ್ದಾರೆ.

ಡೆನ್‌ಮಾರ್ಕ್‌ನ "ಎಸ್ತರ್ ಫಿಯರಿಂಗ" ಅತಿ ಚಿಕ್ಕ ವಯಸ್ಸಿನಲ್ಲಿ ಮಿಷನರಿಯಲ್ಲಿ ಸೇವಾದೀಕ್ಷೆ ಪಡೆದ ಈಕೆ ಮದ್ರಾಸ್‌ನಲ್ಲಿ ತಮಿಳು ಭಾಷೆ ಮತ್ತು ಉನ್ನತ ಶಿಕ್ಷಣ ಪಡೆದ ನಂತರ ಭಾರತದಲ್ಲಿನ ಅಂದಿನ ಶಿಕ್ಷಣ ವ್ಯವಸ್ಥೆಯನ್ನು ಅರಿತುಕೊಳ್ಳಲು ದೇಶಾದ್ಯಂತ ತಿರುಗಾಡಿದರು. ಕ್ರಿಶ್ಚಿಯನ್ ಸಂಸ್ಥೆಗಳು ನೀಡುತ್ತಿರುವ ಶಿಕ್ಷಣ, ರಾಷ್ಟ್ರೀಯ ಶಿಕ್ಷಣ ಪ್ರಯೋಗ ಶಾಲೆಗಳು, ರವೀಂದ್ರನಾಥರ ಶಾಂತಿನಿಕೇತನ, ಅನಿಬೆಸೆಂಟರ ಥಿಯಾಸಫಿ ಸಂಸ್ಥೆ, ಶ್ರದ್ಧಾನಂದರ ಕಾಂಗ್ರಿ ಗುರುಕುಲ ಇನ್ನೂ ಮುಂತಾದ ಸಂಸ್ಥೆಗಳನ್ನು, ಶಾಲೆಗಳನ್ನು ಸಂದರ್ಶಿಸಿ ಭಾರತದ ಅಂದಿನ ಶಿಕ್ಷಣ ವ್ಯವಸ್ಥೆ, ಭಾರತೀಯರನ್ನು ಸಂಪೂರ್ಣವಾಗಿ ಒಳಗೊಳ್ಳುತ್ತಿಲ್ಲವೆಂದು ಅರಿತಳು. ತದನಂತರದಲ್ಲಿ ಗಾಂಧಿ ಅವರ ಸಬರಮತಿ ಆಶ್ರಮದ ಭೇಟಿ, ಗಾಂಧಿ ಅವರೊಂದಿಗಿನ ಪತ್ರ ವ್ಯವಹಾರ, ಗಾಂಧೀಜಿ ಅವರ

'ನಯೀ ತಾಲಿಂ'ನಂತೆ ಶಿಕ್ಷಣ ನೀಡಲು ಸಜ್ಜುಗೊಂಡು, ಡಾ. ಮೆನನ್ ಮತ್ತು ಫೀಟ್‌ಸನ್‌ರವರೊಡಗೂಡಿ ಗಾಂಧಿ ಮಾರ್ಗದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ತದನಂತರ ಅನಾರೋಗ್ಯದ ನಿಮಿತ್ತ ಇಂಗ್ಲೆಂಡಿಗೆ ವಲಸೆಹೋಗಿ ಅಲ್ಲಿ ಬಡಜನರ ಸೇವಾ ಆಶ್ರಮವನ್ನು ಸ್ಥಾಪಿಸಿದರು. ಇವರು ಡೇನಿಷ್ ಭಾಷೆಯಲ್ಲಿ ಗಾಂಧಿ ಜೀವನ ಚರಿತ್ರೆ ಬರೆಯಲು ಆಶಿಸಿದ್ದರು. ಇಂಗ್ಲೆಂಡ್, ಭಾರತ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಸುತ್ತಾಡಿ ಮಾಹಿತಿ ಸಂಗ್ರಹಿಸುವುದು ಅನಾರೋಗ್ಯದ ಎಸ್ತರ್‌ಗೆ ಕಷ್ಟವಾಗುವುದೆಂಬುದನ್ನು ಅರಿತು, ಗಾಂಧೀಜಿ ಅವರೇ ಈ ಸಾಹಸಕ್ಕೆ ಕೈ ಹಾಕಬಾರದೆಂದು ತಿಳುವಳಿಕೆ ಹೇಳಿದ್ದರು.

ಮಾರ್ಜೋರಿ ಸೈಕ್ಸ್ ಕೇಂಬ್ರಿಡ್ಜ್‌ನಲ್ಲಿ ಓದುತ್ತಿರುವಾಗಲೇ ಭಾರತ ಸ್ವಾತಂತ್ರ್ಯ ಹೋರಾಟ ಮತ್ತು ಮಹಾತ್ಮ ಗಾಂಧಿ ಅವರ ಅಹಿಂಸಾತ್ಮಕ ಹೋರಾಟದ ತುಣುಕು ಸುದ್ದಿಗಳು ಭಾರತೀಯ ವಿದ್ಯಾರ್ಥಿಗಳ ಮೂಲಕ ಕಿವಿಯ ಮೇಲೆ ಬೀಳುತ್ತಿದ್ದವು. ಮುಂದೆ ತಾನು ಶಿಕ್ಷಣ ಕ್ಷೇತ್ರದಲ್ಲೇ ಮುಂದುವರಿಯಲು ಇಚ್ಛಿಸಿ ಶಿಕ್ಷಣಶಾಸ್ತ್ರವನ್ನು ಅಭ್ಯಾಸ ಮಾಡಿದರು. 1928ರಲ್ಲಿ ಮದ್ರಾಸ್‌ಗೆ ಬೆಂಟಿಂಕ್ ಮಹಿಳಾ ಪ್ರೌಢಶಾಲೆಯ ಶಿಕ್ಷಕಿಯಾಗಿ ಭಾರತಕ್ಕೆ ಬಂದಿಳಿದ ಸೈಕ್, ಗಾಂಧಿಅವರ ರಚನಾತ್ಮಕ ಕಾರ್ಯಗಳಿಂದ ಪ್ರಭಾವಿತರಾಗಿ ಮದ್ರಾಸಿನ ಮಹಿಳಾ ಸೇವಾ ಸಂಘಗಳ ಮೂಲಕ ಗಾಂಧಿ ಕಾರ್ಯಗಳಲ್ಲಿ ಭಾಗವಹಿಸಿತೊಡಗಿದಳು. ಸ್ವಚ್ಛತೆ, ಹಿಂದು ಮುಸ್ಲಿಂ ಐಕ್ಯತೆ, ಖಾದಿ ಗ್ರಾಮೋದ್ಯೋಗ ಅಸ್ಪೃಶ್ಯತಾ ನಿವಾರಣೆಯ ಕೆಲಸಗಳು, ಇವರನ್ನು ಬಹುವಾಗಿ ಆಕರ್ಷಿಸಿದವು. ಅದರೊಂದಿಗೆ ರವೀಂದ್ರನಾಥ ಠಾಗೂರ್ ಅವರ ಶಾಂತಿನಿಕೇತನ, ಧ್ಯೇಯೋದ್ದೇಶಗಳಿಂದಲೂ ಪ್ರಭಾವಿತರಾದರು. ಗಾಂಧಿ ಸೇವಾಗ್ರಾಮದಲ್ಲಿ ಇರುವಂಥ ಅವಕಾಶ ದೊರೆತಾಗ ಮುಕ್ತ ಮನಸ್ಸಿನಿಂದ ಅಲ್ಲಿನ ಕೆಲಸ ಕಾರ್ಯಗಳಲ್ಲಿ ತೊಡಗಿದರು. ಗಾಂಧಿ ಅವರ ನಿಕಟ ಸಂಪರ್ಕದಿಂದ ಜೀವನ ಶಿಕ್ಷಣ ಪಡೆದ ಆಕೆ, ಶಾಂತಿನಿಕೇತನದಲ್ಲಿ ಶಿಕ್ಷಕಿಯಾದರು. ಗಾಂಧೀಜಿ ಅವರಿಗೆ ರೋಮೆನ್‌ರೊಲಾರಿಂದ ಬರುತ್ತಿದ್ದ ಫ್ರೆಂಚ್ ಭಾಷೆಯ ಪತ್ರಗಳನ್ನು ಭಾಷಾಂತರಿಸಿ ಹೇಳುವ ಅವಕಾಶ ಮಾರ್ಜೋರಿಗೆ ದೊರಕಿದಾಗ, ಭಯ ಮಿಶ್ರಿತ ಸಂತೋಷದಿಂದ ಒಪ್ಪಿಕೊಂಡರು. ಗಾಂಧಿ ಮತ್ತು ಶಿಕ್ಷಣ ತಜ್ಞರು ಚರ್ಚಿಸಿ ತಯಾರಿಸಿದ 'ನಯಿಂ ತಾಲೀಂ' ನಕ್ಷೆ, 'ವಾರ್ದಾ ಶಿಕ್ಷಣ ಯೋಜನೆ'ಯ ಅಭಿಕ್ರಮದಲ್ಲಿ

ಸಕ್ರಿಯರಾಗಿ ತೊಡಗಿಕೊಂಡರು. ಪ್ರಾರ್ಥನಾ ಸಭೆಗಳಲ್ಲಿ, ಕ್ರೈಸ್ತ ಧರ್ಮದ ಭಕ್ತಿಗೀತೆಗಳನ್ನುಹಾಡುತ್ತಾ, ಆಶ್ರಮವಾಸಿಗಳ ಆತ್ಮೀಯ ಮಿತ್ರಳಾದಳು. ಭಾರತ–ಇಂಗ್ಲೆಂಡ್‌ನಲ್ಲಿ ಓಡಾಡುತ್ತಾ, ಸಿ.ಎಫ್. ಆಂಡ್ರೂಸರ ಜೀವನ ಕಥೆಗಾಗಿ ಸಂಶೋಧನೆ, ಮಾಹಿತಿ ಸಂಗ್ರಹಣೆ ಕೆಲಸದಲ್ಲಿ ನಿರತರಾದರು. 1947ರಲ್ಲಿ ಅವರು ಆಂಡ್ರೂಸರ ಜೀವನಚರಿತ್ರೆ ಸಿದ್ದಗೊಳಿಸಿದಾಗ, ಗಾಂಧಿ ಅವರೇ ಅದಕ್ಕೆ ಕಿರು ಮುನ್ನುಡಿ ಬರೆದರು. 1947ರ ಹೊತ್ತಿಗೆ ದೇಶಕ್ಕೆ ದೇಶವೇ ಸ್ವಾತಂತ್ರದ ಸಂಭ್ರಮದಲ್ಲಿದ್ದರೆ ಗಾಂಧಿ ಹಿಂದು – ಮುಸ್ಲಿಂ ಐಕ್ಯತೆಗಾಗಿ ಪ್ರಾಣ ಒತ್ತೆ ಇಟ್ಟು ಶಾಂತಿ ನೆಲೆಸಲು ನಡೆಸಿದ ಪ್ರಯತ್ನ ಸಕಲರನ್ನು ಆಶ್ಚರ್ಯಚಕಿತರನ್ನಾಗಿಸಿತ್ತು. ಆ ಹೊತ್ತಿಗೆ ಸೈಕ್ಸ್, ಚಂಪಾರಣ್ಯದಲ್ಲಿ ಗಾಂಧಿ ಅವರ ಮೂಲಕ ಶಿಕ್ಷಣ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆ ಶಾಲೆಗೆ ವಿದಾಯ ಹೇಳಿ ಗಾಂಧಿ ಅವರ ಬಳಿ ಬಂದು, ಉಪವಾಸ ಸತ್ಯಾಗ್ರಹದಲ್ಲಿ ಸೇವಾ ನಿರತರಾದರು. ಸ್ವಾತಂತ್ರ ನಂತರ ಮಾರ್ಜೋರಿ, ತಮಿಳುನಾಡಿನ ನೀಲಗಿರಿಯಲ್ಲಿ "ಅಹಿಂಸಾ ಜೀವನ ಶಿಕ್ಷಣ ಆಶ್ರಮ" ಸ್ಥಾಪಿಸಿ, ಶಿಕ್ಷಕರಿಗೆ ತರಬೇತಿ ಕೊಡಲಾರಂಭಿಸಿದರು. 80 ವರ್ಷದ ಮಾರ್ಜೋರಿ, ಹೋಪಂಗಾಬಾದ್‌ನ "ಫ್ರೆಂಚ್ ಕಾಲೋನಿ"ಯಲ್ಲಿ ಕೃಷಿಯಲ್ಲಿ ತೊಡಗಿದರು. "ಗಾಂಧೀಜಿ ಅವರ ಹೋರಾಟದ ಬಳುವಳಿ" ಎಂಬ ಕೃತಿಯನ್ನು ಜಹಾಂಗೀರ್ ಪಟೇಲ್‌ರೊಡಗೂಡಿ ರಚಿಸಿ 60 ವರ್ಷಗಳ ಭಾರತದ ಅವರ ಸೇವಾ ಜೀವನವನ್ನು ಹೇಳುತ್ತಲೇ ಗಾಂಧಿ ಮತ್ತು ಸ್ವಾತಂತ್ರ್ಯ ಹೋರಾಟದ ಜೀವನವನ್ನು ಚಿತ್ರಿಸಿದರು.

ಹಾಗೆಯೇ ಗಾಂಧಿ ಬಳಗದ ಅನರ್ಘ್ಯರತ್ನ ಮಿಸ್ ಮ್ಯಾಡಲಿನ್ ಸ್ಲೇಡ್, ಮೀರಾ ಬೆಹನ್‌ಳಾಗಿ, ಭಾರತಕ್ಕೆ ತನ್ನನ್ನು ಅರ್ಪಿಸಿಕೊಂಡ ಜೀವನಗಾಥೆ ಅವರ ಕೃತಿ "ದಿ ಸ್ಪಿರಿಟ್ ಪಿಲಿಗ್ರಿಮೇಜ್" ಆತ್ಮಕಥೆಯಿಂದ, ಮನಮುಟ್ಟುತ್ತದೆ. ಶ್ರೀಮತಿ ಡೋಕ್, ಗಾಂಧಿ ಅವರಿಗೆ ಕ್ರೈಸ್ತ ಭಕ್ತಿಗೀತೆಗಳನ್ನು ಹಾಡುತ್ತಾ ಅವರ ತಲ್ಲಣಗಳನ್ನು ಶಮನ ಗೊಳಿಸುತ್ತಿದ್ದ ಪರಿ, ಅವರ "ಗಾಂಧಿ ಜೀವನ ಪರಿಚಯ" ಕೃತಿಯಿಂದ ತಿಳಿಯುತ್ತದೆ. ಈ ಪುಸ್ತಕ, ಟಾಲ್‌ಸ್ಟಾಯ್ ಅವರ ಮೆಚ್ಚುಗೆಯನ್ನು ಗಳಿಸಿತ್ತು. ಲಂಡನ್ನಿನ ವೆಸ್ಟ್‌ಎಂಡ್‌ನಲ್ಲಿ ಮ್ಯೂರಿಯಲ್ ಲೆಸ್ಟರ್ ಅವರು ನಡೆಸುತ್ತಿದ್ದ ಕ್ವೇಕರ್ ಪಂಥದ ಕೇಂದ್ರದಲ್ಲಿ ಗಾಂಧಿ ಅವರು ಅತಿಥಿಯಾಗಿ ತಂಗಿದ್ದರು. ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವಾಗಿ ನಿಂತ, ಲೆಸ್ಟರ್‌ರಂಥಹ ಸೇವಾನಿರತರ

ಮನೆಯಲ್ಲಿ ಮಾತ್ರ ಗಾಂಧಿ ತಂಗುತ್ತಿದ್ದರು. ಲೆಸ್ಟರ್ ಅವರ ಮನೆ ಭಾರತದ ಹಿತಚಿಂತಕರ ತಂಗುದಾಣವಾಗಿತ್ತು. ಇವರು ಅನೇಕ ಬಾರಿ ಭಾರತಕ್ಕೆ ಬಂದು ಸೇವಾ ಕಾರ್ಯದಲ್ಲಿ ಸಹಕರಿಸಿದ್ದರು.

ಜರ್ಮನಿಯ ಮಿಸ್ ಕ್ಯಾಥಲಿನ್ ಹಿಲ್‌ಮನ್ ಅವರು ಗಾಂಧಿ ಅವರ ತತ್ವಾದರ್ಶಗಳಿಗೆ ಮನಗೊಟ್ಟೇ ಭಾರತಕ್ಕೆ ಬಂದು ನೆಲೆಸಿದವರು. ಸೇವಾಗ್ರಾಮದ ಮೂಲ ಶಿಕ್ಷಣ ಶಾಲೆಯ ಅಧ್ಯಾಪಕಿಯಾಗಿ ಸೇವಾನಿರತರಾದರು. ಆದಿವಾಸಿಗಳು, ಬುಟಕಟ್ಟು ಜನಾಂಗದವರ ಅಭಿವೃದ್ಧಿಗಾಗಿ ಅಪಾರವಾಗಿ ಶ್ರಮಿಸಿದ ಕ್ಯಾಥರಿನ್ 'ಸರಳಾದೇವಿ' ಎಂದು ಚಿರಪರಿಚಿತರು. ಹಿಮಾಲಯದ ತಪ್ಪಲಿನಲ್ಲಿ 'ಲಕ್ಷ್ಮಿ ಸೇವಾಶ್ರಮ' ಸ್ಥಾಪಿಸಿ, ಗುಡ್ಡಗಾಡು ಮಹಿಳೆಯರು ಮತ್ತು ಮಕ್ಕಳ ಏಳ್ಗೆಗಾಗಿ ಶ್ರಮಿಸಿದ ಈಕೆ ಚಿಪ್ಕೋ ಚಳುವಳಿಗೆ ಬೆನ್ನೆಲುಬಾಗಿ ನಿಂತು ಪರಿಸರ ವಿನಾಶದ ವಿರುದ್ಧ ಹೋರಾಡಿದವರಾಗಿದ್ದಾರೆ.

ಗಾಂಧಿ ಬಳಗದ ವಿದೇಶಿಯರಲ್ಲಿ ಪ್ರಮುಖವಾಗಿ ಮಹಿಳೆಯರು ಗಾಂಧಿ ಅವರ ಸಿದ್ಧಾಂತ, ಸರಳತೆ, ಸ್ವದೇಶಿ ಜೀವನಕ್ಕೆ ತಮ್ಮನ್ನು ತೆತ್ತುಕೊಂಡು, ಭಾರತದಲ್ಲಿ ಸೇವಾನಿರತರಾಗಿ ನೆಲೆನಿಂತ ಈ ಘಟ್ಟ ಭಾರತದ ಚರಿತ್ರೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆಯುವಂಥಹದಾಗಿದೆ. ಇಂಥಹ ಕೃತಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಗಾಗಿ ಬರೆದ, ಕೆ.ಎಸ್. ನಾರಾಯಣಸ್ವಾಮಿ ಅವರು ಅವಿಸ್ಮರಣೀಯರಾಗಿದ್ದಾರೆ. ಮುನ್ನುಡಿಯನ್ನು ಬರೆದು ಕೃತಿಯ ಮೌಲ್ಯವನ್ನು ಔನತ್ಯಕ್ಕೇರಿಸಿದ ಚಿ.ನಾ. ಮಂಗಳ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯನ್ನು ಮರುಮುದ್ರಣಗೊಳಿಸಿ ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂಥಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಪರಿಷ್ಕರಣೆ ಮತ್ತು ಕರಡು ತಿದ್ದುಪಡಿಗೆ ಸಹಕರಿಸಿದ ಶ್ರೀ ಇಂದ್ರ ಕುಮಾರ್ ಅವರಿಗೂ ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಪೀಠಿಕೆ

"ಬಾಪೂ ಸಾನ್ನಿಧ್ಯದಲ್ಲಿ ನಮ್ಮ ವ್ಯಕ್ತಿತ್ವವೇ ಊರ್ಧ್ವಮುಖವಾಗುತ್ತದೆ. ಎಲ್ಲವೂ ಯಾವುದೋ ಹೊಸ ಜೀವನಾನಂದದ ಸ್ವರ್ಣಲೋಕಕ್ಕೆ ಕರೆದೊಯ್ದುಬಿಡುತ್ತದೆ. ಈ ಮಹಾವ್ಯಕ್ತಿಯ ಅಂತರ್ವಲಯಕ್ಕೆ ನೇರವಾಗಿ ಹೊಕ್ಕಾಗ ನನ್ನ ಭಾವಜೀವನವೇ ಪರಿವರ್ತಿತವಾಗಿಬಿಟ್ಟಿತು.

ಈ ಮಾತುಗಳನ್ನು "ದಿ ಸ್ಪಿರಿಟ್ಸ್ ಪಿಲಿಗ್ರಿಮೇಜ್" ಎಂಬ ತಮ್ಮ ಆತ್ಮಕಥೆಯಲ್ಲಿ ನಿರೂಪಿಸಿದವರು ಮೀರಾಬೆನ್ ಎಂದು ಭಾರತದಲ್ಲಿ ಪ್ರಸಿದ್ಧರಾಗಿದ್ದ ಗಾಂಧೀಜಿ ಶಿಷ್ಯೆ ಮಿಸ್ ಮ್ಯಾಡಲೀನ್ ಸ್ಲೇಡ್, ಗಾಂಧಿ ವಿಚಾರ ಪ್ರಭಾವಕ್ಕೊಳಗಾಗಿ ಅವರ ನಿಕಟಾನುವರ್ತಿಗಳಾದ ಸಾಧ್ವಿ ಮೀರಾಬೆನ್.

ಗಾಂಧೀಜಿಯ ಪ್ರಭಾವ ಸೌರಭಕ್ಕೆ ಮಾರುಹೋಗಿ, ಅವರ ಜೀವನಾದರ್ಶಗಳನ್ನು ಹೃತ್ಪೂರ್ವಕವಾಗಿ ಅಂಗೀಕರಿಸಿ, ತಮ್ಮ ಬಾಳನ್ನು ಅಹಿಂಸಾವ್ರತದ ಧ್ಯೇಯಕ್ಕೆ ಸಮರ್ಪಿಸಿಕೊಂಡವರು ವಿಶ್ವದಲ್ಲಿ ಅನೇಕರಿದ್ದಾರೆ. ಬೇರೆ ಬೇರೆ ದೇಶಗಳ ಬೇರೆ ಬೇರೆ ಸಾಂಸ್ಕೃತಿಕ ಹಿನ್ನೆಲೆಗಳಿಂದ ಬಂದ, ಬೇರೆ ಬೇರೆ ಧರ್ಮೀಯರಾದ ಹಲವು ಸಾಧಕರು ಯಾವ ಸದ್ದುಗದ್ದಲಗಳಿಗೂ ಎಡೆಗೊಡದೆ ಜೀವನಸಾರ್ಥಕ್ಯ ದೀಪಿಕೆಯನ್ನು ಬೆಳಗಿಸಿಕೊಂಡು ವಿದೇಶಿಯರಲ್ಲಿ ಕೆಲವು ಮಹನೀಯರ ಮಹಿಳೆಯರ ಬಾಳಕಥೆಗಳನ್ನು ಇಲ್ಲಿ ನಿರೂಪಿಸಲಾಗಿದೆ. ಗಾಂಧಿ ಒಬ್ಬ ವ್ಯಕ್ತಿ ಮಾತ್ರವಲ್ಲ, ಒಂದು ಆದರ್ಶದ ಪ್ರತೀಕ, ಒಬ್ಬ ಅಸಾಧಾರಣ ಸಂಘಜೀವನ ಪ್ರವರ್ತಕ, ಭವಿಷ್ಯ ಮಾನವ ಸಮಾಜಕ್ಕೆ ನೂತನ ಚಿಂತನಧಾರೆಯನ್ನು ಹರಿಸಿಕೊಟ್ಟ ಹರಿಕಾರ, ಎಂಬ ಮಾತು ಈ ಪುಸ್ತಕದಲ್ಲಿ ರೂಪಿಸಿರುವ ಜೀವನಕಥೆಗಳಲ್ಲಿ ಮನದಟ್ಟಾಗುತ್ತದೆ.

ದಕ್ಷಿಣ ಆಫ್ರಿಕಾದಲ್ಲಿ ಕಳೆದ ತಾರುಣ್ಯದಿಂದ ಹಿಡಿದು ಕೊನೆಯವರೆಗೆ ಅವರ ಪ್ರಭಾವವಲಯ ವಿಸ್ತರಿಸುತ್ತಲೇ ಸಾಗಿತು. ಅವರ ಸತ್ಯಾಗ್ರಹ ಜೀವನ ಪ್ರಯೋಗಗಳಲ್ಲಿ ಪಾಲ್ಗೊಂಡ ವಿದೇಶೀ ಬಂಧುಗಳ ಜೀವನ ಪರಿವರ್ತನೆ ನಮಗೂ ಸ್ಫೂರ್ತಿ ನೀಡುತ್ತದೆ. ಈ ಬಳಗ ಕಾಲಕ್ರಮೇಣ ಬೃಹತ್ಪ್ರಮಾಣದಲ್ಲಿ ಬೆಳೆದು ಒಂದು ವಿಶ್ವಮಾನವ ಸಮಾಜ ರೂಪಗೊಂಡೀತೆಂಬ ಸದಾಶಯದಿಂದ ಈ ಗ್ರಂಥವನ್ನು ಕನ್ನಡಿಗ ಸಹೃದಯರಿಗೆ ಸಮರ್ಪಿಸುತ್ತಿದ್ದೇನೆ.

ಕೆ. ಎಸ್. ನಾರಾಯಣಸ್ವಾಮಿ

ಮುನ್ನುಡಿ

"ಯಾವ ಮನುಷ್ಯನು ತನ್ನ ಜೀವಿತದ ಪ್ರತಿಯೊಂದು ಸಂದರ್ಭದಲ್ಲಿಯೂ ತಾನು ನಡೆದುಕೊಳ್ಳಬೇಕಾದ ರೀತಿ ಎಂಥಾದ್ದೆಂಬುದನ್ನು ಮನಸ್ಸಿನಲ್ಲಿ ಗೊತ್ತುಮಾಡಿಕೊಂಡು ಅದರಿಂದ ತಪ್ಪದಂತೆ ಯಾವಾಗಲೂ ಎಂಥೆಂಥ ಕಷ್ಟ ಪರೀಕ್ಷೆಗಳಲ್ಲಿಯೂ ನಡೆದುಕೊಳ್ಳುತ್ತಾನೆಯೋ ಆತನು ಶೀಲವಂತ"- ಇದು ಡಿ.ವಿ.ಜಿ. ಅವರ ಮಾತು. ಗಾಂಧೀಜಿ ಅವರ ಅಪ್ರತಿಮ ಶೀಲಸಂಪತ್ತೂ (Eloquence of Character), ಅವರ ಬದುಕಿನ ಮೂಲ ಸೂತ್ರಗಳಾದ "ಪ್ರಜಾವಾತ್ಸಲ್ಯ, ಅಸತ್ಯ ಅನ್ಯಾಯಗಳ ವಿಷಯದಲ್ಲಿ ತೀವ್ರ ಅಸಹನೆ, ಒಂದು ತತ್ವಕ್ಕಾಗಿ ಬದುಕಬೇಕೆಂಬ ದೃಢ ಪ್ರತಿಜ್ಞೆ" ಇವು ಅವರ ಶಾಶ್ವತ ಬಳಗಕ್ಕೆ ಅನೇಕ ವಿದೇಶಿಯರನ್ನು ಆಕರ್ಷಿಸಿತು. ಬೆಳಕನ್ನು ಅರಸುತ್ತ ಬಂದವರಿಗೆ ಬಾಳಿನ ಅಂತಃಸ್ಪರ್ಶದ ಅರಿವಾಯಿತು. ಇಂಗ್ಲೆಂಡಿನ ಹೆನ್ರಿ ಮತ್ತು ಮಿಲ್ಲಿ ಗ್ರಹಾಮ್ ಪೋಲಕ್, ಮಾರ್ಜೋರಿ ಸೈಕ್ಸ್ ಜರ್ಮನಿಯ ಹೆರ್ಮನ್‌ಕಾಲೆನ್ ಬಾಕ್, ಡೆನ್‌ಮಾರ್ಕಿನ ಎಸ್ತರ್ ಫಿಯರಿಂಗ್, ಚೀಣಾದ ಟ್ಸೆಂಗ್ ಪಾನ್ ತಿ, ಪೋಲೆಂಡಿನ ಮಾರಿಸ್ ಫ್ರೀಡ್‌ಮನ್, ಜಪಾನಿನ ಫ್ಯೂಜಿಗುರೂಜಿ, ಆಂಗ್ಲಸಂತ ದೀನಬಂಧು ಸಿ. ಎಫ್. ಆಂಡ್ರೂಸ್, ಬ್ರಿಟಿಷ್ ಯುವತಿ ಮ್ಯಾಡಲಿನ್ ಸ್ಲೇಡ್, ಇಂಗ್ಲೆಂಡಿನ ಆಲ್ಬರ್ಟ್ ವೆಸ್ಟ್, ಕ್ರೈಸ್ತ ಪಾದ್ರಿ ಜೋಸೆಫ್ ಡೋಕ್, ಫ್ರೆಂಚ್ ಸಾಹಿತಿ ರೊಮೆನ್ ರೋಲಾ, ಹೀಗೆ ಒಬ್ಬರೇ ಇಬ್ಬರೇ? ಗಾಂಧೀಜಿ ಅವರ ಏಕಾದಶ ವ್ರತಗಳಾದ ಅಹಿಂಸೆ, ಸತ್ಯ, ಆಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯೆ (ಇಂದ್ರಿಯ ನಿಗ್ರಹ), ಅಸಂಗ್ರಹ (ಸ್ವಾರ್ಥಕ್ಕಾಗಿ ಸಂಗ್ರಹಿಸದಿರುವುದು), ಶರೀರಶ್ರಮ, ಆಸ್ವಾದ (ನಾಲಿಗೆಯ ಚಾಪಲ್ಯವನ್ನು ತೊರೆಯುವುದು), ಸರ್ವತ್ರ ಭಯವರ್ಜನ - ಎಲ್ಲ ಕಾಲದಲ್ಲಿಯೂ ನಿರ್ಭಯರಾಗಿರುವುದು, ಸರ್ವಧರ್ಮ ಸಮಾನತ್ವ, ಸ್ವದೇಶೀ, ಸ್ಪರ್ಶಭಾವನಾ (ಅಸ್ಪೃಶ್ಯತೆಯನ್ನು ತೊಡೆದುಹಾಕುವುದು),

ಇವು ಗಾಂಧೀಜಿ ಅವರ ಬಳಗಕ್ಕೆ ಬಂದು ಸೇರಿದ ಎಲ್ಲ ವಿದೇಶಿಯರನ್ನೂ ಆಕರ್ಷಿಸುವ ಅಯಸ್ಕಾಂತಗಳಾಗಿದ್ದವು.

ನಾನು ಗಾಂಧೀಜಿ ಅವರನ್ನು ನೋಡಿರಲಿಲ್ಲ ಆದರೆ ನ್ಯಾಷನಲ್ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿಯಾಗಿದ್ದ ನನ್ನನ್ನು ಅಲ್ಲಿಯ ಕಟ್ಟಾ ಗಾಂಧೀವಾದಿಗಳಾಗಿದ್ದ ಅಧ್ಯಾಪಕರು ಬೀರಿದ ಪ್ರಭಾವ ಅಪಾರ. ಗಾಂಧೀಜಿ ರಾಮನಾಮ ಸ್ಮರಣೆಯೊಂದಿಗೆ ಕ್ರೌರ್ಯಕ್ಕೆ ಬಲಿಯಾಗಿ ಇಹಲೋಕ ತ್ಯಜಿಸಿದಾಗ ನನಗೆ ಹತ್ತು ವರ್ಷ. ಆದರೆ ನಾನು ಓದಿ ಸಾಧ್ಯವಾದಷ್ಟನ್ನು ಪಾಲಿಸಲು ಪ್ರಯತ್ನಿಸಿರುವಲ್ಲಿ ಗಾಂಧೀಜಿ ಅವರ ಬಳಿಗೆ ಬಂದು ತಮ್ಮದಲ್ಲದ ನಾಡಿನಲ್ಲಿ ತಮಗೆ ಪಾಲಿಸಲು ಕಷ್ಟವೆನಿಸುವ ಗಾಂಧಿ ಮಾರ್ಗದಲ್ಲಿ ತಮಗೆ ಅಪರಿಚಿತರಾದ ಜನರ ನಡುವೆ ನಮ್ಮಲ್ಲೆ ನಾವೇ ಆಗಿ ನಮಗಿಂತ ಹೆಚ್ಚಾಗಿ ನಿಷ್ಠಾವಂತ ಗಾಂಧೀ ಅನುಯಾಯಿಗಳ ಪ್ರಭಾವಮಯ ನಿತ್ಯ ಸ್ಫೂರ್ತಿ. ಜರ್ಮನಿಯಲ್ಲಿ ಹುಟ್ಟಿ ಇಂಗ್ಲೆಂಡಿನಲ್ಲಿ ಬೆಳೆದು ಭಾರತಕ್ಕೆ ಶಿಕ್ಷಕಿಯಾಗಿ ಬಂದು ನೆಲೆಸಿದ ಕ್ಯಾಥಲಿನ್ ಹಿರ್‌ಮನ್ (ಸರಳಾದೇವಿ). ಸೇವಾಗ್ರಾಮದಲ್ಲಿ ಮೂಲ ಶಿಕ್ಷಣ ಶಾಲೆಯ ಅಧ್ಯಾಪಕಿಯಾದರು. 1942ರಲ್ಲಿ ಹಿಮಾಲಯ ತಪ್ಪಲಿನ ಕೌಸಾನಿಯಲ್ಲಿ ಲಕ್ಷ್ಮೀ ಆಶ್ರಮ ಸ್ಥಾಪಿಸಿ ಗುಡ್ಡಗಾಡಿನ ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳ ಸೇವೆಯಲ್ಲಿ ನಲವತ್ತು ವರುಷ ದುಡಿದರು. ಆಚಾರ್ಯ ವಿನೋಬಾ ಅವರ ಶಿಷ್ಯರಾಗಿ, ಸ್ತ್ರೀ ಶಕ್ತಿ ಜಾಗೃತಿ ಆಂದೋಲನಕ್ಕೆ ಬೆಂಬಲ ನೀಡಿದ ಈಕೆ 1974ರಲ್ಲಿ ನಮ್ಮ ಕಾಲೇಜಿಗೆ ಬಂದಾಗ ಅವರು ಸ್ತ್ರೀ ಶಕ್ತಿಯ ಬಗ್ಗೆ ನೀಡಿದ ಉಪನ್ಯಾಸ ಒಂದು ರೀತಿಯಲ್ಲಿ ನಮ್ಮ ಕಾಲೇಜಿನಲ್ಲಿ ಮಹಿಳಾ ಅಧ್ಯಯನಕ್ಕೆ ನಾಂದಿಯಾಯಿತು.

ತಮ್ಮ ಇಡೀ ಜೀವಮಾನವನ್ನು ಗಾಂಧಿ ಅಧ್ಯಯನ, ಅವರ ತತ್ವಗಳ ಪ್ರತಿಪಾದನೆ ಪರಿಪಾಲನೆಗಾಗಿ ಮೀಸಲಾಗಿಟ್ಟಿರುವ ಹಿರಿಯ ಗಾಂಧೀವಾದಿ ಶ್ರೀ ಕೆ. ಎಸ್. ನಾರಾಯಣಸ್ವಾಮಿ ಅವರು ಬೆಂಗಳೂರಿನ ಗಾಂಧೀ ಭವನದ ಕ್ರಿಯಾಶಕ್ತಿ. ಭಾರತ ತನ್ನ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುವ ಸಿದ್ಧತೆಯಲ್ಲಿರುವಾಗ ಪ್ರಕಟವಾಗುತ್ತಿರುವ ಶ್ರೀ ನಾರಾಯಣಸ್ವಾಮಿ ಅವರ 'ಗಾಂಧೀ ಬಳಗದ ವಿದೇಶೀಯರು'

ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿ ತಮ್ಮ ಬೇರುಗಳನ್ನೇ ಕಾಣದೆ ಹೋಗುತ್ತಿರುವ ಯುವಜನಾಂಗಕ್ಕೊಂದು ದಾರಿದೀಪ.

ಜೊಹಾನ್ಸ್ ಬರ್ಗಿನ ಸಸ್ಯಾಹಾರಿ ಉಪಹಾರ ಗೃಹವೊಂದರಲ್ಲಿ ಗಾಂಧೀಜಿ ಅವರನ್ನು ಸಂಧಿಸಿದ ಹೆನ್ರಿ ಪೋಲಕ್ ಹಾಗೂ ಅವರ ಪತ್ನಿ ಮಿಲ್ಲಿ ಗಾಂಧೀಜಿ ಅವರ ಫೀನಿಕ್ಸ್ ಆಶ್ರಮದ ಭಾಗವಾಗಿದ್ದು, ಈ ವಿದೇಶಿಯರಿಬ್ಬರೂ ಆಶ್ರಮದ ಕಷ್ಟಕರ ಜೀವನಕ್ಕೆ ಹೊಂದಿಕೊಂಡದ್ದು, ಭಾರತೀಯರು ನಾಗರಿಕ ಹಕ್ಕುಗಳಿಗಾಗಿ ಹೂಡಿದ ಅಹಿಂಸಾತ್ಮಕ ಸತ್ಯಾಗ್ರಹ ಸಮರದಲ್ಲಿ ಪಾಲುಗೊಳ್ಳಲು ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡದ್ದು, ದಕ್ಷಿಣ ಆಫ್ರಿಕದ ಭಾರತೀಯರಿಗಾಗಿ ಪೋಲಕ್ ಗಾಂಧೀಜಿ ಭಾರತಕ್ಕೆ ಮರಳಿದ ಮೇಲೂ ಅಲ್ಲೇ ನಿಂತದ್ದು, ಪೋಲಕ್ ದಂಪತಿಗಳ ತ್ಯಾಗ ಮನೋಭಾವ, ಅವರ ಭಾರತದ ಭೇಟಿ; ಜೋಹಾನ್ಸ್‌ಬರ್ಗಿನ ನಾಗರಿಕರಲ್ಲಿ ಅಪೂರ್ವ ಸಮಾಜ ಸೇವಕರೆನಿಸಿ ಗಾಂಧೀಜಿ ನಡೆಸುತ್ತಿದ್ದ 'ಇಂಡಿಯನ್ ಒಪಿನಿಯನ್' ಪತ್ರಿಕೆಗೆ ಪ್ರಮುಖ ಬೆಂಬಲಿಗರಾಗಿದ್ದು 1908ರಲ್ಲಿ ದಕ್ಷಿಣ ಆಫ್ರಿಕದ ಸತ್ಯಾಗ್ರಹದಲ್ಲಿ ಜೈಲುವಾಸ ಅನುಭವಿಸಿ ಗಾಂಧೀಜಿ ಬಿಡುಗಡೆಯಾದಾಗ ತಮ್ಮ ರೋಲ್ಸ್‌ರಾಯ್ಸ್ ಕಾರನ್ನು ಜೈಲಿನ ಬಾಗಿಲಿಗೇ ತೆಗೆದುಕೊಂಡು ಹೋಗಿ ಗಾಂಧೀಜಿ ಅವರನ್ನು ಸ್ವಾಗತಿಸಿದ, ಅಪ್ಪಟ ಸಸ್ಯಹಾರಿ, ಆಜನ್ಮ ಬ್ರಹ್ಮಚಾರಿ. ಟಾಲ್‌ಸ್ಟಾಯ್ ಫಾರ್ಮಿನ ಪೂರ್ಣ ಜವಾಬ್ದಾರಿ ಹೊತ್ತ ಹೆರ್ಮನ್ ಕಾಲೆನ್‌ಬಾಕ್.


1918ರಲ್ಲಿ ಸಬರಮತಿ ಆಶ್ರಮಕ್ಕೆ ಬಂದು ಸೇರಿದ ಕ್ರೈಸ್ತಮತ ಸೇವಾಕರ್ತೆ ಹಾಗೂ ಶಿಕ್ಷಣವೇತ್ತೆ ಎಸ್ತರ್ ಫಿಯರಿಂಗ್, ರವೀಂದ್ರನಾಥ ಟಾಗೂರರ ಚೀನಾ ಭೇಟಿಯ ನಂತರ ಭಾರತದ ಸಾಂಸ್ಕೃತಿಕ ಮೌಲ್ಯಗಳಿಗೆ ಮನಸೋತು ಗಾಂಧೀ ಆಶ್ರಮ ನಿವಾಸಿಯಾದ ಶಾಂತಿಟ್ಸೆಂಗ್, ಭಾರತದ ನಾಗರಿಕರಾಗಿ ಭರತಾನಂದ ಎಂದು ಪ್ರಸಿದ್ಧರಾದ ಮಾರಿಸ್ ಫ್ರೀಡ್‌ಮನ್ ತಮ್ಮ ಆಧ್ಯಾತ್ಮಿಕ ನೆಲೆಗಳನ್ನು ಕಂಡುಕೊಂಡದ್ದು, ರಮಣಮಹರ್ಷಿಗಳೊಡನೆ ಅವರ ಸಂದರ್ಶನ ಸರ್ವಧರ್ಮೀಯ ಪ್ರಾರ್ಥನೆಯ ಮೂಲಕ ವಿಶ್ವಶಾಂತಿಯ ಹೊಸ

ಶಕ್ತಿಗಳು ಗಾಂಧಿಮಾರ್ಗದಿಂದ ಹೊರಹೊಮ್ಮಿ ಜಗದ್ವ್ಯಾಪಕವಾಗಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ ಎಂದು ನಂಬಿದ ಬೌದ್ಧ ಸನ್ಯಾಸಿ ಫ್ಯೂಜಿಗುರೂಜಿ, ಶಿಕ್ಷಣ ಕ್ಷೇತ್ರವೇ ಅತ್ಯಂತ ಶ್ರೇಷ್ಠಸಾಧನ ಕ್ಷೇತ್ರವೆಂಬುದನ್ನರಿತು ಮಹಾತ್ಮ ಗಾಂಧೀ ಹಾಗೂ ರವೀಂದ್ರನಾಥ ಠಾಕೂರರನ್ನು ತನ್ನ ಆರಾಧ್ಯ ದೈವಗಳಾಗೆಣಿಸಿ ಅವರ ನಿಸ್ಸೀಮ ಮಾನವ ಪ್ರೇಮಕ್ಕೆ ಮನಸೋತು ಸೇವಾಗ್ರಾಮ ಹಾಗೂ ಶಾಂತಿನಿಕೇತನಗಳ ಮಧ್ಯೆ ಓಡಾಡುತ್ತ ಎರಡು ಆಶ್ರಮಗಳ ಬಗ್ಗೆಯೂ ಆತ್ಮೀಯ ಸಂಬಂಧ ಬೆಳೆಸಿಕೊಂಡ ಮಾರ್ಜೋರಿ ಸೈಕ್ಸ್. ಇವರೆಲ್ಲರ ಜೀವಜ್ಯೋತಿಯ ಕಥೆ ಗಾಂಧೀಜಿ ಅವರ ಆತ್ಮಕಥೆಯ ಭಾಗವಾಗಿ ಮಾತ್ರವೇ ಅಲ್ಲದೆ ಭಾರತದ ಸ್ವಾತಂತ್ರ್ಯ ಹೋರಾಟದ, ಭಾರತೀಯ ಸಮಾಜದ ಪುನರುಜ್ಜೀವನದ ಐತಿಹಾಸಿಕ ಸತ್ಯಗಳಾಗಿ, ಸ್ಫೂರ್ತಿಯ ಚಿಲುಮೆಗಳಾಗಿ ಶ್ರೀ ನಾರಾಯಣಸ್ವಾಮಿಯವರ ಸರಳ, ಸುಂದರ, ಶಕ್ತಿಶಾಲೀ ಶೈಲಿಯಲ್ಲಿ ಸಾಕಾರರೂಪ ತಾಳಿವೆ. ಇವರೆಲ್ಲರ ಜೀವನ ಚಿತ್ರಗಳನ್ನು ಮಹಾತ್ಮರ ಬದುಕಿನ ಭಾಗವಾಗಿ ಪರಿಗಣಿಸುವಾಗ ಜೊತೆ ಜೊತೆಗೇ ಓದುಗರಿಗೆ ಗಾಂಧೀ ಮಾರ್ಗದ ದರ್ಶನವನ್ನೂ ಮಾಡಿಸಿರುವುದೇ ಕೃತಿಯ ವೈಶಿಷ್ಟ್ಯ.

ಆದರೆ ಗಾಂಧೀ ಮಾರ್ಗವನ್ನು ಬಹುಮಟ್ಟಿಗೆ ತ್ಯಜಿಸಿದ ಸ್ವತಂತ್ರ ಭಾರತದ ಪಾಶ್ಚಾತ್ಯ ನಾಗರಿಕತೆಗೆ ತನ್ನನ್ನು ಸಂಪೂರ್ಣವಾಗಿ ಒಪ್ಪಿಕೊಂಡದ್ದನ್ನು ಕಂಡು ಗಾಂಧೀ ಬಳಗದ ಮೀರಾಬೆನ್ (ಮ್ಯಾಡಲಿನ್ ಸ್ಲೇಡ್), ಮಾರ್ಜೋರಿ ಸೈಕ್ಸ್, ಸರಳಾದೇವಿ, ಎಸ್ತರ್ ಫಿಯರಿಂಗ್ ಇಂತಹವರಿಗೂ ಭ್ರಮನಿರಸನವಾದದ್ದು ಸ್ವತಂತ್ರ ಭಾರತದ ಒಂದು ದೊಡ್ಡ ದುರಂತ. ತತ್ತರಿಸುತ್ತಿರುವ ಭಾರತಕ್ಕೆ ಗಾಂಧೀ ಮಾರ್ಗವೊಂದೇ ಭದ್ರಬುನಾದಿ.

ಚಿ. ನ. ಮಂಗಳಾ

ಪರಿವಿಡಿ



ನಿಶ್ಚಲವಾದ ಚೈತನ್ಯವುಳ್ಳ ಸಣ್ಣ ಗುಂಪು ತನ್ನ ಗುರಿಯ ಬಗ್ಗೆ ದೃಢ ನಂಬಿಕೆ ಇಟ್ಟು ಹೊರಟರೆ ಇತಿಹಾಸದ ಗತಿಯನ್ನೇ ಬದಲಿಸಬಹುದು.

– ಮಹಾತ್ಮ ಗಾಂಧಿ

1. ಹೆನ್ರಿ ಮತ್ತು ಮಿಲ್ಲಿ ಗ್ರಹಾಮ್ ಪೋಲಕ್

(ಇಂಗ್ಲೆಂಡ್)

I

ದಕ್ಷಿಣ ಆಫ್ರಿಕದ ಜೊಹಾನ್ಸ್ ಬರ್ಗ್‌ನಲ್ಲಿ 1903ರಲ್ಲಿ ಗಾಂಧೀಜಿ ಜನಪ್ರಿಯ ವಕೀಲರಾಗಿ ನೆಲೆಸಿದ್ದರು. ಆ ವೇಳೆಗಾಗಲೇ ಅಲ್ಲಿನ ಭಾರತೀಯ ವಲಸೆಗಾರರ ಪರವಾಗಿ–ನಾಗರಿಕ ಹಕ್ಕುಗಳನ್ನು ಪಡೆಯಲು ಹೋರಾಟ ಪ್ರಾರಂಭಿಸಿದ್ದರು. ಪ್ರತಿಷ್ಠಿತ ಯೂರೋಪಿಯನ್ ಸಮಾಜದಲ್ಲಿ ಈ ಊಟ ಮಾಡುತ್ತಿದ್ದರು. ಪ್ರತಿಷ್ಠಿತ ಯೂರೋಪಿಯನ್ ಸಮಾಜದಲ್ಲಿ ಈ ಕರಿಯ 'ಕೂಲಿ ಬ್ಯಾರಿಸ್ಟರ್' ಸಾಕಷ್ಟು ಘನತೆ ಸಂಪಾದಿಸಿದ್ದರು. ವಕೀಲ ವೃತ್ತಿಯೊಡನೆ ಕೂಲಿಗಾರರು ವಾಸಿಸುತ್ತಿದ್ದ ಕೊಳಚೆಗೇರಿಗಳಲ್ಲಿ ಸೇವಾಕಾರ್ಯ ಅವರ ಸಾಧನಾಕ್ಷೇತ್ರವಾಗಿತ್ತು. ಒಮ್ಮೆ ಆ ಕೇರಿಯಲ್ಲಿ ಭಯಂಕರ ಪ್ಲೇಗ್‌ಮಾರಿ ಹರಡಿ ಜನ ಹುಳುಗಳಂತೆ ಸತ್ತರು. ಅಟ್ಟಹಾಸದ ಬಿಳಿಯ ಅಧಿಕಾರಿಗಳ ಆಡಳಿತದಲ್ಲಿದ್ದ ಪುರಸಭೆ ಈ ನಿರ್ಭಾಗ್ಯರ ಕೇರಿಯನ್ನು ಸ್ವಚ್ಛ ಮಾಡುತ್ತಲೇ ಇರಲಿಲ್ಲ. ಪ್ರತಿಭಟಿಸಿ ನಿಂತ ಗಾಂಧೀಜಿ ತಮ್ಮ ಇಂಡಿಯನ್ ಒಪಿನಿಯನ್, ಪತ್ರಿಕೆಯಲ್ಲಿ ಪ್ರಬಲವಾಗಿ ಖಂಡಿಸಿ ಬರೆದರು. ಆ ಪ್ರದೇಶದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡಲು ಮುಂದೆ ಬಂದ ಸ್ವಯಂ ಸೇವಕ ಪಡೆಯನ್ನೇ ಕಟ್ಟಿದರು. ಹಲವಾರು ಬಿಳಿಯ ಜನಾಂಗದ ಸುಶಿಕ್ಷಿತ ಯುವಕರೂ ಸೇವಾದೀಕ್ಷೆ

ಕೈಗೊಂಡು ನೂರಾರು ರೋಗಿಗಳ ಶುಶ್ರೂಷೆ ಮಾಡುತ್ತಿದ್ದರು. ಅಲ್ಲಿನ ಬ್ರಿಟಿಷ್ ಸರ್ಕಾರ ನಾಚಬೇಕಾಯಿತು.

ಇಂಗ್ಲೆಂಡಿನ ಇಬ್ಬರು ವೃತ್ತಿಪರ ಯುವಕರು ಈ ಸಮಯದಲ್ಲಿ ಗಾಂಧೀಜಿಯ ಆತ್ಮೀಯ ಗೆಳೆಯರಾದರು. ಒಬ್ಬರು ಜೊಹಾನ್ಸ್‌ಬರ್ಗ್‌ನಲ್ಲಿ ಮುದ್ರಣಾಲಯ ನಡೆಸುತ್ತಿದ್ದ ಆಲ್ಬರ್ಟ್‌ವೆಸ್ಟ್, ಮತ್ತೊಬ್ಬರು ಉದಯೋನ್ಮುಖ ಪತ್ರಿಕೋದ್ಯಮಿ ಹೆನ್ರಿಪೋಲಕ್. ಈ ಇಬ್ಬರೂ ಮುಂದೆ ಗಾಂಧೀಜಿಯ ಸತ್ಯಾಗ್ರಹ ಜೀವನದಲ್ಲಿ ಆತ್ಮೀಯ ಸಹಕಾರ್ಯಕರ್ತರಾಗಿಬಿಟ್ಟರು. ಬಂಧುಗಳಂತೆ ಗಾಂಧೀಜಿಯ ಮನೆಯ ಭಾಗವಾಗಿ ಬಿಟ್ಟರು.

"ಒಂದು ಸಂಜೆ ನಮ್ಮ ಸಸ್ಯಾಹಾರಿ ಉಪಾಹಾರ ಗೃಹದಲ್ಲಿ ಪಕ್ಕದ ಮೇಜಿನ ತೇಜಸ್ವೀ ಯುವಕ ಪೋಲಕ್ ನನ್ನ ಗಮನ ಸೆಳೆದ. ಆತನೂ ನನ್ನನ್ನು ಭೇಟಿಯಾಗಲು ಕಾತರನಾಗಿ ತನ್ನ ಬಗೆಗಿನ ಪರಿಚಯ ಚೀಟಿಕೊಟ್ಟ. ನನ್ನ ಮೇಜಿಗೆ ಜೊತೆಯಲ್ಲೇ ಊಟ ಮಾಡಲು ಆಹ್ವಾನಿಸಿದೆ. ಆತನೇ ಮಾತು ಪ್ರಾರಂಭಿಸಿದ. 'ದಿ ಕ್ರಿಟಿಕ್' ಎಂಬ ಪತ್ರಿಕೆಯ ಉಪಸಂಪಾದಕ ನಾನು, ನಿಮ್ಮ ಪತ್ರಿಕಾ ಪತ್ರ ನೋಡಿದೆ. ಪ್ಲೇಗಿನ ಘೋರಪ್ರಕರಣ ಕುರಿತು ಓದಿದಾಗ ನಿಮ್ಮ ಭೇಟಿಯಾಗಬೇಕೆಂಬ ಪ್ರಬಲವಾದ ಇಚ್ಛೆಯುಂಟಾಯಿತು. ಅದೀಗ ಫಲಿಸಿತು ಎಂದ. ಆತನ ಬಿಚ್ಚುಮನಸ್ಸಿನ ಮಾತು ನನ್ನನ್ನು ಆಕರ್ಷಿಸಿತು. ಜೀವನದ ಹಲವು ಸಮಸ್ಯೆಗಳನ್ನು ಕುರಿತು ನಮ್ಮಿಬ್ಬರ ದೃಷ್ಟಿಕೋನವೂ ತುಂಬ ಹತ್ತಿರವಾಗಿವೆ ಎನಿಸಿತು. ಆತನಿಗೂ ಸರಳ ಜೀವನ ಮತ್ತು ಸೇವಾ ದೀಕ್ಷೆಗಳ ಆಕಾಂಕ್ಷೆ ಇತ್ತು. ತನ್ನ ಬುದ್ಧಿಗೆ ಸರಿ ಎನಿಸಿದುದನ್ನು ಜೀವನದಲ್ಲಿ ಆಚರಣೆಗೆ ತರಲು ಆತನಿಗಿದ್ದ ಸಾಮರ್ಥ್ಯ ನನ್ನನ್ನು ಬೆರಗುಗೊಳಿಸಿತು. ತನ್ನ ಜೀವನಕ್ರಮದಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ಪೋಲಕ್ ಸಂಕಲ್ಪಶಕ್ತಿಯಿಂದ ತಂದುಕೊಂಡಿದ್ದ" ಎಂದು ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಬಣ್ಣಿಸಿದ್ದಾರೆ.

ಹೆನ್ರಿ ಪೋಲಕ್ ದಿನದಿನಕ್ಕೆ ಗಾಂಧೀಜಿಯ ಗಾಢ ವಿಶ್ವಾಸಕ್ಕೆ ಪಾತ್ರರಾದರು. ತಮ್ಮ ಭವಿಷ್ಯದ ಕನಸುಗಳನ್ನು ಗಾಂಧೀ ಮಾರ್ಗದಲ್ಲಿ ರೂಪಿಸಿಕೊಳ್ಳುತ್ತಿದ್ದರು. ಇಂಡಿಯನ್ ಒಪಿನಿಯನ್ ಪತ್ರಿಕೆಯನ್ನು ನಡೆಸಲು ಪೋಲಕ್ ಸಂಪೂರ್ಣವಾಗಿ ನೆರವಾದರು. ಜೊತೆಗೆ ಅಧ್ಯಯನಶೀಲರಾಗಿದ್ದರು. 1904ರಲ್ಲಿ ಜಾನ್‌ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಪೋಲಕ್ ಅವರ ಗಮನವನ್ನು ಸೆರೆಹಿಡಿದಿತ್ತು. ಒಂದು ದಿನ ಗಾಂಧೀಜಿ ಇಂಡಿಯನ್ ಒಪಿನಿಯನ್ ಪತ್ರಿಕೆಯನ್ನು ನೋಡಿಕೊಳ್ಳುತ್ತಿದ್ದ. ಗೆಳೆಯ ವೆಸ್ಟ್‌ರನ್ನು ನೋಡಲು ನೆಟಾಲಿಗೆ ರೈಲಿನಲ್ಲಿ ಹೊರಟರು. ಪೋಲಕ್ ಅವರನ್ನು ಬೀಳ್ಕೊಡಲು ರೈಲು ನಿಲ್ದಾಣಕ್ಕೆ ಬರುತ್ತಾ ರಸ್ಕಿನ್‌ನ ಪುಸ್ತಕವನ್ನು ಕೈಯಲ್ಲಿ ಹಿಡಿದು ತಂದಿದ್ದರು. ಒಂದು ಇಡೀ ದಿನದ ಪ್ರಯಾಣದಲ್ಲಿ ಸಮಯ ಕಳೆಯಲು ಈ ಪುಸ್ತಕ ಓದಲು ಗಾಂಧೀಜಿಯ ಕೈಗಿತ್ತು "ನಿಮಗೆ ಈ ಪುಸ್ತಕದ ವಸ್ತು ಪ್ರಿಯವಾಗುವುದೆಂದು ನನ್ನ ನಂಬಿಕೆ" ಎಂದರು. ಈ ಮಾತು ನಿಜವಾದುದಷ್ಟೇ ಅಲ್ಲ ಗಾಂಧೀಜಿಯ ಜೀವನ ಕ್ರಮವನ್ನೇ ಪೂರ್ಣವಾಗಿ ಬದಲಿಸಲು ನಾಂದಿಯಾಯಿತು. ಆತ್ಮಕಥೆಯಲ್ಲಿ ಬರೆಯುತ್ತಾ ಗಾಂಧೀಜಿ

"ನಾನು ಬಹಳ ಪುಸ್ತಕಗಳನ್ನು ಓದಿದವನಲ್ಲ. ನನಗೆ ಸಮಯವೂ ಸಿಕ್ಕುತ್ತಿರಲಿಲ್ಲ. ರಸ್ಕಿನ್‌ನ ಮತ್ತಾವ ಕೃತಿಯ ಪರಿಚಯವೂ ಇರಲಿಲ್ಲ. ಇದೇ ಮೊದಲ ಪುಸ್ತಕ ಓದುವ ಹುಚ್ಚು ನನಗಿರಲಿಲ್ಲವಾದರೂ ಓದಿದ ಹಲವೇ ಪುಸ್ತಕಗಳನ್ನು ನಾನು ಆಳವಾಗಿ ಗಂಭೀರವಾಗಿ ಅಭ್ಯಸಿಸಿ ಅರಗಿಸಿಕೊಂಡಿದ್ದೇನೆ. ಪೋಲಕ್ ಕೊಟ್ಟ ಈ ಪುಸ್ತಕ ನನ್ನನ್ನು ಪೂರ್ಣವಾಗಿ ಸೆರೆಹಿಡಿದುಬಿಟ್ಟಿತು. ಓದಲು ಪ್ರಾರಂಭಿಸಿದ ಮೇಲೆ ಕೆಳಗಿಡಲು ಸಾಧ್ಯವಾಗಲೇ ಇಲ್ಲ. ಕೊನೆಯವರೆಗೆ ಓದಿ ಮುಗಿಸಿದೆ. ಆ ರಾತ್ರಿ ನಿದ್ರೆಯೇ ಬರಲಿಲ್ಲ. ಬೆಳಗಾಗುತ್ತಲೇ ಆ ಪುಸ್ತಕದ ಮುಖ್ಯ ಸಂದೇಶವನ್ನು ಬಾಳಿನಲ್ಲಿ ಆಚರಣೆಗೆ ತರಲು ದೃಢವಾಗಿ ಸಂಕಲ್ಪಿಸಿದೆ. 'ಅನ್ ಟು ದಿಸ್ ಲಾಸ್ಟ್' ಪುಸ್ತಕದಷ್ಟು ಗಾಢವಾದ ಪ್ರಭಾವ ಬೀರಿ

ಆ ಕೂಡಲೇ ನನ್ನ ಜೀವನದಲ್ಲಿ ವ್ಯಾವಹಾರಿಕ ಪರಿವರ್ತನೆಯನ್ನು ತಂದ ಮತ್ತೊಂದು ಕೃತಿ ಇಲ್ಲ. ಅದನ್ನು ಕೂಡಲೇ ಗುಜರಾತಿ ಭಾಷೆಗೆ ಭಾಷಾಂತರಿಸಿದೆ. ಗುಜರಾತಿ ಸಂಪುಟಕ್ಕೆ 'ಸರ್ವೋದಯ' ಎಂದು ಹೆಸರಿಟ್ಟೆ" ಎಂದು ಬರೆದಿದ್ದಾರೆ. ಸರ್ವೋದಯದ ಮೂರು ಮಹಾಮಂತ್ರಗಳಂತಿದ್ದ ಸೂತ್ರಗಳನ್ನು ಆ ಪುಸ್ತಕದಿಂದ ಹೀಗೆ ಸಂಗ್ರಹಿಸಿದ್ದಾರೆ.

1. ಸಮುದಾಯದ ಒಳಿತಿನಲ್ಲೇ ವ್ಯಕ್ತಿಯ ಒಳಿತು ಅಡಗಿದೆ.
2. ಸಮಾಜ ಪೋಷಕ ಕಾಯಕಗಳಿಗೆಲ್ಲ ಒಂದೇ ಗೌರವ ಮತ್ತು ಸಮಾನ ಬೆಲೆ ಇರಬೇಕು. ಜೀವಿಸುವ ಹಕ್ಕು ಎಲ್ಲರಿಗೂ ಒಂದೇ.
3. ಶ್ರಮಿಕನ ಜೀವನವೇ ಸಾರ್ಥಕ ಜೀವನ.

ಈ ಪ್ರಮುಖ ತತ್ವಗಳ ಆಧಾರದ ಮೇಲೆ ಗಾಂಧೀಜಿ ಮತ್ತು ಪೋಲಕ್ ತಮ್ಮ ಭವಿಷ್ಯ ಜೀವನವನ್ನು ರೂಪಿಸಲು ದೃಢಸಂಕಲ್ಪ ಮಾಡಿದರು. ಸತ್ಯಶೋಧನೆಯ ಪ್ರಯೋಗ ಕ್ಷೇತ್ರದಲ್ಲಿ ಸಂಗಡಿಗರಾದರು.

II

ಈ ಘಟನೆಯೇ ದಕ್ಷಿಣ ಆಫ್ರಿಕದ ಫೀನಿಕ್ಸ್ ಆಶ್ರಮದ ಪ್ರಾರಂಭಕ್ಕೆ ಕಾರಣವಾಯಿತು. ತಮ್ಮ ಭೌತಿಕ ಸರ್ವಸ್ವವನ್ನೂ ಒಂದು ವಿಶ್ವಸ್ತ ಮಂಡಲಿಗೆ ವರ್ಗಾಯಿಸಿ ಆಶ್ರಮದಲ್ಲಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ತತ್ವನಿಷ್ಠೆಯ ತಪೋಜೀವನವನ್ನಾರಂಭಿಸಿಬಿಟ್ಟರು ಗಾಂಧೀಜಿ. ಹಲವು ಸಹಕಾರ್ಯಕರ್ತರು ಈ ಸಾಮೂಹಿಕ ಶ್ರಮಜೀವನದ ದೀಕ್ಷೆ

ತೊಟ್ಟರು. ಇಂಡಿಯನ್ ಒಪಿನಿಯನ್ ಪತ್ರಿಕೆಯ ಕಾರ್ಯಾಲಯ ಮತ್ತು ಮುದ್ರಣಾಲಯುಗಳನ್ನು ಅಲ್ಲಿಗೇ ವರ್ಗಾಯಿಸಿದರು. ಜೊಹಾನ್ಸ್‌ಬರ್ಗಿನ ವಕೀಲ ಕಾರ್ಯಾಲಯ ನಡೆದೇ ಇತ್ತು. ಒಮ್ಮೆ ಜೊಹಾನ್ಸ್‌ಬರ್ಗಿಗೆ ಬಂದಾಗ ತಮ್ಮ ಆಶ್ರಮ ಪ್ರಯೋಗವನ್ನು ಪೋಲಕ್‌ಗೆ ತಿಳಿಸಿದರು. ಅವರು ರೋಮಾಂಚನಗೊಂಡು "ನಾನೂ ನಿಮ್ಮ ಜೊತೆಗೆ ಬಂದಿರಲು ಒಪ್ಪುವಿರಾ" ಎಂದರು. "ನೀವೂ ಆಶ್ರಮ ಜೀವನಕ್ಕೆ ಬದಲಿಸುವುದಾದರೆ ಖಂಡಿತ ಬರಬಹುದು." "ಇದೋ ಈಗಲೇ ಸಿದ್ಧ". ಅಲ್ಲಿಯೇ ನಿರ್ಧರಿಸಿಬಿಟ್ಟಿದ್ದರು. ಗಾಂಧೀಜಿ ಈತನ ಮನೋಸ್ಥೈರ್ಯ ಕಂಡು ಬೆರಗಾದರು. ತಮ್ಮ 'ಕ್ರಿಕೆಟ್' ಪತ್ರಿಕೆಯ ಕೆಲಸಕ್ಕೆ ರಾಜೀನಾಮೆ ಇತ್ತು ಒಂದು ತಿಂಗಳಿನೊಳಗೆ ಪೋಲಕ್ ಆಶ್ರಮಕ್ಕೆ ಬಂದುಬಿಟ್ಟರು. ಅವರ ಸರಳ ಸ್ನೇಹಪರತೆ, ಅವರ ಕಷ್ಟಸಹಿಷ್ಣುತೆ, ಮೃದು ಸ್ವಭಾವಗಳಿಂದ ಬಹುಬೇಗ ಗಾಂಧೀ ಬಳಗದಲ್ಲಿ ಸಮರಸವಾಗಿ ಸೇರಿಹೋದರು.

ಗಾಂಧೀಜಿಯೊಡನೆ ಸಹಾಯಕ ವಕೀಲನಾಗಿ ಕೆಲಸ ಮಾಡುತ್ತಿದ್ದ ಮಿ. ರಿಚ್ ಎಂಬ ಇಂಗ್ಲೀಷ್ ಯುವಕ ಹೆಚ್ಚಿನ ವ್ಯಾಸಂಗಕ್ಕೆಂದು ಇಂಗ್ಲೆಂಡಿಗೆ ಹೊರಡಬೇಕಾಯಿತು. ಕಾರ್ಯಾಲಯದ ಕೆಲಸ ಹೆಚ್ಚಾಗುತ್ತಿತ್ತು. ಗಾಂಧೀಜಿ ತಮ್ಮ ಗೆಳೆಯ ಪೋಲಕರನ್ನು 'ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು ಸಾಧ್ಯವಾದರೆ ತಾವು ಉಪಕೃತರಾಗುವುದಾಗಿ' ಪ್ರಾರ್ಥಿಸಿದರು. ಸ್ವಲ್ಪ ಕಾಲದ ನಂತರ ಇವೆಲ್ಲವನ್ನು ಬಿಟ್ಟು ಆಶ್ರಮಕ್ಕೆ ಇಬ್ಬರೂ ಹೋಗಬಹುದು ಎಂದರು. ತಮಗೆ ಆಶ್ರಮವಾಸ ಆನಂದವೆನಿಸಿದ್ದರೂ ತಮ್ಮ ಸ್ನೇಹಿತರ ಬೇಡಿಕೆಯನ್ನು ಪೋಲಕ್ ನಿರಾಕರಿಸದೆ ಜೋಹಾನ್ಸ್‌ಬರ್ಗಿಗೆ ಬರುವುದಾಗಿ ತಿಳಿಸಿದರು. ಫೀನಿಕ್ಸ್ ವಸತಿಯಲ್ಲಿದ್ದುಕೊಂಡು ಅದನ್ನು ಅಭಿವೃದ್ಧಿಪಡಿಸಲು ಉತ್ಸುಕರಾಗಿದ್ದರು. ಈ ಸಮಯದಲ್ಲಿ ಗಾಂಧೀಜಿಯ ಜವಾಬ್ದಾರಿಗಳಲ್ಲಿ ಪಾಲುದಾರನಾದರೆ ಇಬ್ಬರಿಗೂ ಸ್ವಲ್ಪ ಸಮಯ ಇದಕ್ಕಾಗಿ ಮೀಸಲಿಡಲು ಸಾಧ್ಯ ಎಂದರಿತು ತಾವೂ ವಕೀಲ

ವೃತ್ತಿಯ ಪರೀಕ್ಷೆಗಳನ್ನು ಕೈಗೊಂಡು ಸನ್ನದು ಪಡೆದುಕೊಂಡು ಜೊಹಾನ್ಸ್‌ಬರ್ಗಿನ ಗಾಂಧೀ ಸಂಸಾರದೊಡನೆ ಬಂದು ನಿಂತರು. ಅಲ್ಲಿಯೇ ನೆಲೆಯಾಗಿ ನಿಂತು ವಕೀಲವೃತ್ತಿಯನ್ನು ಮುಂದುವರಿಸಲು ಗಾಂಧೀಜಿ ಭಾರತದಿಂದ ಕಸ್ತೂರಿಬಾ ಅವರನ್ನು ತಮ್ಮ ಮೂವರು ಮಕ್ಕಳು ಮಣಿಲಾಲ್, ರಾಮದಾಸ್ ಮತ್ತು ದೇವದಾಸ್ ಅವರುಗಳನ್ನೂ ಜೊಹಾನ್ಸ್‌ಬರ್ಗಿಗೆ ಕರೆಸಿಕೊಂಡರು. ದೂರದೇಶದ ಈ ಮನೆಗೆ ಬಂದೊಡನೆ ಹೆನ್ರಿಪೋಲಕ್ ಈ ಮಕ್ಕಳಿಗೆ ಒಬ್ಬ ಪ್ರೀತಿಯ ಚಿಕ್ಕಪ್ಪನಾಗಿಬಿಟ್ಟರು. ಆ ವೇಳೆಗಾಗಲೇ ಗಾಂಧೀಜಿಯ ಮನೆಯಲ್ಲಿ ಹಲವು ವಿದೇಶಿ ಸಹಕಾರ್ಯಕರ್ತರು ಜೊತೆಯಲ್ಲಿ ವಾಸವಾಗಿದ್ದರು.

ಹೆನ್ರಿ ಪೋಲಕ್ ಇಂಗ್ಲೆಂಡಿನಲ್ಲಿದ್ದಾಗ ಕುಮಾರಿ ಮಿಲ್ಲಿ ಎಂಬ ವಿದ್ಯಾವಂತೆ ಕನ್ಯೆಯನ್ನು ಪ್ರೀತಿಸಿದ್ದರು. ಅನಂತರ ದಕ್ಷಿಣ ಆಫ್ರಿಕಕ್ಕೆ ಬಂದ ಮೇಲೆ ತಮ್ಮ ಮದುವೆಯ ಬಗ್ಗೆ ಹೆಚ್ಚು ಆಸಕ್ತರಾಗಿರಲಿಲ್ಲ. ನೆಮ್ಮದಿಯಿಂದ ಪಾಶ್ಚಾತ್ಯರ ಶೈಲಿಯಲ್ಲಿ ಸಂಸಾರ ನಡೆಸಲು ಮೊದಲು ಸ್ವಲ್ಪ ಹಣ ಸಂಪಾದಿಸಿಕೊಂಡು ಅನಂತರ ಯೋಚಿಸಬೇಕು ಎಂದುಕೊಂಡಿದ್ದರು. ಗಾಂಧೀಜಿ ಬಹಳ ಮಟ್ಟಿಗೆ ಬ್ರಹ್ಮಚರ್ಯ ಪಾಲನೆಯನ್ನೇ ಪ್ರತಿಪಾದಿಸುತ್ತಿದ್ದುದರಿಂದ ಈ ಬಗ್ಗೆ ಹೆಚ್ಚು ಚರ್ಚೆ ಅವರಿಬ್ಬರ ಮಧ್ಯೆ ನಡೆದಿರಲಿಲ್ಲ. ಪೋಲಕ್ ಒಬ್ಬ ಪರಿಚಿತ ಕನ್ಯೆಯನ್ನು ಗಾಢವಾಗಿ ಪ್ರೀತಿಸುತ್ತಿದ್ದುದು ಗಾಂಧೀಜಿಗೆ ತಿಳಿದಿತ್ತು. ತಮಗಿಂತ ಮುಂಚೆ ಪೋಲಕ್ ರಸ್ಕಿನ್ನನ ಸಂದೇಶವನ್ನು ಓದಿ ಮೆಚ್ಚಿದರೂ ಅವರ ಪಾಶ್ಚಿಮಾತ್ಯ ಸಂಸ್ಕೃತಿಯ ಹಿನ್ನೆಲೆಯಿಂದಾಗಿ ಆ ತತ್ವಗಳನ್ನು ಬಾಳಿನಲ್ಲಿ ಆಚರಿಸಲು ಅವರಿಗೆ ಹೆಚ್ಚು ಕಷ್ಟವೆನಿಸಿದೆ ಎಂದು ಗಾಂಧೀಜಿ ಅರಿತಿದ್ದರು. ಭಾರತೀಯರಾದ ತತ್ವನಿಷ್ಠರೊಡನೆ ಬಹು ಸಹಜವಾಗಿ ಅವರು ಸ್ನೇಹ ಬೆಳೆಸಿದ ಮೇಲೆ ಅವರು ತಮ್ಮ ಮನೋಸಂಕಲ್ಪಗಳನ್ನು ಬಾಳಿನಲ್ಲಿ ಅನುಸರಿಸಲು ಪ್ರಾಮಾಣಿಕ ಪ್ರಯತ್ನ ಕೈಗೊಳ್ಳಲು ಅನುವು ದೊರೆತಿತ್ತು.

"ಹೃದಯಗಳು ಪರಸ್ಪರ ಮೇಳೈಸಿದಾಗ ಮದುವೆಯನ್ನು ಅನಾವಶ್ಯಕವಾಗಿ ಮುಂದೆ ಹಾಕುವುದು ಸರಿಯಲ್ಲ. ಹಣಕಾಸಿನ ಸ್ಥಿತಿ ಅಡ್ಡಬರಬಾರದು. ಬಡತನವೇ ಕಾರಣವಾಗುವುದಾದರೆ ಬಡವರು ಮದುವೆಯಾಗುವ ಹಾಗೇ ಇಲ್ಲ. ಈಗ ನೀನು ನಮ್ಮ ಮನೆಯವನಾಗಿದ್ದೀಯೆ. ಇಲ್ಲಿರುವವರೆಗೆ ಮನೆವೆಚ್ಚದ ಯೋಚನೆ ಮಾಡಬೇಕಾಗಿಲ್ಲ. ನೀನು ಆದಷ್ಟು ಬೇಗ ಮದುವೆಯಾಗಿ ಸಂಸಾರ ಮಾಡಬೇಕು" ಎಂದರು ಗಾಂಧೀಜಿ.

ಅವರ ಮಾತೆಂದರೆ ಪೋಲಕ್‌ಗೆ ಅತ್ಯಂತ ಗೌರವ. ಮೊದಲು ಹೇರಳ ಹಣ ಸಂಪಾದನೆ ನಂತರ ಮದುವೆಯ ಯೋಚನೆ ಎಂಬ ವಾದದಲ್ಲಿ ಹುರುಳಿಲ್ಲವೆನಿಸಿತು. ಬಂದ ಭಾಗ್ಯದಲ್ಲಿ ಹಂಚಿಕೊಂಡು ಬಾಳುವುದೇ ಭಾರತೀಯ ಮನೋಭಾವ. ಸೇವಾದೀಕ್ಷೆಯಲ್ಲಿ ಭಾಗಿಯಾಗುವ ಸಂಗಾತಿಯಿಂದ ಜೀವನ ಹೆಚ್ಚು ಹಗುರವಾಗಿ ಸಾಗೀತು ಎನಿಸಿತು ಪೋಲಕ್‌ಗೆ. ಆ ಕೂಡಲೇ ಕುಮಾರಿ ಮಿಲ್ಲಿಗೆ ಪತ್ರ ಬರೆದು ಎಲ್ಲ ವಿವರಗಳನ್ನು ತಿಳಿಸಿದರು. ಇಂಗ್ಲೆಂಡಿನಲ್ಲಿದ್ದ ಈ ಯುವತಿಗೂ ಗಾಂಧೀ ಜೀವನ ಸಂದೇಶ ಮೆಚ್ಚುಗೆಯಾಯಿತು. ತನ್ನ ತಂದೆ ತಾಯಿಗಳ ಅಪ್ಪಣೆ ಪಡೆದು ಜೊಹಾನ್ಸ್ ಬರ್ಗಿಗೆ ಬಂದುಬಿಟ್ಟಳು.

ಮದುವೆ ಅತ್ಯಂತ ಸರಳ ರೀತಿಯಲ್ಲಿ ನಡೆಯಬೇಕೆಂದು ಇಬ್ಬರೂ ತೀರ್ಮಾನಿಸಿದ್ದರು. ಮಿಲ್ಲಿ ಕ್ರೈಸ್ತಧರ್ಮಕ್ಕೆ ಸೇರಿದವಳು. ಪೋಲಕ್ ಒಬ್ಬ ಯಹೂದಿ. ನೀತಿಧರ್ಮವೇ ಅವರ ಪರಸ್ಪರ ಬಾಂಧವ್ಯಕ್ಕೆ ಆಧಾರವಾಗಿತ್ತು. ಆಗ ಜೊಹಾನ್ಸ್‌ಬರ್ಗಿನಲ್ಲಿ ಮದುವೆಗಳ ನೋಂದಣಿ ಅಧಿಕಾರಿ ಯೂರೋಪಿಯನ್ ಜನಾಂಗದವರ ಮದುವೆಯನ್ನು ಮಾತ್ರ ನೋಂದಾಯಿಸಿಕೊಳ್ಳಬೇಕೆಂಬ ಕಾನೂನಿತ್ತು. ಅಲ್ಲಿನ ಕರಿಯ ಅಥವಾ ಇತರ ವರ್ಣೀಯ ಜನಾಂಗಗಳಿಗೆ ಆ ಹಕ್ಕು ಇರಲಿಲ್ಲ. ಈ ಮದುವೆಗೆ ಗಾಂಧೀಜಿಯೇ ಪೋಷಕರಾಗಿ ಘೋಷಿಸಿಕೊಂಡರು. ಇಂಗ್ಲೀಷಿನಲ್ಲಿ 'ಬೆಸ್ಟ್‌ಮ್ಯಾನ್' ಎನ್ನುತ್ತಾರೆ. ಆದರೆ ನೋಂದಣಿ

ಅಧಿಕಾರಿ ಕರಿಯ ಜನಾಂಗದವರಾದ ಗಾಂಧೀಜಿಯ ಪಾತ್ರವನ್ನು ಅಂಗೀಕರಿಸುವುದಿಲ್ಲ ಎಂದುಬಿಟ್ಟ. ಮೇಲಿನವರನ್ನು ಕೇಳಬೇಕು ಎಂದ. ಇದಕ್ಕಾಗಿ ಒಬ್ಬ ಯೂರೋಪಿಯನ್ ಗೆಳೆಯನನ್ನು ಗೊತ್ತುಮಾಡಿಕೊಳ್ಳಲು ಪೋಲಕ್‌ಗೆ ಏನೂ ಕಷ್ಟವಿರಲಿಲ್ಲ. ಆದರೆ ಗಾಂಧೀಜಿಯೇ ತನ್ನ 'ಬೆಸ್ಟ್‌ಮ್ಯಾನ್' ಆಗಬೇಕು ಎಂದು ಪೋಲಕ್ ಹಠಹಿಡಿದರು. ಮಾರನೆ ದಿನ ಭಾನುವಾರ, ಆಮೇಲೆ ಸೋಮವಾರ, ಹೊಸ ವರ್ಷದ ದಿನ. ಎರಡೂ ರಜಾದಿನಗಳು. ಹೀಗಾಗಿ ಮದುವೆಯ ನೋಂದಾಣಿಕೆ ಮುಂದೆ ಹಾಕಬೇಕು ಎಂದು ಅಧಿಕಾರಿ ನಿಷ್ಠುರವಾಗಿ ಹೇಳಿಬಿಟ್ಟ. ಮಿಕ್ಕ ಏರ್ಪಾಡುಗಳೆಲ್ಲ ನಡೆದುಬಿಟ್ಟಿದ್ದುದರಿಂದ ಮುಂದಕ್ಕೆ ಹಾಕುವುದು ಸರಿಯಲ್ಲ ಎನಿಸಿತು. ಗಾಂಧೀಜಿ ನೇರವಾಗಿ ತಮಗೆ ಪರಿಚಯವಿದ್ದ ಮ್ಯಾಜಿಸ್ಟ್ರೇಟರ ಬಳಿಗೆ ಹೋಗಿ ಮದುಮಕ್ಕಳನ್ನು ಪರಿಚಯಿಸಿದರು. ಅವರು ಕೂಡಲೇ ನೋಂದಣಿ ಅಧಿಕಾರಿಗೆ ಪತ್ರ ಬರೆದುಕೊಟ್ಟು ಮದುವೆಯನ್ನು ಆ ದಿನವೇ ನೋಂದಾಯಿಸಲು ಅಪ್ಪಣೆ ಮಾಡಿದರು. ಎಲ್ಲವೂ ನಂತರ ಸುಸೂತ್ರವಾಗಿ ನಡೆದು ಹೋಯಿತು.

III

ಮಿಲ್ಲಿ ಗ್ರಹಾಮ್ ಪೋಲಕಳಿಗೆ ಆಕೆ ದಕ್ಷಿಣ ಆಫ್ರಿಕಕ್ಕೆ ಬರುವ ಮುನ್ನವೇ ಪತ್ರ ಬರೆದು ಗಾಂಧೀಜಿ ಧೈರ್ಯ ತುಂಬಿದ್ದರು. ಆಕೆಯ ಆರೋಗ್ಯ ಚೆನ್ನಾಗಿರಲಿಲ್ಲ. ಪೋಲಕರ ತಂದೆಗೂ ಆತಂಕವಾಗಿತ್ತು. ಮದುವೆ ಮುಂದಕ್ಕೆ ಹಾಕಿ ಎನ್ನುತ್ತಿದ್ದರು. ಗಾಂಧೀಜಿ "ದಕ್ಷಿಣ ಆಫ್ರಿಕದಲ್ಲಿ ಆಕೆಗೆ ಸಿಗಲಿರುವ ಪ್ರೀತಿಪೂರ್ಣ ಉಪಚಾರ, ಸುಂದರವಾದ ನಿಸರ್ಗದ ಹವೆ, ಸರಳ ಜೀವನ ಆಕೆಗೆ ಲಂಡನ್ ಜೀವನಕ್ಕಿಂತ ಹೆಚ್ಚು ಲಾಭಕರ; ಆರೋಗ್ಯ ಸುಧಾರಿಸಲು ಇಲ್ಲಿಗೆ ಬರುವುದೇ ಒಳ್ಳೆಯದು" ಎಂದು ವಿಶ್ವಾಸದ ಅಣ್ಣನಂತೆ ತಿಳಿಯಹೇಳಿದ್ದರು. ಮಿಲ್ಲಿಗೆ ಗಾಂಧೀಜಿಯನ್ನು ನೋಡುವ ಮುನ್ನವೇ

ಅವರ ಬಗ್ಗೆ ಪ್ರೀತಿ ಗೌರವಗಳು ಮೂಡಿದ್ದವು. ನಮ್ಮ ಮನೆಗೇ ಸೊಸೆಯಂತೆ ಬರಬೇಕು. ಹೆನ್ರಿ ತಮ್ಮ ಮನೆಯ ಭಾಗವಾಗಿಯೇ ಇದ್ದಾನೆ ಎಂಬುದನ್ನೂ ಗಾಂಧೀಜಿ ಬರೆದಿದ್ದರು. ಮಿಲ್ಲಿ ಆ ಕ್ಷಣದಲ್ಲೇ ನಿರ್ಧರಿಸಿ ಜೊಹಾನ್ಸ್‌ಬರ್ಗ್‌ಗೆ ಬಂದುಬಿಟ್ಟರು.

'ಗಾಂಧಿ ದಿ ಮ್ಯಾನ್' ಎಂಬ ಒಂದು ಸುಂದರ ಆತ್ಮನಿವೇದನಾ ಕೃತಿಯನ್ನು ಮಿಲ್ಲಿ ಪ್ರಕಟಿಸಿದ್ದಾರೆ. ಮೊದಲ ನೋಟಕ್ಕೆ ಅವರಿಗೆ ಗಾಂಧೀ ಹೀಗೆ ಕಾಣಿಸಿದರು; "ನಡು ಎತ್ತರದ ತೆಳುವಾದ ಮೈಕಟ್ಟು; ಅಷ್ಟು ಕಪ್ಪಲ್ಲದ ಬಣ್ಣ; ದೊಡ್ಡ ತುಟಿಗಳ ಬಾಯಿ; ಸಣ್ಣ ಕಪ್ಪು ಮೀಸೆ; ಮಾತನಾಡುವಾಗ ಒಳಗಿನಿಂದ ಬೆಳಗುತ್ತಿದ್ದ ಅಪೂರ್ವ ಕರುಣಾಪೂರ್ವ ಕಣ್ಣುಗಳು– ಇವು ಮೊದಲ ಬಾರಿಗೆ ನಾನು ಕಂಡ ಚಿತ್ರ. ಕಣ್ಣುಗಳು ಪ್ರಧಾನವಾಗಿ ಆತ್ಮದೀಪದಂತೆ ಬೆಳಗುತ್ತಿದ್ದವು. ಅವುಗಳು ಮಾತನಾಡುವಂತೆ ಭಾಸವಾಗುತ್ತಿತ್ತು; ಮಿದುಧ್ವನಿ, ಒಂದು ತುಂಟತನದ ಸ್ವರ ಅವರ ನುಡಿಯಲ್ಲಿರುತ್ತಿತ್ತು."

ಪೋಲಕ್ ದಂಪತಿಗಳು ಕಸ್ತೂರಿ ಬಾ ಅವರಿಗೂ ಪ್ರಿಯರಾಗಿಬಿಟ್ಟರು. ಇಂಗ್ಲೀಷ್ ಬಾರದಿದ್ದರೂ ಒಂದು ನೀರವ ತಾಯ ಪ್ರೇಮ ತುಳುಕುತ್ತಿದ್ದುದನ್ನು ಮಿಲ್ಲಿಗೆ ತಲುಪಿಸುವುದರಲ್ಲಿ ಬಾ ಯಶಸ್ವಿಯಾಗಿದ್ದರು. ಕ್ರಮೇಣ ಒಂದು ವ್ಯಾವಹಾರಿಕ ಭಾಷೆ ಅವರನ್ನು ಜೊತೆಗೂಡಿಸಿತು. ಲಂಡನ್ನಿನಲ್ಲಿ ಅಪರಿಚಿತವಾಗಿದ್ದ ಒಬ್ಬ ಭಾರತೀಯ ಗೃಹಿಣಿಯೊಡನೆ ಎಲ್ಲ ಕೆಲಸಗಳನ್ನೂ ಹಂಚಿಕೊಂಡು ಮಿಲ್ಲಿ ಹರ್ಷೋಲ್ಲಾಸದಿಂದ ಇರಹತ್ತಿದರು. ಮಕ್ಕಳಿಗೆ ಬಯಸಿಬಂದ ಶಿಕ್ಷಕಿ ಎನಿಸಿದರು. ಸಾಂಪ್ರದಾಯಿಕ ಶಿಕ್ಷಣ ಶಾಲೆಗೆ ತನ್ನ ಮಕ್ಕಳನ್ನು ಗಾಂಧೀಜಿ ಸೇರಿಸಿರಲಿಲ್ಲ. ಮೇಲ್ವರ್ಗದವರಾದ ಬಿಳಿಯರ ಮಕ್ಕಳ ಶಾಲೆಗಳಲ್ಲಿ ವರ್ಣೀಯ ಮಕ್ಕಳನ್ನು ಸೇರಿಸುತ್ತಿರಲಿಲ್ಲ. ಗಾಂಧೀ ಮಕ್ಕಳಿಗೆ ಅದರಿಂದ ಏನಾಯಿತಿ ದೊರಕಬಹುದಾಗಿದ್ದರೂ ಅದನ್ನು ನಿರಾಕರಿಸಿ ಮನೆಯಲ್ಲೆ ಶಿಕ್ಷಣ ಕೊಡುತ್ತಿದ್ದರು.

ಶರೀರಶ್ರಮದ ಕೆಲಸಗಳಲ್ಲಿ ತೊಡಗುವುದರಿಂದ ಹೇಗೆ ಮನಸ್ಸು ಮತ್ತು ಬುದ್ಧಿ ಪ್ರಫುಲ್ಲಿತವಾಗಿ ಅರಳುತ್ತವೆ ಎನ್ನುವ ಪ್ರಯೋಗಗಳನ್ನು ಹೆನ್ರಿ ಮತ್ತು ಮಿಲ್ಲಿ ಪೋಲಕ್ ಇಬ್ಬರೂ ಆನಂದದಿಂದ ಕೈಗೊಳ್ಳುತ್ತಿದ್ದರು. ರಸ್ಕಿನ್ನನ ಆದರ್ಶ ಜೀವನದ ಸಾಧನೆಗೆ ಸರಳತೆ, ಸತ್ಯನಿಷ್ಠೆ, ಆತ್ಮಸಾಕ್ಷಿಯಂತೆ ನಡೆಯುವುದು ಅಗತ್ಯ ಎಂದು ಗಾಂಧೀಜಿಯಿಂದ ಕಲಿತರು. ಆಂತರಿಕ ಮತ್ತು ಬಾಹ್ಯ ಸ್ವಚ್ಛತೆ ಗಾಂಧೀಜಿಯ ದಿನಚರಿಯಲ್ಲಿ ಮುಖ್ಯವಾಗಿತ್ತು. ತಾವೇ ಪೊರಕೆ ಹಿಡಿದು ಗುಡಿಸುತ್ತಿದ್ದರು. ಮಿಕ್ಕವರೂ ಹಾಗೆ ಮಾಡುತ್ತಿದ್ದರು. ಈ ಕಾರ್ಯ ಅತ್ಯಂತ ಸಹಜ ಅಭ್ಯಾಸವಾಗಿ ಹೋಗಿತ್ತು. ಪೋಲಕ್ ದಂಪತಿಗಳೂ ಭಾಗಿಯಾಗುತ್ತಿದ್ದರು. ಹೀಗೆ ಒಂದು ಸಾಧನಾ ಪಥ ಅವರಿಗೆ ಸ್ಪಷ್ಟವಾಗುತ್ತಿತ್ತು.

ಫೀನಿಕ್ಸ್ ಆಶ್ರಮ ನಿಧಾನವಾಗಿ ರೂಪಿತವಾಗುತ್ತಿತ್ತು. ಅಲ್ಲಿನ ಸರಳ ವಸತಿಗೃಹಗಳು ನಿರ್ಮಾಣವಾಗಲು ಪೋಲಕ್ ನೆರವಾದರು. ಕ್ರಮೇಣ ಅಲ್ಲಿನ ವ್ಯವಸಾಯ ಭೂಮಿಯನ್ನು ಸಮನಾಗಿ ಹಂಚಿಕೊಂಡು ರೈತರಾಗಿ ದುಡಿದು ತಮ್ಮ ಜೀವನ ನಿರ್ವಹಣೆ ಮಾಡಬೇಕೆಂಬ ಹಂಬಲ ತುಂಬಿರುತ್ತಿತ್ತು. ಮುದ್ರಣಾಲಯದ ಕೆಲಸವನ್ನು ಎಲ್ಲರೂ ಕಲಿತರು. ಜೊಹಾನ್ಸ್‌ಬರ್ಗಿನ ವಕೀಲ ಕಾರ್ಯಾಲಯವೂ ಪೋಲಕರ ನೆರವಿನಿಂದ ಸಾಗುತ್ತಿತ್ತು.

ಶ್ರೀಮಂತಿಕೆಯ ಶೈಲಿಯಲ್ಲಿ ನಡೆಯುತ್ತಿದ್ದ ಗಾಂಧೀಜಿಯ ಗೃಹಜೀವನ ಕ್ರಮೇಣ ಸರಳವಾಗುತ್ತ ಸ್ವಾವಲಂಬನೆಯ ಆರೋಗ್ಯಕರ ಅಭ್ಯಾಸಗಳನ್ನು ಮೈಗೂಡಿಸಿಕೊಂಡಿತು. ಸ್ವಚ್ಛತಾಕಾರ್ಯಕ್ಕೆ ಸೇವಕರನ್ನು ನೇಮಿಸಿಕೊಳ್ಳುವುದು ನಿಂತಿತು. ರೊಟ್ಟಿಯ ಹಿಟ್ಟನ್ನು ಮನೆಯಲ್ಲೇ ಬೀಸಿಕೊಳ್ಳಲು ಪೋಲಕ್ ಮತ್ತು ಮಕ್ಕಳು ಸಂತೋಷದಿಂದ ನೆರವಾದರು. ಮಿಲ್ಲಿಗೂ ಇದು ಆರೋಗ್ಯ ಸುಧಾರಣೆಯಲ್ಲಿ ನೆರವಾಯಿತು. ಸಂಸಾರ ಜೀವನ ಸಂಪೂರ್ಣವಾಗಿ ಪರಿವರ್ತಿತವಾಗುತ್ತಿತ್ತು. ಅನೇಕ ವೇಳೆ ವೈಚಾರಿಕ ಚರ್ಚೆಗಳಲ್ಲಿ ಮಿಲ್ಲಿ ಎಲ್ಲವನ್ನೂ ಅನುಮಾನದಿಂದ ಪ್ರಶ್ನಿಸುತ್ತಿದ್ದಳು. ಪೂರ್ಣವಾಗಿ

ಒಪ್ಪದ ಯಾವ ಕೆಲಸವನ್ನೂ ಕೈಗೊಳ್ಳುತ್ತಿರಲಿಲ್ಲ. ವ್ಯವಹಾರಕುಶಲತೆ, ನಿಶ್ಚಿತವಾದ ವಿಮರ್ಶೆ, ಬೌದ್ಧಿಕ ವಿವೇಕ ಮತ್ತು ಸರ್ವರ ಸಹಕಾರ ವರ್ಧನೆ- ಈ ಅಂಶಗಳ ಒರೆಗಲ್ಲಿಗೆ ಗಾಂಧೀಜಿಯ ತತ್ವಗಳನ್ನು ತಿಕ್ಕಿ ನೋಡುತ್ತಿದ್ದಳು ಮಿಲ್ಲಿ. ಅನೇಕ ಸಾರಿ ಅವರ ಉತ್ಸಾಹ ಅತಿ ಎಂದು ಕಂಡಾಗ ತಡೆದು ನಿಲ್ಲಿಸುವ ಅಧಿಕಾರವನ್ನು ಪಡೆದಳು. ಹೆನ್ರಿ ಎಲ್ಲವನ್ನೂ ಪ್ರಶ್ನೆ ಮಾಡದೆ ಒಪ್ಪಿಕೊಂಡುಬಿಡುತ್ತಿದ್ದರು. ಪ್ರಯತ್ನದಲ್ಲಿ ವಿಫಲಗೊಂಡಾಗ ಅವರಿಗೆ ಮಿಲ್ಲಿಯ ತರ್ಕ ಅರ್ಥವಾಗುತ್ತಿತ್ತು. ಗಾಂಧೀಜಿಗೂ ಅನೇಕಸಾರಿ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಮಿಲ್ಲಿಯ ವಾದ ನೆರವಾಗುತ್ತಿತ್ತು ಎಂದು ಹೇಳಿಕೊಂಡಿದ್ದಾರೆ. ಅವರ ವಿನಯವನ್ನು ಕಂಡು ಮಿಲ್ಲಿ ಮಾರುಹೋಗುತ್ತಿದ್ದಳು. ಹೀಗೆ ವಿಶ್ವಾಸಪೂರ್ಣ ಬಾಂಧವ್ಯಗಳಿಂದ ಗಾಂಧೀ ದಂಪತಿಗಳ ಹಾಗೂ ಪೋಲಕ್ ದಂಪತಿಗಳ ವ್ಯಕ್ತಿತ್ವಗಳು ಕಡೆದು ನಿಲ್ಲಲು ಪರಿಸರ ನಿರ್ಮಾಣವಾಗಿತ್ತು.

ದಕ್ಷಿಣ ಆಫ್ರಿಕದ ವರ್ಣಭೇದ ಸಮಸ್ಯೆ ಜಟಿಲವಾಗುತ್ತಿತ್ತು. ಭಾರತೀಯ ನಾಗರಿಕರ ಬಗ್ಗೆಯೂ ತಿರಸ್ಕಾರ ಭಾವನೆ ಬೆಳೆದಿತ್ತು. ಎಲ್ಲವೂ ಬಿಳಿಯರ ಸಮಾಜದ ಅಹಂಕಾರಕ್ಕೆ ಪೋಷಕವಾಗಿಯೇ ನಡೆಯುತ್ತಿದ್ದುದನ್ನು ಕಂಡು ಪೋಲಕ್ ಸಿಟ್ಟಾಗುತ್ತಿದ್ದರು. ಪತ್ರಿಕೆಗಳಲ್ಲಿ ಖಂಡಿಸಿ ಬರೆಯುತ್ತಿದ್ದರು. ಈ ಲೇಖನಗಳಿಂದ ಅವರು ಭಾರತೀಯರಿಗೆ ಹೆಚ್ಚು ಹೆಚ್ಚು ವಿಶ್ವಾಸಾರ್ಹರೆನಿಸುತ್ತ ಬಂದರು. ಗಾಂಧೀಜಿಯ ಆತ್ಮೀಯರಾಗಿ ಸಾರ್ವಜನಿಕ ಸೇವೆಯಲ್ಲಿ ನೆರವಾಗುತ್ತಿದ್ದ ಯೂರೋಪಿಯನ್ ಸಜ್ಜನರಲ್ಲಿ ಕಾಲೆನ್‌ಬಾಕ್, ವೆಸ್ಟ್, ರೆವೆರೆಂಡ್ ಡೋಕ್ ದಂಪತಿಗಳು ಮತ್ತು ಪೋಲಕ್ ದಂಪತಿಗಳು ಪ್ರಮುಖರೆನಿಸಿದ್ದರು. ಭಾರತೀಯರು ನಾಗರಿಕ ಹಕ್ಕುಗಳಿಗಾಗಿ ಹೂಡಿದ ಅಹಿಂಸಕ ಸತ್ಯಾಗ್ರಹ ಸಮರದಲ್ಲಿ ಇವರೆಲ್ಲರೂ ಸಮರಸವಾಗಿ ಪಾಲ್ಗೊಳ್ಳಲು ತಮ್ಮ ಜೀವನಶೈಲಿಗಳನ್ನೂ ವಿಚಾರಮಾರ್ಗಗಳನ್ನೂ ಗಾಂಧೀಜಿಯ ಸಹವಾಸದಿಂದ ಪರಿವರ್ತನೆಗೊಳಿಸಿಕೊಂಡರು.

ದಕ್ಷಿಣ ಆಫ್ರಿಕದ ಸತ್ಯಾಗ್ರಹ ಸಮರ ಗಾಂಧೀಜೀವನದ ಒಂದು ಪ್ರಮುಖ ಘಟ್ಟ. ಅವರ ಸತ್ಯಶೋಧನೆಗಳ ಪ್ರಯೋಗಶಾಲೆಯಲ್ಲಿ ಅವರು ಪೂರ್ಣವಾಗಿ ಪರಿವರ್ತಿತರಾಗಿ ಮಹಾತ್ಮರೆನಿಸಿದರು. ಈ ಪರ್ವಕಾಲದಲ್ಲಿ ಅವರಿಗೆ ನೆರವಾಗಿ ನಿಂತ ಅನೇಕ ಆತ್ಮೀಯ ಮಿತ್ರರಲ್ಲಿ ಪೋಲಕ್ ದಂಪತಿಗಳು ಪ್ರಮುಖರೆನಿಸಿದ್ದರು.ತಮ್ಮ ವಕೀಲವೃತ್ತಿಯನ್ನು ತ್ಯಜಿಸಿ ಆಶ್ರಮವಾಸಿಯಾದಾಗ ಪೋಲಕ್ ದಂಪತಿಗಳು ಡರ್ಬಾನ್ ನಗರದಲ್ಲಿರುತ್ತಾರೆ. ಆಗಾಗ್ಗೆ ಫೀನಿಕ್ಸ್ ಆಶ್ರಮಕ್ಕೆ ಬಂದು ವಸತಿಮಾಡಿ ಪ್ರಯೋಗಗಳಲ್ಲಿ ನೆರವಾಗುತ್ತಿದ್ದರು. ಡರ್ಬಾನಿನ ವಕೀಲ ಕಚೇರಿ ಮತ್ತು ಇಂಡಿಯನ್ ಒಪಿನಿಯನ್ ಪತ್ರಿಕೆಯ ಸಂಪಾದಕೀಯ ವಿಭಾಗ ಎರಡರಲ್ಲೂ ಪೋಲಕ್ ಕೆಲಸ ಮಾಡುತ್ತಿದ್ದರು.

ಮಿಲ್ಲಿ ಪೋಲಕ್ ಆಶ್ರಮದ ಕಷ್ಟಕರ ಜೀವನರೀತಿಗೆ ಹೊಂದಿಕೊಳ್ಳಲು ಹೆಣಗಾಡುತ್ತಿದ್ದರು. ಆದರೆ ಗಾಂಧೀಜಿಯ ತತ್ವನಿಷ್ಠೆ ಸಂಕಲ್ಪಶಕ್ತಿ, ಸರ್ವಹಿತದೃಷ್ಟಿ ಆಕೆಯನ್ನು ಪ್ರಬಲವಾಗಿ ಸೆರೆಹಿಡಿದಿತ್ತು. ಪ್ರತಿಯೊಂದು ಸಮಸ್ಯೆ ಎದುರಾದಾಗಲೂ ಗಾಂಧೀಜಿಯೊಡನೆ ಬಿಚ್ಚುಮನಸ್ಸಿನಿಂದ ಚರ್ಚಿಸಿ ನಿರ್ಣಯಕ್ಕೆ ಬರುತ್ತಿದ್ದಳು. ಆಕೆ ಅನೇಕ ಸ್ವಾರಸ್ಯಕರ ಚರ್ಚೆಗಳನ್ನು ತನ್ನ, 'ಗಾಂಧೀ ದಿ ಮ್ಯಾನ್' (ಕನ್ನಡಕ್ಕೆ ಅನುವಾದವಾಗಿ 'ಗಾಂಧೀಜಿ' ಒಂದು ಅಂತರಂಗ ಪರಿಚಯ" ಎಂದು ಪ್ರಕಟವಾಗಿದೆ) ಪುಸ್ತಕದಲ್ಲಿ ಬರೆದಿಟ್ಟಿದ್ದಾಳೆ. ಒಮ್ಮೆ ಆಕೆ ಗಾಂಧೀಜಿಯನ್ನು ಕೇಳಿ ಮಾಡಿದ ಸಂಭಾಷಣೆಗೆ ಹೀಗೆ ಮುಂದುವರಿಯಿತು:–

"ಯಾವ ಕೆಲಸ ಮಾಡಬೇಕಾದರೂ ತೀರ ಅನಾನುಕೂಲವಾದ ದಾರಿಯನ್ನೇ ನೀವೇಕೆ ಅರಿಸಿಕೊಳ್ಳುತ್ತೀರಿ?"

"ನನಗದು ಅನಾನುಕೂಲವೆನಿಸುವುದಿಲ್ಲ; ಅದಿರಲಿ, ಇದರಲ್ಲಿ ನಿನ್ನ ಸಮಸ್ಯೆಯಾದರೂ ಏನು?"

“ನೀವು ಮಾಡುವ ಎಷ್ಟೋ ಕೆಲಸ ನಿಮಗೆ ತುಂಬಾ ಕಷ್ಟಕರವಾದುದು. ಅದನ್ನು ಮಾಡಲೇಬೇಕೆಂಬ ಅಗತ್ಯವೇನೂ ಇಲ್ಲ ನಿಮಗೆ. ಯಾವುದೋ ವಿಚಿತ್ರ ತತ್ವದ ದೃಷ್ಟಿಯಿಂದ ಮೃದುವಾದ ಹೂಹಾಸಿದ ದಾರಿ ತ್ಯಜಿಸಿ ಮುಳ್ಳು ತುಂಬಿದ ದಾರಿಯನ್ನೇ ಏಕೆ ಆರಿಸಿಕೊಳ್ಳುತ್ತೀರಿ?”

“ಸುಲಭವಾದ ಸುಖದ ಹಾದಿ ನಮ್ಮನ್ನು ದೇವರ ಬಳಿಗೆ ಒಯ್ಯುವುದಿಲ್ಲ. ದೇಹಸುಖಕ್ಕೆ ಅದರ ಬಯಕೆಗಳಿಗೆ ಸಂಯಮದ ಪಾಠ ಬೇಕು.”

“ದೇಹವನ್ನು ಯಾವಾಗಲೂ ಛಾಟಿಯಿಂದ ಹೊಡೆಯುತ್ತಲೇ ಇರಬೇಕೆಂದು ದೇವರು ಬಯಸುತ್ತಾನೆಯೆ?”

“ದೇಹಭೋಗದಲ್ಲಿ ಆತನನ್ನೂ ಮರೆತುಬಿಡುವ ಅಪಾಯವಿದೆ. ದೇವರ ಸೇವೆಗೆ ಮುಂಚೆ ನಮ್ಮ ಸುಖದ ಸೇವೆ ಎನ್ನುತ್ತೇವೆ. ದೇವರ ಸೃಷ್ಟಿಯಲ್ಲಿನ ಸೌಂದರ್ಯವನ್ನನುಭವಿಸುವ ಆನಂದದಿಂದ ವಂಚಿತವಾಗಬಾರದು. ಆದರೆ ಸುಖಸೋಮಾರಿತನಗಳ ಚಪಲ ನಮ್ಮಲ್ಲಿ ಹೊಂಚುಹಾಕುತ್ತಲೇ ಇರುತ್ತದೆ. ಅದಕ್ಕೆ ಬಲಿಯಾಗಬಾರದು.”

ಈ ಸಂಭಾಷಣೆಗಳ ಕೊನೆಯಲ್ಲಿ ಮಿಲ್ಲಿ ಪೋಲಕ್ “ಗಾಂಧೀಜಿಯ ಒಲವು ವೈರಾಗ್ಯದ ಕಡೆಗೆ ಇತ್ತು. ತ್ಯಾಗಜೀವನದಲ್ಲಿ, ಸೇವಾ ದೀಕ್ಷೆಯಲ್ಲಿ, ಬಲಿದಾನದಲ್ಲಿ ಅವರಿಗೆ ಆನಂದವೆನಿಸುತ್ತಿತ್ತು. ಮುಂದೆ ಸತ್ಯಾಗ್ರಹಗಳನ್ನು ನಡೆಸುವಾಗ ತಮ್ಮ ನಿಷ್ಠುರವಾದ ಸತ್ಯ-ಅಹಿಂಸಾ ಮಾರ್ಗವನ್ನನುಸರಿಸಲು ಇದು ಅವರ ರಕ್ಷಾಕವಚವಾಯಿತು” ಎಂದಿದ್ದಾರೆ.

IV

ದಕ್ಷಿಣ ಆಫ್ರಿಕದ ಭಾರತೀಯ ನಾಗರಿಕ ಹಕ್ಕುಗಳಿಗಾಗಿ ಮೂರು ಸಲ ಪ್ರಬಲವಾದ ಶಾಸನಭಂಗ ಚಳುವಳಿಯನ್ನು ಗಾಂಧೀಜಿ ನಡೆಸಬೇಕಾಯಿತು. ಹೆನ್ರಿ ಗ್ರಹಾಮ್ ಪೋಲಕ್ ಈ ಸಾಮೂಹಿಕ ಸತ್ಯಾಗ್ರಹವನ್ನು ಬೆಂಬಲಿಸಿ ಬಿಳಿಯ ಆಳರಸರೊಡನೆ ಸತತವಾಗಿ ವಾದವಾಡುತ್ತಿದ್ದರು. ಪತ್ರಿಕೆಗಳಲ್ಲಿ ದೀರ್ಘವಾಗಿ ಗಾಂಧೀಜಿಯ ನಿಲುವನ್ನು ಸಮರ್ಥಿಸುತ್ತಿದ್ದರು. ಆಡಳಿತವರ್ಗ ಕುಪಿತರಾಗಿ ಪೋಲಕ್ ದಂಪತಿಗಳನ್ನೂ ತಮ್ಮ ಸಾಮಾಜಿಕ ಸಭೆ ಸಮಾರಂಭಗಳಿಗೆ ಆಹ್ವಾನಿಸುತ್ತಲೇ ಇರಲಿಲ್ಲ. ಬಿಳಿಯ ಯುರೋಪಿಯನ್ ಸಮಾಜ ಇವರನ್ನು ಗೌರವಿಸುತ್ತಿರಲಿಲ್ಲ. ಆದರೂ ತಾಳ್ಮೆಯಿಂದ ಸತ್ಯಾಗ್ರಹನಿಷ್ಠರಾಗಿ ಈ ಗಾಂಧೀವಾದಿಗಳು ಅವರೊಡನೆ ವಾದಿಸುತ್ತಲೇ ಸಾಗಿದರು.

ಒಂದು ಸಂದರ್ಭದಲ್ಲಿ ಗಾಂಧೀಜಿ ಜನರಲ್ ಸ್ಮಟ್ಸರೊಡನೆ ಒಂದು ತಾತ್ಕಾಲಿಕ ಒಪ್ಪಂದಕ್ಕೆ ಬಂದು ಅವನ ವಾಗ್ದಾನದ ಮೇಲೆ ಭರವಸೆ ಇಟ್ಟು ಚಳುವಳಿ ನಿಲ್ಲಿಸಿದರು. ಮುಂದೆ ಅವನು ವಚನಭ್ರಷ್ಟನಾದುದರಿಂದ ಮತ್ತೆ ಪ್ರಾರಂಭಿಸಿದರು. ಈ ಮಧ್ಯದ ಸಮಯದಲ್ಲಿ ಅಸಮಾಧಾನಗೊಂಡ ಭಾರತೀಯನೊಬ್ಬ "ಈ ಗಾಂಧಿ ಸರ್ಕಾರದೊಡನೆ ಸೇರಿ ಜನರಿಗೆ ದ್ರೋಹ ಮಾಡುತ್ತಿದ್ದಾರೆ. ನಾಯಕನಂತೆ ನಟಿಸುತ್ತಿದ್ದಾರೆ" ಎಂದು ತಿಳಿದು ಅವರನ್ನು ಕೊಂದುಬಿಡಬೇಕು ಎಂದು ಆಕ್ರೋಶಗೊಂಡು ಆವೇಶದಿಂದ ನುಗ್ಗಿ ಬಂದ. ಮಿಲ್ಲಿ ಮತ್ತು ಹೆನ್ರಿ ಪೋಲಕರಿಗೆ ತಿಳಿದು ಭಯಗೊಂಡರು. ಆದರೆ ಅಷ್ಟಕ್ಕೇ ನಿಲ್ಲಿಸಿ ಆ ಯುವಕ ಹೊರಟುಹೋದ. ಅವನನ್ನು ದಸ್ತಗಿರಿ ಮಾಡಿಸಿ ಎಂದರು ಮಿಲ್ಲಿ. ಗಾಂಧೀಜಿ ಸಾವಧಾನವಾಗಿ "ನನ್ನನ್ನು ಕೊಲ್ಲುವ ಆಸೆ ಅವನಿಗಿದೆ ಎಂದುಕೊಂಡಿದ್ದೆ. ಆದರೆ ಧೈರ್ಯವಿರಲಿಲ್ಲ. ಅವನಂದುಕೊಂಡಷ್ಟೇ ಕೆಟ್ಟವನಾಗಿದ್ದರೆ, ನಾನು ಸಾಯುವುದೇ ಯೋಗ್ಯವಾಗಿತ್ತು. ಅವನದು ತಪ್ಪು ತಿಳುವಳಿಕೆ

ಎಂದು ಅವನು ಶಾಂತನಾದ ಮೇಲೆ ಅವನಿಗೇ ತಿಳಿಯುತ್ತದೆ. ನಾನು ದಸ್ತಗಿರಿ ಮಾಡಿದ್ದರೆ, ನನ್ನ ಬೆಂಬಲಿಗರು ಅವನನ್ನು ಥಳಿಸಿದ್ದರೆ ಅವನು ನನ್ನ ಶತ್ರುವಾಗಿಬಿಡುತ್ತಿದ್ದ. ಈಗ ಗೆಳೆಯನಾದ" ಎಂದರು. ಈ ಅಸಾಧಾರಣ ನಿಲುವನ್ನು ಕಂಡು ಪೋಲಕ್ ವಿಸ್ಮಿತರಾದರು.

ಈ ಮಧ್ಯೆ ಪೋಲಕ್ ದಂಪತಿಗಳು ಸ್ವಲ್ಪಕಾಲ ಇಂಗ್ಲೆಂಡಿಗೆ ಹಿಂತಿರುಗಿದರು. ಹೆನ್ರಿ ಪೋಲಕ್ ಬೇಗ ಹಿಂತಿರುಗಿ ವಕೀಲ ಕಾರ್ಯಾಲಯದ ಜವಾಬ್ದಾರಿ ವಹಿಸಿದರು. ಮಿಲ್ಲಿ ಪೋಲಕ್ ಮೂರು ವರ್ಷ ಇಂಗ್ಲೆಂಡಿನಲ್ಲೇ ನಿಂತರು. ಗಾಂಧೀಜಿ ಜೊಹಾನ್ಸ್‌ಬರ್ಗಿನಲ್ಲಿ ಇರುತ್ತಾ ಆಗಾಗ ಫೀನಿಕ್ಸ್ ಆಶ್ರಮಕ್ಕೆ ಹೋಗಿಬರುತ್ತಿದ್ದರು. ಫೀನಿಕ್ಸ್‌ನ ಹುಲುಸಾದ ಭೂಮಿಯಲ್ಲಿ ವ್ಯವಸಾಯ ಬೆಳೆದಿತ್ತು. ಮನೆಗಳೂ ನಿರ್ಮಿತವಾಗಿದ್ದವು. ಶಾಲೆ ನಡೆಯುತ್ತಿತ್ತು. ಪ್ರತಿದಿನದ ಸಾಮೂಹಿಕ ಪ್ರಾರ್ಥನಾಸಭೆ ಗಾಂಧೀ ಕುಟೀರದಲ್ಲಿ ನಡೆಯುತ್ತಿತ್ತು. ಒಂದು ಭಜನಾವಳಿ ಪುಸ್ತಕ ತಯಾರಿಸಿದ್ದರು. ಇಂಗ್ಲಿಷ್ ಪ್ರಾರ್ಥನಾ ಗೀತೆಗಳೆಂದರೆ ಗಾಂಧೀಜಿಗೆ ಪ್ರಾಣ. ಮತ್ತಾವ ಕಡೆಯೂ ಸ್ತೋತ್ರಗಳನ್ನು ಇಲ್ಲಿಯಷ್ಟು ಭಕ್ತಿಪೂರ್ಣವಾಗಿ ಯಾರೂ ಹಾಡಿದ್ದನ್ನು ಕೇಳಿರಲಿಲ್ಲ ಎಂದು ಮಿಲ್ಲಿ ಪೋಲಕ್ ಸ್ಮರಿಸಿದ್ದಾರೆ. ಇಪ್ಪತ್ತು ಜನ ಆಂಗ್ಲರೂ, ಇಪ್ಪತ್ತು ಭಾರತೀಯರೂ ಸೇರಿ ಏಕರಸ ಶೃತಿಯಿಂದ ಸುಶ್ರಾವ್ಯವಾಗಿ ಧ್ವನಿಗೂಡಿಸುತ್ತಿದ್ದುದನ್ನು ಕಂಡು ಅವರು ಪುಲಕಿತಗೊಳ್ಳುತ್ತಿದ್ದರು. ಗಾಂಧೀಜಿಗೆ ಅತ್ಯಂತ ಪ್ರಿಯವಾಗಿದ್ದ ಎರಡು ಕ್ರೈಸ್ತ ಸಂತರ ಭಕ್ತಿಗೀತೆಗಳು (Psalms) ಮಿಲ್ಲಿ ಮತ್ತು ಹೆನ್ರಿಗೂ ತುಂಬ ಆನಂದದಾಯಕವಾಗಿರುತ್ತಿದ್ದವು.

"ನನ್ನ ಬಾಳನಿದೋ ಸ್ವೀಕರಿಸು
ನಿನ್ನಡಿಗೆ ಮೀಸಲಿಡು ಪ್ರಭುವೆ !
ಬದುಕಿನೊಂದೊಂದು ಚಣ ಕೂಡ
ನಿನ್ನ ಅನಂತಧ್ಯಾನದಲಿ ಹರಿಯುತಿರಲಿ"

ಎಂದು ಪ್ರಾರಂಭವಾಗುವ ಅರುಚರಣಗಳ ಗೀತೆ ಮತ್ತು

"ಕರುಣಾಳು ಬಾ ಬೆಳಕೆ
ಮುಸುಕಿದೀಮೊಬ್ಬಿನಲಿ
ಕೈಹಿಡಿದು ನಡೆಸೆನ್ನನು......

ಎಂಬ ನ್ಯೂಮನ್ನನ ಪ್ರಸಿದ್ಧ ಕಾವ್ಯಮಯ ಭಕ್ತಿಗೀತೆ. ಇವೆರಡನ್ನೂ ತಂತಿವಾದ್ಯಗಳೊಡನೆ ಮೆಲುದನಿಯಲ್ಲಿ ಹಾಡುವಾಗ ಗಾಂಧೀಜಿ ಭಾವಪೂರ್ಣವಾಗಿ ತಲ್ಲೀನರಾಗಿಬಿಡುತ್ತಿದ್ದರು. "ಆ ಅನುಭವದ ಪರಿಸರದಲ್ಲಿ ನಾವು ಪುನೀತರಾಗಿ ಅವಭೃತ ಸ್ನಾನ ಮಾಡಿದವರಂತೆ ಆಂತರಿಕ ಶುಭ್ರತೆಯನ್ನು ಅನುಭವಿಸುತ್ತಿದ್ದೆವು. ಎಲ್ಲ ಧಾರ್ಮಿಕ ಪರಂಪರೆಯೂ ಏಕದೇವೋಪಾಸನೆಯ ವಿವಿಧ ಮಾರ್ಗಗಳೆಂಬ ಆಧ್ಯಾತ್ಮಿಕ ಸತ್ಯವನ್ನು ಗಾಂಧೀಜಿಯ ಹಾಗೆ ತಮ್ಮ ಸಂಗಡಿಗರೆಲ್ಲರ ಅನುಭವಕ್ಕೆ ತಂದು ಕೊಡುತ್ತಿದ್ದವರನ್ನು ಕಾಣೆ" ಎಂದು ಮಿಲ್ಲಿ ತಮ್ಮ ಜೀವನದ ಪಾವನ ಘಳಿಗೆಗಳನ್ನೂ ಸ್ಮರಿಸಿದ್ದಾರೆ. "ನಮ್ಮ ಭಾನುವಾರದ ಪ್ರಾರ್ಥನೆಯಲ್ಲಿ ಏನೋ ಒಂದು ಪವಿತ್ರಶಾಂತಿ, ಆನಂದ ಎದೆ ತುಂಬುತ್ತಿತ್ತು. ನಮ್ಮ ಆಸ್ತಿಕತೆ ಆಳವಾಗಿ ಬೇರೂರುತ್ತಿತ್ತು" ಎಂದಿದ್ದಾರೆ.

ಕೆಲವರು ತಿಳಿಯದೆ, ಕೆಲವರು ತಿಳಿದು ಅನೇಕ ಸಲ ಪಾಪಕಾರ್ಯಗಳಿಗೆ ಮನಸೋಲುತ್ತಾರೆ. ಅವರ ಉದ್ದೇಶವೂ ಕೆಲವು ಸಾರಿ ಒಳ್ಳೆಯದನ್ನು ಮಾಡಬೇಕೆಂದೇ ಇರುವುದು ಸಾಧ್ಯ. ಒಂದು ಸಾರಿ ಒಬ್ಬ ಒಳ್ಳೆಯ ಸೇವಾಕರ್ತೆ ಗಾಂಧೀಜಿಯ ತಿರಸ್ಕಾರಕ್ಕೆ ಕಾರಣವಾದೇನು ಎಂಬ ಭೀತಿಯಿಂದ ತಾನು ಮಾಡಿದ್ದ ತಪ್ಪೊಂದನ್ನು ಮರೆಮಾಚಿದಳು. ಹೇಗೋ ಗಾಂಧೀಜಿಗೆ ಅದು ಗೊತ್ತಾಗಿ ಅವರಿಗೆ ತೀವ್ರ ದುಃಖವಾಯಿತು. ಮಿಲ್ಲಿ ಪೋಲಕ್ ಈ ಬಗ್ಗೆ ಅವರೊಡನೆ ವಾದಕ್ಕಿಳಿದಳು. "ನೀವು ಎಲ್ಲರಿಂದಲೂ ತುಂಬಾ ಹೆಚ್ಚಿನ ನಡತೆ ನಿರೀಕ್ಷಿಸುತ್ತೀರಿ, ಅವರಿಂದ ಅಸಾಧ್ಯವಾದುದನ್ನು ಅವರಿಂದ ಬೇಡುತ್ತೀರಿ. ಅದಕ್ಕಾಗಿ ಅವರು ಆತ್ಮವಂಚನೆ ಮಾಡಿಕೊಳ್ಳುತ್ತಾರೆ. ತಮ್ಮನ್ನು ತಾವು ಉಳಿಸಿಕೊಳ್ಳಲು ಮತ್ತು ನಿಮ್ಮ

ವಿಶ್ವಾಸವನ್ನು ಕಳೆದುಕೊಳ್ಳಲಾರದೆ ಹಾಗೆ ಮಾಡಿಯಾರು ಅವರನ್ನು ಕೆಟ್ಟವರೆನ್ನಬಹುದೇ?"

"ತಪ್ಪು ಮಾಡಿ ಅದನ್ನು ತಿಳಿದುಕೊಂಡು ಪಶ್ಚಾತ್ತಾಪಪಟ್ಟು ಮತ್ತೆ ಅಂಥ ತಪ್ಪು ಮಾಡದ ನಿರ್ಧಾರವನ್ನು ಮನುಷ್ಯ ಮಾಡಬಹುದು. ಆದರೆ ಒಳಿತು ಕೆಡುಕುಗಳ ಅರಿವೇ ಇರದಿದ್ದರೆ ಅಂಥ ಜ್ಞಾನವೇ ಇಲ್ಲದೇ ಹೋದಲ್ಲಿ ಅವನೊಳಗಿನ ದೇವರ ಅರಿವೇ ಇಲ್ಲವೆಂದು ಅರ್ಥ. ಅಂಥವರಿಗೂ ಪಶುವಿಗೂ ವ್ಯತ್ಯಾಸವಿಲ್ಲ. ನೈತಿಕ ಬೆಲೆ ತಿಳಿಯದ ಮಾನವ ಕೇವಲ ಪಶು ಅಷ್ಟೆ."

ಮಿಲ್ಲಿ ಪೋಲಕ್ ಅವರ ಮೇಲೆ ಈ ಸಂಭಾಷಣೆ ಆಳವಾದ ಪ್ರಭಾವ ಬೀರಿತು. ಒಂದು "ಮಹಾಸತ್ಯ ನನಗೆ ಗೋಚರಿಸಿತು" ಎಂದುಕೊಂಡರು. "ವಿಕಾಸದ ಏಣಿಯಲ್ಲಿ ನಮ್ಮ ನಮ್ಮ ಒಳಿತು ಕೆಡುಕಿನ ವಿವೇಕವನ್ನನುಸರಿಸಿಯೇ ನಮ್ಮ ಸ್ಥಾನಮಾನ. ಪಶುವು ಅರಣ್ಯ ಜೀವನ ನಡೆಸುವುದು ಸರಿ. ಉತ್ತಮ ಶ್ರೇಣಿಗೆ ಸೇರಿರುವನೆಂದುಕೊಳ್ಳುವ ಮಾನವ ಅದಕ್ಕೆ ತಕ್ಕ ಯೋಗ್ಯತೆ ಪಡೆಯಬೇಕು. ಜೀವನದಲ್ಲಿ ಸತ್ಯ ಮತ್ತು ಸಂಯಮಗಳನ್ನು ತೋರಿಸುವ ನಿಷ್ಠೆಯೇ ಅವನ ಯೋಗ್ಯತೆ. ಇಲ್ಲವಾದರೆ ಅವನು ಪಶು" ಎಂದು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಸತ್ಯಾಗ್ರಹ ನಡೆಯುತ್ತಿದ್ದಾಗ ಹೆನ್ರಿ ಪೋಲಕರು ದಕ್ಷಿಣ ಆಫ್ರಿಕದ ಪ್ರತಿಷ್ಠಿತ ಬಿಳಿಯರ ಮಧ್ಯೆ ಗಾಂಧೀಜಿಯ ನಿಲುವಿನ ನ್ಯಾಯಪೂರ್ಣ ಬೇಡಿಕೆಯನ್ನು ಮನದಟ್ಟು ಮಾಡುವ ಗುರುತರ ಕಾರ್ಯ ಮಾಡುತ್ತಿದ್ದರು. ಹಾಗೆಯೇ ಮಿಲ್ಲಿ ಮಹಿಳಾ ಸಭೆಗಳನ್ನು ನಡೆಸಿ ಎಲ್ಲ ವಿದ್ಯಮಾನಗಳನ್ನು ಹೇಳುತ್ತಿದ್ದರು. ಭಾರತ ಮಹಿಳಾ ಸಂಘವೊಂದನ್ನು ಪ್ರಾರಂಭಿಸಿ ನಡೆಸಿದರು. ಗಾಂಧೀಜಿ ಜೈಲಿನಿಂದ ಹೊರಬಂದ ಮೇಲೆ ಆಕೆಯನ್ನು ಶ್ಲಾಘಿಸಿದರು. ಮಹಿಳೆಯರ ಸ್ವಭಾವಸಹಜ ಪ್ರೇಮಶಕ್ತಿಯೇ ಅಹಿಂಸಾಸಮರದಲ್ಲಿ ಹೇಗೆ ಪ್ರಬಲ

ಅಸ್ತ್ರವಾಗುತ್ತದೆ ಎಂದು ವಿವರಿಸಿದರು. ವಲ್ಲಿಯಮ್ಮ ಎಂಬ ಅನಕ್ಷರಸ್ತ ಕೂಲಿ ಹೆಣ್ಣು ಮಗಳ ತ್ಯಾಗ ಬಲಿದಾನಗಳ ಕಥೆ ಹೇಳುತ್ತಿದ್ದರು. ಇಂಗ್ಲೆಂಡಿನವಳೇ ಆಗಿದ್ದ ಆಲಿವ್ ಫ್ರೀನರ್ ಎಂಬ ಹೆಣ್ಣುಮಗಳು ಗಾಂಧೀಜಿಯ ನಿಕಟ ಅನುಯಾಯಿಯಾಗಿ ಎಂತಹ ತ್ಯಾಗಜೀವನ ನಡೆಸಿದಳು ಎಂಬ ಅರಿವೂ ಮಿಲ್ಲಿ ಪೋಲಕರಿಗಿತ್ತು.

ಬ್ರಿಟಿಷ್ ಸರ್ಕಾರದ ವಸಾಹತು ಕಾರ್ಯದರ್ಶಿಯವರ ಕಾರ್ಯಾಲಯಕ್ಕೆ ಹಲವು ಇಂಗ್ಲೀಷ್ ಸ್ನೇಹಿತರ ಮೂಲಕ ದಕ್ಷಿಣ ಆಫ್ರಿಕದ ಪರಿಸ್ಥಿತಿಯನ್ನು ವಿಶದವಾಗಿ ತಿಳಿಸಲು ಹೆನ್ರಿ ಪೋಲಕ್ ಬಹುವಾಗಿ ಶ್ರಮಿಸುತ್ತಿದ್ದರು. ಲಂಡನ್ನಿನ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದರು. ಪಾರ್ಲಿಮೆಂಟ್ ಸದಸ್ಯರಿಗೆ ಪತ್ರಗಳನ್ನು ಬರೆದರು. ಬ್ರಿಟಿಷ್ ಸರ್ಕಾರ ಶ್ರೀ ಗೋಪಾಲಕೃಷ್ಣ ಗೋಖಲೆ ಅವರ ಒಂದು ನಿಯೋಗವನ್ನು ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಗಳನ್ನು ತಿಳಿದು ವರದಿ ಮಾಡಲು ಕಳುಹಿಸಿತು. ಗೋಖಲೆಯವರು ಗಾಂಧೀಜಿಯ ಸತ್ಯಾಗ್ರಹ ಸಮರದ ಕೂಲಂಕಷ ವರದಿ ಸಿದ್ಧಮಾಡಿದರು. ಹೆನ್ರಿ ಪೋಲಕ್ ಈ ಕಾರ್ಯದಲ್ಲಿ ಅವರಿಗೆ ಸಹಾಯಕರಾದರು. ಭಾರತದಲ್ಲಿ ಆಗ ವೈಸ್‌ರಾಯರಾಗಿದ್ದ ಲಾರ್ಡ್ ಹಾರ್ಡಿಂಜ್ ಈ ಬಗ್ಗೆ ಆಸಕ್ತಿವಹಿಸಿ ದಕ್ಷಿಣ ಆಫ್ರಿಕದ ಬಿಳಿಯರ ಸರ್ಕಾರವನ್ನು ಖಂಡಿಸಿದರು. ಬ್ರಿಟಿಷ್ ಪ್ರಜೆಗಳೇ ಆಗಿದ್ದ ಭಾರತೀಯರಿಗೂ ಸಮಾನ ನಾಗರಿಕ ಹಕ್ಕುಗಳು ದೊರೆಯಬೇಕಾದುದು ನ್ಯಾಯ ಎಂದರು. ಅನಂತರ ಗೋಖಲೆಯವರು ರೆವರೆಂಡ್ ಸಿ. ಎಫ್. ಆಂಡ್ರೂಸ್ ಮತ್ತು ಪಿಯರ್ಸನ್ ಎಂಬುವರನ್ನು ಸಂಧಾನಕ್ಕಾಗಿ ದಕ್ಷಿಣ ಆಫ್ರಿಕಕ್ಕೆ ಕಳುಹಿಸಿಕೊಟ್ಟರು. ಈ ಎಲ್ಲ ಚಟುವಟಿಕೆಗಳಲ್ಲಿ ಹೆನ್ರಿ ಮತ್ತು ಮಿಲ್ಲಿ ಪೋಲಕ್ ಗಾಂಧಿಯವರ ಪರವಾಗಿ ವಾದಿಸುತ್ತಿದ್ದರು.

ಚಳುವಳಿ ಕೊನೆಯ ಘಟ್ಟ ಮುಟ್ಟುತ್ತಿತ್ತು. ಸತ್ಯಾಗ್ರಹಿಗಳು ಸೆರೆಮನೆ ಸೇರುತ್ತಿದ್ದರು. ಅವರ ಸಂಸಾರಗಳು ಬೀದಿ ಪಾಲಾಗದಂತೆ ರಕ್ಷಿಸಲು ಗಾಂಧೀಜಿ 'ಟಾಲ್‌ಸ್ಟಾಯ್ ಫಾರ್ಮ್' ಎಂಬ ದೊಡ್ಡ

ಆಶ್ರಮವಸತಿಯನ್ನು ಸ್ಥಾಪಿಸಿದರು. ಗೆಳೆಯ ಕಾಲೆನ್ ಬಾಕ್ ಇದಕ್ಕಾಗಿ ತನ್ನ ನೂರು ಎಕರೆ ಫಲವತ್ತಾದ ಜಮೀನನ್ನು ಬಿಟ್ಟುಕೊಟ್ಟಿದ್ದರು. ಹೆನ್ರಿ ಮತ್ತು ಮಿಲ್ಲಿ ಪೋಲಕ್ ಈ ವಸತಿಯಲ್ಲಿ ನೂರಾರು ಹೆಂಗಸರು, ಮಕ್ಕಳು, ಮುದುಕರ ಯೋಗಕ್ಷೇಮಕ್ಕಾಗಿ ಸೇವಾ ನಿರತರಾದರು. 1913ರಲ್ಲಿ ಟ್ರಾನ್ಸ್‌ವಾಲ್ ಗಡಿದಾಟಿ ಶಾಸನೋಲ್ಲಂಘನೆ ಮಾಡಿದ ಐತಿಹಾಸಿಕ ಮಹಾಯಾತ್ರೆ ನಡೆಯಿತು. ನ್ಯೂಕ್ಯಾಸೆಲ್ ಎಂಬಲ್ಲಿಯ ಗಣಿಕೆಲಸಗಾರರಲ್ಲಿ ಸಾವಿರಾರು ಭಾರತೀಯರಿದ್ದರು. ಸತ್ಯಾಗ್ರಹದ ತೀವ್ರತೆ, ಗಾಂಧೀಜಿಯ ಬಂಧನಗಳು, ಸ್ತ್ರೀಯರ ಮೇಲೆ ಹಲ್ಲೆ, ಸೆರೆಮನೆಗಳಲ್ಲಿ ಭಾರತೀಯರನ್ನು ಹಿಂಸಿಸುತ್ತಿದ್ದ ಬಗೆ ಇವೆಲ್ಲವನ್ನೂ ಕೇಳಿ ಕೂಲಿಗಾರರು ಚಳುವಳಿಗೆ ಧುಮಿಕಿದರು. ಟ್ರಾನ್ಸ್‌ವಾಲ್‌ನ ಗಡಿಯೊಳಕ್ಕೆ ಈ ಮುಷ್ಕರಕಾರರು ಬರಬಾರದು ಎಂಬ ನಿಷೇಧಾಜ್ಞೆ ಇತ್ತು. ಐದಾರು ಸಾವಿರ ಸಂಕಲ್ಪಬದ್ಧ ನಿಶ್ಯಸ್ತ್ರ ಸತ್ಯಾಗ್ರಹಿಗಳು ಗಾಂಧೀಜಿ ಮತ್ತು ಕಾಲೆನ್‌ಬಾಕ್ ನಾಯಕತ್ವದಲ್ಲಿ ಪಾದಯಾತ್ರೆಯಲ್ಲಿ ನ್ಯೂಕ್ಯಾಸೆಲ್‌ನಿಂದ ವೋಕ್‌ಹರ್ಸ್ಟ್‌ಗೆ ಹೊರಟುಬಿಟ್ಟರು. ಈ ಚೈತ್ರಯಾತ್ರೆಯಲ್ಲಿ ಎರಡು ಸಾವಿರ ಗಂಡಸರು ನೂರಾರು ಜನ ಮಹಿಳೆಯರು ಮತ್ತು ಐವತ್ತು ಜನ ಹುಡುಗ ಹುಡುಗಿಯರು ಒಟ್ಟಿಗೆ ನಿಯಮಿತಕಾಲಕ್ಕೆ ಸರಿಯಾಗಿ ಪ್ರಾರ್ಥನೆ ನಡೆಸಿ ಹೊರಟು ಗಡಿ ಉಲ್ಲಂಘನೆ ಮಾಡಿದರು. ಈ ಶಾಸನಭಂಗ ಕಾರ್ಯದಲ್ಲಿ ಗಾಂಧೀಜಿಯೂ ಸೆರೆಯಾಳಾದರು, ಕಸ್ತೂರಿಬಾ ಜತೆಗೂಡಿದರು.

ಗೋಖಲೆಯವರಿಗೆ ವರದಿಗಳನ್ನು ಒಪ್ಪಿಸಲು ಹೆನ್ರಿ ಪೋಲಕ್ ಅವರನ್ನು ಭಾರತಕ್ಕೆ ಕಳುಹಿಸಬೇಕೆಂದು ತೀರ್ಮಾನವಾಗಿತ್ತು. ಅದಕ್ಕೆ ಮುಂಚೆ ಅವರು ಗಾಂಧೀಜಿಯನ್ನು ಕಂಡು ಹೋರಾಟದ ವಿವರಗಳನ್ನು ತಿಳಿಯಲು ಪಾದಯಾತ್ರೆ ಸಾಗುತ್ತಿದ್ದ ಒಂದು ನಿಲ್ದಾಣಕ್ಕೆ ಬಂದರು. ಈ ಇಂಗ್ಲಿಷ್ ನಾಗರಿಕನನ್ನು ಬಂಧಿಸಲು ಪೊಲೀಸರು ಮುಂದೆ ಬರಲಿಲ್ಲ. ಟೀಕ್‌ವರ್ತ್ ಎಂಬ ಸ್ಥಳದಲ್ಲಿ ಪಾದಯಾತ್ರಿಗಳ ತಂಡ ತಂಗಿತ್ತು. ಪೋಲಕ್ ಮತ್ತು ಗಾಂಧಿಯವರ

ಸಮಾಲೋಚನೆಗಳು ನಡೆಯುತ್ತಿರುವಂತೆಯೇ ಹಠಾತ್ತಾಗಿ ಪೊಲೀಸ್ ಅಧಿಕಾರಿಗಳು ಗಾಂಧೀಜಿಯನ್ನು ಬಂಧಿಸಿದರು. ಸತ್ಯಾಗ್ರಹಿಗಳಿಗೆ ಮುಂದೇನು ಮಾಡಬೇಕೆಂದು ಹೇಳಲೂ ಅವರಿಗೆ ಅವಕಾಶ ಕೊಡಲಿಲ್ಲ. ಆ ಕ್ಷಣದಲ್ಲಿ ಹೆನ್ರಿ ಪೋಲಕ್ ನಿರ್ಧರಿಸಿ ತಾವೇ ನಾಯಕತ್ವ ವಹಿಸಿದರು. ಅವರ ಭಾರತ ಯಾತ್ರೆಯ ಕಾರ್ಯ ನಿಂತುಹೋಯಿತು. ಗೋಖಲೆಯವರೇ ಅವರನ್ನು ಭಾರತಕ್ಕೆ ಬರಲು ಕೋರಿದ್ದರು. ಗಾಂಧೀಜಿ ಈ ಪ್ರಸಂಗವನ್ನು ತಮ್ಮ 'ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ' ಎಂಬ ಪುಸ್ತಕದಲ್ಲಿ ಬರೆಯುತ್ತಾ 'ಯಾವ ಅಪಾಯಕ್ಕೂ ಪೋಲಕ್ ಅಂಜುತ್ತಿರಲಿಲ್ಲ. ಬಂಧನಕ್ಕೆ ಸಿದ್ಧರಾಗೇ ಬಂದಿದ್ದರು. ಅದೇ ಸಂಜೆ ಅವರು ದರ್ಬಾನಿನಿಂದ ಹೊರಟು ಭಾರತದ ಕಡೆ ಹಡಗು ಹತ್ತಬೇಕಾಗಿತ್ತು. ದೈವೇಚ್ಛೆಯೇ ಬೇರೆಯಾಯಿತು. ಪಟ್ಟಾಭಿಷೇಕದ ದಿನವೇ ರಾಮನು ಕಾಡಿಗೆ ಹೋಗಬೇಕಾಯಿತು' ಎಂದು ವರ್ಣಿಸಿದ್ದಾರೆ.

ಪೋಲಕ್‌ರ ನಾಯಕತ್ವದಲ್ಲಿ ಯಾತ್ರೆ ಮುಂದುವರಿಯಿತು. ಯಾತ್ರಿಕರನ್ನೆಲ್ಲ ಅವರು ಗಡಿದಾಟುವ ಮುನ್ನವೇ ದಸ್ತಗಿರಿ ಮಾಡಿ ರೈಲುಗಾಡಿಗಳಲ್ಲಿ ತುಂಬಿ ನೆಟಾಲ್‌ಗೆ ಬಿಡಲು ಪೊಲೀಸರು ಆಜ್ಞೆ ತಂದಿದ್ದರು. ಗಾಂಧಿಯವರು ಹೇಳದೆ ನಾವು ಗಾಡಿ ಹತ್ತುವುದಿಲ್ಲ ಎಂದರು ಜನ. ಈ ಮೊಂಡಾಟ ಸತ್ಯಾಗ್ರಹದಲ್ಲಿ ಸಲ್ಲದು ಸೆರೆಮನೆ ಸೇರಲು ಒಪ್ಪಬೇಕು ಎಂದು ನಾಯಕ ಪೋಲಕರೂ ಮತ್ತು ಜೊತೆಯಲ್ಲಿದ್ದ ಸೇಠ್ ಅಹಮದ್ ಕಾಛಲಿಯಾ ಅವರೂ ವಾದಿಸಿದರು. ಪರಿಸ್ಥಿತಿ ವಿವರಿಸಲು ಈ ಸ್ನೇಹಿತರಿಗೆ ಬಹುಕಷ್ಟವಾಯಿತು. ಕೊನೆಗೆ ಅವರು ಒಪ್ಪಿ ಬಂಧನಕ್ಕೊಳಗಾದರು. ಪೋಲಕ್ ಅವರನ್ನೂ ಬ್ಯಾಲ್ಫರ್ ಎಂಬಲ್ಲಿ ದಸ್ತಗಿರಿ ಮಾಡಿದರು. ಅವರು ಹೋರಾಟದಿಂದ ಹೊರಗಿರಲು ಒಪ್ಪದೇ ಹೋದುದರಿಂದ ಸರ್ಕಾರಕ್ಕೆ ಇಷ್ಟವಿಲ್ಲದಿದ್ದರೂ ಈ ಇಂಗ್ಲಿಷ್ ಸಜ್ಜನನನ್ನು ಬಂಧಿಸಬೇಕಾಯಿತು. ಪೋಲಕರಿಗೆ ಭಾರತಕ್ಕೆ ಹೋಗಲು ಅವಕಾಶ ಕೊಡಬಾರದೆಂದು ಅವರನ್ನೂ ಈ

ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಸಹಾಯ ಮಾಡುತ್ತಿದ್ದ ಜರ್ಮನಿಯ ಕಾಲೆನ್‌ಬಾಕ್ ಅವರನ್ನೂ ಬಂಧಿಸಿ ವೋಲ್ಕಹರ್ ಸೆರೆಮನೆಯಲ್ಲಿಟ್ಟರು.

ಕೋರ್ಟಿನಲ್ಲಿ ಪೋಲಕರ ಮೇಲೆ ಸಾಕ್ಷಿ ನುಡಿಯುವವರೇ ಇರಲಿಲ್ಲ. ಗಾಂಧೀಜಿ ಮತ್ತು ಕಾಲೆನ್‌ಬಾಕ್ ತಾವೇ ಸಾಕ್ಷಿಗಳನ್ನೊದಗಿಸಿದ್ದರಿಂದ ಅವರಿಗೆ ಶಿಕ್ಷೆಯಾಯಿತು. ಸರ್ಕಾರಕ್ಕೆ ಪೇಚುಂಟಾಗುವುದನ್ನು ತಪ್ಪಿಸಲು ಗಾಂಧೀಜಿಯೇ ಸರಕಾರದ ಪರ ಸಾಕ್ಷಿಯಾದರು. ಮೂರು ಜನರಿಗೂ ಮೂರು ಮೂರು ತಿಂಗಳು ಶಿಕ್ಷೆಯಾಯಿತು. ಮಿಲ್ಲಿ ಪೋಲಕ್ ತಾವೇ ಭಾರತಕ್ಕೆ ಏಕೆ ಹೋಗಿಬರಬಾರದು ಎಂದು ಯೋಚಿಸಿದರು. ಅಷ್ಟರಲ್ಲಿ ಗೋಖಲೆಯವರಿಂದ ಕೇಬಲ್ ಬಂತು. ಸಿ. ಎಫ್. ಆಂಡ್ರೂಸರನ್ನೊಳಗೊಂಡ ಅಧಿಕೃತ ಸರ್ಕಾರಿ ನಿಯೋಗವೊಂದು ದಕ್ಷಿಣ ಆಫ್ರಿಕಕ್ಕೆ ಬರುತ್ತಿದೆ ಎಂದು ತಿಳಿಸಿದ್ದರು. ಹಲವು ವಾರಗಳ ಸಂಧಾನಗಳ ನಂತರ ಜನರಲ್ ಸ್ಮಟ್ಸ್ ಒಪ್ಪಂದಕ್ಕೆ ಬಂದು ಭಾರತೀಯರಿಗೆ ನಾಗರಿಕ ಹಕ್ಕುಗಳು ದೊರೆತವು.

ಗಾಂಧೀಜಿ ಭಾರತಕ್ಕೆ ಹಿಂತಿರುಗಲನುವಾದರು. ಮಿಲ್ಲಿ ಪೋಲಕ್ ಇಂಗ್ಲೆಂಡಿಗೆ ಹಿಂತಿರುಗಬೇಕೆಂದಿದ್ದರು. ದಕ್ಷಿಣ ಆಫ್ರಿಕದ ಜನ ಗಾಂಧೀಜಿ ಆಗಲಿ ಪೋಲಕ್ ಆಗಲಿ ಇಬ್ಬರಲ್ಲೊಬ್ಬರು ಅಗತ್ಯವಾಗಿ ಅಲ್ಲಿಯೇ ನಿಂತು ಭಾರತೀಯರ ಯೋಗಕ್ಷೇಮ ನೋಡಿಕೊಳ್ಳಬೇಕು ಎಂದು ಕೇಳಿಕೊಂಡರು. ಹಿಂದೂಸ್ತಾನದ ಕರೆ ಗಾಂಧೀಜಿಗೆ ಪ್ರಬಲವಾಗಿತ್ತು. ಮಿಲ್ಲಿ ಪೋಲಕ್‌ರನ್ನೇ ಮೊದಲು ಕೇಳಿದರು "ನಿನಗಿಂತ ಹೆಚ್ಚು ವರ್ಷ ನಾನು ಇಲ್ಲಿಯ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿದಿದ್ದೇನೆ. ಈಗ ಹಿಂದೂಸ್ತಾನಕ್ಕೆ ಹೋಗುವ ಪ್ರಬಲ ಬಯಕೆಯಾಗಿದೆ. ಆದರೂ ನೀನು ಇಲ್ಲೇ ಇರು ಎಂದರೆ, ಇದ್ದು ಬಿಡುತ್ತೇನೆ." ಖಂಡಿತವಾಗಿ ಭಾರತದಲ್ಲಿ ಗಾಂಧೀಜಿಯ ನಾಯಕತ್ವ ಅಲ್ಲಿನ ದಾಸ್ಯ ವಿಮೋಚನೆಗೆ ಅತ್ಯಗತ್ಯ ಎಂದು ಮಿಲ್ಲಿಗೆ ಗೊತ್ತಿತ್ತು. "ಸರಿ, ನಾನೂ ನನ್ನ ಗಂಡ ಇಲ್ಲೆ ಇದ್ದು ಸೇವೆ ಮಾಡುತ್ತೇವೆ. ಇಂಗ್ಲೆಂಡಿಗೆ ಹೋಗುವುದನ್ನು ಮುಂದೆ ಹಾಕುತ್ತೇವೆ. ನೀವು ಖಂಡಿತ

ನಿಮ್ಮ ತಾಯ್ನಾಡಿಗೆ ಹಿಂದಿರುಗಿ" ಎಂದು ಮಿಲ್ಲಿ ಬೇಡಿಕೊಂಡಳು. ಜೊಹಾನ್ಸ್‌ಬರ್ಗಿನಲ್ಲಿದ್ದ ಗಾಂಧೀಜಿಯ ವಕೀಲೀ ಕಾರ್ಯಾಲಯದ ಪೂರ್ಣ ಜವಾಬ್ದಾರಿಯನ್ನು ಹೆನ್ರಿ ಪೋಲಕ್ ವಹಿಸಿಕೊಂಡರು. ಗಾಂಧೀಜಿಗೆ ಮಿಲ್ಲಿ ಪೋಲಕ್ ಅವರ ತ್ಯಾಗ ಮನೋಧರ್ಮ ಎಷ್ಟು ಆಳವಾಗಿ ಬೇರೂರಿದೆ ಎಂದು ಆಶ್ಚರ್ಯವಾಯಿತು. ಆಕೆಯನ್ನು ಮನಬಿಚ್ಚಿ ಶ್ಲಾಘಿಸಿದರು. ಹೊರಡುವ ದಿನ ಪೋಲಕ್ ದಂಪತಿಗಳ ಏಕೈಕ ಪುತ್ರ ಎಂಟು ವರ್ಷದ ವಾಲ್ಡೋ ಎಂಬ ಬಾಲಕನನ್ನು ತಮ್ಮೊಡನೆ ಒಂದು ದಿನ ಇರಲು ಕಳುಹಿಸುವಂತೆ ಪ್ರಾರ್ಥಿಸಿದರು. ಈ ಬಾಲಕನನ್ನು ಅವರು ತುಂಬ ಪ್ರೀತಿಸುತ್ತಿದ್ದರು. ಆ ದಿನ ಇಡೀ ರಾತ್ರಿ ತಮ್ಮ ಮಗ್ಗುಲಲ್ಲೇ ಮಲಗಿಸಿಕೊಂಡರು. ನಿದ್ದೆ ಹತ್ತುವವರೆಗೂ ಅವರಿಬ್ಬರ ಮಾತೇ ಮಾತು. ಆಮೇಲೆ ಗಾಂಧೀಜಿ ಮಿಲ್ಲಿ ಅವರಿಗೆ "ನಾನೂ ನಿನ್ನ ಮಗನೂ ಎರಡು ಗಂಟೆಯ ಕಾಲ ದೇವರ ವಿಚಾರ ಮಾತನಾಡಿದೆವು. ಮಕ್ಕಳ ಮನಸ್ಸಿನ ನಿರ್ಮಲತೆಯೇ ದೇವರ ಸಾನ್ನಿಧ್ಯ. ಅವನಿಗೆ ನಾನೇನೂ ಕಲಿಸಬೇಕಾಗಿಲ್ಲ. ಅವನೇ ಹೆಚ್ಚು ಪರಿಣಿತನಾಗಿದ್ದಾನೆ. ದೇವರಿಗೆ ಸಮೀಪವಾಗಿದ್ದಾನೆ" ಎಂದು ಹೇಳಿದರಂತೆ. ಆ ತಾಯಿ ಈ ನಿರ್ವ್ಯಾಜ ಪ್ರೇಮವನ್ನು ಕಂಡು ಅವಾಕ್ಕಾದಳು. ಆದರೆ ವಾಲ್ಡೋ ಅಲ್ಲಿಂದಾಚೆಗೆ ಹೆಚ್ಚು ದಿನ ಬದುಕಿರಲಿಲ್ಲ. ಗಾಂಧೀಜಿ ಬಿಟ್ಟ ನಂತರ ಪೋಲಕ್‌ದಂಪತಿಗಳು ಡರ್ಬಾನಿನಲ್ಲೇ ಇರುತ್ತಿದ್ದರು. ವಾಲ್ಡೋ ತನ್ನ ತಾತನ ಬಳಿ ಇಂಗ್ಲೆಂಡಿನಲ್ಲಿ ಓದುತ್ತಿದ್ದ. ಆತ ಇದ್ದಕ್ಕಿದ್ದಂತೆಯೇ ತೀರಿಹೋದ ಸುದ್ದಿ ಡರ್ಬಾನ್ ತಲುಪಿತು. ಆ ಸಮಯದಲ್ಲಿ ದೀನಬಂಧು ಆಂಡ್ರೂಸ್ ಅಲ್ಲಿಗೆ ಹೋಗಿದ್ದರು. "ದಕ್ಷಿಣ ಆಫ್ರಿಕದ ಭಾರತೀಯರು ಈ ದುಃಖ ಸಮಯದಲ್ಲಿ ಆ ತಂದೆ ತಾಯಿಗಳಿಗೆ ತೋರಿದ ಅನುತಾಪ, ಪ್ರೇಮ ನಿಜವಾಗಿಯೂ ಹೃದಯಸ್ಪರ್ಶಿಯಾಗಿತ್ತು. ನನಗಂತೂ ಕಣ್ಣು ಹನಿಯಾಡಿತು" ಎಂದು ಮಿಲ್ಲಿ ಪೋಲಕರ ಪುಸ್ತಕದ ಮುನ್ನುಡಿಯಲ್ಲಿ ಸ್ಮರಿಸಿದ್ದಾರೆ.

ಕೇಪ್‌ಟೌನಿನಲ್ಲಿ ಗಾಂಧೀಜಿ ಭಾರತದ ಕಡೆಗೆ ಹಡಗು ಹತ್ತಿ ಪ್ರಯಾಣ ಬೆಳೆಸಿದರು. ಅಲ್ಲಿಗೆ ಹಿಂಬಾಲಿಸಿದ್ದ ಜನಸಂದಣಿ ಅಗಾಧ. ಬಿಳಿಯರೂ ಇದ್ದರು. ಪೋಲಕ್ ದಂಪತಿಗಳಿಗಂತೂ ಆ ಘಳಿಗೆಯಲ್ಲಿ ಬಾಳೇ ಬರಿದಾದ ಹಾಗಾಯಿತು. ಇದನ್ನು ಸ್ಮರಿಸುತ್ತಾ "ಎದೆಯಲ್ಲಿ ಏನೋ ಶೂನ್ಯತೆ! ವೇಗವಾಗಿ ಧಾವಿಸಿದ ಕ್ರಿಯಾಶೀಲ ವರ್ಷಗಳು; ಭಾವ ರಾಗ, ವಿಚಾರತುಂಬಿದ್ದ ಅಧ್ಯಾಯವೊಂದು ಸ್ಪಷ್ಟವಾಗಿ ಮುಗಿದು ಹೋಯಿತು. 1914ರಿಂದಾಚೆ ಗಾಂಧೀ ವಿಶ್ವವಿಖ್ಯಾತರಾಗಿಬಿಟ್ಟರು. ಅವರು ಮೊದಲು ಇಂಗ್ಲೆಂಡಿಗೆ ಹೋಗಿ ಭಾರತ ತಲುಪಿದರು. ಮಹಾಯುದ್ಧವೂ ಆಸ್ಫೋಟಿಸಿತು" ಎಂದಿದ್ದಾರೆ.

ಮೂರು ವರ್ಷಗಳ ನಂತರ ಪೋಲಕ್ ದಂಪತಿಗಳು ಸ್ವಲ್ಪಕಾಲ ಭಾರತಕ್ಕೆ ಬಂದರು. ಅಹಮದಾಬಾದಿಗೆ ಹೋಗಿ ಸಬರಮತಿ ಆಶ್ರಮದಲ್ಲಿ ಗಾಂಧೀಜಿಯನ್ನು ಭೇಟಿಯಾದರು. ಗಾಂಧೀಜಿಯ ವಿಚಾರಚಕ್ರ ಬಹುದೂರ ಸಾಗಿಹೋಗಿತ್ತು. ವಿಶ್ವವ್ಯಕ್ತಿ ಎನಿಸಿದ್ದರು. ದಕ್ಷಿಣ ಆಫ್ರಿಕದ ತಮ್ಮ ದಿನಗಳನ್ನು ಸ್ಮರಿಸುತ್ತಾ ಮಿಲ್ಲಿಯನ್ನು ತಂಗಿಯೇ ಮನೆಗೆ ಬಂದಂತೆ ಬರಮಾಡಿಕೊಂಡರು. ಆ ಸರಳತೆ, ವಿಶ್ವಾಸ, ಸ್ನೇಹಮಯ ಮೃದುತ್ವ ಅತಿಥಿಗಳ ಹೃದಯದಲ್ಲಿ ಅಚ್ಚೊತ್ತಿ ನಿಂತವು. ಗಾಂಧೀಜಿಯ ಹೃದಯ ಈಗ ಭಾರತದ ರಾಜಕೀಯ, ಬಡತನ ಯಾತನೆ, ಅದರ ಪರಿಹಾರಕ್ಕಾಗಿ ಚಿಂತೆ, ಇವುಗಳಿಂದ ತುಂಬಿಹೋಗಿತ್ತು. ಮೊದಲನೆಯ ಮಹಾಯುದ್ಧದ ಮಾರಿ ಬಾಗಿಲನ್ನು ತಟ್ಟಿತ್ತು. "ಬಡ ಗುಜರಾತಿ ರೈತನ ಉಡುಪು ಧರಿಸಿದ್ದರು. ತುಂಡು ಪಂಚೆ ಮೇಲೊಂದು ವಸ್ತ್ರ, ಅನೇಕ ಸಾರಿ ಬರಿಗಾಲು. ಒಂದೊಂದೂ ಅವರ ವಿಚಾರಧಾರೆಯ ಪ್ರತೀಕ. ಸತ್ಯಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧವಾಗಿ ನಿಂತ ಪರಮ ಮಂಗಳ ಮಾನವ ಮೂರ್ತಿ ನನ್ನ ಕಣ್ಣು ಹೃದಯಗಳನ್ನು ತುಂಬಿನಿಂತಿತು" ಎನ್ನುತ್ತಾರೆ ಮಿಲ್ಲಿ ಪೋಲಕ್.

ಯುದ್ಧದಲ್ಲಿ ಆ ಸಮಯಕ್ಕೆ ತಮ್ಮ ಪಾತ್ರವೇನು ಎಂದು ಗಾಂಧೀಜಿ ಚಿಂತಿಸುತ್ತಿದ್ದರು. ಯಾವ ಸ್ವಾತಂತ್ರ್ಯ ಹೋರಾಟವನ್ನೂ

ಅವರು ಪ್ರಾರಂಭಿಸಿರಲಿಲ್ಲ. ತಿಲಕರು, ಆನಿಬೆಸಂಟರು, ಗೋಖಲೆ, ಲಾಲಾ ಲಜಪತ್‌ರಾಯ್ ಆಗ ಮುಂಚೂಣಿಯ ನಾಯಕರು. ಬ್ರಿಟಿಷರಲ್ಲಿ ಅವರಿಗೆ ಸ್ವಲ್ಪ ವಿಶ್ವಾಸವಿತ್ತು. ಯುದ್ಧಾನಂತರ ಭಾರತಕ್ಕೆ ಸ್ವಾಯತ್ತತೆ ಬರುವುದೆಂಬ ಬ್ರಿಟಿಷರ ವಾಗ್ದಾನದಲ್ಲಿ ಅವರೆಲ್ಲರೂ ನಂಬಿಕೆಯಿಟ್ಟು ಹೋಮ್‌ರೂಲ್ ಚಳುವಳಿಯನ್ನು ನಿಲ್ಲಿಸಿದ್ದರು.

ಯುದ್ಧೋದ್ಯಮದಲ್ಲಿ ಗಾಂಧೀಜಿಗೆ ಆಸಕ್ತಿ ಇರಲಿಲ್ಲ. ಆದರೆ ಈ ಕಷ್ಟ ಸಮಯದಲ್ಲಿ ತಾವು ಹಿಂದೆ ದಕ್ಷಿಣ ಆಫ್ರಿಕದ ಝೂಲೂ ದಂಗೆಯಲ್ಲಿ ಬೋಯರ್ ಯುದ್ಧದಲ್ಲಿ ಇಂಗ್ಲಿಷ್ ಸರ್ಕಾರಕ್ಕೆ ಸಹಾಯಕರಾಗಿ ಶುಶ್ರೂಷಾ ದಳವನ್ನು ಸಂಘಟಿಸಿದ್ದಂತೆ ಈಗಲೂ ಮಾಡಲು ಸಿದ್ಧರಾದರು. ಮಿಲ್ಲಿ ಪೋಲಕ್ ಆ ಸಮಯದಲ್ಲಿ ಅವರಿಗೂ ಗಾಂಧೀಜಿಗೂ ನಡೆದ ಸಂವಾದವನ್ನು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.

"ನಿಮ್ಮ ಮಾತು ಕೇಳಿದರೆ ಯುದ್ಧ ಮಾಡುವುದೂ ಸರಿ ಎನಿಸುತ್ತದೆ. ಸರಿ ತಪ್ಪು ಇವುಗಳು ಸಂದರ್ಭಕ್ಕೆ ಸಾಪೇಕ್ಷವಾದುದು. ನೀವು ಎಷ್ಟೋ ಸಲ ತರ್ಕಮಾಡದೆ ದೇವರ ಮೇಲೆ ಭಾರ ಹಾಕಿ, ಯಾವುದು ಸರಿ ಎನಿಸುತ್ತದೆಯೋ ಅದನ್ನು ಮಾಡಿಬಿಡುತ್ತೀರಿ. ಆದರೆ ನೀವೇ ಹೇಳಿರಲಿಲ್ಲವೇ? ಪ್ರೇಮ ಹಗೆತನವನ್ನು ತುಳಿದು ಬೆಳಗುತ್ತದೆ ಎಂದು."

ಅದಕ್ಕೆ ಗಾಂಧೀಜಿ "ನಿಜ. ನಾನದನ್ನು ಬಲ್ಲೆ. ಆದರೆ ಈಗ ಹಿಂದೂಸ್ತಾನದ ಜನ ಹಿಂಸೆಗೆ ಕೈ ಹಾಕದಿರುವುದಕ್ಕೆ ಕಾರಣ ಪ್ರೀತಿಯಾಗಲಿ, ಭ್ರಾತೃಭಾವವಾಗಲೀ ಕಾರಣವಲ್ಲ. ಅವರಲ್ಲಿ ದಾಸ್ಯದಿಂದ ಹೇಡಿತನ ಮೈಗೂಡಿಬಿಟ್ಟಿದೆ. ಹೇಡಿತನ ನನ್ನ ದೃಷ್ಟಿಯಲ್ಲಿ ಧೈರ್ಯ ತುಂಬಿದ ಕಾಳಗಕ್ಕಿಂತ ಕೀಳಾದ್ದು. ಅವರು ಹೋರಾಡಿ ಮಡಿಯುವುದೇ ನನಗೆ ಹೆಚ್ಚು ಸೂಕ್ತ ಎನಿಸಿದೆ" ಎಂದರು.

ಉಳಿದವರಿಗೆ ಆದರ್ಶವಾಗಲು ಗಾಂಧೀಜಿ ತಾವೇ ಸೇನೆಗೆ ಸೇರಲು ಸಿದ್ಧರಾಗಿದ್ದರು. ಅವರ ನಿರ್ಧಾರವನ್ನು ಕದಲಿಸಲು ಹೆನ್ರಿ ಪೋಲಕ್ ಮತ್ತು ಪತ್ನಿ ವಿಫಲರಾದರು.

ಕೆಲವು ತಿಂಗಳುಗಳ ನಂತರ ಹೆನ್ರಿ ಪೋಲಕ್ ಇಂಗ್ಲೆಂಡಿಗೆ ಹಿಂತಿರುಗಿದರು. ಮಿಲ್ಲಿ ಪೋಲಕ್ ಭಾರತದಲ್ಲೇ ಎರಡು ವರ್ಷ ಉಳಿಯಬೇಕಾಯಿತು. ಅವರು ಮಲೇರಿಯ ಜ್ವರದಿಂದ ಹಾಸಿಗೆ ಹಿಡಿದು ಚೇತರಿಸಿಕೊಳ್ಳುವುದೇ ಕಷ್ಟವೆನಿಸಿತು. ಅವರೊಡನಿರಲು ಗಾಂಧೀಜಿ ಬೊಂಬಾಯಿಗೆ ಬಂದರು. ಹೆನ್ರಿಯವರನ್ನು ಬೀಳ್ಕೊಟ್ಟವರೇ ನೇರವಾಗಿ ಮಿಲ್ಲಿ ಪೋಲಕರ ಆರೋಗ್ಯ ವಿಚಾರಿಸಲು ಬಂದರು. ಜ್ವರ ಒಂದೇ ಸಮನಾಗಿತ್ತು. ಅವರನ್ನು ನೋಡಿಕೊಳ್ಳುವುದಕ್ಕಾಗಿ ಗಾಂಧೀಜಿ ಬೊಂಬಾಯಿನಲ್ಲೇ ಕೆಲವು ಕಾಲ ಉಳಿದು ಉಪಚಾರ ಮಾಡಿದರು. ಅವರ ಗುಣವಾಗುವವರೆಗೂ ಕದಲಲಿಲ್ಲ. ಅಲ್ಲಿಂದಾಚೆ ಕೆಲವು ದಿನಗಳಲ್ಲೇ ಗಾಂಧೀಜಿಗೆ ಕರುಳಿನ ಬೇನೆ ತೀವ್ರಸ್ಥಿತಿಗೆ ಬಂದು ಎಲ್ಲರಿಗೂ ಆತಂಕವಾಗಿತ್ತು. ಅವರು ಹಾಲನ್ನು ಕುಡಿಯಲು ನಿರಾಕರಿಸಿದ್ದರಿಂದ ಖಾಯಿಲೆ ತೀವ್ರವಾಗುತ್ತಲೇ ಸಾಗಿತ್ತು. ಹಸುವಿನ ಹಾಲು ಕುಡಿಯುವುದಿಲ್ಲವೆಂಬ ವ್ರತ ತೊಟ್ಟಿದ್ದರು. ವೈದ್ಯರ ಮಾತುಗಳೆಲ್ಲ ನಿಷ್ಫಲವಾದವು. ಕೊನೆಗೊಮ್ಮೆ ಕಸ್ತೂರಿಬಾ ದೈನ್ಯದಿಂದ ಬೇಡಿಕೊಂಡರು. "ಹಸುವಿನ ಹಾಲು ನಿಷೇಧವಾದರೆ ಆಡಿನ ಹಾಲು ಕುಡಿಯಬಾರದೇ. ಅದೂ ಔಷಧಿಯ ರೂಪದಲ್ಲಿ?" ಎಂದು ವಾದಿಸಿದರು. ಮೇಕೆಯ ಹಾಲೇ ಬಾಪುವಿಗೆ ಸಂಜೀವಿನಿಯಾಯಿತು. ಈ ಸಮಯದಲ್ಲಿ ಮಿಲ್ಲಿ ಪೋಲಕ್ ಕಸ್ತೂರಿ ಬಾಗೆ ಬೆಂಬಲವಾಗಿ ನಿಂತರು.

ಯುದ್ಧದ ಜ್ವಾಲೆ ಯೂರೋಪನ್ನು ದಟ್ಟವಾಗಿ ಆವರಿಸಿತ್ತು. ಮಿಲ್ಲಿ ಪೋಲಕ್ ಹಿಂತಿರುಗುವುದಕ್ಕಾಗಲಿಲ್ಲ. ನೀಲಗಿರಿಯ ಕೂನೂರಿನಲ್ಲಿ ಕೆಲವು ಕಾಲ ಒಬ್ಬ ಇಂಗ್ಲಿಷ್ ಮಿತ್ರರೊಡನೆ ವಾಸಿಸುತ್ತಿದ್ದರು. ಗಂಡ ಹೆಂಡಿರ ಈ ಅಗಲಿಕೆ ಇಬ್ಬರಿಗೂ ತುಂಬ

ಕಷ್ಟಕರವಾಗಿತ್ತು. ಗಾಂಧೀಜಿಯ ವಾತ್ಸಲ್ಯಪೂರ್ಣ ವಿಶ್ವಾಸವೊಂದೇ ಮಿಲ್ಲಿಗೆ ಆಸರೆಯಾಗಿತ್ತು. ಮಗಳಂತೆ ನೋಡಿಕೊಳ್ಳುತ್ತಿದ್ದರು. ವಿನೋದ ಮಾಡುತ್ತಲೂ ಇದ್ದರು. "ಈಗ ಅಗಲಿಕೆಯಿಂದ ಒಳ್ಳೆಯದೇ ಆಯಿತು. ಇಲ್ಲವಾದರೆ ಸಂಸಾರ ಬೇಸರವೆನಿಸುತ್ತಿತ್ತಲ್ಲವೆ?" ಎಂದು ಕೀಟಲೆ ಮಾಡಿದರು. "ಅಗಲಿಕೆ ಕೆಲವು ಸಾರಿ ಸ್ನೇಹ ತಂತುವನ್ನು ಹರಿದೂಬಿಡುತ್ತದೆ" ಎಂದು ಮಿಲ್ಲಿ ತಮ್ಮ ಸಮಾಜದಲ್ಲಿ ಸಾಮಾನ್ಯವಾಗಿದ್ದ ವಿಚ್ಛೇದನಗಳನ್ನು ಕುರಿತು ಹೇಳಿದರು. ಕೂಡಲೇ ಬಾಪೂ "ನಿನ್ನ ವಿಷಯದಲ್ಲಿ ಅದು ಸಾಧ್ಯವಿಲ್ಲ. ಹೆನ್ರಿ ತುಂಬಾ ನಿಷ್ಠಾವಂತ ಪತಿ" ಎಂದರು. "ನಾನು ಒಳ್ಳೆಯ ಹೆಂಡತಿ ಅಲ್ಲವೇ?" ಮಿಲ್ಲಿ ಕೇಳಿದರು. "ಈ ಪರೀಕ್ಷೆಯೇ ಅದನ್ನು ಹೇಳುತ್ತದೆ" ಎಂದರು ಗಾಂಧೀಜಿ. ಅವರ ಮಧ್ಯೆ ಈ ವಿಶ್ವಾಸದ ತಂತು ಅಚಲವಾಗಿ ನೆಲೆಗೊಂಡಿತ್ತು.

ಯುದ್ಧ ಮುಗಿದಿತ್ತು. 1918–19ರಲ್ಲಿ ಭಾರತದಲ್ಲಿ ಇನ್‌ಫ್ಲೂಯೆಂಜಾ ಖಾಯಿಲೆ ವಿಪರೀತ ಹರಡಿ ಸಾವಿರಾರು ಜನ ಸತ್ತರು. ಊರೂರೇ ನಿರ್ನಾಮವಾಗುತ್ತಿತ್ತು. ಈ ತಾಂಡವದ ದುರ್ಭರ ಬೇಗೆ ಕಂಡು ಮಿಲ್ಲಿ ಪೋಲಕ್ ವಿಹ್ವಲರಾದರು. ನೀಲಗಿರಿಯ ಗ್ರಾಮಸ್ಥರ ಸೇವೆಯಲ್ಲಿ ತಾವೂ ಪಾಲ್ಗೊಂಡರು. ಅವರಿಗೂ ಖಾಯಿಲೆಯ ಸೋಂಕು ತಗುಲಿ ಮಕ್ಕಳು, ತಾನು ಮತ್ತು ತಂಗಿ ಖಾಯಿಲೆ ಅನುಭವಿಸಬೇಕಾಯಿತು. ಇದೆಲ್ಲಾ ಕೇಳಿ ಗಾಂಧೀಜಿ ತುಂಬ ನೊಂದುಕೊಂಡರು. ಕೂಡಲೇ ಬರೆದು ತಿಳಿಸಿದರು. ಆಕೆಯನ್ನು ಕೂಡಲೇ ಇಂಗ್ಲೆಂಡಿಗೆ ಹಿಂತಿರುಗಲು ಒತ್ತಾಯಿಸಿದರು. ಹಡಗಿನಲ್ಲಿ ಸ್ಥಳ ಕಾದಿರಿಸಲು ಮಿತ್ರರಿಗೆ ಹೇಳಿದರು. ಬೊಂಬಾಯಿನಲ್ಲೂ ಆಗ ಕಾಲರಾ ಸೋಂಕು ಹರಡಿತ್ತು. ಮಿಲ್ಲಿ ಪೋಲಕ್ ತನ್ನ ಮಕ್ಕಳು ಮತ್ತು ತಂಗಿಯೊಡನೆ ಮಾಥೆರಾನ್‌ನಲ್ಲಿರುವಂತೆ ತಾವೇ ಏರ್ಪಡಿಸಿದರು. ಮಾಥೆರಾನ್‌ನಲ್ಲಿ ಆರು ವಾಗಳಿರಬೇಕಾಯಿತು. ಪ್ರತಿ ವಾರವೂ ಹೋಗಿ ಗಾಂಧೀಜಿಯನ್ನು ಭೇಟಿಯಾಗುತ್ತಿದ್ದರು. ಸುತ್ತಲೂ

ಭೀಕರವಾಗಿ ಪಸರಿಸಿದ್ದ ಅಂಟು ರೋಗಗಳು ಸಾವಿನ ಭಯವನ್ನು ಹಬ್ಬಿಸಿ ನಿಂತಿದ್ದವು. ಮಿಲ್ಲಿ ಪೋಲಕ್ ಅಂದರು "ಬಾಳಿನಲ್ಲಿ ಏನೋ ಸೌಂದರ್ಯವಿದೆ ಎಂದು ನಾನು ಬಲ್ಲೆ. ಆದರೆ ಈ ಸಾವಿನ ಬೆತ್ತಲೆ ನೃತ್ಯ ನೋಡಿದಾಗ ಅದಕ್ಕೆ ಸೋಲುವುದೇ ಸುಲಭವೆನಿಸುತ್ತದೆ." ಗಾಂಧೀಜಿ ತಕ್ಷಣ ಉತ್ತರಿಸುತ್ತಾ "ನಿನ್ನಂಥವಳು ಆಡತಕ್ಕ ಮಾತಲ್ಲ ಇದು. ಊಹೆಗೆ ಹೆದರಿ ನೀನು ಹೇಡಿಯಾಗಬಾರದು. ನಿನ್ನ ದೈವಭಕ್ತಿ, ನಂಬಿಕೆ ಈಗ ಎಲ್ಲಿ ಹೋದವು? ನಿನಗೇ ನೀನು ದ್ರೋಹ ಬಗೆದುಕೊಳ್ಳಬೇಡ" ಎಂದು ಇಬ್ಬರೂ ಘೋರ ಖಾಯಿಲೆಗಳಿಂದ ಪಾರಾಗಿ ಚೇತರಿಸಿಕೊಳ್ಳುತ್ತಿದ್ದರೂ. ಗಾಂಧೀಜಿಯ ಗಾಢವಾದ ಆಶಾವಾದ, ವಿಶ್ವನಿಯಾಮಕ ಶಕ್ತಿಯಲ್ಲಿ ಅವರ ಶ್ರದ್ಧೆ, ಎಲ್ಲವನ್ನೂ ದೈವಚಿತ್ತಕ್ಕೆ ಆರೋಪಿಸಿ ತಮ್ಮ ಕರ್ತವ್ಯಪಾಲನೆಯ ಧರ್ಮಕ್ಕೆ ಶರಣಾಗುವ ಮನೋಬಲ ಇವುಗಳನ್ನೂ ಮಿಲ್ಲಿ ಪೋಲಕ್ ಕೊಂಡಾಡುತ್ತಿದ್ದರು.

ಭಾರತ ಬಿಟ್ಟು ಹೊರಟಾಗ ಆಕೆಯ ಹೃದಯ ತುಂಬಿ ಬಂತು. ತಂದೆಯನ್ನು ಬೀಳ್ಕೊಡುವಂತೆ ಗಾಂಧೀಜಿಯ ಬಳಿಗೆ ಮಕ್ಕಳನ್ನೂ ತುಂಗಿಯನ್ನೂ ಕರೆದುಕೊಂಡು ಹೋಗಿ ಆಶೀರ್ವಾದ ಪಡೆದರು. "ಈ ಜನ್ಮದಲ್ಲಿ ಮತ್ತೆಂದಾದರೂ ಭೇಟಿಯಾದೇವೆಯೇ?" ಎಂದು ಉದ್ಗಾರ ತೆಗೆದರು.

ಮುಂದೆ ಹಲವು ವರ್ಷ ಇಂಗ್ಲೆಂಡಿನಲ್ಲಿ ಹೆನ್ರಿ ಮತ್ತು ಮಿಲ್ಲಿ ಪೋಲಕ್ ಸಮಾಜ ಸೇವಾಕಾರ್ಯಗಳಲ್ಲಿ ನಿರತರಾಗಿದ್ದರು. ಗಾಂಧೀ ಬಳಗದ ವಿದೇಶೀ ಬಂಧುಗಳಲ್ಲಿ ಈ ದಂಪತಿಗಳ ನೆನಪು ಚಿರಕಾಲ ಉಳಿದಿರುತ್ತದೆ.

2. ಹೆರ್ಮನ್ ಕಾಲೆನ್‌ಬಾಕ್ (ಜರ್ಮನಿ)

1902ರಲ್ಲಿ ಗಾಂಧೀಜಿ ತಮ್ಮ ದಕ್ಷಿಣ ಆಫ್ರಿಕದ ಕಕ್ಷಿಗಾರರಾದ ಅಬ್ದುಲ್ಲಾ ಸೇಠರ ಮೊಕದ್ದಮೆ ಮುಗಿಸಿ ಭಾರತಕ್ಕೆ ಹಿಂತಿರುಗಿದ್ದರು. ಬೊಂಬಾಯಿನಲ್ಲಿ ಬ್ಯಾರಿಸ್ಟರ್ ಆಗಿ ಜೀವನ ಪ್ರಾರಂಭಿಸಲು ಹವಣಿಸಿದ್ದರು. ಅಷ್ಟರಲ್ಲಿ ದಕ್ಷಿಣ ಆಫ್ರಿಕದ ಭಾರತೀಯರಿಂದ ತುರ್ತುಕರೆ ಬಂತು. ಅಲ್ಲಿನ ಸರ್ಕಾರ ಕಠಿಣ ಕಾನೂನುಗಳನ್ನು ಹೇರಿ ಏಷ್ಯನ್ ಜನಾಂಗಗಳನ್ನೆಲ್ಲ ಬಿಳಿಯರ ಸ್ವಾಮ್ಯದಡಿ ಗುಲಾಮ ಪ್ರಜೆಗಳನ್ನಾಗಿ ಮಾಡುತ್ತಿದ್ದಾರೆ. ದಯಮಾಡಿ ಬಂದು ನಮ್ಮ ಹೋರಾಟ ನಡೆಸಿಕೊಡಿ ಎಂದು ಕೋರಿದ್ದರು. 1903ರ ಡಿಸೆಂಬರ್‌ನಲ್ಲಿ ತಮ್ಮ ಬೊಂಬಾಯಿ ಕಛೇರಿಯನ್ನು ಮುಚ್ಚಿ ಗಾಂಧೀಜಿ ಮತ್ತೆ ದರ್ಬಾನಿಗೆ ತೆರಳಿದರು. ಅಲ್ಲಿಗೆ ಬಂದಿದ್ದ ಬ್ರಿಟಿಷ್ ವಸಾಹತು ಅಧಿಕಾರಿ ಛೇಂಬರ್ಲೇನಿನ ಮುಂದೆ ಭಾರತೀಯ ಮತ್ತು ಏಷ್ಯನ್ ವಲಸೆಗಾರರ ಪರ ನಿಯೋಗದ ನಾಯಕರಾದರು. ಮುಂದೆ ಅಲ್ಲಿನ ಜನರ ಹೋರಾಟದ ಮುಖಂಡತ್ವ ಅನಿವಾರ್ಯವಾಗಿ ಗಾಂಧೀಜಿ ವಹಿಸಬೇಕಾಯಿತು. ಬ್ಯಾರಿಸ್ಟರ್ ಆಗಿ ಟ್ರಾನ್ಸ್‌ವಾಲಿನಲ್ಲಿ ನೆಲಸಿ ಜೀವನ ಪ್ರಾರಂಭಿಸಿದರು.

1903ರ ಅಂತ್ಯದಲ್ಲಿ ಜೊಹಾನ್ಸ್‌ಬರ್ಗ್‌ನಲ್ಲಿನ ಪ್ರಸಿದ್ಧ ಬ್ಯಾರಿಸ್ಟರ್ ಎನಿಸಿದ್ದ ಗಾಂಧೀ ಭಾಯಿ (ಆಗಿನ್ನೂ ಮಹಾತ್ಮ ಎಂದು

ಕರೆಯುತ್ತಿರಲಿಲ್ಲ) 34 ವರ್ಷದ ತರುಣರು. ಹೆಂಡತಿ ಮಕ್ಕಳು ಬೊಂಬಾಯಿನಲ್ಲೇ ಇದ್ದರು. ಜೊಹಾನ್ಸ್‌ಬರ್ಗಿನ ಸಸ್ಯಾಹಾರಿ ಭೋಜನ ಮಂದಿರದಲ್ಲಿ ಜರ್ಮನ್ ದೇಶದ ವಾಸ್ತುಕಲಾ ತಜ್ಞ ತರುಣ ಕಾಲೆನ್‌ಬಾಕ್ ಅವರ ಸ್ನೇಹವಾಯಿತು. ಜೊಹಾನ್ಸ್‌ಬರ್ಗಿನ ಥಿಯಸಾಫಿಕಲ್ ಸೊಸೈಟಿಯಲ್ಲಿ ಇಬ್ಬರೂ ಭೇಟಿಯಾಗುತ್ತಿದ್ದರು! ಒಂದು ಅವರ್ಣನೀಯ ಸೆಳೆತ ಇಬ್ಬರ ಹೃದಯಗಳನ್ನೂ ಬೆಸೆಯಿತು. ಜೀವನದ ಉನ್ನತಾದರ್ಶಗಳ ಬಗೆಗೆ ಮನಸ್ಸು ಹೃದಯಗಳು ಒಟ್ಟಿಗೆ ಸ್ಪಂದಿಸಿದವು. ಆ ಗೆಳೆತನ ಜೀವನದ ಕೊನೆಯವರೆಗೂ ಅವ್ಯಾಹತವಾಗಿ ಹರಿದು ಬಂತು.

ಕಾಲೆನ್‌ಬಾಕ್ ಶ್ರೀಮಂತ ಮನೆತನದವರು. ವಾಸ್ತುಕಲಾ ವಿನ್ಯಾಸದ ಬಗ್ಗೆ (ಅರ್ಕಿಟೆಕ್ಚರ್) ಉನ್ನತ ಶಿಕ್ಷಣ ಪಡೆದು ಜೊಹಾನ್ಸ್‌ಬರ್ಗ್‌ನಲ್ಲಿ ತಜ್ಞಸಲಹೆಗಾರರಾಗಿ ಪ್ರಸಿದ್ಧರಾಗಿದ್ದರು. ಹೇರಳ ಸಂಪಾದನೆಯಿತ್ತು. ಮದುವೆಯಾಗಿರಲಿಲ್ಲ. ಪಾಶ್ಚಾತ್ಯ ನಾಗರಿಕತೆಯ ವಿಲಾಸ ಜೀವನಕ್ಕೆ ಮಾರುಹೋಗದೆ ಆಧ್ಯಾತ್ಮಿಕತೆಯ ಸರಳ ಜೀವನಕ್ಕೆ ಒಲಿದರು. ಗಾಂಧೀಜಿಯ ಸ್ನೇಹ ಇದಕ್ಕೆ ಪೋಷಕವಾಯಿತು.

ಗಾಂಧೀಜಿ ಆ ವೇಳೆಗೆ ದಕ್ಷಿಣ ಆಫ್ರಿಕದ ಜನಕ್ಕೆ ಕೇವಲ ಹಣಗಳಿಸುವ ಬ್ಯಾರಿಸ್ಟರ್ ಅಷ್ಟೇ ಆಗಿರಲಿಲ್ಲ. ಅವರು ಕೈಗೊಂಡ ಮೊದಲನೇ ಭಾರಿ ಮೊಕದ್ದಮೆಯಲ್ಲೇ ಶ್ರೀಮಂತ ದಾಯಾದಿಗಳ ದಾವೆಯನ್ನು ಪರಸ್ಪರ ಒಡಂಬಡಿಕೆಯಿಂದ ಇತ್ಯರ್ಥವಾಗುವಂತೆ ಮಾಡಿದ್ದರು. ದಾದಾ ಅಬ್ದುಲ್ಲಾ ಸೇಠ್ ಅವರ ನ್ಯಾಯಾಲಯದ ವ್ಯವಹಾರಗಳಲ್ಲಿ ಸಹಾಯಕರಾಗಿ ಬಂದ ಗಾಂಧೀಜಿ ಎರಡು ಶ್ರೀಮಂತ ಮನೆತನಗಳ ಮಧ್ಯೆ ವಿಷವಾಗಿದ್ದ ಹಗೆತನವನ್ನು ನಿವಾರಿಸಿ ಸ್ನೇಹ ಕುದುರಿಸಿದುದು ಜನರಲ್ಲಿ ಅತ್ಯಂತ ಗಾಢವಾದ ಪ್ರೀತಿಯನ್ನು ಕೊನರಿಸಿತ್ತು. 'ಗಾಂಧೀಭಾಯಿ' ಎಲ್ಲರಿಗೂ ಪ್ರಿಯರಾದ ಗೆಳೆಯರೆನಿಸಿದರು. ಪಾಶ್ಚಾತ್ಯರೂ ಆಳರಸರೂ ವಿಸ್ಮಯದಿಂದ ಅವರ ಸ್ನೇಹವನ್ನೇ ಬಯಸಿದರು. ಸ್ವಾಭಿಮಾನ ಆತ್ಮಗೌರವ ಮತ್ತು ವ್ಯಕ್ತಿ

ಸ್ವಾತಂತ್ರ್ಯಗಳನ್ನು ಬೆಳೆಸಿ ಕನಿಷ್ಠರಾದ 'ಗುತ್ತಿಗೆಯ ಕೂಲಿ'ಗಳೂ ಮನುಷ್ಯರಂತೆ ಬಾಳುವ ದಿಟ್ಟತನವನ್ನು ಕಲಿಸುತ್ತಿದ್ದ ಈ ಅಪೂರ್ವ ನಾಗರಿಕನ ಬಗ್ಗೆ ಮಿಶ್ರಭಾವನೆಗಳು ಬಿಳಿಯರಲ್ಲಿ ಸುಳಿಯುತ್ತಿದ್ದವು. ಆದರೆ ಸಹೃದಯರೂ, ಉದಾರಚರಿತರೂ ಆಗಿದ್ದ ಅನೇಕ ಸಹೋದ್ಯೋಗಿಗಳು, ಅಧಿಕಾರಿಗಳೂ, ಕ್ರೈಸ್ತಮತಾಚಾರ್ಯರೂ, ಸುಸಂಸ್ಕೃತ ನಾಗರಿಕರೂ ಗಾಂಧೀಜಿಯನ್ನು ಆತ್ಮೀಯ ಸ್ನೇಹಿತರಂತೆ ಕಂಡರು. ಅಂಥವರಲ್ಲಿ ಕಾಲೆನ್‌ಬಾಕ್ ಒಬ್ಬ ಅಸಾಧಾರಣ ಮಿತ್ರರಾಗಿ ಗಾಂಧೀಜಿಯ ಸಮೀಪ ಬಂಧುವೃತ್ತದಲ್ಲಿ ಸೇರಿಹೋದರು.

ಕಾನೆಲ್‌ಬಾಕ್ ಜೊಹಾನ್ಸ್‌ಬರ್ಗ್‌ನಲ್ಲಿ ಒಂದು ದೊಡ್ಡ ಸುಂದರ ಬಂಗಲೆ ಕಟ್ಟಿಕೊಂಡು ವಾಸಿಸುತ್ತಿದ್ದರು. ಆಳುಕಾಳುಗಳನ್ನಿಟ್ಟುಕೊಂಡು ವೈಭವದಿಂದ ಜೀವಿಸುವ ಬಿಳಿಯರಲ್ಲಿ ಗಣ್ಯರೆನಿಸಿದ್ದರು. ಗಾಂಧೀ ಭಾಯಿಯೊಡನಾದ ಸ್ನೇಹ ಬಾಂಧವ್ಯ ಅವರ ಜೀವನ ದೃಷ್ಟಿಯನ್ನು ಬದಲಿಸಿತು. ಮಧ್ಯಾಹ್ನದ ಊಟಕ್ಕೆ ಗಾಂಧೀಜಿಯ ಮನೆಯಲ್ಲಿ ಇಬ್ಬರೂ ಸೇರುತ್ತಿದ್ದರು. ರಾತ್ರಿಗೆ ಕಾಲೆನ್‌ಬಾಕ್ ಗಾಂಧಿ ಭಾಯಿಯನ್ನು ಹೋಟಲಿಗೆ ಕರೆದೊಯ್ಯುತ್ತಿದ್ದರು. ಇಬ್ಬರೂ ಸಸ್ಯಾಹಾರಿಗಳು. ಮಾದಕಪಾನೀಯ ಸೇವಿಸುತ್ತಿರಲಿಲ್ಲ. ಹೀಗೆ ಪರಸ್ಪರ ಬಾಂಧವ್ಯ ಬೆಳೆಯಿತು. ಪ್ರತಿಷ್ಠಿತ ವಕೀಲರಾಗಿದ್ದುದರಿಂದ ಗಾಂಧೀಭಾಯಿಗೆ ಯೂರೋಪಿಯನ್ನರ ಹೋಟಲಿನಲ್ಲಿ ಪ್ರವೇಶಕ್ಕೆ ಅಡ್ಡಿಯಿರಲಿಲ್ಲ. ಶ್ರೀಮಂತ ಕಾಲೆನ್‌ಬಾಕ್‌ನ ಅತಿಥಿ ಎಂದು ಇನ್ನೂ ಹೆಚ್ಚಿನ ಗೌರವ. ಈ ಗೆಳೆಯರು ತಮ್ಮ ಸಹಜ ಕಾಯಕದ ಜೊತೆಗೆ ಇತರ ಸಾಧಾರಣ ಜನತೆಯ ಕೆಳಮಟ್ಟದ್ದೆನಿಸಿದ್ದ ಕೆಲವು ಕಾಯಕಗಳನ್ನು ತಾವೇ ಕಲಿಯತೊಡಗಿದರು. ಒಬ್ಬ ಚೀನಿ ಮೋಚಿಯ ಅಂಗಡಿಯಲ್ಲಿ ಮೆಟ್ಟು ಹೊಲಿಯುವುದನ್ನು ಕಲಿತರು. ಮಾನವ ಸಮಾನತೆಯ ತಾತ್ವಿಕ ಚರ್ಚೆಯಲ್ಲಿ ಸ್ವಂತ ಅಹಂಕಾರವನ್ನು ದಮನಮಾಡಬೇಕಾದ ರೀತಿ ನೀತಿಗಳನ್ನು ಗಾಂಧೀಭಾಯಿ ಆತ್ಮವಿಶ್ವಾಸದಿಂದ ವಿವರಿಸುತ್ತಿದ್ದರು. ಕಾಲೆನ್‌ಬಾಕ್‌ಗೆ ಶ್ರಮಗೌರವ (ಡಿಗ್ನಿಟಿ ಆಫ್ ಲೇಬರ್) ತಮ್ಮ

ಸಮಾಜದಲ್ಲಿ ಸಹಜ ಎನಿಸಿದ್ದರೂ ಬಿಳಿಯ ಕರಿಯ ಜನಾಂಗಗಳ ತಾರತಮ್ಯದ ದಕ್ಷಿಣ ಆಫ್ರಿಕ ಸಮಾಜದಲ್ಲಿ ಉಚ್ಚ-ನೀಚ ಭಾವನೆ ಬೆಳೆದಿದ್ದುದು ಸ್ಪಷ್ಟವಾಗಿ ಅನುಭವವಾಗುತ್ತಿತ್ತು. ಮಾನವೀಯ ಮೌಲ್ಯಗಳ ಆರಾಧಕರಾಗಿ ಈ ಸ್ಥಿತಿಯುನ್ನು ಕಾಲೆನ್‌ಬಾಕ್ ನಿರಾಕರಿಸಲು ಗಾಂಧೀಭಾಯಿ ಪ್ರಭಾವಯುತ ಪ್ರೇರಕರಾದರು. ಹೃದಯಗಳು ಬೆಸೆದುಕೊಳ್ಳಲು ಮೊದಲಾಯಿತು.

1903ರಲ್ಲಿ ಗಾಂಧೀಜಿಯ ಸಂಸಾರ ಜೊಹಾನ್ಸ್‌ಬರ್ಗ್‌ಗೆ ಬಂದು ನೆಲಸಿತು. ಕಸ್ತೂರಿಬಾ ಮತ್ತು ಮೂವರು ಮಕ್ಕಳ ಈ ಕುಟುಂಬದೊಡನೆ ಕಾಲೆನ್‌ಬಾಕ್ ಒಬ್ಬ ಅಂಕಲ್ ಆಗಿ ನೆಲಸಿಬಿಟ್ಟರು. ಮಕ್ಕಳು ಮಣಿಲಾಲ್, ರಾಮದಾಸ್ ಮತ್ತು ದೇವದಾಸ್ ಬಹುಬೇಗ ಈ ಸಹೃದಯ ಅತಿಥಿಯೊಡನೆ ಪ್ರೀತಿಯಿಂದ ಒಂದುಗೂಡಿಬಿಟ್ಟರು. ಭಾಷೆಯ ತೊಡಕು ಯಾವ ಅಡ್ಡಿಯನ್ನೂ ಉಂಟುಮಾಡಲಿಲ್ಲ. ಇಂಗ್ಲೀಷಿನ ಗಂಧವೇ ಇಲ್ಲದ ಕಸ್ತೂರಿಬಾಗಂತೂ ಈ ಸೋದರನೊಡನೆ ಸನ್ನೆಗಳಿಂದಲೇ ಸಂಭಾಷಿಸಬೇಕಾಯಿತು. ಆದರೂ ಒಂದು ಗಾಢವಾದ ಮೈತ್ರಿ ಗಾಂಧೀಭಾಯಿ ಸಂಸಾರದೊಡನೆ ಬೆಳೆದು ನಿಂತುದು ಕಾಲೆನ್‌ಬಾಕ್ ಅವರಿಗೆ ಅಮೃತ ಸಮಾನವೆನಿಸಿತು. ಕಾಲೆನ್‌ಬಾಕ್ ಅವರ ದೊಡ್ಡ ಬಂಗಲೆಯಲ್ಲೂ ಈ ಮಕ್ಕಳ ಆಟ ತುಂಬ ನಡೆಯುತ್ತಿತ್ತು. ಈ ಪ್ರೀತಿಯ ಚಿಕ್ಕಪ್ಪ ಆಗಾಗ್ಗೆ ತಂದು ಕೊಡುತ್ತಿದ್ದ ಆಟದ ಸಾಮಾನುಗಳು ಮನೆಯನ್ನು ತುಂಬಿಕೊಂಡವು. ಚಾಕಲೇಟ್ ಫೇಡಾಗಳು ಯಥೇಚ್ಛವಾಗಿ ಬರತೊಡಗಿದವು. ಗಾಂಧೀಜಿಗೆ ಈ ದುಂದುವೆಚ್ಚ ಸರಿದೋರಲಿಲ್ಲ. ಕಾಲೆನ್‌ಬಾಕ್‌ಗೆ ಈ ಮಕ್ಕಳನ್ನು ಕಂಡರೆ ಅತ್ಯಂತ ಸಂತೋಷ. ರಾಮದಾಸನನ್ನಂತೂ ತನ್ನ ದತ್ತು ಪುತ್ರನಂತೆ ಸ್ವೀಕರಿಸಿಬಿಟ್ಟಿದ್ದರು. ಬಹಳ ವರ್ಷಗಳ ನಂತರ 1936ರಲ್ಲಿ ಕಾಲೆನ್‌ಬಾಕ್ ಭಾರತಕ್ಕೆ ಬಂದಿದ್ದರು. 1941ರಲ್ಲೇ ಗಾಂಧೀಜಿ ಜೊತೆ ಭಾರತಕ್ಕೆ ಹೊರಟಿದ್ದ ಈ ಗೆಳೆಯನಿಗೆ ಬ್ರಿಟಿಷ್ ಸರ್ಕಾರ ಆತ ಜರ್ಮನಿ ದೇಶದವನಾದುದರಿಂದ ಪ್ರವೇಶವನ್ನು

ನಿರಾಕರಿಸಿತ್ತು. ಆಗ ಮೊದಲ ಮಹಾಯುದ್ಧ ನಡೆದಿತ್ತು. ಅನಂತರ ದಕ್ಷಿಣ ಆಫ್ರಿಕದ ಫಿನಿಕ್ಸ್ ಆಶ್ರಮದಲ್ಲೇ ನೆಲೆಸಿದ ಕಾಲೆನ್‌ಬಾಕ್ ಭಾರತಕ್ಕೆ ಬರಲು 30 ವರ್ಷ ಕಾಯಬೇಕಾಯಿತು. ಬೊಂಬಾಯಿನಲ್ಲಿ ಭೂಲಾಭಾಯಿ ದೇಸಾಯಿಯವರ ಅತಿಥಿಯಾದರು. ತಮ್ಮನ್ನು ಬೊಂಬಾಯಿನಲ್ಲಿ ಸ್ವಾಗತಿಸಿ ಸೇವಾಗ್ರಾಮದ ಗಾಂಧೀ ಕುಟೀರಕ್ಕೆ ಕರೆತರಲು ಬಂದ ರಾಮದಾಸನನ್ನು ಕಂಡು ಕಾಲೆನ್‌ಬಾಕ್ ಸಂತೋಷದಿಂದ ಹಿಗ್ಗಿ ಹೋದರು. ಆದರೆ ದಷ್ಟಪುಷ್ಟನಾಗಿ ಸದಾ ಹಸನ್ಮುಖಿಯಾಗಿ ಚೇಷ್ಟೆಮಾಡುತ್ತಿದ್ದ ಬಾಲಕ ರಾಮದಾಸನ ಸ್ಥಳದಲ್ಲಿ ಈಗ ಕೃಶನಾದ ಗಂಭೀರ ಯುವಕನನ್ನು ಕಂಡು ಕಾಲೆನ್‌ಬಾಕ್ ಆತಂಕಗೊಂಡರು. ಅವನ ದೇಹಾರೋಗ್ಯದ ಬಗ್ಗೆ ಚಿಂತಿತರಾಗಿ ಗಾಂಧೀಜಿಯನ್ನೇ ಸ್ನೇಹಪೂರ್ವಕ ದೂರಿದರು. "ರಾಮದಾಸನನ್ನು ನನ್ನೊಡನೆ ಆಫ್ರಿಕಕ್ಕೆ ಕಳುಹಿಸಿಬಿಡಿ. ಆರೋಗ್ಯವಂತನನ್ನಾಗಿ ಮಾಡಿ ಹಿಂತಿರುಗಿ ಕಳುಹಿಸುತ್ತೇನೆ" ಎಂದು ಆಗ್ರಹಿಸಿದರು. ಭಾರತದ ಮಕ್ಕಳು ವಿದೇಶಗಳಿಗೆ ಹೋಗುವುದನ್ನು ವಿರೋಧಿಸುತ್ತಿದ್ದರೂ ಗಾಂಧೀಜಿ ಈ ಗೆಳೆಯನ ಮಾತಿಗೆ ಸಹಜವಾಗಿ ಒಪ್ಪಿಬಿಟ್ಟರು. ರಾಮದಾಸನನ್ನು ಅತ್ಯಂತ ಪ್ರೀತಿಯಿಂದ ಆದರಿಸಿ ಶುಶ್ರೂಷೆಮಾಡಿ ಮೊದಲಿನ ಆರೋಗ್ಯವನ್ನು ತಂದುಕೊಟ್ಟನಂತರವೇ ಅವನನ್ನು ಭಾರತಕ್ಕೆ ಕಳುಹಿಸಿಕೊಟ್ಟರು ಕಾಲೆನ್‌ಬಾಕ್. 'ಸಂಸಾರವನ್ನು ಇಲ್ಲಿಗೇ ಕರೆಸಿಕೊಂಡು ನಮ್ಮಲ್ಲಿ ಇದ್ದುಬಿಡು' ಎಂದೂ 'ಚಿಕ್ಕಪ್ಪ'ನ ಆಗ್ರಹವಿತ್ತು. ರಾಮದಾಸ್ ಕೂಡ ಕೊನೆಯವರೆಗೆ ಅವರೊಡನೆ ವಾತ್ಸಲ್ಯದಿಂದ ನಡೆದುಕೊಂಡರು. ರಾಮದಾಸನ ಮಗಳು ಸುಮಿತ್ರ ಕುಲಕರ್ಣಿ. ತಮ್ಮ ತಂದೆಯ ನೆನಪು ಮಾಡಿಕೊಂಡು ಈ ಬಾಂಧವ್ಯವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾಳೆ.

ಗಾಂಧೀಭಾಯಿ ಮತ್ತು ಕಾಲೆನ್‌ಬಾಕ್ ಜೊಹಾನ್ಸ್‌ಬರ್ಗ್ ನಾಗರಿಕರಲ್ಲಿ ಅಪೂರ್ವ ಸಮಾಜ ಸೇವಕರೆನಿಸಿದ್ದರು. ಯಾವುದೇ ಸಾರ್ವಜನಿಕ ಪ್ರಶ್ನೆಯಿರಲಿ, ಸಮಾಜನ್ಯಾಯದ ಉಲ್ಲಂಘನೆಗಳಿರಲಿ, ವೈಯುಕ್ತಿಕ ಸಂಕಷ್ಟಗಳಿರಲಿ ಬಡವರು ಶ್ರೀಮಂತರೆನ್ನದೆ

ಗಾಂಧೀಜಿಯಲ್ಲಿಗೆ ಪರಿಹಾರ ಮಾರ್ಗಕ್ಕಾಗಿ ಜನ ಧಾವಿಸುತ್ತಿದ್ದರು. ವಕೀಲ ವೃತ್ತಿಯಲ್ಲೂ ಸಂಘರ್ಷಕ್ಕಿಂತ ಒಪ್ಪಂದದ ಸ್ನೇಹ ಮಾರ್ಗಗಳನ್ನೇ ಈ ಪ್ರಸಿದ್ಧ ಬ್ಯಾರಿಸ್ಟರ್ ಹುಡುಕಿ ತೆಗೆಯುವುದನ್ನು ಕಂಡು ಕಾಲೆನ್‌ಬಾಕ್ ಮೂಕ ವಿಸ್ಮಿತರಾಗುತ್ತಿದ್ದರು. ಈ ಸ್ವಯಂ ಸೇವಾಕಾರ್ಯದಲ್ಲಿ ನೆರವಾಗುತ್ತಿದ್ದರು. ಸೊನ್ಯಾಶ್ಲಿಷೀನ್ ಎಂಬ ಆಪ್ತ ಕಾರ್ಯದರ್ಶಿಯನ್ನು ಗಾಂಧೀಭಾಯಿಯ ಕಾರ್ಯಾಲಯಕ್ಕೆ ಗೊತ್ತುಮಾಡಿದವರು ಕಾಲೆನ್‌ಬಾಕರೇ.

'ಇಂಡಿಯನ್ ಒಪಿನಿಯನ್' ಪತ್ರಿಕೆ ನಡೆಸುವಾಗ ಗಾಂಧೀಜಿಗೆ ಕಾಲೆನ್‌ಬಾಕ್‌ರೇ ಪ್ರಮುಖ ಬೆಂಬಲಿಗರು. ಬಿಳಿಯರ ಅಸಮಾಧಾನವನ್ನು ಲೆಕ್ಕಿಸದೆ ನೆರವಾದರು. ಮುಂದೆ ಗಾಂಧೀಜಿ ವಕೀಲ ವೃತ್ತಿಯನ್ನು ಬಿಟ್ಟಾಗ ಪತ್ರಿಕೆಯ ಆರ್ಥಿಕ ಜವಾಬ್ದಾರಿ ಹೊತ್ತರು. ಮನೆಗೆ ನೆರವಾಗಿ ಮಕ್ಕಳ ಜವಾಬ್ದಾರಿ ನಿರ್ವಹಿಸುತ್ತಿದ್ದರು. ದಕ್ಷಿಣ ಆಫ್ರಿಕದ ಸತ್ಯಾಗ್ರಹಕಾಲಕ್ಕೆ ಗಾಂಧೀಜಿ ಜೈಲು ಸೇರುತ್ತಿದ್ದಾಗ ಕಾಲೆನ್‌ಬಾಕ್ ಕಾರ್ಯಾಲಯವನ್ನು ನಿರ್ವಹಿಸುತ್ತಿದ್ದರು.

ಫೀನಿಕ್ಸ್ ಆಶ್ರಮದ ಸ್ಥಾಪನೆ ಗಾಂಧೀ ಜೀವನದ ಒಂದು ಪ್ರಮುಖ ಘಟ್ಟ. ರಸ್ಕಿನ್ನನ (Unto this Last) 'ಕಟ್ಟಕಡೆಯನಿಗೆ ನ್ಯಾಯ' ಪುಸ್ತಕವನ್ನೋದಿ ಗಾಂಧೀಜಿ ತಮ್ಮ ಜೀವನ ದೃಷ್ಟಿಯನ್ನೇ ಬದಲಿಸಿಬಿಟ್ಟರು. ಸರಳ ಜೀವನ ಮತ್ತು ಶರೀರಶ್ರಮದ ವ್ರತ ಅವರಿಗೆ ತಾರಕ ಮಂತ್ರಗಳಾದವು. ಆ ಕೂಡಲೇ ತಾವು ಪ್ರಕೃತಿಯ ಮಡಿಲಲ್ಲಿ ಸ್ವಾವಲಂಬನದ ಜೀವನ ಕ್ರಮ ಪ್ರಾರಂಭಿಸಲು ನಿರ್ಧರಿಸಿಬಿಟ್ಟರು. ಡರ್ಬಾನಿನಿಂದ 14 ಮೈಲಿ ದೂರದ ಫೀನಿಕ್ಸ್ ರೈಲ್ವೆ ನಿಲ್ದಾಣದ ಬಳಿ ಇದ್ದ ಒಂದು ನೂರು ಎಕರೆ ವ್ಯವಸಾಯ ಕ್ಷೇತ್ರವನ್ನು ತಮ್ಮ ಗಳಿಕೆ ಹಣದಿಂದ ಕೊಂಡರು. ಈ ಹಿಂದೆ ಅಲ್ಲಿದ್ದ ದೊಡ್ಡದೊಂದು ಕಬ್ಬಿನ ಗದ್ದೆಯನ್ನು ಥಾಮಸ್ ವಾಟಿಕಿನ್ಸ್ ಎಂಬ ರೈತ ಮಾಡಿದ್ದ. ಒಂದು ಸಾರಿ ಬೆಂಕಿ ಅನಾಹುತದಿಂದ ಈ ವ್ಯವಸಾಯ ಕ್ಷೇತ್ರ ಪೂರ್ಣವಾಗಿ ನಾಶವಾಗಿತ್ತು. ಅದರ ಬೂದಿಯ ಮೇಲೆ ಮತ್ತೆ ರೂಪಿಸಿದ ಈ

ಕ್ಷೇತ್ರಕ್ಕೆ ಆತ 'ಫೀನಿಕ್ಸ್ ಫಾರಂ' ಎಂದು ಕರೆದ. ಫೀನಿಕ್ಸ್ ಪಕ್ಷಿ ಗ್ರೀಕರ ಪುರಾಣದಲ್ಲಿ ಬರುವ ಕಲ್ಪನೆಯ ಹಕ್ಕಿ. ತಾನು ಸುಟ್ಟುಹೋದ ಬೂದಿಯ ಮಧ್ಯದಿಂದಲೇ ಮತ್ತೆ ಅವತರಿಸುವುದು. ಫೀನಿಕ್ಸ್ ಹೆಸರು ಈ ಕ್ಷೇತ್ರಕ್ಕೆ ಅನ್ವರ್ಥವಾಯಿತು. 1904ರ ಡಿಸೆಂಬರಿನಲ್ಲಿ ಗಾಂಧೀಜಿ ತಮ್ಮ ಹೆಂಡತಿ ಮಕ್ಕಳೊಡನೆ ಈ ಫೀನಿಕ್ಸ್ ಆಶ್ರಮದಲ್ಲಿ ನೆಲಸಿದರು.

ಹೆರ್ಮನ್ ಕಾಲೆನ್‌ಬಾಕ್ ಈ ವೇಳೆಗೆ ಸಂಪೂರ್ಣವಾಗಿ ಗಾಂಧೀಜಿಯ ಅನುಯಾಯಿಯಾಗಿಬಿಟ್ಟಿದ್ದರು. ಫೀನಿಕ್ಸ್ ವಸತಿಯ ಸರಳವಾದ ಷೆಡ್ಡುಗಳನ್ನು ನಿರ್ಮಾಣ ಮಾಡಲು ತಾವೇ ಟೊಂಕ ಕಟ್ಟಿ ನಿಂತರು. ಎಲ್ಲಕ್ಕೂ ತಾವೇ ನಕ್ಷೆ ಮಾಡಿದರು. ಸಾಮಾಗ್ರಿಗಳನ್ನು ತಂದರು. ನಿಪುಣನಾದ ಕಾರ್ಮಿಕನಾಗಿ ಬಡಗಿ ಕೆಲಸದಿಂದ ಹಿಡಿದು ಮಣ್ಣು ಹೊರುವವರೆಗೂ ಶ್ರಮಜೀವಿಯಂತೆ ದುಡಿದರು. ಆ ನಿರ್ವ್ಯಾಜ ಗೆಳೆತನ ಗಾಂಧೀಜಿಗೆ ಒಂದು ಅಸಾಧಾರಣ ಸಾಧನ ಶಕ್ತಿಯಾಗಿ ಪರಿಣಮಿಸಿತು.

ಫೀನಿಕ್ಸ್ ಕ್ಷೇತ್ರದಲ್ಲಿ ಎಂಟು ವರ್ಷಗಳ ಸಾಮೂಹಿಕ ದುಡಿಮೆ ಫಲ ನೀಡಿ ಒಂದು ದೊಡ್ಡ ಆಶ್ರಮವಾಸಿಗಳ ಸಮೂಹವೇ ಅಲ್ಲಿ ಬಂದು ನೆಲಸಿತು. ಇಂಡಿಯನ್ ಒಪಿನಿಯನ್ ಪತ್ರಿಕೆ ಮತ್ತು ಮುದ್ರಣಾಲಯದಲ್ಲಿ ಅಲ್ಲಿ ನೆಲೆಗೊಂಡವು. ಮಗನಲಾಲ ಗಾಂಧಿ– ಗಾಂಧೀಜಿಯ ಅಣ್ಣನ ಮಗ. ದಕ್ಷಿಣ ಆಫ್ರಿಕದಲ್ಲಿ ಬಾಪೂವಿನ ಬಲಗೈನಂತೆ ದುಡಿಯಲು ನಿಂತರು. ಪತ್ರಿಕೆಯ ಸಂಪಾದಕತ್ವಕ್ಕೆ ಇಂಗ್ಲೆಂಡಿನ ಮಿ. ವೆಸ್ಟ್ ಸೇರಿಕೊಂಡರು 1911ರಲ್ಲಿ ಗಾಂಧೀಜಿ ತಮ್ಮ ಸಂಪೂರ್ಣ ಆಸ್ತಿಪಾಸ್ತಿಗಳನ್ನೆಲ್ಲ ಒಂದು ವಿಶ್ವಸ್ತ ಮಂಡಲಿಗೆ ಒಪ್ಪಿಸಿಬಿಟ್ಟರು. ಮೊದಲನೆಯ ವಿಶ್ವಸ್ತ ಮಂಡಲಿಯಲ್ಲಿ ಹೆರಮನ್ ಕಾಲೆನ್‌ಬಾಕ್‌ರ ಜೊತೆಗೆ ದರ್ಬಾನಿನಲ್ಲಿ ವ್ಯಾಪಾರಿಗಳಾಗಿದ್ದ ಓಮರ್‌ಹಾಜಿ, ಅಮೊದ್ ಜೊಹಾರಿ ಮತ್ತು ಸೇಠ್ ರುಸ್ತುಮ್‌ಜಿ, ಜೊಹಾನ್ಸ್‌ಬರ್ಗಿನ ಬ್ಯಾರಿಸ್ಟರ್ ಲೂಯಿಪಾಲ್ವರ್‌ರಿಚ್ ಮತ್ತು ಬ್ಯಾರಿಸ್ಟರ್ ಪ್ರಾಣಜೀವನದಾಸ್ ಜಗಜೀವನ್ ಮೆಹ್ತ ಅವರುಗಳಿದ್ದರು.

ಗಾಂಧೀಜಿಯ ಸಂಪೂರ್ಣ ಸ್ಥಿರ ಮತ್ತು ಚರ ಆಸ್ತಿಗಳ ಒಟ್ಟು ಬೆಲೆ 5130 ಪೌಂಡುಗಳು (ಸುಮಾರು 60,000 ರೂ.ಗಳು) ಎಂದು ನಿರ್ಧರಿಸಲಾಗಿತ್ತು. ಆ ವಿಶ್ವಸ್ತ ಕರಾರಿನ ನಿಯಮಗಳನ್ನು ಗಾಂಧೀಜಿಯೇ ಹೀಗೆ ರೂಪಿಸಿದರು– ತನ್ನ ಸಮಸ್ತ ಸಂಪತ್ತನ್ನೂ ವಿಶ್ವಸ್ತ ಮಂಡಲಿಗೆ ಒಪ್ಪಿಸುವುದು; ತನ್ನ ಸ್ವಂತ ಬಳಕೆಗಾಗಿ ಎರಡು ಭಿಗಾ ಭೂಮಿ ಮತ್ತು ಒಂದು ಗುಡಿಸಲು ಇಟ್ಟುಕೊಳ್ಳುವುದು. ಮುದ್ರಣಾಲಯದಲ್ಲಿ ತನ್ನ ಕೆಲಸದ ಸಂಭಾವನೆಯಾಗಿ ತಿಂಗಳಿಗೆ ಐದು ಪೌಂಡಿಗೆ ಮೀರದಂತೆ ಪಡೆಯುವುದು. ಮಧ್ಯೆ ಮರಣಹೊಂದಿದರೆ ಈ ಸಂಭಾವನೆಯನ್ನು ಕಸ್ತೂರಿ ಬಾ ಮತ್ತು ಇಬ್ಬರು ಕಿರಿಯ ಮಕ್ಕಳಾದ ರಾಮದಾಸ್ ಮತ್ತು ದೇವದಾಸ್ ಅವರಿಗೆ 21 ವರ್ಷ ತುಂಬುವವರೆಗೆ ಅವರಿಗೂ ಸೇರಿಸಿ ಕೊಡತಕ್ಕದ್ದು. ಕೊನೆಯದಾಗಿ ವಿಶ್ವಸ್ತರು ಕೇವಲ ಆಸ್ತಿಪಾಲಕರಾಗಿ ಇರತಕ್ಕದ್ದು. ಫೀನಿಕ್ಸ್ ವಸತಿಕ್ಷೇತ್ರದ ಸಮಸ್ತ ನಿರ್ವಹಣೆಯೂ ವ್ಯವಹಾರಗಳೂ ಅಲ್ಲಿ ನೆಲಸುವವರ ಜವಾಬ್ದಾರಿಗೇ ಸೇರತಕ್ಕದ್ದು.

1913ರಲ್ಲಿ ಫೀನಿಕ್ಸ್ ಆಶ್ರಮದಲ್ಲಿ ನೆಲಸಿದ್ದ ಹೆಚ್.ಎಸ್.ಎಲ್. ಪೋಲಕ್, ಐ. ಎಚ್. ವೆಸ್ಟ್, ಛಗನ್‌ಲಾಲ್ ಗಾಂಧಿ, ಮಗನ್‌ಲಾಲ್ ಗಾಂಧಿ ಮತ್ತು ರಾಜುಗೋವಿಂದ್ ಅವರುಗಳು ಸೇರಿದ ವಿಶ್ವಸ್ತ ಮಂಡಲಿಯನ್ನು ರಿಜಿಸ್ಟರ್ ಮಾಡಿಸಲಾಯಿತು.

ಈ ವಸತಿ ಕ್ಷೇತ್ರದ ನಿಯಮಾವಳಿಗಳನ್ನು ಗಾಂಧೀಜಿ ಮತ್ತು 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಹೀಗೆ ವಿವರಿಸಿದರು.

1. ವ್ಯವಸಾಯ ಮತ್ತು ಕೈಕಸುಬುಗಳ ಮೂಲಕ ಸಂಪಾದಿಸಿ ತಮ್ಮ ಜೀವನ ನಿರ್ವಹಣೆ ಮಾಡಿಕೊಳ್ಳುವಂತೆ ಬದುಕಿನ ರೀತಿನೀತಿಗಳನ್ನು ರೂಪಿಸಿಕೊಳ್ಳಬೇಕು. ಯಂತ್ರಗಳ ಬಳಕೆಯನ್ನು ಆದಷ್ಟು ವರ್ಜಿಸಬೇಕು.

2. ದಕ್ಷಿಣ ಆಫ್ರಿಕದಲ್ಲಿ ನೆಲಸಿರುವ ಭಾರತೀಯರಿಗೂ ಯೂರೋಪಿನ ಜನಾಂಗಗಳಿಗೂ ಮಧ್ಯೆ ಸಾಮರಸ್ಯವನ್ನು

ನಿರ್ಮಾಣ ಮಾಡಿ ಭಾರತೀಯರ ಕುಂದು ಕೊರತೆಗಳನ್ನು ನಿವಾರಿಸಲು ಸಾರ್ವಜನಿಕ ಸೇವೆಗಳಲ್ಲಿ ತೊಡಗುವುದು.

3. ಟಾಲ್ಸಟಾಯ್ ಮತ್ತು ರಸ್ಕಿನ್ನರು ಬೋಧಿಸಿರುವ ತತ್ವಗಳಂತೆ (ಅನ್ನಕಾಯಕ ಮತ್ತು ಸರ್ವೋದಯ) ನಡೆದು ಅವುಗಳನ್ನು ಪ್ರಚಾರ ಮಾಡುವುದು.

4. ವ್ಯಕ್ತಿ ಜೀವನವನ್ನು ಪರಿಶುದ್ಧಗೊಳಿಸಿಕೊಂಡು ಇತರರಲ್ಲಿಯೂ ಅದು ಪ್ರಚಲಿತವಾಗುವಂತೆ ನಡೆದುಕೊಳ್ಳುವುದು.

5. ಭಾರತೀಯ ಮಕ್ಕಳಿಗೆ ತಮ್ಮ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ದೊರಕುವಂತೆ ಒಂದು ಶಾಲೆ ಸ್ಥಾಪಿಸುವುದು.

6. ಪ್ರಕೃತಿ ಚಿಕಿತ್ಸೆಯ ಮೂಲ ನಿಯಮಗಳಂತೆ ಸೇವೆ ಸಲ್ಲಿಸುವ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವುದು.

7. ಸಾರ್ವಜನಿಕ ಸೇವೆಯನ್ನೇ ಪ್ರಧಾನವಾಗಿ ಅನುಸರಿಸಿ ಬಾಳುವಂತೆ ಎಲ್ಲ ರೀತಿಯ ಅಗತ್ಯ ತರಬೇತಿಯನ್ನೂ ಪಡೆದುಕೊಳ್ಳಲು ಪ್ರಯತ್ನಿಸುವುದು.

8. ಈ ಉದ್ದೇಶಗಳಿಗಾಗಿಯೇ ಮೀಸಲಾಗಿರುವ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ನಡೆಸಿಕೊಂಡು ಬರುವುದು.

ಈ ಆಶ್ರಮ ನಡೆಸಲು ಸಾರ್ವಜನಿಕ ಹಿತೈಷಿಗಳ ಧನಸಹಾಯವನ್ನೂ ಪಡೆಯಬೇಕಾಗಿತ್ತು. ಪ್ರೇಮದಿಂದ ಮುಂದೆ ಬಂದು ಅನೇಕ ಶ್ರೀಮಂತರು ಗಾಂಧಿಜಿಗೆ ನೆರವಾಗುತ್ತಿದ್ದರು. ಆದರೆ ಎಂದೂ ತಮ್ಮ ಕನಿಷ್ಠ ಅವಶ್ಯಕತೆಗಳ ನಿರ್ವಹಣೆಗೆ ಮೀರಿದ ವಂತಿಕೆಗಳನ್ನು ಅವರು ಸ್ವೀಕರಿಸುತ್ತಿರಲಿಲ್ಲ.

ಒಮ್ಮೆ ಗಾಂಧೀಜಿಯ ಆಪ್ತರಾಗಿದ್ದ ಉಸ್ಮಾನ್ ಸೇಠರು ಆಶ್ರಮದ ಖರ್ಚನ್ನು ನಿರ್ವಹಿಸುತ್ತೇನೆಂದು ಆಗ್ರಹಪೂರ್ವಕವಾಗಿ ಕೇಳಿದಾಗ

ಗಾಂಧೀಜಿ ಒಪ್ಪಿದ್ದರು. ಮುಂದೆ ಕೆಲವು ದಿನಗಳ ನಂತರ ಭಾರತದಿಂದ ಆರ್ಯಸಮಾಜಕ್ಕೆ ಸೇರಿದ್ದ ಪ್ರಚಾರಕರೊಬ್ಬರು ದಕ್ಷಿಣ ಆಫ್ರಿಕಕ್ಕೆ ಬಂದರು. ಸ್ವಲ್ಪ ಸಮಯ ಅತಿಥಿಯಾಗಿ ಫೀನಿಕ್ಸ್ ಆಶ್ರಮದಲ್ಲಿ ತಂಗಿದ್ದರು. ಸ್ವಾಮಿ ಶಂಕರಾನಂದ ಅವರ ಹೆಸರು. ಅವರಿಗೆ ಮುಸಲ್ಮಾನರ ಬಗ್ಗೆ ತಿರಸ್ಕಾರವಿದ್ದುದನ್ನು ಆಶ್ರಮವಾಸಿಗಳು ಗಮನಿಸಿದ್ದರು. ಗಾಂಧೀಜಿಯ ದಕ್ಷಿಣ ಆಫ್ರಿಕದ ವಾಸದಲ್ಲಿ ಆಪ್ತ ಮಿತ್ರವೃಂದಕ್ಕೆ ಸೇರಿದ ಅನೇಕ ಮುಸಲ್ಮಾನರಿದ್ದರು. ಕ್ರೈಸ್ತರು, ಪಾರ್ಸಿಗಳು ಮತ್ತು ಹಿಂದೂಗಳು ಎಂಬ ಭೇದವೆನಿಸದೆ ಬಂಧುಭಾವದಿಂದ ಅವರು ನಡೆದುಕೊಳ್ಳುತ್ತಿದ್ದರು. ಅತಿಥಿಯಾಗಿದ್ದ ಶಂಕರಾನಂದರು ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸ್ವತಂತ್ರರಾಗಿದ್ದರು. ದಾದಾ ಉಸ್ಮಾನರಿಗೆ ಅವರ ವರ್ತನೆ ಸಹಿಸಲಿಲ್ಲ. ಗಾಂಧೀಜಿಗೆ ಪತ್ರ ಬರೆದು ಮುಂದೆ ಅವರ ಆಶ್ರಮಕ್ಕೆ ಧನಸಹಾಯ ಮಾಡುವುದು ತಮಗೆ ಸಾಧ್ಯವಾಗಲಾರದು ಎಂದು ತಿಳಿಸಿಬಿಟ್ಟರು. ಹಠಾತ್ತನೆ ಈ ಘಟನೆ ನಡೆದು ಗಾಂಧೀಜಿಗೆ ವೆಚ್ಚ ನಿರ್ವಹಿಸುವ ಜವಾಬ್ದಾರಿ ಬಂದಿತು. ಅದಕ್ಕಿಂತ ಹೆಚ್ಚಾಗಿ ಈವರೆವಿಗೆ ಹೇರಳವಾಗಿ ಧನ ಸಹಾಯ ಮಾಡಿದ್ದ ಸೇಠ್ ಉಸ್ಮಾನರಿಗೆ ಆಶ್ರಮದ ಬಗ್ಗೆ ತಿರಸ್ಕಾರ ಹುಟ್ಟಿತಲ್ಲಾ ಎಂದು ಚಿಂತಿಸಿದರು. ಉಸ್ಮಾನ್ ಸೇಠರು ಕೊಟ್ಟಿದ್ದ ಹಣವನ್ನು ತಾವು ಹಿಂತಿರುಗಿಸುವುದು ತಮ್ಮ ಧರ್ಮ ಎಂದೂ ಯೋಚಿಸಿದರು. ಈ ತೀವ್ರ ಭಾವನೆಗಳನ್ನೂ ಗಾಂಧೀಭಾಯಿಯ ಆಂತರಿಕ ಇಚ್ಛೆಯನ್ನೂ ಅವರ ಆತ್ಮೀಯ ಗೆಳೆಯ ಕಾಲೆನ್‌ಬಾಕರು ಮನಗಂಡರು. ಅಷ್ಟು ದೊಡ್ಡ ಮೊತ್ತವನ್ನು ಕೂಡಲೇ ಹಿಂತಿರುಗಿಸುವುದು ಗಾಂಧೀಜಿಗೆ ಸಾಧ್ಯವಾಗದೆಂದರಿತು ತಾವೇ ಒಂದು ಚೆಕ್ ಬರೆದು ಉಸ್ಮಾನ್‌ಸೇಠರಿಗೆ ತಲುಪಿಸಿಬಿಟ್ಟರು. ಈ ಬಂಧುಪ್ರೇಮ ಗಾಂಧೀಜಿಗೆ ಅನುಪಮ ಭಾಗ್ಯವಾಗಿತ್ತು. ಒಡಹುಟ್ಟಿದ ಸೋದರರಂತೆ ಇಬ್ಬರೂ ನಡೆದುಕೊಳ್ಳುತ್ತಿದ್ದರು.

1908ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕದ ಸತ್ಯಾಗ್ರಹದಲ್ಲಿ ಜೈಲುವಾಸ ಅನುಭವಿಸಿ ಮೊದಲಬಾರಿ ಬಿಡುಗಡೆಯಾದಾಗ ಕಾಲೆನ್‌ಬಾಕ್‌ರ

ಆನಂದಕ್ಕೆ ಪಾರವೇ ಇರಲಿಲ್ಲ. ತಮ್ಮ ರೋಲ್ಸ್‌ರಾಯ್ಸ್ ಕಾರನ್ನು ಜೈಲಿನ ಗೇಟಿಗೇ ತಂದು ಗಾಂಧೀಜಿಯ ಸ್ವಾಗತಕ್ಕಾಗಿ ಕಾದು ನಿಂತರು. ಇದಕ್ಕಾಗಿಯೇ ಅಂತಹ ಭಾರಿ ವೆಚ್ಚದ ಕಾರನ್ನು ಕೊಂಡು ಬಂದಿದ್ದಾರೆಂದು ತಿಳಿದು ಖತಿಗೊಂಡ ಗಾಂಧೀಜಿ ತಮ್ಮ ಕಿರಿಯ ಸೋದರನೊಬ್ಬನನ್ನು ದಂಡಿಸುವ ದನಿಯಲ್ಲಿ ಆ ಕಾರು ಹತ್ತಲು ನಿರಾಕರಿಸಿಬಿಟ್ಟರು. "ಈ ದುಂದುವೆಚ್ಚ ಸಾರ್ವಜನಿಕ ಸೇವಕರಿಗೆ ಸರ್ವಥಾ ಯೋಗ್ಯವಲ್ಲ. ಕೂಡಲೇ ಈ ಕಾರನ್ನು ಮಾರಿಬಿಡು" ಎಂದು ನುಡಿದರು. ಕಾಲೆನ್‌ಬಾಕರಿಗೆ ತಪ್ಪು ಅರಿವಾಯಿತು. ಅದೇ ಕ್ಷಣ ಒಬ್ಬ ದಳ್ಳಾಳಿ ಅಂಗಡಿಗೆ ಹೋಗಿ ಹದಿನೈದು ಸಾವಿರದಷ್ಟು ನಷ್ಟವಾದರೂ ಚಿಂತೆಯಿಲ್ಲ ಎಂದು ಮಾರಿಬಿಟ್ಟರು. ಅವರು ಹಿಂತಿರುಗಿ ಬರುವವರೆಗೆ ಗಾಂಧೀಜಿ ಜೈಲಿನ ಬಾಗಿಲಿನಲ್ಲೇ ಕಾದು ನಿಂತಿದ್ದರು. ಅವರು ಬಂದೊಡನೆ ಇಬ್ಬರೂ ಗಾಢವಾಗಿ ಆಲಂಗಿಸಿಕೊಂಡರು. ಕಣ್ಣುಗಳು ಹನಿಯಾದವು. ಇಬ್ಬರೂ ಕಾಲ್ನಡಿಗೆಯಲ್ಲೇ ತಮ್ಮ ಬಿಡಾರಕ್ಕೆ ಹೊರಟರು. ನೆರೆದಿದ್ದ ಜನಸ್ತೋಮ ಆನಂದಭರಿತರಾಗಿ ಹಿಂಬಾಲಿಸಿದರು.

ಕ್ರಮೇಣ ಆ ಶ್ರೀಮಂತ ಜರ್ಮನ್ ಗೆಳೆಯ ಗಾಂಧೀಭಾಯಿಯ ಜೀವನಕ್ರಮಕ್ಕೆ ಶರಣು ಬಂದರು. ಅಪರಿಗ್ರಹ ಮತ್ತು ಶರೀರಶ್ರಮ ತಮ್ಮ ಆತ್ಮವಿಕಾಸಕ್ಕೆ ಎಷ್ಟು ಅವಶ್ಯಕ ಎಂದು ಕಂಡುಕೊಂಡನು. ದಿನಕ್ಕೆ ಎರಡು ಮೂರು ಗಂಟೆ ತೋಟಗಾರಿಕೆಯ ಕೆಲಸಗಳಲ್ಲಿ ತೊಡಗಿಬಿಡುತ್ತಿದ್ದರು.

1910ರ ಆಗಸ್ಟ್ ವೇಳೆಗೆ ದಕ್ಷಿಣ ಆಫ್ರಿಕದ ಸತ್ಯಾಗ್ರಹ ಚಳುವಳಿ ತೀವ್ರ ಬಿರುಸಿನಿಂದ ಸಾಗಿತ್ತು. ಸಾವಿರಾರು ಕರಾರು ಕೂಲಿಗಳಾಗಿದ್ದ ಭಾರತೀಯರು ಭಾಗವಹಿಸಿ ಸೆರೆಮನೆಗೆ ಸೇರುತ್ತಿದ್ದರು. ಅವರ ಸಂಸಾರಗಳು ತೀವ್ರವಾಗಿ ಕಷ್ಟಗಳಿಗೀಡಾದರೂ ಆತ್ಮಾಭಿಮಾನದಿಂದ ಹೋರಾಡುತ್ತಿದ್ದರು. ಸೆರೆಯಾಳುಗಳಾದ ಹಲವರಿಗೆ ವರ್ಷಗಟ್ಟಲೆ ಕಠಿಣ ಶಿಕ್ಷೆಯಾಗಿತ್ತು. ಅನೇಕ ವಿದೇಶೀ ಮಿತ್ರರು ಈ ಅಹಿಂಸಕ

ಹೋರಾಟದಲ್ಲಿ ಗಾಂಧೀಜಿಗೆ ನೆರವಾಗುತ್ತಿದ್ದರು. ಬಿಳಿಯರಿಗೆ ಬೇರೆ ಕಾನೂನುಗಳೇ ಇದ್ದುದರಿಂದ ಅವರನ್ನು ಸುಲಭವಾಗಿ ನ್ಯಾಯಾಲಯಕ್ಕೆ ಎಳೆಯಲು ಆಗುತ್ತಿರಲಿಲ್ಲ. ಈ ಸಮಯಕ್ಕೆ ಸತ್ಯಾಗ್ರಹಿಗಳ ಮಕ್ಕಳು ಮತ್ತು ವೃದ್ಧ ತಂದೆ ತಾಯಿಗಳ ಜೀವನ ನಿರ್ವಹಿಸುವ ಬಗ್ಗೆ ಗಾಂಧೀಜಿ ಚಿಂತಿಸುತ್ತಿದ್ದರು. ಮಿತ್ರ ಕಾಲೆನ್‌ಬಾಕ್ ಆ ಕೂಡಲೇ ನಿರ್ಧರಿಸಿ ಜೊಹಾನ್ಸ್‌ಬರ್ಗ್‌ನಿಂದ 21 ಮೈಲಿ ದೂರದಲ್ಲಿದ್ದ ತಮ್ಮ ಒಂದು ಸಾವಿರದ ನೂರು ಎಕರೆಗಳ ತೋಟ, ಜಮೀನು ಮತ್ತು ಭಾವಿಗಳಿಂದ ಸುಜಲಾಂ, ಸುಫಲಾಂ ಆಗಿದ್ದ ಕ್ಷೇತ್ರವನ್ನು ಈ ಕಾರ್ಯಕ್ಕೆ ಬಿಟ್ಟುಕೊಟ್ಟರು. ಅದೇ ಪ್ರಸಿದ್ಧ 'ಟಾಲ್‌ಸ್ಟಾಯ್ ಫಾರಮ್'ಗೆ ನೆಲೆಯಾಯಿತು. ಈ ವ್ಯವಸ್ಥೆಯ ಸಿಂಹಪಾಲನ್ನು ಕಾಲೆನ್‌ಬಾಕ್ ವಹಿಸಿದ್ದರು. ತಾವೇ ಸಸ್ಯಾಹಾರಿಯಾಗಿದ್ದರು. ವಸತಿಯಲ್ಲಿ ನೆಲಸಿದ ಮಕ್ಕಳ ಮತ್ತು ವೃದ್ಧರ ಪಾಲನೆಯನ್ನು ಶ್ರದ್ಧೆಯಿಂದ ಕೈಗೊಂಡರು. ಗಾಂಧೀಭಾಯಿಯ ಅನೇಕ ನಿಶ್ಚಿತ ತತ್ವಗಳಿಗೆ ಚಾಲನೆ ಕೊಟ್ಟರು. ಅನೇಕ ಸಲ ದೀರ್ಘವಾಗಿ ಇಬ್ಬರೂ ಚರ್ಚಿಸಿ ಮನಸ್ಸಿಗೆ ಒಪ್ಪಿದ ನಂತರವೇ ಅನುಷ್ಠಾನಕ್ಕೆ ತರುತ್ತಿದ್ದರು. ಸರಳವಾದ ಸಂಯಮಿತ ಜೀವನದ ಅಧ್ವರ್ಯುಗಳಂತೆ ನಿಂತು ಕಾಲೆನ್‌ಬಾಕ್ ಮತ್ತು ಗಾಂಧೀಜಿ ಸತ್ಯಾಗ್ರಹಿಗಳಿಗೆ ಪ್ರಬಲವಾದ ನೈತಿಕ ಬಲವನ್ನು ತುಂಬಿಕೊಟ್ಟರು.

ಕಾಲೆನ್‌ಬಾಕ್ ಬ್ರಹ್ಮಚಾರಿಯಾಗಿಯೇ ಉಳಿದರು. ಪ್ರಾಣಿಮೂಲದ ಎಲ್ಲ ಆಹಾರವನ್ನೂ ತ್ಯಜಿಸಿಬಿಟ್ಟರು. ಹಾಲು ಕೂಡ ಪ್ರಾಣಿಜನ್ಯವಾದುದರಿಂದ ಅದರ ಸೇವನೆಯನ್ನು ನಿಲ್ಲಿಸಿಬಿಟ್ಟರು. ಹೊಸ ಜೀವನಸಿದ್ಧಾಂತ ಅವರ ಬಾಳನ್ನು ಆಕ್ರಮಿಸಿ ಸ್ಥಾಯಿಯಾಗಿ ನಿಂತಿತು. ಇನ್ನೂ ತರುಣರಾಗಿದ್ದ ಗಾಂಧೀ ಮತ್ತು ಕಾಲೆನ್‌ಬಾಕ್ ಅಹಿಂಸಾನಿಷ್ಠ ಸತ್ಯಾನ್ವೇಷಣೆಗೆ ಪಥ ನಿರ್ಮಿಸಿಕೊಂಡರು.

ಒಮ್ಮೆ ಕಾಲೆನ್‌ಬಾಕ್ ತಮ್ಮ ಬಂಧುಗಳನ್ನು ನೋಡಿಬರಲು ಜರ್ಮನಿಗೆ ಹೋದರು. ಅಣ್ಣ ತಮ್ಮಂದಿರ ಜೊತೆಗೆ ಕೆಲವು ಕಾಲ

ಕಳೆದರು. ಈ ಗಾಂಧೀ ಭಕ್ತನ ಚೈತನ್ಯಮಯ ಜೀವನೋತ್ಸಾಹ ಆ ಶ್ರೀಮಂತ ಜರ್ಮನ್ ಸಮಾಜದಲ್ಲಿ ಹೊಸ ಕುತೂಹಲದ ಅಲೆಯನ್ನೇ ಎಬ್ಬಿಸಿತು. ಆಲ್ಬರ್ಟ್‌ಷ್ವೈಟ್ಜರ್ ಆಫ್ರಿಕದಲ್ಲಿ ನಿಂತು ಸಂತನಂತೆ ಜೀವಿಸಿ ಸರ್ವಪ್ರಾಣಿಗಳಲ್ಲೂ ದಯೆಯೇ ಧರ್ಮದ ಮೂಲವೆಂದು ಸಾರಿದ ಕ್ರೈಸ್ತಪಾದ್ರಿ. ಅವರು ಜರ್ಮನಿಯವರು. ಕಾಲೆನ್‌ಬಾಕ್ ಆ ವರ್ಗಕ್ಕೆ ಸೇರಿದವರೆನಿಸಿಕೊಂಡರು.

ಗಾಂಧೀಜಿ ಮತ್ತು ಕಾಲೆನ್‌ಬಾಕ್ ಹಲವು ಸಾರಿ ತಮ್ಮ ತಮ್ಮ ವ್ಯಕ್ತಿಗತ ಕಾರ್ಯನಿಮಿತ್ತವಾಗಿ ಜೊಹಾನ್ಸ್‌ಬರ್ಗ್‌ಗೆ ಹೋಗಿ ಬರಬೇಕಾಗುತ್ತಿತ್ತು. ಟಾಲ್‌ಸ್ಟಾಯ್ ಫಾರಮ್ಮಿನಿಂದ ಬೆಳಿಗ್ಗೆ ಎರಡು ಗಂಟೆಗೆ ಎದ್ದು ಕಾಲ್ನಡಿಗೆಯಿಂದಲೇ ಇಪ್ಪತ್ತೊಂದು ಮೈಲಿ ನಡೆದುಬಿಡುತ್ತಿದ್ದರು. ಕೆಲಸ ಮುಗಿಸಿ ರಾತ್ರಿಯೇ ಹಿಂತಿರುಗುತ್ತಿದ್ದರು. ಈ ಚೈತನ್ಯ ತುಂಬಿಕೊಟ್ಟಿದ್ದು ಅವರ ವ್ರತನಿಷ್ಠೆ; ಸಂಕಲ್ಪಶಕ್ತಿ. ಇತರ ಸತ್ಯಾಗ್ರಹಿಗಳಿಗೆ ಅವರು ಮಾದರಿಯಾಗಿದ್ದರು.

ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಪ್ರಬಲವಾಗಿ ಬೆಳೆದು ಶಿಖರಕ್ಕೇರಿತ್ತು. ನ್ಯೂಕ್ಯಾಸೆಲ್ಲಿನ ಗಣಿಕಾರ್ಮಿಕರು ತಮ್ಮ ಮೇಲಿನ ಮೂರು ಪೌಂಡು ತಲೆಗಂದಾಯದ ವಿರುದ್ಧ ಪ್ರತಿಭಟಿಸಿದರು. ಗಾಂಧೀಜಿಯ ನೇತೃತ್ವದಲ್ಲಿ 1913ರ ನವೆಂಬರಿನಲ್ಲಿ ಮೂರು ಸಾವಿರ ಕಾರ್ಮಿಕರೂ ಮತ್ತೆರಡು ಸಾವಿರ ಕರಾರು ಕೂಲಿಗಳು ಟ್ರಾನ್ಸ್‌ವಾಲಿನ ಕಾನೂನನ್ನು ಮುರಿದು ಗಡಿ ಪ್ರವೇಶಿಸಲು ನ್ಯೂಕ್ಯಾಸೆಲ್ಲಿನಿಂದ ದೊಡ್ಡ ಮೆರವಣಿಗೆ ಹೊರಟರು. ಎಂಟು ದಿನದ ಅಖಂಡ ಪಾದಯಾತ್ರೆ ಬಿರುಸಿನಿಂದ ನಡೆಯಿತು. ವೋಲ್ಕ್‌ಹರ್‌ಸ್ಟ್ ದೊಡ್ಡ ಸ್ಥಳ. ಅದರ ಮೂಲಕ ಟ್ರಾನ್ಸ್‌ವಾಲ್ ಪ್ರವೇಶಕ್ಕೆ ಈ ಐದು ಸಾವಿರ ಸತ್ಯಾಗ್ರಹಿಗಳಿಗೆ ಎಂಟು ದಿನಗಳ ಅನ್ನವಸತಿ ಸ್ವಚ್ಛತೆ, ನೀರಿನ ಸೌಕರ್ಯಗಳನ್ನೊದಗಿಸುವ ಅಗಾಧ ಜವಾಬ್ದಾರಿ ಗಾಂಧೀಜಿಯ ಮೇಲೆ ಬಿತ್ತು. ಅವರಿಗೆ ಬಲಭುಜವಾಗಿ ನಿಂತರು. ಕಾಲೆನ್‌ಬಾಕ್. ಈ ಸತ್ಯಾಗ್ರಹಿಗಳ ವೆಚ್ಚಕ್ಕೆ ಭಾರತದಿಂದಲೂ ಹಣಸಹಾಯ ಬಂತು. ಜಮ್‌ಷೆಡ್‌ಜಿತಾತಾ 25 ಸಾವಿರ ರೂಪಾಯಿ

ಕಳುಹಿಸಿದ್ದರು. ಗಾಂಧೀಜಿ ತಮ್ಮೊಡನಾಡಿಗಳಿಗೆಲ್ಲ ಕನಿಷ್ಠ ವೆಚ್ಚದ ಸರಳ ಜೀವನದ ವ್ರತ ತೊಡಿಸಿದರು. ತಾವೂ ಅದರೊಡನೆ ಒಬ್ಬರಾದರು. ಕಾಲೆನ್‌ಬಾಕ್ ಅವರು ಟಾಲ್‌ಸ್ಟಾಯ್ ಫಾರಮ್ಮಿನ ವಸತಿಯನ್ನು ಅಗಾಧವಾಗಿ ಸಿದ್ಧಮಾಡಿ ಮೊದಲು ನಿರಾಶ್ರಿತ ಸಂಸಾರಗಳನ್ನೆಲ್ಲಾ ಕರೆದೊಯ್ದರು. ಮುವತ್ತಾರು ಮೈಲಿಯ ಈ ಬೃಹತ್ ಮೆರವಣಿಗೆಯುದ್ದಕ್ಕೂ ಮೂರು ನಾಲ್ಕು ದಿನ ಸಾವಿರಾರು ಜನಕ್ಕೆ ವ್ಯವಸ್ಥೆ ಮಾಡುವುದರಲ್ಲಿ ಪ್ರಮುಖವಾಗಿ ದುಡಿದರು ಕಾಲೆನ್‌ಬಾಕ್. ಪ್ರತಿಯೊಬ್ಬರಿಗೂ ದಿನಕ್ಕೆ ಒಂದೂವರೆ ಪೌಂಡ್ ರೊಟ್ಟಿ, ಒಂದು ಔನ್ಸ್ ಸಕ್ಕರೆ, ಕನಿಷ್ಠವಾಗಿ ದೊರೆಯುವಂತಾಯಿತು. ಇಷ್ಟರಲ್ಲೇ ಕಡ್ಡಾಯವಾಗಿ ನಿರ್ವಹಿಸಬೇಕು ಎಂದರು ಗಾಂಧೀಜಿ. ಆ ನಿರಕ್ಷರಸ್ತ ಕೂಲಿಜನ ಅತ್ಯಂತ ಆತ್ಮವಿಶ್ವಾಸದಿಂದ ಹೋರಾಟದಲ್ಲಿ ಧುಮುಕಿ ವಿಧೇಯರಾಗಿ ನಡೆದುಕೊಂಡ ಕಥೆಯನ್ನೂ ಅವರು ಮಾಡಿದ ತ್ಯಾಗ ಬಲಿದಾನಗಳ ವಿವರಗಳನ್ನೂ ಗಾಂಧೀಜಿ ತಮ್ಮ "ದಕ್ಷಿಣ ಆಫ್ರಿಕಾದ ಸತ್ಯಾಗ್ರಹ" ಎಂಬ ಗ್ರಂಥದಲ್ಲಿ ಹೃದಯಂಗಮವಾಗಿ ಬಣ್ಣಿಸಿದ್ದಾರೆ. ಕಾಲೆನ್‌ಬಾಕ್‌ರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ಕಾಲೆನ್‌ಬಾಕ್ ಟಾಲ್‌ಸ್ಟಾಯ್ ಫಾರಮ್ಮಿನಲ್ಲಿ ಪೂರ್ಣ ಜವಾಬ್ದಾರಿ ವಹಿಸಿ ಕಟ್ಟಡಗಳ ನಿರ್ಮಾಣ, ಅಡಿಗೆ ಮನೆ ನಿರ್ವಹಣೆ, ಸ್ವಚ್ಛತೆ ಎಲ್ಲದರಲ್ಲೂ ತಾವೆ ಪಾಲ್ಗೊಂಡು ದುಡಿದರು. ಆ ಸತ್ಯಾಗ್ರಹಗಳ ಪರೀಕ್ಷಾ ದಿನಗಳಲ್ಲಿ ಅನೇಕ ಬಾರಿ ಅನೇಕ ಕಾರಣಗಳಿಂದ ಗಾಂಧೀಭಾಯಿಯ ಬಗೆಗೆ ತಪ್ಪಭಿಪ್ರಾಯಗಳಿಂದ ಹಲ್ಲೆ ನಡೆಯುತ್ತಿದ್ದುದೂ ಉಂಟು. ಮೊದಮೊದಲು ಅಂಗರಕ್ಷಕನಂತೆ ಕಾಲೆನ್‌ಬಾಕ್ ತಮ್ಮ ಜೇಬಿನಲ್ಲಿ ಪಿಸ್ತೂಲು ಇಟ್ಟುಕೊಂಡು ಗಾಂಧೀಜಿಯ ಬೆಂಗಾವಲಿಗೆ ನಿಂತು ಸಭೆ ಸಮಾರಂಭಗಳಲ್ಲಿ ಎಡೆಬಿಡದೆ ಇರುತ್ತಿದ್ದರು. ಗಾಂಧೀಜಿಗೆ ಇದು ತಿಳಿದಾಗ ಗೆಳೆಯ ಕಾಲೆನ್‌ಬಾಕರನ್ನು ತರಾಟೆಗೆ ತೆಗೆದುಕೊಂಡರು. "ಸತ್ಯಾಗ್ರಹಿಯ

ಏಕೈಕ ರಕ್ಷಕ ಈಶ್ವರನೊಬ್ಬನೇ. ಶಸ್ತ್ರಗಳ ಆಶ್ರಯ ಪಡೆದೊಡನೆ ನಮ್ಮ ದೈವಭಕ್ತಿ ಕುಸಿದುಹೋಗುತ್ತದೆ. ಆ ಶಸ್ತ್ರವನ್ನು ತ್ಯಜಿಸಿಬಿಡು" ಎಂದರು. ಮುಂದೆ 1908ರಲ್ಲಿ ಒಂದು ಘಟ್ಟ ಬಂತು. ಒಂದು ಒಪ್ಪಂದಕ್ಕೆ ಸಹಿಹಾಕಿ ತಮ್ಮವರೆಲ್ಲರೂ ಸ್ವಇಚ್ಛೆಯಿಂದ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದಾಗ ಮೀರ್ ಆಲಮ್ ಎಂಬ ಪಠಾನ ಯುವಕನಿಗೆ ವಿಪರೀತ ಕೋಪ ಬಂದು ಗಾಂಧೀಜಿಯವರನ್ನು ಥಳಿಸಿಬಿಟ್ಟ. ಅವರ ಹಲ್ಲುಗಳು ಮುರಿದವು. ರಕ್ತಹರಿಯಿತು. ಶ್ರೀ ಮತ್ತು ಶ್ರೀಮತಿ ಡೋಕ್ ಎಂಬ ಸಹೃದಯ ಪಾದ್ರಿ ಮಿತ್ರರು ಮಧ್ಯೆ ಬಂದು ಗಾಂಧೀಜಿಯವರನ್ನು ತಮ್ಮ ಅತಿಥಿಗಳಾಗಿಟ್ಟುಕೊಂಡು ಶುಶ್ರೂಷೆ ಮಾಡಿದರು. ಕೊನೆಗೆ ಮೀರ್‌ಆಲಮ್ ತನ್ನ ತಪ್ಪಿಗೆ ಮರುಗಿ ಕ್ಷಮೆಬೇಡಿ ಗಾಂಧೀಜಿಯವವರ ಆಪ್ತನಾದ. ಈ ಘಟನೆಯ ನಂತರ ಕಾಲೆನ್‌ಬಾಕ್ ತಮ್ಮ ಗುರುವಿನೊಡನೆ ಸಹಮತರಾಗಿ ದೈವರಕ್ಷಣೆಯೇ ವಿಶ್ವಾಸಾರ್ಹ ರಕ್ಷಣೆ ಎಂದು ನಂಬಿ ನಡೆದರು. ತಮ್ಮ ಸ್ನೇಹಿತರಿಗೆ ಬರೆಯುತ್ತಾ "ಗಾಂಧಿ ಅವರ ರಕ್ಷಣೆಯನ್ನು ಅವರೇ ಸಮರ್ಥವಾಗಿ ಮಾಡಿಕೊಳ್ಳಬಲ್ಲರು. ಈಶ್ವರನ ಕೃಪೆಯ ಮೇಲೆ ಅವರಿಗೆ ಪೂರ್ಣ ಭರವಸೆ ಇದೆ. ಅವರ ಬಗ್ಗೆ ಚಿಂತಿಸಬೇಕಾಗಿಲ್ಲ" ಎಂದರು ಕಾಲೆನ್‌ಬಾಕ್. ತಾವೂ ಈ ಶ್ರದ್ಧೆಯನ್ನು ರೂಢಿಸಿಕೊಂಡು ಬಾಳಿದರು.

ವರ್ಣದ್ವೇಷದಿಂದ ಪ್ರೇರಿತರಾಗಿದ್ದ ಯೂರೋಪಿಯನ್ನರು ದಕ್ಷಿಣ ಆಫ್ರಿಕದಲ್ಲಿ ಕರಿ ಜನಾಂಗಗಳನ್ನು ಹಲವು ರೀತಿಯಲ್ಲಿ ಅವಮಾನಗೊಳಿಸುತ್ತಿದ್ದರು. ಆದರೂ ಶೋಷಿತ ಜನತೆಯ ಪಕ್ಷ ಹಿಡಿದು ಪೂರ್ಣ ಸಮಯವನ್ನೂ ತಮ್ಮೆಲ್ಲ ಶಕ್ತಿ ಸಾಮರ್ಥ್ಯಗಳನ್ನೂ ಅವರ ಸೇವೆಗೆ ಮೀಸಲಿಟ್ಟ ಕಾಲೆನ್‌ಬಾಕ್ ಒಬ್ಬ ಅಪೂರ್ವ ಸಾಧಕನೆನಿಸಿದರು. ಬಿಳಿ ಜನರ ಸಮಾಜದಲ್ಲೂ ಇವರ ಪ್ರಭಾವದಿಂದ ಪರಿವರ್ತನೆ ಆಗುತ್ತಿತ್ತು.

1914ರಲ್ಲಿ ಗಾಂಧೀಜಿ ಮತ್ತು ಕಸ್ತೂರಿ ಬಾ ದಕ್ಷಿಣ ಆಫ್ರಿಕಾದಿಂದ ಲಂಡನ್ನಿಗೆ ಹೊರಟರು. ಬಂಧು ಕಾಲೆನ್‌ಬಾಕರೂ ಜತೆಯಲ್ಲಿ

ಹೋದರು. ಸತ್ಯಾಗ್ರಹ ಯಶಸ್ವಿಯಾಗಿ ಮುಗಿದು ಜನರಲ್ ಸ್ಮಟ್ಸ್ ಗಾಂಧೀಜಿಯೊಡನೆ ಸಮರ್ಪಕ ಒಪ್ಪಂದಕ್ಕೆ ಬಂದಿದ್ದರು. ಭಾರತೀಯರು ಆತ್ಮಗೌರವದಿಂದ ನಾಗರಿಕ ಹಕ್ಕುಗಳಿಗೆ ಬಾಧ್ಯರಾಗಿ ವ್ಯವಹರಿಸುವಂತಾಯಿತು.

ಹಡಗಿನಲ್ಲಿ ಲಂಡನ್‌ಗೆ ಪ್ರಮಾಣ ಮಾಡುತ್ತಾ ಹಲವು ದಿನಗಳನ್ನು ಕಾಲೆನ್‌ಬಾಕ್ ಮತ್ತು ಗಾಂಧೀಜಿ ತಾತ್ವಿಕ ಜಿಜ್ಞಾಸೆಗಳಲ್ಲಿ ಕಳೆದರು. ಹಡಗಿನ ಪ್ರಯಾಣ ಯಥಾ ಸಾವಕಾಶವಾಗಿ ಸಾಗುತ್ತಿತ್ತು. ತಮ್ಮಲ್ಲಿದ್ದ ವಸ್ತುಗಳಲ್ಲಿ ಯಾವುವು ಅವಶ್ಯಕವಾದವು ಯಾವುದಲ್ಲ ಎಂಬ ಚರ್ಚೆ ಮಾಡಿದರು. ಸರಳವಾದ ಅಹಿಂಸಾಭೂಯಿಷ್ಟವಾದ ಸಂಯಮದ ಬಾಳಿಗೆ ಯಾವುದು ಪೋಷಕ, ಯಾವುದು ಬಾಧಕ ಎಂದು ವಿಶ್ಲೇಷಿಸಿದರು. ಕಾಲೆನ್‌ಬಾಕರಲ್ಲಿ ಒಂದು ಬೆಲೆ ಬಾಳುವ ದುರ್ಬೀನು ಇತ್ತು. ಸಾಗರದ ಮೇಲೆ ಹೋಗುವಾಗ ದೂರದ ದೃಶ್ಯಗಳನ್ನು ನೋಡುತ್ತಾ ವಿಹರಿಸಲು ಬಳಸುತ್ತಿದ್ದರು. ಈ ಮನರಂಜನೆಯ ಆಟಿಕೆಗಾಗಿ ಇಷ್ಟು ಅಗಾಧ ಬೆಲೆ ಕೊಡುವುದು ಸಾಧುವೇ? ಎಂದು ಗಾಂಧೀಜಿ ಪ್ರಶ್ನಿಸಿದರು. ಭೋಗವಸ್ತುಗಳ ಮೇಲೆ ಒಮ್ಮೆ ಒಲವು ಬಂತೆಂದರೆ ಅವುಗಳ ಸಂಖ್ಯೆ ಬೆಳೆಯುತ್ತಲೇ ಹೋಗುವುದು ಎನಿಸಿತು. ಕಾಲೆನ್‌ಬಾಕ್‌ರಿಗೆ. ಆ ಕೂಡಲೇ ನಿರ್ಣಯಿಸಿ ಕೈಲಿದ್ದ ದುರ್ಬೀನನ್ನು ಸಮುದ್ರ ಮಧ್ಯಕ್ಕೆ ಎಸೆದುಬಿಟ್ಟರಂತೆ. ಈಗ ಮನಸ್ಸು ನಿರ್ಮಲವಾಯಿತು ಎಂದು ಗಹಗಹಿಸಿ ನಕ್ಕರಂತೆ. ಅಲ್ಲಿಂದಾಚೆ ಈ ಅಸಾಧಾರಣ ಸಂಯಮಜೀವಿ ಒಂದೊಂದು ವಸ್ತುವನ್ನು ಕೊಳ್ಳುವಾಗಲೂ ಮೊದಲು ಇದು ನನ್ನ ಬಾಳ ತತ್ವಕ್ಕೆ ಅನುಗುಣವೇ ಎಂದು ಪ್ರಶ್ನಿಸಿಕೊಳ್ಳುತ್ತಿದ್ದರು.

ಲಂಡನ್ನಿನಲ್ಲಿ ಗಾಂಧೀಜಿ ಕಸ್ತೂರಿಬಾ ಮತ್ತು ಕಾಲೆನ್‌ಬಾಕ್ ಕೆಲವು ದಿನ ಇದ್ದು ಭಾರತಕ್ಕೆ ಬರುವುದೆಂದು ತೀರ್ಮಾನಿಸಿದ್ದರು. ಆಗ ತಾನೇ ಜರ್ಮನಿಯೊಡನೆ ಮೊದಲ ಮಹಾಯುದ್ಧ ಪ್ರಾರಂಭವಾಗಿತ್ತು. ಆ ಕಾರಣ ಜರ್ಮನಿಯವರಾದ ಕಾಲೆನ್‌ಬಾಕ್‌ರನ್ನು ಬ್ರಿಟಿಷ್ ಸರ್ಕಾರ

ತನ್ನ ಶತೃರಾಷ್ಟ್ರದ ಪ್ರಜೆ ಎಂದು ಅವರ ಪ್ರಯಾಣವನ್ನು ನಿಷೇಧಿಸಿತು. ಕಾಲೆನ್‌ಬಾಕ್ ಜೊಹಾನ್ಸ್‌ಬರ್ಗ್‌ಗೆ ಹಿಂತಿರುಗಿದರು. ಪುನಃ ತಮ್ಮ ವಾಸ್ತುಶಿಲ್ಪ ವೃತ್ತಿಯನ್ನವಲಂಬಿಸಿ ಅಲ್ಲೇ ನೆಲಸಿದರು. ಸೋದರನ ಮಕ್ಕಳೊಡನೆ ತಮ್ಮ ಜೀವನ ಸಾಗಿಸಿದರು. ಕೊನೆಯವರೆವಿಗೂ ಫೀನಿಕ್ಸ್ ಆಶ್ರಮದ ಪೋಷಕರಾಗಿದ್ದರು. ಅಲ್ಲಿ ನೆಲೆಸಿದ ಮಣಿಲಾಲ್ ಗಾಂಧಿಯವರ ಕುಟುಂಬಕ್ಕೆ ಪ್ರೀತಿಯ ಚಿಕ್ಕಪ್ಪನಂತೆ ನಡೆದುಕೊಂಡರು.

1936ರಲ್ಲಿ ಗಾಂಧೀಜಿ ಆಗತಾನೇ ಸೇವಾಗ್ರಾಮದ ಆಶ್ರಮವನ್ನು ನಿರ್ಮಿಸಿಕೊಂಡು ವಾಸಕ್ಕೆ ಬಂದಿದ್ದರು. ಕಾಲೆನ್‌ಬಾಕ್ ಆಗೊಮ್ಮೆ ಭಾರತಕ್ಕೆ ಬಂದು ತಮ್ಮ ಬಹುದಿನದ ಆಕಾಂಕ್ಷೆಯುನ್ನು ಪೂರೈಸಿಕೊಂಡರು. ಒಂದು ತಿಂಗಳ ಕಾಲ ತಂಗಿದ್ದರು. ಅವರ ಆರೋಗ್ಯ ಆ ವೇಳೆಗೆ ತುಂಬ ಕೆಟ್ಟಿತ್ತು. ಗಾಂಧೀಜಿಯೇ ಪರಮ ಪ್ರೇಮದಿಂದ ಶುಶ್ರೂಷೆ ಮಾಡಿದರು. ಮನಸ್ಸು ದೇಹಗಳೆರಡೂ ಸ್ವಸ್ಥವಾದವು. ಗಾಂಧೀ ಪರಿವಾರದವರಿಗೆಲ್ಲಾ ಕಾಲೆನ್‌ಬಾಕರ ಸಹವಾಸ ಅಮೂಲ್ಯವೆನಿಸಿತು. ಗಾಂಧೀಜಿಯ ಮೂರನೆಯ ಮಗ ರಾಮದಾಸ್ ತನ್ನ ಬಾಲ್ಯದ ಹಿರಿಯ ಬಂಧುವಾಗಿದ್ದ ಕಾಲೆನ್‌ಬಾಕ್‌ರ ದರ್ಶನದಿಂದ ಪುಳಕಿತರಾದರು. ಬೊಂಬಾಯಿನಲ್ಲಿದ್ದ ರಾಮದಾಸರ ಕುಟುಂಬದೊಡನೆ ಒಂದು ದಿನ ಇದ್ದು ಪುಟ್ಟ ಮಕ್ಕಳನ್ನು ಪ್ರೀತಿಯಿಂದ ಹರಸಿ ದಕ್ಷಿಣ ಆಫ್ರಿಕಕ್ಕೆ ಹಿಂತಿರುಗಿದರು ಕಾಲೆನ್‌ಬಾಕ್.

ರಾಮದಾಸರ ಪುತ್ರಿ ಸುಮಿತ್ರ ಕುಲಕರ್ಣಿ ಇತ್ತೀಚೆಗೆ ಅವರ ನೆನಪನ್ನು ಮಾಡಿಕೊಂಡು ದೀರ್ಘ ಲೇಖನವೊಂದನ್ನು ಪ್ರಕಟಿಸಿದ್ದಾರೆ.

1939ರಲ್ಲಿ ದ್ವಿತೀಯ ಮಹಾಯುದ್ಧದ ಕಾರಣವಾಗಿ ದಕ್ಷಿಣ ಆಫ್ರಿಕ ಸರ್ಕಾರ ಕಾಲೆನ್‌ಬಾಕರನ್ನು ಮತ್ತೆ ಬಂಧಿಸಿಟ್ಟಿತ್ತು. ಕಾಲೆನ್‌ಬಾಕ್ ಯಹೂದಿ ಆ ಸಮಯಕ್ಕೆ ಹಿಟ್ಲರ್‌ನ ಜರ್ಮನಿಯಲ್ಲಿ ಯಹೂದಿಯರು ದ್ವೇಷಾಸೂಯೆಗಳಿಗೆ ಗುರಿಯಾಗಿ ದೇಶಭ್ರಷ್ಟರಾಗಬೇಕಾಯಿತು. ವಿಶ್ವ ವಿಖ್ಯಾತರಾದ ಐನ್‌ಸ್ಟೀನ್ ಫ್ರಾಯೆಡ್ ಮುಂತಾದ ನೂರಾರು

ಮೇಧಾವಿಗಳು ಸ್ವದೇಶ ತ್ಯಜಿಸಬೇಕಾಯಿತು. ಕಾಲೆನ್‌ಬಾಕ್‌ರ ಬಂಧುಗಳು ಕೆಲವರು ಜೊಹಾನ್ಸ್‌ಬರ್ಗ್‌ಗೆ ಬಂದಿದ್ದರು. ನಿರಪರಾಧಿಗಳಾಗಿ ಅತ್ಯಂತ ಶಾಂತಿಯುತ ಪ್ರಜೆಯಾಗಿ, ಗಾಂಧೀಜಿಯ ಅನುಯಾಯಿಯಾಗಿದ್ದ ಕಾಲೆನ್‌ಬಾಕ್‌ಗೆ ಈ ಘಟನೆಗಳು ತೀವ್ರ ಆಘಾತಮಾಡಿದವು. ಜೊಹಾನ್ಸ್‌ಬರ್ಗಿನಲ್ಲಿ ತಮ್ಮ ತಾಯಿ ಮತ್ತು ಸೋದರ ಸೋದರಿಯರೊಡನೆ ಕೊನೆಯ ದಿನದವರೆಗೆ ನೆಲಸಿದ್ದರು. ಕಾಲೆನ್‌ಬಾಕ್ 1938ರಲ್ಲಿ ಅವರು ನಿಧನರಾದಾಗ ಗಾಂಧೀಜಿ ತಮ್ಮ ಸೋದರನೊಬ್ಬನನ್ನು ಕಳೆದುಕೊಂಡಾಯಿತು. ರಾಮದಾಸರಂತೂ ತಮ್ಮ ಹಿರಿಯ ಬಂಧು ಹೋದರೆಂದು ಮರುಗಿದರು.

3. ಎಸ್ತರ್ ಫಿಯರಿಂಗ್ (ಡೆನ್‌ಮಾರ್ಕ್)

"ಇದು ನನ್ನ ಸಲಹೆ, ನಿನ್ನ ಆಂತರ್ಯದ ಶಾಂತಿ ಆನಂದಗಳನ್ನು ಯಾವ ಕಾರಣಕ್ಕೂ ಕಳೆದುಕೊಳ್ಳಬಾರದು. ಆಶ್ರಮ ಜೀವನದಿಂದ ಹೆಚ್ಚು ಆನಂದ ಹೆಚ್ಚು ಸುಖ ಮತ್ತು ಸೂಕ್ಷ್ಮವಾದ ಸತ್ಯದರ್ಶನ ದೊರಕುವಂತೆ ನಿನ್ನ ಜೀವನ ಶೈಲಿಯನ್ನು ರೂಪಿಸಿಕೋ. ಆಶ್ರಮದಲ್ಲಿದ್ದುದರ ಕಾರಣದಿಂದಲೇ ನೀನು ಇನ್ನೂ ಉತ್ತಮ ಕ್ರೈಸ್ತಳಾಗಬೇಕೆಂದೇ ನನ್ನ ಆಶ್ರಯ... ನೀನು ಸದಾ ನನ್ನ ನೆನಪಿನಲ್ಲಿದ್ದೀಯೆ. ನಿನ್ನ ಮನಸ್ಸು ದೇಹ ಆತ್ಮಗಳು ಹೆಚ್ಚು ಹೆಚ್ಚು ಆರೋಗ್ಯ ಪಡೆದು ಭಗವಂತನ ಸೇವೆಗೆ ಉತ್ತಮ ಉಪಕರಣವಾಗುವಂತೆ ದಿನ ದಿನವೂ ನನ್ನ ಪ್ರಾರ್ಥನೆ ಸಲ್ಲಿಸುತ್ತಿರುತ್ತೇನೆ."*

1918ರಲ್ಲಿ ಸಬರಮತಿ ಆಶ್ರಮಕ್ಕೆ ಬಂದು ಸೇರಿದ ಡೆನ್ಮಾರ್ಕಿನ ಕ್ರೈಸ್ತ ಮತ ಸೇವಾಕರ್ತೆ ಎಸ್ತರ್ ಫೀಯರಿಂಗ್‌ಗೆ ಗಾಂಧೀಜಿ ಬರೆದ ಪತ್ರ ಇದು. ದಕ್ಷಿಣ ಭಾರತದಲ್ಲಿ ಡೇನಿಷ್ ಮಿಷಿನರಿ ಸೊಸೈಟಿಗೆ ಸೇರಿದ ತರುಣಿ ಈಕೆ. ಅತ್ಯಂತ ಸಣ್ಣ ವಯಸ್ಸಿನಲ್ಲೇ ಸೇವಾದೀಕ್ಷೆ ಅಂಗೀಕರಿಸಿ ಭಾರತದ ಸೇವೆಯಲ್ಲಿ ತೊಡಗಿದವಳು. 1916ರಲ್ಲಿ ಮದರಾಸಿಗೆ ಬಂದು ಆಲಿಸ್ ಎಂ. ಬಾರ್ನ್‌ಸ್ ಎಂಬ ಹಿರಿಯ ಕಾರ್ಯಕರ್ತೆಯೊಂದಿಗೆ ತಮಿಳು ಭಾಷೆ ಕಲಿತಳು. ಉನ್ನತ ವ್ಯಾಸಂಗ ಮಾಡಿದ ಈ ಶಿಕ್ಷಣತಜ್ಞೆ

---

* ಮೈಡಿಯರ್ ಚೈಲ್ಡ್ – ಎಸ್ತರ್ ಫಿಯರಿಂಗ್ : ಪುಟ – 40 (ನವಜೀವನ ಪ್ರಕಾಶನ)

ಭಾರತದಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಶಾಲೆ ಪ್ರಾರಂಭಿಸಿ ಡೆಸಲು ಸಂಕಲ್ಪ ಮಾಡಿದಳು. ಈ ಸಂದರ್ಭದಲ್ಲಿ ಎಸ್ತರ್ ತನ್ನ ರಿಯ ಸೇವಾನಿರತ ಗೆಳತಿ ಮಿಸ್ ಆನ್ ಮೇರಿ ಪೀಟರ್‌ಸನ್ ಂಬುವಳೊಡನೆ ದೇಶದ ಸುಪ್ರಸಿದ್ಧ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ ಅನುಭವ ಪಡೆಯಲು ಪ್ರವಾಸ ಮಾಡುತ್ತಿದ್ದಳು. ಡೇನಿಷ್ ಮಿಷನ್ ಆಕೆಗೆ ಸಹಾಯಮಾಡಿತು. ಎಲ್ಲೆಲ್ಲಿ ಈ ದೇಶದ ಪರಿಸ್ಥಿತಿಗನುಗುಣವಾದ ಶಿಕ್ಷಣ ಪ್ರಯೋಗಗಳು ನಡೆಯುತ್ತಿದ್ದವೋ ಆ ಕೇಂದ್ರಗಳಿಗೆ ಹೋದಳು. ಸುಪ್ರಸಿದ್ಧ ಕ್ರಿಶ್ಚಿಯನ್ ಸಂಸ್ಥೆಗಳಿಗೂ ಇತರ ರಾಷ್ಟ್ರೀಯ ಶಿಕ್ಷಣ ಪ್ರಯೋಗಶಾಲೆಗಳಿಗೂ ಭೇಟಿ ನೀಡಿದಳು. ಎಲ್ಲ ಕಡೆಗಳಲ್ಲೂ ಎಸ್ತರ್‌ಗೆ ಯಾವುದೋ ಅವಾಸ್ತವಿಕತೆಯ ವಿದೇಶೀ ಅನುಕರಣೆಯೇ ಅನುಭವವಾಯಿತು. ಕ್ರೈಸ್ತ ಸಂಸ್ಥೆಗಳಂತೂ ಭಾರತಕ್ಕೆ ಪಾಶ್ಚಾತ್ಯ ನಾಗರಿಕತೆಯ ಶ್ರೇಷ್ಠತೆಯನ್ನು ಬೋಧಿಸುವುದೇ ಅತ್ಯುತ್ತಮವೆಂದು ಭಾವಿಸಿದ್ದವು. ಭಾರತೀಯ ಅಮರ ಸಾಂಸ್ಕೃತಿಕ ಅಂತರ್ಜಲದ ಆಸರೆಯ ಮೇಲೆ ಇಲ್ಲಿನ ಜನಕೋಟಿಯ ಅಭ್ಯುದಯ ಸಾಧಿಸುವ ಪ್ರಯೋಗಗಳು ಅಪರೂಪವೆನಿಸುತ್ತಿದ್ದವು. ಠಾಕೂರರ ಶಾಂತಿನಿಕೇತನ, ಶ್ರದ್ಧಾನಂದರ ಕಾಂಗ್ರಿ ಗುರುಕುಲ, ಆನಿಬೆಸೆಂಟರ ಥಿಯಾಸಫಿ ಸಂಸ್ಥೆಗಳು ಆ ಕಾಲಕ್ಕೆ ಪ್ರಸಿದ್ಧ ರಾಷ್ಟ್ರೀಯ ಶಿಕ್ಷಣ ಕೇಂದ್ರಗಳೆನಿಸಿದ್ದವು.

ಅದೇ ಸಮಯಕ್ಕೆ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಹಿಂತಿರುಗಿ ಅಹಮದಾಬಾದಿನ ಸಬರಮತಿ ತೀರದ ಸತ್ಯಾಗ್ರಹ ಆಶ್ರಮ ಸ್ಥಾಪಿಸಿ ವಿನೂತನ ಶಿಕ್ಷಣ ಪ್ರಯೋಗಗಳನ್ನು ಪ್ರಾರಂಭಿಸಿದ್ದರು. ಉತ್ತಮ ಜೀವಿತೋದ್ದೇಶಗಳಾದ ಸೇವೆ, ತ್ಯಾಗ, ಸರಳತೆ, ಆತ್ಮವಿಕಾಸ ಮತ್ತು ಸ್ವಾತಂತ್ರ್ಯಾಕಾಂಕ್ಷೆಗಳನ್ನು ಪೋಷಿಸಿ ಬೆಳಸಲು ಹವಣಿಸಿದ್ದರು. ಎಲ್ಲದರಲ್ಲೂ ಒಂದು ಸ್ವದೇಶೀ ಸಂಸ್ಕಾರದ ಮೂಲವನ್ನೇ ಆಧರಿಸಿ ಜೀವನದ ಶಿಕ್ಷಣ ಪ್ರಯೋಗಗಳು ಅಲ್ಲಿ ನಡೆಯುತ್ತಿದ್ದವು. ಹೆಚ್ಚು ಪ್ರಖರವಾಗಿ ಸತ್ಯ ಮತ್ತು ಅಹಿಂಸೆಯ ಛಾಪು ಎದ್ದು ಕಾಣಿಸುತ್ತಿತ್ತು. ಎಸ್ತರ್ ಸಹಜವಾಗಿಯೇ ಇದರಿಂದ ಆಕರ್ಷಿತಳಾದಳು. ತನ್ನ

ಆರಾಧ್ಯದೇವತೆ ಏಸುವಿನ ದಿವ್ಯಾದರ್ಶಗಳು ಇಲ್ಲಿ ಪುನಾರಾವೃತ್ತಿಯಾಗಿ ಸಾಮೂಹಿಕ ಜೀವನಕ್ಕೆ ಅನ್ವಯಿಸುವ ಕಲೆ ಜೀವಂತವಾದಂತೆ ಕಂಡಿತು. 1917ರಲ್ಲಿ ಎಸ್ತರ್ ಮತ್ತು ಮಿಸ್ ಪೀಟರ್‌ಸನ್ ಕೆಲವು ದಿನ ಸಬರಮತಿ ಆಶ್ರಮದಲ್ಲಿ ತಂಗಿದ್ದರು. ಆ ಕಾಲಕ್ಕೆ ಬ್ರಿಟಿಷ್ ಸರ್ಕಾರ ಗಾಂಧೀಜಿಯ ಚಟುವಟಿಕೆಗಳನ್ನು ಸಂಶಯದೃಷ್ಟಿಯಿಂದಲೇ ನೋಡುತ್ತಿತ್ತು. ಅದರಲ್ಲೂ ಇತರ ಪಾಶ್ಚಾತ್ಯ ದೇಶಗಳ ವಿಚಾರವಂತರು ಗಾಂಧೀಜಿಯೊಡನೆ ಸ್ನೇಹ ಬೆಳಸುವುದನ್ನು ಸಹಿಸುತ್ತಿರಲಿಲ್ಲ. ಡೆನ್ಮಾರ್ಕಿನ ಮಿಷನರಿ ಸಂಸ್ಥೆಯೂ ಈ ಬಗ್ಗೆ ನಿರಾಳವಾಗಿರಲಿಲ್ಲ. ಆದರೂ ಎಸ್ತರ್ ಗಾಂಧೀಜೀವನ ಪ್ರಭಾವ ಸೌರಭಕ್ಕೆ ಮನಸೋತು ಆಶ್ರಮದ ಬಳಗಕ್ಕೆ ಸೇರಿ ಹೋದಳು.

ಎಸ್ತರ್ ಮತ್ತು ಪಿಟರ್‌ಸನ್ ತಮ್ಮ ಸಬರಮತಿ ಭೇಟಿ ಮುಗಿಸಿ ಬೊಂಬಾಯಿಗೆ ಬಂದು ಗಾಂಧೀಜಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿ ಪತ್ರ ಬರೆದರು. ಕೂಡಲೇ ಉತ್ತರಿಸಿದ ಬಾಪುವಿನ ಔದಾರ್ಯದಿಂದ ಎಸ್ತರ್ ಪ್ರಭಾವಿತಳಾದಳು. ಅವರು ಹೀಗೆ ಬರೆದಿದ್ದರು:-

"ನೀನು ಬರೆದ ಪತ್ರ ನೋಡಿ ಹರ್ಷವಾಯಿತು. ನಿಮ್ಮಿಬ್ಬರ ಸಹವಾಸ ತುಂಬ ಹಸಿರಾಗಿದೆ. ನೀವು ಕೇವಲ ಅತಿಥಿಗಳೆನಿಸಲೇ ಇಲ್ಲ. ಈ ಕುಟುಂಬದ ಬಂಧುಗಳಾಗಿಬಿಟ್ಟಿದ್ದೀರಿ. ಪಿಟರ್‌ಸನ್ನಳ ದೇಹಾಲಸ್ಯ ಸುಧಾರಿಸಿದೆಯೇ? ಪತ್ರಗಳನ್ನು ನಿಮ್ಮ ಕಡೆಗೆ ರವಾನಿಸಿದ್ದೇನೆ."

ನಿಮ್ಮ ವಿಶ್ವಾಸಿ, ಎಂ. ಕೆ. ಗಾಂಧಿ*

ತಾವು ಪ್ರಾರಂಭಿಸಬೇಕೆಂದಿದ್ದ ಶಾಲೆ ಸಬರಮತಿಯ ಪ್ರಯೋಗದಂತಿರಬೇಕೆಂದು ಎಸ್ತರ್ ಮತ್ತು ಪೀಟರ್‌ಸನ್ ನಿಶ್ಚಯಿಸಿದರು. ಸರಳ ಜೀವನ ಮತ್ತು ಉದಾತ್ತ ಚಿಂತನೆ ಅವರ ಧ್ಯೇಯವಾಕ್ಯವೆನಿಸಿತು. ಸಾಂಪ್ರದಾಯಿಕ ಮಿಷನರಿ ಶಾಲೆಗಳು ಯಾಂತ್ರಿಕತೆ ಮತ್ತು ಅರಾಷ್ಟ್ರೀಯ ಧೋರಣೆಗಳಿಂದ ನಡೆಯುತ್ತಿದ್ದವು. ಸರ್ಕಾರೀ ಮತ್ತಿತರ ಮಿಷನರಿ ಶಾಲೆಗಳಿಗೆ ಪರ್ಯಾಯವಾಗಿ ಜನತೆಯ ಮಧ್ಯೆ ನಿಂತು ಶ್ರಮ, ನಿಷ್ಠೆ,

* ಮೈಡಿಯರ್ ಚೈಲ್ಡ್ : ಪುಟ – 30

ಆತ್ಮಗೌರವ, ಸರ್ವರೂ ಸಮಾನವಾಗಿ ಪಾಲ್ಗೊಳ್ಳುವ ಸಾಮೂಹಿಕ ಜೀವನಗಳೇ ಪ್ರಧಾನವಾಗಿರುವ ಶಾಲೆ ನಡೆಸಲು ಸಂಕಲ್ಪಿಸಿದರು. ಗಾಂಧೀಜಿಯೊಡನೆ ಅವ್ಯಾಹತವಾಗಿ ಪತ್ರವ್ಯವಹಾರ ನಡೆಸುತ್ತಾ ಅವರ ಪ್ರೀತಿ ಪಾತ್ರಳಾದ ಪುತ್ರಿಯಂತೆ ಬಾಂಧವ್ಯ ಬೆಳೆಸಿದಳು ಎಸ್ತರ್. ಪ್ರತಿಪತ್ರವನ್ನೂ ಗಾಂಧೀಜಿ 'ನನ್ನ ಪ್ರೀತಿಯ ಕುವರಿ' (ಮೈ ಡಿಯರ್ ಚೈಲ್ಡ್) ಎಂದೇ ಪ್ರಾರಂಭಿಸುತ್ತಿದ್ದರು. ಎಷ್ಟೇ ಕೆಲಸವಿದ್ದರೂ ಬಿಡುವು ಮಾಡಿಕೊಂಡು ಎಸ್ತರ್‌ನ ಜೀವನದ ಸಮಸ್ಯೆಗಳನ್ನೆಲ್ಲ ತಾಳ್ಮೆಯಿಂದ ಚರ್ಚಿಸಿ ಮಾರ್ಗದರ್ಶನ ಮಾಡುತ್ತಲೇ ಬಂದರು. 1940ರವರೆವಿಗೂ ಈ ತಂದೆ ಮಗಳ ಪ್ರೀತಿಪೂರ್ವಕ ಬಾಂಧವ್ಯ ಬೆಳೆದುಬಂತು. ಈ ಪತ್ರಗಳ ಗುಚ್ಛವನ್ನು ಎಸ್ತರ್ ಪ್ರಕಟಿಸಿದ್ದಾಳೆ.

ಮೊದಲನೇ ಮಹಾಯುದ್ಧದ ಕಾಲಕ್ಕೆ ಯೂರೋಪಿನ ಇತರ ಎಲ್ಲ ರಾಷ್ಟ್ರಗಳ ರಾಷ್ಟ್ರೀಯರನ್ನೂ ಬ್ರಿಟಿಷರು ಸಂಶಯದಿಂದ ನೋಡುತ್ತಿದ್ದರು. ಯಾರೊಬ್ಬರು ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ನಾಯಕರೊಂದಿಗೆ ಸೇರಿದರೂ ಅವರನ್ನು ಅವರ ದೇಶಕ್ಕೆ ಹಿಂತಿರುಗಿ ಕಳುಹಿಸುತ್ತಿದ್ದರು. ಹೀಗಾಗಿ ಎಸ್ತರ್ ಆಶ್ರಮದಲ್ಲಿ ಬಹಳ ಕಾಲ ತಂಗಿರಲು ಸಾಧ್ಯವಾಗಿರಲಿಲ್ಲ. ಆಕೆಯು ಕಾರಣವಾದ ಇಡೀ ಡೇನಿಷ್ ಮಿಷನ್ ಸಂಸ್ಥೆಯೇ ಮುಚ್ಚಿಬಿಡಬೇಕಾಗಿ ಬರುತ್ತಿತ್ತು. ಗಾಂಧೀಜಿಯೇ ಆಕೆಗೆ ಸಲಹೆಯಿತ್ತು ಸಂಯಮದ ದಾರಿ ತೋರಿ ತನ್ನ ಸಂಸ್ಥೆಗೆ ಕೇಡು ತರದಂತೆ ನಡೆದುಕೊಳ್ಳಲು ಬೋಧಿಸಿದರು. ಆತ್ಮಸಾಕ್ಷಿಗೆ ಅಪಾಯ ಬರುವ ಎಲ್ಲೆಯವರೆಗೂ ಆತುರದ ನಿರ್ಧಾರಕ್ಕೆ ಬರಬೇಡ ಎಂದು ಪತ್ರ ಬರೆದರು. ಶುದ್ಧ ಅಂತರಾತ್ಮನ ಪ್ರೇರಣೆಯನ್ನಾವಾಗಲೂ ಅನುಸರಿಸಿ ಬಾಳು ಎಂದರು.

1917ನೇ ಮೇ ನಲ್ಲಿ ಬರೆದ ಪತ್ರದಲ್ಲಿ–

"ನನಗೆ ಬರೆಯುವುದರಲ್ಲಿ ಯಾವ ಸಂಕೋಚವನ್ನೂ ಇಟ್ಟುಕೊಳ್ಳಬೇಡ. ನಿನ್ನ ಸಂಸ್ಥೆಯಲ್ಲಿನ ಜವಾಬ್ದಾರಿಗಳನ್ನು ಒಪ್ಪಂದದ ಪ್ರಕಾರ ಕರ್ತವ್ಯನಿಷ್ಠಳಾಗಿ ನಿರ್ವಹಿಸುವುದು ಮೊದಲ ಹೊಣೆಗಾರಿಕೆ.

ಸಂಸ್ಥೆಯವರ ಅಪ್ಪಣೆ ಪಡೆದ ಮೇಲೆ ಆಶ್ರಮಕ್ಕೆ ಬರತಕ್ಕದ್ದು. ಅದೂ ಕೂಡ ಇಲ್ಲಿಗೆ ಬರುವುದರಿಂದ ಮಾನವ ಕುಲಕ್ಕೆ ಹೆಚ್ಚು ಸಮರ್ಪಕ ಸೇವೆ ಸಲ್ಲಿಸಬಹುದೆಂಬುದನ್ನು ಖಚಿತವಾಗಿ ಮನದಟ್ಟುಮಾಡಿಕೊಳ್ಳಬೇಕು. ಆ ಸಮಯ ಬಂದಾಗ ನಿನಗೆ ಆಶ್ರಮದಲ್ಲಿ ಹೃತ್ಪೂರ್ವಕ ಸ್ವಾಗತವುಂಟು. ಅಲ್ಲಿಯವರೆಗೆ ಯಾವಾಗ ಬೇಕಾದರೂ ಬಂದು ಹೋಗಲು ಏನೂ ಅಡ್ಡಿಯಿಲ್ಲ......

ಆಶ್ರಮದಲ್ಲಿ ನಾವು ಹೊಸ ಶಿಕ್ಷಣ ಪ್ರಯೋಗವನ್ನು ಪ್ರಯತ್ನಿಸುತ್ತಿದ್ದೇವೆ. ಇಲ್ಲಿನ ಕಾರ್ಯಕರ್ತರು ನಿನ್ನ ಮನಸ್ಸಿಗೆ ಒಗ್ಗುವರು ಎಂದು ನಂಬಿದ್ದೇನೆ. ಇವರೆಲ್ಲ ಸಾತ್ವಿಕರು; ಬುದ್ಧಿವಂತರು.

"....ನನ್ನ ಸುತ್ತಲಿನ ಜನರು ನನ್ನಲ್ಲಿಟ್ಟಿರುವ ವಿಶ್ವಾಸಕ್ಕೆ ಮಾರುಹೋಗಿದ್ದೇನೆ. ಈ ಪ್ರೇಮಕ್ಕೆ ನಾನು ಅರ್ಹನಾಗಬೇಕು"* ಎಂದು ಬರೆದರು.

ಕ್ರೈಸ್ತಧರ್ಮದ ಪ್ರಸಿದ್ಧ ಸಂತರ, ಪ್ರವಾದಿಗಳ ಸುಂದರ ಕೃತಿಗಳನ್ನೂ ಎಸ್ತರ್ ಆಳವಾಗಿ ಉದಾಹರಿಸುತ್ತಿದ್ದಳು. ಗಾಂಧೀಜಿ ಅವುಗಳಿಂದ ಪ್ರಭಾವಿತರಾಗಿ ಅಂಥವುಗಳನ್ನು ಆಶ್ರಮವಾಸಿಗಳಿಗೆ ಕಳುಹಿಸಿಕೊಡುತ್ತಿದ್ದರು. ಈ ಹಿಂದೆ ದಕ್ಷಿಣ ಆಫ್ರಿಕದಲ್ಲಿ ಅನೇಕ ಕ್ರೈಸ್ತಧರ್ಮ ಪ್ರಚಾರಕರ ಸಹವಾಸದಲ್ಲಿ ಪಡೆದ ಅನುಭವಗಳನ್ನು ಎಸ್ತರ್‌ರೊಂದಿಗೆ ಹಂಚಿಕೊಂಡರು. ಆಶ್ರಮ ಪ್ರಾರ್ಥನೆಯ ಸಮಯದಲ್ಲಿ ಈ ಕ್ರೈಸ್ತ ಸಂತರ ಕೃತಿಗಳನ್ನು ಮೀರಾಬಹೆನ್ ಹಾಡುತ್ತಿದ್ದರು. ಎಸ್ತರ್ ಆಶ್ರಮಕ್ಕೆ ಬಂದಾಗಲೆಲ್ಲ ಆಕೆಯೂ ಈ ಭಕ್ತಿ ಕೃತಿಗಳನ್ನು ಪಠಿಸುತ್ತಿದ್ದರು. ಸತ್ಯಾಗ್ರಹಜೀವನಕ್ಕೆ ಪ್ರೇಮಭಕ್ತಿಗಳಲ್ಲಿ ಅಚಲವಾದ ಶ್ರದ್ಧೆಯೇ ತಳಹದಿ ಎನ್ನುವುದನ್ನು ಗಾಂಧೀಜಿ ತಮ್ಮ ಪ್ರವಚನಗಳಲ್ಲಿ ಮನದಟ್ಟು ಮಾಡಿಕೊಡುತ್ತಿದ್ದರು.

"ಭಗವಂತ ಇಷ್ಟೊಂದು ವರಪ್ರಸಾದಗಳನ್ನು, ಈ ವಿವಿಧ ಶಕ್ತಿಗಳನ್ನೂ, ಇಷ್ಟೊಂದು ಕುಶಲತೆಯಿಂದ ಹೊಸ ಆವಿಷ್ಕಾರ

---

* ಮೈಡಿಯರ್ ಚೈಲ್ಡ್ : ಪುಟ – 9

ಮಾಡುವ ಬುದ್ಧಿಯನ್ನೂ ಕೊಟ್ಟಿರುವುದೇಕೆ? ಅವುಗಳನ್ನು ಬಳಸದಿದ್ದರೆ ಅವುಗಳಿಂದೇನು ಪ್ರಯೋಜನ?" ಎಂದೊಮ್ಮೆ ಎಸ್ತರ್ ಕೇಳಿದ್ದರು. ಉತ್ತರವಾಗಿ ಬಾಪೂ:-

"ಈ ಪ್ರಶ್ನೆ ನನ್ನಲ್ಲೂ ಏಳುತ್ತದೆ. ನಮ್ಮ ಹಾದಿಯಲ್ಲಿ ದೇವರು ಅನೇಕ ಆಕರ್ಷಣೆಗಳನ್ನೊಡ್ಡಿದ್ದಾನೆ. ಆಮಿಷಗಳನ್ನಿಟ್ಟಿದ್ದಾನೆ. ನಮ್ಮ ನೈತಿಕ ಶಕ್ತಿಯ ಸಾಧ್ಯತೆಗಳಷ್ಟೇ ಅವುಗಳ ಪ್ರಭಾವವೂ ಶಕ್ತಿಯುಳ್ಳದ್ದು. ನಮ್ಮ ಶಕ್ತಿಗಳನ್ನು ನಾವು ಆತ್ಮವಿಕಾಸಕ್ಕಾಗಿಯೂ ಬಳಸಬಹುದು; ಐಹಿಕ ಭೋಗಕ್ಕಾದರೂ ವಿನಿಯೋಗಿಸಬಹುದು. ಹಿಮಾಲಯದಿಂದ ಧುಮುಕುವ ಜಲಪಾತದ ಶಕ್ತಿ ಬಳಸಲು ನಮ್ಮ ಬುದ್ಧಿಶಕ್ತಿಯನ್ನು ಬಳಸಬಹುದು. ಅದರಿಂದ ಮಾನವಕುಲದ ಭೋಗ ಜೀವನವನ್ನು ಮಾತ್ರ ಹೆಚ್ಚಿಸಿಯೇವು. ಆದರೆ ನಮ್ಮೊಳಗಿನ ಪ್ರಚಂಡ ಜಲಪಾತಗಳ ಶಕ್ತಿಯನ್ನು ನಿಯಂತ್ರಿಸುವ ನಿಯಮಗಳನ್ನರಿತುಕೊಂಡಲ್ಲಿ ನಾವು ವೈಯಕ್ತಿಕವಾಗಿ ಲಾಭ ಪಡೆದು ಮಾನವಕುಲದ ಶ್ರೇಯಸ್ಸಿಗೂ ಸೇವೆ ಸಲ್ಲಿಸಬಹುದು. ನಮ್ಮೆಲ್ಲ ಆಂತರಿಕ ಮತ್ತು ಬಾಹ್ಯಶಕ್ತಿಗಳನ್ನೂ ನಮ್ಮ ಉನ್ನತಿಗಾಗಿ ಬಳಸಬೇಕಾದರೆ ಆತ್ಮಸಂಯಮದಿಂದ ಮಾತ್ರವೇ ಸಾಧ್ಯ" ಎಂದು ಬರೆದರು.

ಶ್ರೀಮತಿ ಪೀಟರ್‌ಸನ್ ಮತ್ತು ಎಸ್ತರ್ ಇಬ್ಬರೂ ಆಶ್ರಮ ರೀತಿಯ ಶಾಲೆಗಳನ್ನು ನಡೆಸಲು ಇಚ್ಛಿಸಿದರು. ದೂರದ ಹಳ್ಳಿಗಳಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಹವಣಿಸಿದರು. ಡೇನಿಷ್ ಮಿಷನ್ನಿನ ಅಧಿಕಾರಿಗಳು ಭಾರತೀಯ ರೀತಿಯ ಜೀವನ ಶಿಕ್ಷಣ ಕ್ರಮಗಳನ್ನು ಒಪ್ಪುತ್ತಲೇ ಇರಲಿಲ್ಲ. ಬ್ರಿಟಿಷ್ ಮೇಲಾಧಿಕಾರಿಗಳು ಎಲ್ಲಿ ಅಸಮಾಧಾನಗೊಳ್ಳುವರೋ ಎಂದು ಎಸ್ತರ್‌ನ ಪ್ರಯೋಗಗಳಿಗೆ ಅಪ್ಪಣೆ ಕೊಡಲೇ ಇಲ್ಲ. ಕೊನೆಗೆ ಈ ಇಬ್ಬರು ಗೆಳತಿಯರೂ ತಮ್ಮ ಸಂಸ್ಥೆಯ ಚೌಕಟ್ಟಿನೊಳಗೆ ತಮ್ಮ ಸೇವೆ ಸಲ್ಲಿಸುವುದು ಸಾಧ್ಯವಿಲ್ಲವೆಂದರಿತು ಸೌಹಾರ್ದದಿಂದಲೇ ತಮ್ಮ ಸ್ಥಾನಗಳಿಗೆ ರಾಜೀನಾಮೆಯಿತ್ತು ಹೊರಬಂದರು. ಮಿಷನ್ನಿನ ಅನೇಕ ಮಿತ್ರರು

ಪ್ರೀತಿಯಿಂದ ತಮ್ಮ ಸಹಾಯ ಸಹಕಾರವನ್ನು ಮುಂದುವರಿಸಿದ್ದರು. ತನ್ನಿಂದ ಇಡೀ ಸಂಸ್ಥೆಯ ಕೆಲಸಕ್ಕೆ ತೊಂದರೆಯಾಗುವುದು ಬೇಡ ಎಂದು ಎಸ್ತರ್ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ತನ್ನ ಸ್ವತಂತ್ರ ಯೋಜನೆಗಳ ಕಡೆಗೆ ಹೆಜ್ಜೆಯಿಟ್ಟಳು. ಗಾಂಧೀಜಿಯ ನಿಜ ಶಿಷ್ಯಳಂತೆ ಎಲ್ಲೂ ಕಹಿಯನ್ನು ಬೆಳೆಸಿಕೊಳ್ಳಲಿಲ್ಲ. ತನ್ನ ಆಕಾಂಕ್ಷೆಯಂತೆ 1919ರಲ್ಲಿ ಸಬರಮತಿ ಆಶ್ರಮಕ್ಕೆ ಬಂದು ಸೇರಿದಳು ಎಸ್ತರ್. ಆಕೆಯ ಗೆಳತಿ ಪೀಟರ್‌ಸನ್ ತಾನೇ ಒಂದು ಸ್ವತಂತ್ರಶಾಲೆ ಕಟ್ಟಿ ನಡೆಸುತ್ತಿದ್ದಳು.

ಆಶ್ರಮದಲ್ಲಿದ್ದಷ್ಟು ಕಾಲ ಆಕೆಯ ಬಗ್ಗೆ ಗಾಂಧೀಜಿ ವಿಶೇಷ ಗಮನವಿಟ್ಟು ಎಲ್ಲರೊಡನೊಂದಾಗಿ ಬಾಳುವ ಕಲೆಯನ್ನು ಕಲಿಸಿದರು. ಆಶ್ರಮವಾಸಿಗಳ ಪ್ರೇಮ ಸಂಪಾದಿಸಿ ಗಾಂಧೀ ಬಳಗದ ಕಿರಿಯ ಕುವರಿ ಎನಿಸಿದಳು ಎಸ್ತರ್ ಫಿಯರಿಂಗ್.

ಎಸ್ತರ್ ಫಿಯರಿಂಗ್ ಈ ಮೊದಲೇ ಸಸ್ಯಾಹಾರಿಯಾಗಿದ್ದುದರಿಂದ ಆಶ್ರಮದ ಆಹಾರಪದ್ಧತಿಗೆ ಹೊಂದಿಕೊಂಡರು. ಆಕೆಯ ಸೂಕ್ಷ್ಮ ಆರೋಗ್ಯ ಸ್ಥಿತಿಯನ್ನು ಗಮನಿಸಿ ಬಾಪೂ ತಾವೇ ದಿನನಿತ್ಯದ ಆಹಾರ ಸೇವನೆಯನ್ನು ನಿರ್ದೇಶಿಸುತ್ತಿದ್ದರು. "ಏಸು ಕ್ರಿಸ್ತನ ನಿರ್ದೇಶನ ಸ್ಪಷ್ಟವಾಗಿದೆ. ಪ್ರೇಮ ತುಂಬಿಕೊಂಡವರಿಗೆ ಯಾವ ಪ್ರಾಣಿಯನ್ನೂ ಕೊಲ್ಲಲಾಗುವುದೇ ಇಲ್ಲ. ಅದರಲ್ಲೂ ಸ್ವಾರ್ಥದ ಲಾಲಸೆಗಾಗಿ ಕೊಲ್ಲುವುದು ಮಹಾಪಾಪ. ಹಾವನ್ನು ಕೊಲ್ಲುವುದೂ ನಮ್ಮ ಭಯದ ಕಾರಣದಿಂದಲೇ. ಭಯಗ್ರಸ್ತ ಮನುಷ್ಯ ಅಹಿಂಸಕನಾಗಲಾರ, ಈ ಪೂರ್ಣಗುಣ ಹೊಂದುವುದು ಕಠಿಣ. ಸಾಧನೆಯಿಂದ ಏಸು ಈ ಮಟ್ಟಕ್ಕೇರಿದ್ದುದರಿಂದ ಆತ ದೇವ ಮಾನವ. ವ್ಯಕ್ತಿಗಳು ದೃಢವ್ರತಿಗಳಾಗಿ ಹೀಗೆ ಮೇಲೇರಬಹುದು. ಆದರೆ ಸಾಮೂಹಿಕವಾಗಿ ರಾಷ್ಟ್ರಗಳು ಈ ಮಟ್ಟಕ್ಕೇರಲಾರವು. ಯುದ್ಧಗಳು ಅನಿವಾರ್ಯವಾಗುತ್ತವೆ. ಇಂಥ ಸಮಯಕ್ಕೆ ಒಂದು ದೇಶ ತನ್ನ ಆತ್ಮಶಕ್ತಿಯಿಂದಲೇ ಆಕ್ರಮಣಕಾರನನ್ನು ಎದುರಿಸಿದಾಗ ಶತ್ರುವಿನ ತಪ್ಪನ್ನು ಮನದಟ್ಟುಮಾಡಿ ಪರಿವರ್ತಿಸುವುದು

ಸಾಧ್ಯವಾದರೆ ಅದೊಂದು ಮಹಾಪ್ರಗತಿ. ಈ ದಿಸೆಯಲ್ಲಿ ಭಾರತ ಮೊದಲ ರಾಷ್ಟ್ರವಾದೀತೆಂದು ನಾನು ಬಯಸಿದ್ದೇನೆ. ಆದರೆ ಈ ಅಹಿಂಸಕ ಶಕ್ತಿಯನ್ನು ಪಡೆಯುವ ಮೊದಲು ಭಾರತ ಧೈರ್ಯವಾಗಿ ಹೋರಾಡುವ ಬಲ ಪಡೆದೇತೀರಬೇಕು. ಈ ಪ್ರಯೋಗದಲ್ಲಿ ವ್ಯಕ್ತಿಗಳ ಸಂಕಲ್ಪ ಬಹಳ ಪ್ರಧಾನವಾದುದು. ನನ್ನ ಮಟ್ಟಿಗೆ ಒಂದು ವ್ಯಾವಹಾರಿಕ ನಿರ್ಧಾರಕ್ಕೆ ಬಂದಿದ್ದೇನೆ. ಯಾವುದೇ ಕಾರಣಕ್ಕಾಗಿ ನಾನು ಮತ್ತೊಬ್ಬರನ್ನು ಕೊಲ್ಲಲಾರೆ. ಶತೃವೆಂದು ಮೇಲೇರಿ ಬಂದಾಗ ಅಂಥವರನ್ನೆದುರಿಸಿ ನಿರ್ಭಯವಾಗಿ ನಿಲ್ಲಬೇಕಾದಾಗ ಸಾಯಲೂ ಸಿದ್ಧನಾಗಿರಬೇಕು. ಈ ಸಲಹೆಯನ್ನು ಇತರರಿಗೂ ನೀಡುತ್ತಿರುತ್ತೇನೆ. ಎಲ್ಲಿ ಸಂಕಲ್ಪಶಕ್ತಿ ಇಲ್ಲವೋ ಅಲ್ಲಿ ಪ್ರೇಮವೂ ಇರಲಾರದು. ನಿಸ್ಸಹಾಯಕತೆಯಾಗಲೀ ದುರ್ಬಲತೆಯಾಗಲಿ ಅಹಿಂಸೆಯ ಲಕ್ಷಣಗಳಲ್ಲ. ನಾವು ನಿರ್ಭಯರಾದಷ್ಟೂ ಬಲಿಷ್ಠರಾಗುತ್ತೇವೆ. ಯಾರನ್ನು ಕಂಡರೆ ಭಯಪಡುತ್ತೇವೋ ಅವರನ್ನು ಪ್ರೀತಿಸಲಾಗುವುದಿಲ್ಲ. ಹಿಂಸೆಗೆ ಪ್ರತಿಹಿಂಸೆ ಮಾಡುವುದು ದೈಹಿಕ ಬಲ. ಸಂಯಮದಿಂದ ಪ್ರತಿಹಿಂಸೆ ಮಾಡದಿರುವುದು ಆತ್ಮಬಲ. ಆದರೆ ಹೋರಾಟ ಮಾಡುವ ಶಕ್ತಿ ಇದ್ದರೆ ಮಾತ್ರವೇ ಆತ್ಮಶಕ್ತಿ ಪ್ರಕಟವಾದೀತು. ದೈಹಿಕ ಬಲದಲ್ಲಿ ಅಥವಾ ಶಸ್ತ್ರಬಲದಲ್ಲಿ ಎದುರಾಳಿಗಿಂತ ಹೆಚ್ಚು ಪ್ರಬಲವಾಗಿರುವ ಅಗತ್ಯವಿಲ್ಲ." ಎಸ್ತರ್‌ಗೂ ಗಾಂಧೀಜಿಗೂ ನಡೆಯುತ್ತಿದ್ದ ಚರ್ಚೆಯಲ್ಲಿ ಈ ವಿಚಾರಗಳನ್ನು ಎತ್ತಿ ಆಡುತ್ತಿದ್ದರು. ತರುಣಿ ಎಸ್ತರ್ ಎಡೆಬಿಡದೆ ಪ್ರಶ್ನಿಸುತ್ತಲೇ ಇರುವುದನ್ನು ಬಾಪು ಪ್ರೋತ್ಸಾಹಿಸುತ್ತಿದ್ದರು. ಆಕೆಯ ಗಂಭೀರ ವಿಚಾರಪ್ರವೃತ್ತಿಗೆ ಆಶ್ರಮಜೀವನ ಪುಟಕೊಟ್ಟು ನಿಲ್ಲಿಸಿತು. ಅದಕ್ಕನುಗುಣವಾದ ಸೇವಾದೀಕ್ಷೆಯನ್ನೂ ಹಾಕಿ ಕೊಟ್ಟಿತು. ಮೂರು ವರ್ಷ ಎಸ್ತರ್ ಆಶ್ರಮದ ಬಳಗದವರಲ್ಲೊಬ್ಬರಾಗಿ ಸೇರಿ ಹೋಗಿದ್ದರು. ಅವರ ಜೀವನದೃಷ್ಟಿ ಸಂಪೂರ್ಣವಾಗಿ ಗಾಂಧೀ ಮಾರ್ಗವನ್ನನುಸರಿಸುವಂತಾಯಿತು.

II

ಎಸ್ತರ್‌ನ ಆರೋಗ್ಯ ಸೂಕ್ಷ್ಮವಾಗಿಯೇ ಸಾಗುತ್ತಿತ್ತು. ಕೇವಲ ಸಂಕಲ್ಪಶಕ್ತಿಯಿಂದ ಪ್ರತನಿಷ್ಠ ಜೀವನ ನಡೆಸುತ್ತಾ ಆತ್ಮಶಕ್ತಿ ವಿಕಾಸಕ್ಕೆ ಪ್ರಾಶಸ್ತ್ಯಕೊಟ್ಟರು. ಗಾಂಧೀಜಿ ಸತತವಾಗಿ ಎಸ್ತರ್‌ಗೆ ಎಚ್ಚರಿಕೆಯ ಸಲಹೆ ಕೊಡುತ್ತಲೇ ಇದ್ದರು. ಪಾಶ್ಚಾತ್ಯ ರೀತಿಯ ನೆಮ್ಮದಿಯ ಬದುಕಿಗೆ ಬೇಕಾದ ಸೌಲಭ್ಯಗಳನ್ನು ಕೇಳಿ ಪಡೆಯಲು ಆಶ್ರಮದ ನಿಯಮಗಳನ್ನು ಸಡಿಲಿಸಿದ್ದರು. ಮನಸ್ಸನ್ನೂ, ದೇಹವನ್ನೂ ಸ್ವಸ್ಥ ಸ್ಥಿತಿಯಲ್ಲಿಟ್ಟುಕೊಳ್ಳುವುದು ಸತ್ಯಾಗ್ರಹಿಯ ಪ್ರಥಮ ಕರ್ತವ್ಯ ಎನ್ನುತ್ತಿದ್ದರು. ಎಷ್ಟೇ ಪ್ರಯತ್ನಪಟ್ಟರೂ ಎಸ್ತರ್‌ನ ಆರೋಗ್ಯ ಗುಜರಾತಿನ ಹವಾಗುಣಕ್ಕೆ ಒಗ್ಗಿಕೊಳ್ಳಲಿಲ್ಲ. 1920ರಲ್ಲಿ ಮತ್ತೆ ತಮಿಳುನಾಡಿನ ತಂಪು ಪ್ರದೇಶಕ್ಕೆ ಬಂದು ತನ್ನದೇ ಆದ ಶಿಕ್ಷಣ ಪ್ರಯೋಗ ಪ್ರಾರಂಭಿಸಿದರು. ಗೆಳತಿ ಪೀಟರ್‌ಸನ್ ಜೊತೆಗಿದ್ದರು. ಮತ್ತೊಬ್ಬ ಉತ್ಸಾಹೀ ತರುಣ ಡಾಕ್ಟರ್ ಇ. ಕೆ. ಮೆನನ್ ಸಮಾಜಸೇವೆಗೆ ದೀಕ್ಷೆ ತೊಟ್ಟು ರಾಷ್ಟ್ರೀಯ ಶಾಲೆಯ ಪ್ರಯೋಗಗಳಲ್ಲಿ ತಾನೂ ಪಾಲುಗಾರನಾದ. ವಿದೇಶೀಯ ಮಿಷನರಿಗಳು ರಾಷ್ಟ್ರೀಯತೆಯನ್ನು ಪ್ರಬಲಿಸುವ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದನ್ನು ಬ್ರಿಟಿಷ್ ಸರ್ಕಾರ ಸಹಿಸುತ್ತಿರಲಿಲ್ಲ. ಕ್ರೈಸ್ತಧರ್ಮ ಸಂಸ್ಥೆಗಳೂ ಸರ್ಕಾರದ ಪರವಾಗಿಯೇ ಇದ್ದವು. ಗಾಂಧೀಜಿಯ ಸಹವಾಸದಿಂದ ಖಾದಿ, ಸ್ವದೇಶೀ, ಗ್ರಾಮಪುನರ್ರಚನೆ, ಶಿಕ್ಷಣ ಶಾಲೆಗಳು ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ ಅನೇಕ ಸೇವಾನಿಷ್ಠ ಕ್ರೈಸ್ತ ಪಾದ್ರಿಗಳನ್ನೂ, ಕಾರ್ಯಕರ್ತರನ್ನೂ ಮಿಷನರಿ ಸಂಸ್ಥೆಗಳೇ ಬಹಿಷ್ಕಾರಕ್ಕೆ ಗುರಿಮಾಡುತ್ತಿದ್ದವು. ರೆವರೆಂಡ್ ಆಂಡ್ರ್ಯೂಸ್, ರೆ. ಪಿಯರ್ಸನ್, ರೆ. ಖೈಥಾನ್ ಮುಂತಾದವರೂ ಈ ಬಹಿಷ್ಕಾರಕ್ಕೆ ಗುರಿಯಾದರು. ಹಾಗೆಯೇ ಎಸ್ತರ್ ಫೆಯರಿಂಗ್ ಮತ್ತು ಪೀಟರ್‌ಸನ್ ಅವರಿಗೂ ಡಾ. ಮೆನನ್ನರಿಗೂ ಕಿರುಕುಳಗಳು ಹೇರಳವಾಗಿದ್ದವು. ಈ ಬಗ್ಗೆ ಗಾಂಧೀಜಿಗೆ ವಿವರವಾಗಿ ಬರೆಯುತ್ತಿದ್ದರು. ಕೆಲವು ಸಾರಿ ಗಾಂಧೀಜಿ ತಮ್ಮ ಮಿತ್ರರಾದ ಬ್ರಿಟಿಷ್ ಅಧಿಕಾರಿಗಳಿಗೆ ಬರೆದು ತೊಂದರೆಗಳನ್ನು

ನಿವಾರಿಸಿದ್ದರು. ಆದರೂ ಕೋಮಲ ಪ್ರಕೃತಿಯ ತರುಣಿ ಎಸ್ತರ್ ತೀವ್ರವಾಗಿ ಆಂತರಿಕ ತುಮುಲಗಳಿಗೊಳಗಾದರು.

ಎಸ್ತರ್ ಮತ್ತು ಡಾ. ಮೆನನ್ ಪರಸ್ಪರ ಪ್ರೀತಿಸಿ ಮದುವೆಯಾಗಲು ನಿಶ್ಚಯಿಸಿದರು. ಆ ಸಮಯಕ್ಕೆ ಆಕೆಯ ವಿದೇಶೀ ಸಹಕಾರ್ಯಕರ್ತರು ತೀವ್ರವಾಗಿ ಪ್ರತಿಭಟಿಸಿ ಆಕೆಯನ್ನು ಹೀಯಾಳಿಸಿದರು. ಆ ಸಮಯದಲ್ಲಿ ಸಾಂತ್ವನಗೊಳಿಸಿದವರು ಆಕೆಯ ಪಿತೃಸಮಾನರಾದ ಗಾಂಧೀಜಿ. ಪ್ರತಿ ಕಾಗದದಲ್ಲೂ ಕ್ರೈಸ್ತ ಸಂತರ ವಾಣಿಯನ್ನೇ ಉದಹರಿಸುತ್ತಾ ಎಸ್ತರ್ ಮತ್ತು ಮೆನನ್ ಇಬ್ಬರಲ್ಲೂ ಧೈರ್ಯ ತುಂಬಿದರು. 1920ರ ಮಾರ್ಚ್ 14ರಂದು ಬರೆದ ಗಾಂಧೀಜಿಯ ಪತ್ರ ಮಾರ್ಮಿಕವಾಗಿತ್ತು.

"ದೇವರಲ್ಲಿ ಪ್ರಾರ್ಥನೆ ಸಲ್ಲಿಸುವುದನ್ನು ಬಿಟ್ಟರೆ ನಾನೇನು ಮಾಡಬಲ್ಲೆ! ನಿನ್ನ ಸಂಕಟ ಸಮಯದಲ್ಲಿ ಸ್ನೇಹಿತರ ಸಹಾಯ ಅತ್ಯಲ್ಪ. ಭಗವಂತ ನಿನ್ನನ್ನು ರಕ್ಷಿಸಲಿ. ಪ್ರವಾದಿಗಳ ವಾಣಿಯಂತೆ ನಡೆದುಕೊಳ್ಳುವುದೇ ಶ್ರೇಯಸ್ಕರ." ಪ್ರತಿ ವ್ಯಕ್ತಿಯ ಮತ್ತು ರಾಷ್ಟ್ರದ ಜೀವನದಲ್ಲೊಮ್ಮೆ ಕಠಿಣ ನಿರ್ಣಯ ಕೈಗೊಳ್ಳಬೇಕಾದ ಘಳಿಗೆ ಬರುತ್ತದೆ. ಸತ್ಯ-ಅಸತ್ಯಗಳ ನಡುವೆ ಒಳಿತು-ಕೆಡಕುಗಳ ಮಧ್ಯೆ, ಒಂದನ್ನಾರಿಸಿಕೊಳ್ಳಬೇಕಾಗುತ್ತದೆ. ಒಂದು ಮಹತ್ವದ ಧ್ಯೇಯಕ್ಕಾಗಿ, ದೇವರ ನೂತನ ದೂತ ಉಚ್ಛ್ರಾಯಕ್ಕೋ ಕೇಡಿಗೋ ಆಯ್ಕೆ ಮಾಡಿ ಒಂದು ಕಡೆ ಆಡುಗಳನ್ನೂ ಮತ್ತೊಂದು ಕಡೆಗೆ ಕುರಿಗಳನ್ನೂ ಬೇರ್ಪಡಿಸುತ್ತಾನೆ. ಅನಂತವಾಗಿ ಸಾಗುವ ಈ ಆಯ್ಕೆ ನಮ್ಮನ್ನು ಕಗ್ಗತ್ತಲಿಗೋ ಬೆಳಕಿಗೋ ಕೊಂಡೊಯ್ಯುತ್ತದೆ...... ಇಂಥ ದಿವ್ಯಸಂದೇಶಗಳನ್ನು ದಿನದಿನವೂ ಕಳುಹಿಸುತ್ತಾ ನಿನಗಾಗಿ ಪ್ರಾರ್ಥನೆ ಸಲ್ಲಿಸಿರುತ್ತೇನೆ" ಈ ಉದ್ಧರಿತ ವಾಕ್ಯಗಳು ಲೋವೆಲ್ಲನವು."*

ಹೀಗೆ ಸತತವಾಗಿ, ಟೆನಿಸನ್ನಿನ "ಮೋರ್ ಥಿಂಗ್ಸ್ ಆರ್ ರಾಟ್ ಬೈ ಪ್ರೇಯರ್" ಎಂಬ ಕವನ, ಜಾರ್ಜ್ ಹರ್ಬರ್ಟ್‌ನ "ಟೀಚ್ ಮಿ, ಮೈ ಗಾಡ್ ಅಂಡ್ ಕಿಂಗ್", ರಿಚರ್ಡ್ ಬಾಕ್ಸ್ಟರ್‌ನ "ಲಾರ್ಡ್, ಇಟ್ ಬಿಲಾಂಗ್ಸ್ ನಾಟ್ ಮೈ ಕೇರ್", ಜಾನ್ ಬನಿಯನ್‌ನ

* ಮೈಡಿಯರ್ ಚೈಲ್ಡ್ : ಪುಟ – 61–67

"ಹಿ ದಟ್ ಇಸ್ ಡೌನ್ ನೀಡ್ಸ್ ಫಿಯರ್ ನೊ ಫಾಲ್" ಮುಂತಾದ ಕವನಗಳನ್ನು ಸರಣಿಯಂತೆ ಬರೆದು ಕಳುಹಿಸುತ್ತಿದ್ದರು. ಯಾವ ನಿರಾಶೆಗೂ ಎಡೆಗೊಡದೆ ದೈವವನ್ನು ನಂಬಿ ಧೃತಿಯನ್ನು ತಂದುಕೋ ಎಂದು ಅತ್ಯಂತ ಪ್ರೇಮದಿಂದ ಈ ಕುವರಿಯ ಸಂಕಟ ಸಮಯದಲ್ಲಿ ಆಂತರಿಕ ಶಕ್ತಿಯನ್ನೆರೆದರು. ಈ ಎಲ್ಲ ಪತ್ರಗಳನ್ನು ಎಸ್ತರ್ ಅತ್ಯಂತ ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ಅನಾರೋಗ್ಯದಿಂದ ಬಳಲಿ, ಟೀಕೆಗಳಿಂದ ನೊಂದು ಎಸ್ತರ್ ಮತ್ತು ಮೆನನ್ ಡೆನ್ಮಾರ್ಕಿಗೆ ಪ್ರಯಾಣ ಬೆಳಸಲು ನಿರ್ಧರಿಸಿದರು. ಹೀಗೆ ಬೇಸರಗೊಂಡು ಸ್ವದೇಶಕ್ಕೆ ಹಿಂತಿರುಗುತ್ತಿರುವ ತಮ್ಮ ಸಾಕುಮಗಳಿಗೆ ಬಾಪುವಿನ ಹರಕೆ ಹೀಗಿತ್ತು. "ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಆಘಾತಗೊಂಡು ಮತ್ತೆ ಚೇತರಿಸಿಕೊಳ್ಳಲು ಸ್ವದೇಶವಾದ ಡೆನ್ಮಾರ್ಕಿಗೆ ಹೋಗಬೇಕಾಗಿ ಬಂದುದನ್ನು ಕೇಳಿ ನನಗೆ ವೈಯಕ್ತಿಕವಾಗಿ ನಾಚಿಕೆಯಾದಂತಾಯಿತು. ತುಂಬು ಆರೋಗ್ಯವಂತಳಾಗಿ, ಶ್ರೇಷ್ಠ ಕ್ರಿಸ್ತಾನುಯಾಯಿಯಾಗಿ, ಉತ್ತಮ ಪುತ್ರಿಯಾಗಿ ನೀನು ಹಿಂತಿರುಗುವಂತಾಗಬೇಕೆಂದು ನಾನು ಹಂಬಲಿಸುತ್ತೇನೆ. ಬಾಳಿನಲ್ಲಿ ಈ ಎಲ್ಲ ಪೂರ್ಣತೆ ಪಡೆಯುವ ಶಕ್ತಿಗಳು ನಿನ್ನಲ್ಲಿವೆ. ನಿನ್ನ ಮಹದಾಸೆಗಳೆಲ್ಲ ಈಡೇರಲಿ, ಭಗವಂತ ನಿನ್ನನ್ನು ಮಾನವಸೇವೆಗಾಗಿ ಶ್ರೇಷ್ಠ ಉಪಕರಣವನ್ನಾಗಿ ಮಾಡಲಿ. ಮಾನವ ಕೋಟಿಯ ಮೇಲಿನ ನಿನ್ನ ಪ್ರೇಮದ ಅಂಶಮಾತ್ರವೇ ಭಾರತದ ಬಗ್ಗೆ ನಿನ್ನ ಪ್ರೀತಿ ಎನಿಸಬೇಕು. ಎಲ್ಲವೂ ಈಶ್ವರೇಚ್ಛೆ. ನನ್ನ ಸ್ವಾರ್ಥ ಲವಲೇಶವೂ ಇರಲಾಗದು ಎಂಬ ಪ್ರಾರ್ಥನೆ ಅಮೋಘವಾದುದು, ಬಾಪೂ–

ಡೆನ್ಮಾರ್ಕಿನಲ್ಲಿ ಎಸ್ತರ್ ಮತ್ತು ಮೆನನ್ ಮದುವೆಯಾದರು. ಗಾಂಧೀಜಿ ಆಶೀರ್ವಾದ ಸಂದೇಶ ಕಳುಹಿಸಿದರು. 1922ರಲ್ಲಿ ಮೊದಲನೆ ಸತ್ಯಾಗ್ರಹ ಹೋರಾಟ ಘೋಷಿಸಿದ್ದರು ಬಾಪೂ. ಬಹುಬೇಗ ಭಾರತಕ್ಕೆ ಸ್ವರಾಜ್ಯ ದೊರಕುತ್ತದೆ. ಆಗ ಯಾವ ನಿರ್ಬಂಧಗಳೂ ಇಲ್ಲದೆ ಸ್ವತಂತ್ರವಾಗಿ ಎಲ್ಲರೂ ಬಾಳಬಹುದಾದುದರಿಂದ ನಿನಗೆ ಸ್ವಾಗತ ಬಯಸುತ್ತಿದ್ದೇನೆ ಎಂದು ಎಸ್ತರ್‌ಗೆ ಧೈರ್ಯ ತುಂಬಿದರು.

ಕೆಲವು ಕಾಲದ ನಂತರ ಡಾ. ಮೆನನ್ ಮತ್ತು ಎಸ್ತರ್ ಭಾರತಕ್ಕೆ ಹಿಂತಿರುಗಿ ಪೋರ್ಟೋನೋವೊ ಬಳಿ ಕುಮಾರಿ ಪೀಟರ್ಸನ್ ನಡೆಸುತ್ತಿದ್ದ ಆಶ್ರಮಶಾಲೆಯಲ್ಲಿ ಅವರಿಗೆ ನೆರವಾಗಿ ನಿಂತರು. ಗಾಂಧೀ ಮಾರ್ಗದ ಶಿಕ್ಷಣ ಸಂಸ್ಥೆಯನ್ನಾಗಿ ನಡೆಸುತ್ತಿದ್ದರು. ಸುತ್ತಲಿನ ಗ್ರಾಮಸ್ಥರಿಗೂ ಗಿರಿಜನರಿಗೂ ಈ ಮಾದರಿ ಶಾಲೆ ಮತ್ತು ಈ ದೈವಭಕ್ತ ಕ್ರೈಸ್ತ ಸೇವಾಕರ್ತರ ಸಂಪರ್ಕ ನಿಕಟವಾಗಿ ಬೆಳೆಯಿತು. ಎಸ್ತರ್‌ಗೆ ಎರಡು ಹೆಣ್ಣು ಮಕ್ಕಳಿದ್ದರು. ಅವರೂ ತಾತಾ ಗಾಂಧೀಜಿಗೆ ಪತ್ರ ಬರೆಯುತ್ತಿದ್ದರು. ಈ ಸಂತೋಷದ ಕಾಲ ಕೆಲವು ವರ್ಷ ಸಾಗಿತು. ಸ್ವಾತಂತ್ರ್ಯ ಸಂಗ್ರಾಮ ಬಿಸಿಯೇರುತ್ತಿತ್ತು. ರಾಷ್ಟ್ರೀಯ ಶಾಲೆಗಳು ಮತ್ತು ಗಾಂಧೀ ಅನುಯಾಯಿಗಳ ಮೇಲೆ ಬ್ರಿಟಿಷ್ ಅಧಿಕಾರಿಗಳ ದಾಳಿಗಳು ನಡೆಯುತ್ತಲೇ ಬಂದವು. ವಿದೇಶಿಯರಾಗಿದ್ದ ಎಸ್ತರ್ ಮತ್ತು ಪೀಟರ್ಸನ್ ವಿಪರೀತ ಕಿರುಕುಳಗಳನ್ನನುಭವಿಸಬೇಕಾಯಿತು. ಕೆಲವು ಕಾಲದ ನಂತರ ಎಸ್ತರ್ ಮತ್ತು ಡಾ. ಮೆನನ್ ತಮ್ಮ ಮಕ್ಕಳೊಡನೆ ಇಂಗ್ಲೆಂಡಿಗೆ ವಲಸೆ ಹೋದರು. ಬರ್ಮಿಂಗ್‌ಹ್ಯಾಮ್ ಬಳಿಯ ಸ್ಯಾಲಿಓಕ್‌ನಲ್ಲಿದ್ದ ಕ್ವೇಕರ್ ಕೇಂದ್ರದಲ್ಲಿ ಸೇರಿ ಸಮಾಜ ಸೇವಕರಾದರು. ಕ್ರಿಶ್ಚಿಯನ್ ಧರ್ಮಪ್ರಚಾರಕರ ವಿಶಿಷ್ಟ ಗುಂಪೊಂದು ಈ ಕ್ವೇಕರ್ ಚಳುವಳಿ ಪ್ರಾರಂಭಿಸಿದ್ದರು. ಯುದ್ಧ ವಿರೋಧಿಗಳೂ ಮಾನವ ಪ್ರೇಮಿಗಳೂ ಶಾಂತಿದೂತರೂ ಆಗಿದ್ದ ಈ ಕ್ವೇಕರ್ ಬಳಗದವರಿಗೆ ಸಹಜವಾಗಿಯೇ ಭಾರತವೂ ಗಾಂಧಿ ಜೀವನ ಸಂದೇಶಗಳೂ ಪ್ರಿಯವಾದವು. ಅನೇಕರು ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಹಿಂಸಾ ಮುಖವನ್ನು ಮೆಚ್ಚಿ ಯೂರೋಪ್ ಅಮೆರಿಕಗಳಲ್ಲಿ ಪ್ರಚಾರ ಮಾಡಿದರು. ಈ ಶಾಂತಿ ಸಂದೇಶವಾಹಕರೂ, ಸರಳಜೀವಿಗಳೂ, ವಿಶ್ವಪ್ರೇಮಿಗಳೂ ಆದ ಕ್ವೇಕರ್‌ರವರ ಕೇಂದ್ರಗಳು ಕ್ರೈಸ್ತ ಧರ್ಮದಲ್ಲಿನ ಪ್ರೇಮ ಮತ್ತು ಸೇವಾನಿರತ ಜೀವನ ಶೈಲಿಯನ್ನು ಪ್ರತಿಪಾದಿಸುತ್ತ ಬಡವರ ಸೇವೆಯಲ್ಲಿ ನಿರತರಾಗಿರುತ್ತಿದ್ದವು.

ಡೇನಿಷ್ ಭಾಷೆಯಲ್ಲಿ ಗಾಂಧೀ ಜೀವನಯಾತ್ರೆಯನ್ನು ಬರೆಯಲು ಎಸ್ತರ್ ಪ್ರಯತ್ನ ಮಾಡಿದರು. ಅವರ ಅನಾರೋಗ್ಯದ ಸ್ಥಿತಿಯಲ್ಲಿ

ಭಾರತ ಮತ್ತು ದಕ್ಷಿಣ ಆಫ್ರಿಕದ ಬೇರೆ ಬೇರೆ ಸ್ಥಳಗಳಿಗೆ ಭೇಟಿಕೊಟ್ಟು ಸಾಮಗ್ರಿ ಸಂಗ್ರಹಿಸುವುದು ಕಷ್ಟವಾದೀತು ಎಂದು ಗಾಂಧೀಜಿಯೇ ಬೇಡ ಅಂದರು. ಆ ವೇಳೆಗೆ ಇನ್ನೂ ಗಾಂಧೀಜಿಯ ಆತ್ಮಕಥೆ ಪ್ರಕಟವಾಗಿರಲಿಲ್ಲ.

ಒಮ್ಮೆ ಗಾಂಧೀಜಿ ಮಲೇರಿಯದಿಂದ ಪೀಡಿತರಾದರು. ವಿದೇಶದಲ್ಲಿದ್ದ ಎಸ್ತರ್ ತುಂಬ ಆತಂಕಗೊಂಡು ದೀರ್ಘಪತ್ರಗಳನ್ನು ಬರೆದರು. ತಮಗೆ ತಮಿಳುನಾಡಿನಲ್ಲಿ ಪರಿಚಿತರಾಗಿದ್ದ ಆಯುರ್ವೇದೀಯ ಔಷಧಿಯ ಕೆಲವು ಮೂಲಿಕೆಗಳನ್ನೂ ಕಷಾಯಗಳನ್ನೂ ಬಾಪೂಗೆ ಪಾರ್ಸಲ್ ಮೂಲಕ ಕಳುಹಿಸಿ ಎಲ್ಲ ವಿವರಗಳನ್ನೂ ಬರೆದರು. ತಾವು ಅನೇಕ ಗ್ರಾಮಸ್ಥರಿಗೆ ಅದನ್ನು ಕೊಟ್ಟು ಗುಣಪಡಿಸಿದ್ದೇವೆ. ವೈದ್ಯರಾದ ಮೆನನ್ ಅದನ್ನೇ ಈ ದೇಶದಲ್ಲೂ ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ ಎಂದೂ ಹೇಳಿ ಬಾಪೂ ಅದನ್ನು ಬಳಸುವಂತೆ ಅಂಗಲಾಚಿದ್ದರು.

ಬಾಪೂವಿನ ಉತ್ತರ ವಿಶಿಷ್ಟವಾಗಿತ್ತು. ತಾವು ಈಗ ಗುಣಮುಖರಾಗಿರುವುದಾಗಿ ತಿಳಿಸಿದರು. ಆದರೆ ಎಸ್ತರ್ ಕಳುಹಿಸಿದ ಔಷಧಿಯನ್ನೇಕೆ ತೆಗೆದುಕೊಳ್ಳಲಿಲ್ಲ ಎಂಬುದನ್ನು ವಿವರಿಸಿದರು. ಪ್ರತಿದಿನದ ಆಹಾರವನ್ನಾಗಲೀ ಔಷಧ ಸಾಮಾಗ್ರಿಗಳನ್ನಾಗಲೀ ಸೇವಿಸುವಾಗ ಅದರಲ್ಲಿ ಐದಕ್ಕಿಂತ ಹೆಚ್ಚು ವಸ್ತುಗಳಿರಬಾರದು ಎಂಬ ಅವರ ವ್ರತನಿಯಮವಿತ್ತು. ಈ ಆಯುರ್ವೇದ ಔಷಧಿಗಳಲ್ಲಿ ಅನೇಕ ಮೂಲಿಕೆಗಳು ಸೇರಿರುತ್ತವೆ. ಆದ್ದರಿಂದ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಕ್ಷಮೆ ಬೇಡಿದರು. ಎಸ್ತರ್‌ನ ವಾತ್ಸಲ್ಯಕ್ಕೆ ಮಾರುಹೋಗಿ ಕೃತಜ್ಞತೆ ಸೂಚಿಸಿದರು.

ಮತ್ತೊಮ್ಮೆ ಆಶ್ರಮ ಎಂದರೆ ಹೇಗಿರಬೇಕು ಎಂಬ ಪೂರ್ಣ ವಿವರಗಳನ್ನು ಗಾಂಧೀಜಿ ತಮ್ಮ ಶಿಷ್ಯೆಗೆ ಬರೆದುತಿಳಿಸಿದರು. "ಆಶ್ರಮ ಎಂದರೆ ಸರಳ ಜೀವನದ ಒಂದು ಆಶ್ರಯ. ಪ್ರಕೃತಿಯೊಡನೆ ಸಮರಸವಾದ ಒಂದು ಗೂಡು. ಅದು ಕೇವಲ ಶಿಕ್ಷಣ ಸಂಸ್ಥೆಯಲ್ಲ. ಅಲ್ಲಿ ನೆಲಸುವವರು ಸಂಯಮಶೀಲರಾಗಿರಬೇಕು. ಬಾಹ್ಯಜಗತ್ತಿನ ಬಗ್ಗೆ ಒಂದು ನಿರ್ಲಿಪ್ತತೆ ರೂಢಿಸುವ ಸಂನ್ಯಾಸದ

ಮನೋಧರ್ಮ ಪಸರಿಸಿರಬೇಕು. ಅದರಿಂದ ಸ್ವಯಂಪ್ರೇರಿತ ಬಡತನ ಸಹಜವಾಗುತ್ತದೆ. ಆದ್ದರಿಂದ ಸರಳತೆ ರೂಢಮೂಲವಾಗಬೇಕು. ಆತ್ಮಸಾಕ್ಷಾತ್ಕಾರ ದೃಷ್ಟಿಯಿಂದ ಶೀಲವೃದ್ಧಿಯೇ ಆಶ್ರಮದ ಗುರಿ. ಅಲ್ಲಿನ ಪ್ರತಿಯೊಬ್ಬರೂ ಶರೀರಶ್ರಮದಲ್ಲಿ ಭಾಗವಹಿಸಲೇಬೇಕು. ಪ್ರತಿಯೊಬ್ಬರೂ ಸಮಾನರೆನಿಸಬೇಕು. ಮೇಲಿನವರೆಂಬ ಹಮ್ಮು ಕೂಡದು. ನೇತೃತ್ವ ವಹಿಸುವವರು ಮಾತಾಪಿತೃಗಳಂತಿದ್ದು ಎಲ್ಲರೂ ಒಂದೇ ಕುಟಂಬದವರಂತೆ ಬಾಳಬೇಕು" ಎಂದು ವಿವರಿಸಿದರು.

III

1932ರಲ್ಲಿ ಗಾಂಧೀಜಿ ಲಂಡನ್ನಿನ ದುಂಡುಮೇಜಿನ ಪರಿಷತ್ತಿಗೆ ಹೋದರು. ಅಲ್ಲಿ ಬಡವರ ವಸತಿಗಳಿದ್ದ ವೆಸ್ಟ್ ಎಂಡ್ ಬಡಾವಣೆಯಲ್ಲಿ ಕ್ವೇಕರ್ ಪಂಥವರಾದ ಕುಮಾರಿ ಮ್ಯೂರಿಯಲ್ ಲೆಸ್ಟರ್ ಅವರ ಕೇಂದ್ರದಲ್ಲಿ ಅತಿಥಿಯಾದರು. ಮ್ಯೂರಿಯಲ್ ಲೆಸ್ಟರ್ ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ಸಹಾನುಭೂತಿಯುಳ್ಳ ಸಮಾಜಸೇವಕರಾಗಿದ್ದರು. ಗಾಂಧೀ ಮಾರ್ಗವನ್ನನುಷ್ಠಾನ ಮಾಡುತ್ತಿದ್ದರು. ಲಂಡನ್ನಿನ ಈ ದೀನಸೇವಾ ಕೇಂದ್ರಕ್ಕೆ ಗಾಂಧೀದರ್ಶನಕ್ಕಾಗಿ ಅನೇಕ ಸುಪ್ರಸಿದ್ಧ ಬ್ರಿಟಿಷರು ಬರುತ್ತಿದ್ದರು. ಚಾರ್ಲಿ ಚಾಪ್ಲಿನ್‌ನಂತಹ ಚಿತ್ರನಟನಿಂದ ಹಿಡಿದು ಲಾರ್ಡ್ ನೋಯಲ್ ಬೇಕರ್, ಆಗಾಥಾ ಹ್ಯಾರಿಸನ್, ರೆಜಿನಾಲ್ಡ್ ರೇನಾಲ್ಡ್ಸ್, ಹೊರೆಸ್ ಅಲೆಕ್ಸಾಂಡರ್ ಮುಂತಾದ ಮಿತ್ರರು ಭೇಟಿ ನೀಡಿದರು. ರಾಜಕೀಯ ಸಂಧಾನಗಳು ಮುರಿದುಬಿದ್ದರೂ ಬ್ರಿಟನ್ನಿನ ಸಾಮಾನ್ಯ ಜನತೆಯ ಹೃದಯಗಳನ್ನು ಗಾಂಧೀಜಿ ಸೂರೆಗೊಂಡರು. ಬರ್ಮಿಂಗ್ಹಾಮ್ ಬಳಿಯ ಸೆಲಿಓಕ್‌ನಲ್ಲಿನ ಕ್ವೇಕರ್ ಕೇಂದ್ರದಲ್ಲಿದ್ದ ಎಸ್ತರ್ ಮತ್ತು ಮೆನನ್ ತಮ್ಮ ಇಬ್ಬರು ಮಕ್ಕಳೊಡನೆ ಲಂಡನ್ನಿಗೆ ಬಂದು ತಮ್ಮ ಪ್ರೀತಿಯ ಬಾಪೂವಿನೊಡನೆ ಕೆಲವು ಸಮಯ ಇದ್ದರು. ಎರಡು ಮಕ್ಕಳನ್ನೂ ಕಂಡು ಬಾಪೂ ಅತ್ಯಂತ ಸಂತೋಷಗೊಂಡರು. ವಿರಾಮ ಇದ್ದಾಗಲೆಲ್ಲ ಎಸ್ತರ್ ಗಾಂಧೀಜಿಯನ್ನು ಮಾಂಟಿಸೋರಿ ಶಾಲೆಗಳಿಗೆ ಕರೆದೊಯ್ಯುತ್ತಿದ್ದರು. ಅನೇಕ ಕಡೆ ಗಾಂಧೀಜಿ ಗಂಟೆಗಟ್ಟಲೆ ತಮ್ಮ ಚರಕದಲ್ಲಿ ನೂಲುವುದನ್ನು ಮಕ್ಕಳಿಗೆ ಕಲಿಸಿ ಆನಂದಿಸುತ್ತಿದ್ದರು.

ಲಂಡನ್ನಿನಲ್ಲಿ ಶಾಲೆಗಳು ತಮ್ಮಲ್ಲಿಗೆ ಬಾಪುವನ್ನು ಕರೆದೊಯ್ಯಲು ಉತ್ಸುಕತೆಯಿಂದ ಸ್ಪರ್ಧಿಸುತ್ತಿದ್ದವು. ಅವರ ಬೆಳಗಿನ ಗಾಳಿಸವಾರಿಯಲ್ಲಿ ಛಳಿಯನ್ನೂ ಲೆಕ್ಕಿಸದೆ ಮಕ್ಕಳ ದಂಡೇ ಇರುತ್ತಿತ್ತು.

ಉಪ್ಪಿನ ಸತ್ಯಾಗ್ರಹದ ನಂತರ ಬ್ರಿಟನ್ನಿನೊಡನೆ ರಾಜಕೀಯ ಸಂಧಾನಗಳೆಲ್ಲ ಮುರಿದುಬಿದ್ದವು. ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತೆ ಬಿರುಸಾಯಿತು. ಗಾಂಧೀಜಿಯನ್ನು ತಕ್ಷಣ ಸೆರೆ ಹಿಡಿದು ಯರವಾಡಾ ಸೆರೆಮನೆಯಲ್ಲಿ ಬಂಧಿಸಿದರು. ಸೆರೆಮನೆಯಿಂದ ಎಸ್ತರ್‌ಗೆ ಪತ್ರಗಳನ್ನು ಬರೆಯುತ್ತಲೇ ಇದ್ದರು. ಆಕೆಯ ಪ್ರಶ್ನೆಗಳಿಗೂ ಸಮಸ್ಯೆಗಳಿಗೂ ತಾಳ್ಮೆಯಿಂದ ಆತ್ಮೀಯ ಸಲಹೆಗಳನ್ನೂ ನೀಡುತ್ತಲೇ ಬಂದರು. ತಮ್ಮ ಅಳಲುಗಳನ್ನೂ ಆಕೆಯೊಡನೆ ಹಂಚಿಕೊಂಡರು. ಆಕೆಯ ಮಕ್ಕಳ ಶಿಕ್ಷಣದ ಬಗ್ಗೆ ವಿವರವಾಗಿ ತಿಳಿಸುತ್ತಿದ್ದರು.

"ನಿನ್ನ ಕಾರ್ಯಗಳನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಆದರೆ ಹೆಚ್ಚು ಆತಂಕಗೊಳ್ಳುವ ಮಟ್ಟಕ್ಕೆ ನಿನ್ನ ಶ್ರಮವನ್ನು ಹಿಗ್ಗಿಸಬೇಡ. ಭಗವಂತನ ಚಿತ್ತ ಪಡೆಯಲು ನಾವು ಶರಣು ಬರುವ ಉಪಕರಣಗಳಾಗಬೇಕು. ಆಗ ನಮಗಾವ ಚಿಂತೆಯೂ ಕಾಡುವುದಿಲ್ಲ....

....ಆದರೂ ಬಿರುಗಾಳಿಯಿಲ್ಲದೆ ಶಾಂತ ಸ್ಥಿತಿಯೂ ಇರಲಾಗದು. ಹೋರಾಟವಿಲ್ಲದೆ ಆಂತರಿಕ ಶಾಂತಿಯೂ ಇರದು. ಶಾಂತಿಯ ಗರ್ಭದಲ್ಲಿ ಹೋರಾಟವೂ ಅಡಗಿರುತ್ತದೆ. ಒಳಗಿನ ಮತ್ತು ಹೊರಗಿನ ಹೋರಾಟಗಳೊಡನೆ ಸತತವಾಗಿ ಕಾದು ಎದುರಿಸುವುದೇ ಜೀವನದುಸಿರು. ಹಾಗಲ್ಲದೆ ನಮಗೆ ಶಾಂತಿಯ ಅನುಭವವೇ ಆಗದು. ಆದ್ದರಿಂದಲೇ ಹೋರಾಟದ ನಡುವೆಯೇ ನಾವು ಶಾಂತಿಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ನಿನ್ನ ಸೇವಾಕಾರ್ಯದಲ್ಲಿ ಇದೇ ಸಾಧುಮಾರ್ಗ"* ಎಂದು ಗಾಂಧೀಜಿ ಯರವಾಡಾ 'ಮಂದಿರ'ದಿಂದ ಎಸ್ತರ್‌ಗೆ ಬರೆದರು.

ಪ್ರತಿ ಕಾಗದದಲ್ಲೂ ಎಸ್ತರ್ ಪ್ರೀತಿಯಿಂದ ಶುಶ್ರೂಷೆ ಮಾಡುತ್ತಿದ್ದ ಅಂಗವಿಕಲ ಸೋದರಿಯ ಬಗ್ಗೆ ವಿಚಾರಿಸುತ್ತಿದ್ದರು. ತಾವು ಭೇಟಿಕೊಟ್ಟಿದ್ದ ಲಂಡನ್ನಿನ ಅಂಗವಿಕಲರ ಶಾಲೆಯ ಬಗ್ಗೆ ಅಲ್ಲಿನ

---

* ಮೈಡಿಯರ್ ಚೈಲ್ಡ್ – ಎಸ್ತರ್ ಫಿಯರಿಂಗ್ : ಪುಟ – 98

ಶ್ರದ್ಧಾವಂತ ಕಾರ್ಯಕರ್ತರ ಬಗ್ಗೆ ಕೇಳುತ್ತಿದ್ದರು. ಮಿಕ್ಕ ಕ್ವೇಕರ್ ಬಂಧುಗಳ ಯೋಗಕ್ಷೇಮ ಕುರಿತು ಬರಿ ಎನ್ನುತ್ತಿದ್ದರು.

ಅದೇ ಸಮಯಕ್ಕೆ ಬ್ರಿಟಿಷ್ ಸರ್ಕಾರದ ಪ್ರತ್ಯೇಕ ಚುನಾವಣಾ ಮಸೂದೆಯನ್ನು ವಿರೋಧಿಸಿ ಗಾಂಧೀಜಿ ಯರವಾಡಾ ಜೈಲಿನಲ್ಲೇ ಆಮರಣಾಂತ ಉಪವಾಸ ಘೋಷಿಸಿ ಪ್ರಾರಂಭಿಸಿಬಿಟ್ಟರು. ಎಸ್ತರ್ ಮತ್ತು ಮೆನನ್ ತೀವ್ರ ಆತಂಕಗೊಂಡು ತಂತಿಗಳನ್ನು ಕಳುಹಿಸಿದರು, ಕಾಗದಗಳನ್ನು ಬರೆದರು. ತಮ್ಮ ಆಂತರಿಕ ತುಮುಲವನ್ನು ತೋಡಿಕೊಂಡರು. ಸಿ. ಎಫ್. ಆಂಡ್ರೂಸ್ ಮತ್ತು ಹೊರೆಸ್ ಅಲೆಕ್ಸಾಂಡರ್ ಅವರ ಸಂದೇಶಗಳೂ ತಲುಪಿದ್ದವು.

ಅಂಥ ಸಂಧಿಗ್ಧ ಘಳಿಗೆಯಲ್ಲೂ ಗಾಂಧೀಜಿ ಎಸ್ತರ್‌ಗೆ ಸಾಂತ್ವನಗೊಳಿಸಿ ಬರೆದರು. “ಅಗ್ನಿಪರೀಕ್ಷೆಯ ಮೂಲಕವೇ ದೈವಸಾಕ್ಷಾತ್ಕಾರ ಸಾಧ್ಯವಲ್ಲದೆ ಅನ್ಯಥಾ ಇಲ್ಲ. ಇಂಥ ಶುದ್ಧಗೊಳಿಸುವ ಸಂಕಟ ಅನುಭವಿಸುವುದರಲ್ಲಿ ನಮ್ಮ ಅರಿವಿಲ್ಲದೆಯೇ ಒಂದು ಅತ್ಯಂತ ದಿವ್ಯಾನಂದ ನಮ್ಮ ಅಂತರ್ಯವನ್ನಾವರಿಸಿರುತ್ತದೆ. ನೀನೂ ನನ್ನೊಡನೆ ಈ ಪರೀಕ್ಷೆಯ ಸಮಯದಲ್ಲಿ ಭಾಗಿಯಾಗಬೇಕು” ಎಂದು ಗಾಂಧೀಜಿ ತಿಳಿಸಿದರು. ಈ ಉಪವಾಸ ಮುಕ್ತಾಯವಾದುದನ್ನು ತಿಳಿದು ಅತ್ಯಂತ ಹರ್ಷಗೊಂಡ ಮೆನನ್ ದಂಪತಿಗಳು ಪತ್ರ ಬರೆದರು. ಸಾರ್ವಜನಿಕ ಹಣದಿಂದ ನಡೆಯುತ್ತಿದ್ದ ಕ್ವೇಕರ್ ಕೇಂದ್ರದ ಹಣವನ್ನು ತಮ್ಮ ಭಾವೋದ್ರೇಕಕ್ಕೆ ಒಗೊಟ್ಟು ತಂತಿಗಾಗಿ ಖರ್ಚು ಮಾಡದಿದ್ದುದನ್ನು ಗಮನಿಸಿ ಗಾಂಧೀಜಿ ಶ್ಲಾಘಿಸಿದರು. ಅಲ್ಲಿಯ ಒಂದೊಂದು ಪೈಸೆಯನ್ನೂ ಎಚ್ಚರದಿಂದ ಕಾಯ್ದುಕೊಂಡು ಬಡವರ ಸೇವೆಗಾಗಿರುವ ವಿಶ್ವಸ್ತರಂತೆ ವಿನಿಯೋಗಿಸಬೇಕು ಎಂದರು.

ಎಸ್ತರ್ ತನ್ನ ಮಕ್ಕಳಿಗೆ ತಮಿಳುನಾಡಿನವರಂತೆ ತಂಗೈ ಮತ್ತು ನ್ಯಾನ್ ಎಂದು ಹೆಸರಿಟ್ಟಿದ್ದರು. 1934ರಲ್ಲಿ ಮೆನನ್ ದಂಪತಿಗಳು ಮತ್ತೆ ಭಾರತಕ್ಕೆ ಹಿಂತಿರುಗಿದರು. ಪಾಂಡಿಚೇರಿಯ ಬಳಿ ಕುಮಾರಿ ಮೇರಿಯಾ ನಡೆಸುತ್ತಿದ್ದ ಸೇವಾಕ್ಷೇತ್ರ ಪೋರ್ಟೋನೋವೋಗೆ ಬಂದು ಸೇರಿದರು. ಕ್ವೇಕರ್ ಗುಂಪಿನ ಕ್ರೈಸ್ತಮತ ಪ್ರಚಾರಕರು ಸ್ವತಂತ್ರವಾಗಿ

ನಡೆಸುತ್ತಿದ್ದ ಇಂಥ ಹಲವು ಸೇವಾಕೇಂದ್ರಗಳು ಭಾರತದಲ್ಲಿ ತಲೆಯೆತ್ತಿದ್ದವು. ಅವರಲ್ಲಿ ಬಹುಪಾಲು ಕಾರ್ಯಕರ್ತರು ಜಗತ್ತಿನ ನಾನಾ ಕಡೆ ನಡೆಯುತ್ತಿದ್ದ ಜನಾಧಾರಿತ ಶಾಂತಿ ಚಳುವಳಿಗಳಲ್ಲಿ ಮತ್ತು ಯುದ್ಧ ವಿರೋಧೀ ಚಳುವಳಿಗಳಲ್ಲಿ ಸೇರುತ್ತಿದ್ದರು. ಗಾಂಧೀ ಮಾರ್ಗದಲ್ಲಿ ಅವರಿಗೆ ಅಚಲ ಶ್ರದ್ಧೆ ಬೆಳೆಯಿತು. ಮೆನನ್ ಮತ್ತು ಎಸ್ತರ್ ಈ ಗುಂಪಿಗೆ ಪ್ರೇರಕಶಕ್ತಿಯಾಗಿದ್ದರು. ಮಧ್ಯಪ್ರದೇಶದ ಹೋಷಾಂಗಬಾದ್ ಬಳಿ ರಸೂಲಿಯಾದಲ್ಲಿರುವ ಅಂತರಾಷ್ಟ್ರೀಯ "ಫ್ರೆಂಡ್ಸ್ ರೂರಲ್ ಸೆಂಟರ್" ಇವರ ಪ್ರಧಾನ ಕೇಂದ್ರ.

ಕೆಲವು ಕಾಲ ಪೋರ್ಟೋನೋವೋ ಕೇಂದ್ರದಲ್ಲಿ ಕೆಲಸ ಮಾಡಿದ ಮೇಲೆ ಎಸ್ತರ್ ಫಿಯರಿಂಗ್‌ನ ಆರೋಗ್ಯ ಕೆಟ್ಟಿತು. ಮಕ್ಕಳಿಗೂ ಅಲ್ಲಿನ ಹವ ಒಗ್ಗಲಿಲ್ಲ. ಅನಿವಾರ್ಯವಾಗಿ ಕೊಡೈಕೆನಾಲ್ ಗಿರಿಧಾಮದಲ್ಲಿ ಹೋಗಿ ನೆಲಸಬೇಕಾಯಿತು. ಮೂಲಕೇಂದ್ರದ ಜವಾಬ್ದಾರಿಯನ್ನೆಲ್ಲ ಡಾ. ಮೆನನ್ ವಹಿಸಬೇಕಾಯಿತು. ಕುಮಾರಿ ಪೀಟರ್ಸ್‌ನ ವೃದ್ಧಾಪ್ಯದಲ್ಲಿ ಡೆನ್ಮಾರ್ಕಿಗೆ ಹಿಂತಿರುಗಿದರು. ತಂಗೈ ಮತ್ತು ನ್ಯಾನ್ ತಮ್ಮ ಗಾಂಧಿ ತಾತನಿಗೆ ಪ್ರೀತಿಯ ಪತ್ರಗಳನ್ನು ಬರೆಯತೊಡಗಿದ್ದರು. ಗಾಂಧೀಜಿಯೂ ಅಷ್ಟೇ ಪ್ರೀತಿಯಿಂದ ಉತ್ತರಿಸಿ ಆ ಮಕ್ಕಳ ಮೇಲೆ ಪ್ರೇಮದ ಮಳೆಗರೆದರು. 1940ರವರೆವಿಗೂ ಎಸ್ತರ್ ದಕ್ಷಿಣ ಭಾರತದ ಕೇಂದ್ರದಲ್ಲೇ ಕೆಲಸ ಮಾಡಿದರು. ಸ್ವಾತಂತ್ರ್ಯ ಸಂಗ್ರಾಮ ಮಜಲಿನಿಂದ ಮಜಲಿಗೆ ತೀವ್ರವಾಗುತ್ತ ಸಾಗಿತ್ತು. 1937ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾದಾಗ ಡೆನ್ಮಾರ್ಕ್ ಮಿತ್ರದೇಶಗಳೊಂದಿಗಿದ್ದುದರಿಂದ ಈ ಡಚ್ ಮಿಷನರಿಗಳಿಗೆ ಹೆಚ್ಚು ತೊಂದರೆಯಾಗಲಿಲ್ಲ.

ಎಸ್ತರ್ ತನ್ನ ಮಕ್ಕಳೊಡನೆ ಆಗಾಗ್ಗೆ ಸೇವಾಗ್ರಾಮ ಆಶ್ರಮಕ್ಕೂ ಭೇಟಿ ನೀಡುತ್ತಿದ್ದರು. ಅಸ್ಪೃಶ್ಯತಾ ನಿವಾರಣೆಯ ಪ್ರಚಂಡ ಚಳುವಳಿಯಲ್ಲಿ ಗಾಂಧೀಜಿಗೆ ನೆರವಾಗಿ ನಿಂತರು. ಹರಿಜನರ ಮಕ್ಕಳಿಗಾಗಿ ಶಾಲೆಗಳನ್ನು ತೆರೆಯಲು ಪ್ರೋತ್ಸಾಹ ನೀಡಿದರು. ಹರಿಜನರಿಗೆ ದೇವಾಲಯ ಪ್ರವೇಶದ ಬಗ್ಗೆ ಗಾಂಧೀಜಿಯೊಡನೆ ಚರ್ಚೆ ನಡೆಸುತ್ತಿದ್ದರು. ಎಸ್ತರ್‌ಗೆ ಈ ಕಾರ್ಯಕ್ಕಿಂತ ಅಸ್ಪೃಶ್ಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ

ಹೆಚ್ಚು ಪ್ರಾಶಸ್ತ್ಯಕೊಡಬೇಕೆನಿಸಿತು. ಈ ಚಳುವಳಿಯ ಮಧ್ಯೆ ಗಾಂಧೀಜಿ ಕೇರಳದ ವೈಕಂ ಸತ್ಯಾಗ್ರಹ ಬೆಂಬಲಿಸಿ ಅಲ್ಲಿನ ಗಾಂಧೀವಾದಿ ಕೇಳಪ್ಪನ್ ಅವರ ಉಪವಾಸ ಸತ್ಯಾಗ್ರಹವನ್ನು ಹರಸಿದರು. ಈ ಬಗ್ಗೆ ಎಸ್ತರ್‌ಗೆ ದೇವಾಲಯ ಪ್ರವೇಶ ಚಳುವಳಿ ಏಕೆ ಎಂದು ಹೀಗೆ ವಿವರಿಸಿದರು:-

"ಕೇವಲ ದೇವಾಲಯ ಪ್ರವೇಶವೊಂದೇ ಹರಿಜನರ ಆಧ್ಯಾತ್ಮಿಕ ವಿಕಾಸಕ್ಕೆ ಸಾಕು ಎಂದು ನಾನು ಭಾವಿಸಿಲ್ಲ. ಆದರೆ ಅಹಂಕಾರ ಗ್ರಸ್ತರಾದ ಸವರ್ಣೀಯರು ಈ ಚಳುವಳಿಯಿಂದ ಆಧ್ಯಾತ್ಮಿಕ ಲಾಭ ಪಡೆಯುತ್ತಾರೆ ಎಂದು ತಿಳಿಯುತ್ತೇನೆ. ಒಂದೇ ಧರ್ಮದವರಾದ ಇತರರಿಗೂ ತಮ್ಮಂತೆಯೇ ಭಗವಂತನನ್ನು ಆರಾಧಿಸುವ ಹಕ್ಕುಂಟು; ಅಸ್ಪೃಶ್ಯತೆ ಒಂದು ಮಹಾಪಾಪ ಎಂದು ಎಲ್ಲಿಯವರೆಗೆ ಅವರು ಅಂಗೀಕರಿಸುವುದಿಲ್ಲವೋ ಅಲ್ಲಿಯವರೆಗೆ ಅವರಿಗೆ ಆಧ್ಯಾತ್ಮಿಕ ಉನ್ನತಿ ಸಾಧ್ಯವೇ ಇಲ್ಲ. ಆದ್ದರಿಂದ ಈ ಕಳಂಕಪೂರ್ಣ ಸಮಾಜದ ಆತ್ಮೋನ್ನತಿಯೇ ನನ್ನ ಗುರಿ" ಎಂದು ಗಾಂಧೀಜಿ ವಾದ ಮಾಡಿದರು. ಎಸ್ತರ್‌ಗೆ ಇದು ಸರಿ ಎನಿಸಿತು. ಮಿಕ್ಕೆಲ್ಲ ಧರ್ಮಗಳಲ್ಲೂ ಈ ತಾರತಮ್ಯ ಇಲ್ಲದಿರುವುದರಿಂದ ಹೇಗೆ ಹಿಂದೂಧರ್ಮ ಅಪವಾದಕ್ಕೀಡಾಗಿದೆ ಎಂದು ಗಮನಿಸಿದರು. ಸಾಮಾಜಿಕ ಸಮಾನತೆ ನ್ಯಾಯೋಚಿತವಾಗಿ ಹರಿಜನರಿಗೆ ದೊರೆಯುವುದು ಭಾರತದ ಸ್ವಾತಂತ್ರ್ಯ ಸಮರದ ಒಂದು ಪ್ರಧಾನ ಗುರಿ ಎಂದು ಬಾಪೂ ನಂಬಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಬಂದನಂತರ ಈ ದೇಶ ಉತ್ಸಾಹದಿಂದ ಗಾಂಧೀ ಮಾರ್ಗವನ್ನಲಂಬಿಸಿ ತನ್ನ ಸಾಂಸ್ಕೃತಿಕ ಮತ್ತು ಆರ್ಥಿಕ ದಾಸ್ಯಗಳನ್ನು ಶೀಘ್ರವಾಗಿ ತೊಡೆದುಕೊಳ್ಳುವುದೆಂಬ ಮಹದಾಸೆ ಹೊಂದಿದ್ದರು ಎಸ್ತರ್. ಆಶ್ರಮರೀತಿಯ ಜೀವನ ಶಿಕ್ಷಣ ಶಾಲೆಗಳು, ಧಾರ್ಮಿಕ ಸೌಹಾರ್ದ, ಗ್ರಾಮ ಭಾರತದ ಸಮಗ್ರ ಪುನರ್ರಚನೆ ಮತ್ತು ವಿಶ್ವಶಾಂತಿಯ ಸರ್ವಪ್ರಯತ್ನಗಳಿಗೆ ಭಾರತದ ನಾಯಕವರ್ಗ ದೀಕ್ಷಾಬದ್ಧವಾಗಿ ಶ್ರಮಿಸುವುದೆಂದು ನಂಬಿದ್ದರು. ಮೆನನ್ ಮತ್ತು ಎಸ್ತರ್‌ಗೆ ಗಾಂಧೀಜಿಯ ಹಠಾತ್ ನಿಧನ ಜಗತ್ತಿಗೇ ಒಂದು ಪ್ರಬಲ ಆಘಾತವೆನಿಸಿತು. ವಾರ್ಧಾದಲ್ಲಿನ ನಿಷ್ಠಾವಂತ ರಚನಾತ್ಮಕ

ಕಾರ್ಯಕರ್ತರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ತಮ್ಮ ಶಿಕ್ಷಣ ಪ್ರಯೋಗಗಳನ್ನು ವ್ಯಾಪಕಗೊಳಿಸಿದರು. ನೀಲಗಿರಿಯ ಕೋಟಗಿರಿಯಲ್ಲಿ ಮತ್ತೊಬ್ಬ ಕ್ವೇಕರ್ ಗಾಂಧೀವಾದಿ ಮಾರ್ಜೊರಿಸೈಕ್ಸ್ ಅವರು 'ಅಮೈದಿ ಅಹೊಂ' (ತಮಿಳಿನಲ್ಲಿ ಮೈತ್ರಿಸದನ) ಎಂಬ ಕೇಂದ್ರ ಸ್ಥಾಪಿಸಿದ್ದರು. 1951ರಲ್ಲಿ ಎಸ್ತರ್ ಈ ಸೇವಾ ಕೇಂದ್ರದ ನಿಕಟ ಸಂಪರ್ಕ ಹೊಂದಿದ್ದರು.

ಕೋಟಗಿರಿಯಲ್ಲಿ ಆಗಾಗ್ಗೆ ಶಿಕ್ಷಕರ ಪುನಶ್ಚಿಂತನ ಶಿಬಿರಗಳು ಪ್ರತಿ ಬೇಸಿಗೆಯಲ್ಲಿ ನಡೆಯುತ್ತಿದ್ದವು. ಒಮ್ಮೆ ಮದ್ರಾಸಿನಿಂದ ಪ್ರಿನ್ಸಿಪಾಲ್ ಡಿ. ಎಸ್. ರಾಮಚಂದ್ರರಾಯರು ಅಲ್ಲಿಗೆ ಹೋಗಿದ್ದರು. ಮೆನನ್ ಮತ್ತು ಎಸ್ತರ್ ಅವರ ಪರಿಚಯವಾಯಿತು. ಆತ್ಮೀಯ ಸಂಭಾಷಣೆಯಲ್ಲಿ ಎಸ್ತರ್ ಹೀಗೆಂದರು "ನನ್ನನ್ನು ಕಂಡರೆ ಬಾಪುವಿಗೆ ತುಂಬ ವಾತ್ಸಲ್ಯ. ಅನೇಕ ವರ್ಷಗಳ ಕಾಲ ನನಗವರು ಪತ್ರಗಳನ್ನು ಬರೆದರು. ಈ ಅಮೂಲ್ಯ ಪತ್ರಗಳನ್ನು ನಾನು ಶೇಖರಿಸಿಟ್ಟುಕೊಂಡಿದ್ದೇನೆ.... ನನ್ನಂಥ ಅತಿಸಾಧಾರಣ ವ್ಯಕ್ತಿಯೊಡನೆ ಇಷ್ಟು ಪ್ರೇಮದಿಂದ ತಮ್ಮ ಅತ್ಯಂತ ಕಾರ್ಯನಿಬಿಡ ದಿನಚರಿಯಲ್ಲಿ ಸಮಯ ಕೊಟ್ಟು ಮಾರ್ಗದರ್ಶನ ಮಾಡುತ್ತಿದ್ದುದು ಒಂದು ಆಶ್ಚರ್ಯಕರ ಪವಾಡವಲ್ಲವೇ." ರಾಮಚಂದ್ರರಾಯರಿಗೆ ಕುತೂಹಲ ಕೆರಳಿತು. ಒಂದು ನೂರಕ್ಕೂ ಮಿಗಿಲಾಗಿದ್ದ ಈ ಪತ್ರಗುಚ್ಛವನ್ನು ಪಡೆದು ನಿಧಾನವಾಗಿ ಓದಿದರು. ಬಾಪೂವಿನ ಕೈ ಬರಹ ಓದಲು ಬಹಳ ಕಷ್ಟವಾಗುತ್ತಿತ್ತು. ಎಂತೆಂತಹ ಸಂದರ್ಭಗಳಲ್ಲಿ, ಅರ್ಧರಾತ್ರಿಯಲ್ಲಿ, ರೈಲು ಪ್ರಯಾಣದಲ್ಲಿ, ಸೆರೆಮನೆಯಲ್ಲಿದ್ದಾಗ, ಉಪವಾಸದ ಮಧ್ಯದಲ್ಲಿ, ಖಾಯಿಲೆಯಿಂದ ಹಾಸಿಗೆ ಹಿಡಿದಾಗ ಈ ಕಿರಿಯ ಮಗಳನ್ನು ಮರೆಯದೆ ಬರೆದ ಪತ್ರಗಳನ್ನು ನೋಡಿ ಶ್ರೀ ರಾಯರು ಅವಾಕ್ಕಾದರು. ಅವುಗಳಲ್ಲಿ ಸಾರ್ವಕಾಲಿಕ ಮೌಲ್ಯವುಳ್ಳ ಮಾರ್ಗದರ್ಶಿ ಸೂಚನೆಗಳಿದ್ದವು. "ಇದೊಂದು ಅಪೂರ್ವ ಆಸ್ತಿ. ಗಾಂಧೀಜಿಯನ್ನು ಗೌರವಿಸುವರೆಲ್ಲರಿಗೂ ಇದು ಅಮೂಲ್ಯ ಕಾಗದಗಳು. ಇದನ್ನು ಸಂಪಾದಿಸಿ ಪ್ರಕಟಿಸಿದರೆ ಭಾರತದಲ್ಲದೆ ಜಗತ್ತಿನ ಇತರ ಕಡೆಗಳಲ್ಲೂ ಇರುವ ಗಾಂಧೀ ಮಾರ್ಗದ ಸಾಧಕರಿಗೆ ತುಂಬ ಉಪಯುಕ್ತವಾದೀತು" ಎಂದರು.

ಎಸ್ತರ್ ಬಹಳ ಸಂಕೋಚದಿಂದ ಸಮ್ಮತಿಸಿ ತನ್ನ ಸಹಕಾರ್ಯಕರ್ತೆ ಆಲಿಸ್ ಎಂ. ಬಾರ್ನಸ್ ಅವರ ಸಹಕಾರದಿಂದ ಸಂಕಲನ ಮಾಡಿದರು. ಗಾಂಧೀಜಿಯ ಸ್ವಂತ ಬರವಣಿಗೆಗಳ ಸರ್ವಸ್ವಾಮ್ಯ ಪಡೆದಿರುವ ಅಹಮದಾಬಾದಿನ ನವಜೀವನ ಟ್ರಸ್ಟಿನವರು 1956ರಲ್ಲಿ ಅವುಗಳನ್ನು ಪ್ರಕಟಿಸಿದರು. ಅದರ ಶೀರ್ಷಿಕೆಯೇ "ಮೈ ಡಿಯರ್ ಚೈಲ್ಡ್" ಎಂದು ಕೊಡಲಾಗಿದೆ. ಮುನ್ನುಡಿಯಲ್ಲಿ ಎಸ್ತರ್ ಹೀಗೆ ಹೇಳಿಕೊಂಡಿದ್ದಾರೆ.

"ಗಾಂಧೀಜಿಯ ಈ ಪವಿತ್ರ ಪತ್ರಗಳು ನನಗೊಂದು ಅಮೂಲ್ಯ ಆಸ್ತಿ. ಅದೊಂದೇ ನನಗಿರುವ ಪಿತ್ರಾರ್ಜಿತ ಸಂಪತ್ತು. ಸಂಕೋಚದಿಂದಲೇ ಅವುಗಳನ್ನು ಪ್ರಕಟಿಸುತ್ತಿದ್ದೇನೆ. ಜಗತ್ತಿನ ಮೂಲೆ ಮೂಲೆಗಳಲ್ಲಿ ಸಾಧಕರಂತೆ ಸೇವೆ ಮಾಡುತ್ತಿರುವ ಅಸಂಖ್ಯಾತ ಗಾಂಧೀವಾದಿಗಳಿಗೆ ಇದು ಪ್ರಿಯವಾಗುವುದೆಂದು ನನ್ನ ನಂಬಿಕೆ. ಕರ್ತವ್ಯ ದೃಷ್ಟಿಯಿಂದ ಮಾಡುತ್ತಿದ್ದೇನೆ. ಬಾಪುವಿನ ವಿಶ್ವವ್ಯಾಪಕ ಪ್ರೇಮ, ವ್ಯಕ್ತಿಯ ಬಗ್ಗೆ ಆಶ್ಚರ್ಯಕರ ತಿಳುವಳಿಕೆ, ಎಲ್ಲಕ್ಕಿಂತ ಮಿಗಿಲಾಗಿ ಅವರ ಆಳವಾದ ಆಧ್ಯಾತ್ಮಿಕ ಮನೋವೃತ್ತಿ. ಈ ಪತ್ರಗಳಲ್ಲಿ ಅನಾವರಣವಾಗಿವೆ."

ಗಾಂಧೀಜಿಯ ಅಮರ ಆತ್ಮಪ್ರಭೆ ಅಖಂಡವಾಗಿ ಜಗತ್ತಿನಲ್ಲಿ ಆಚಂದ್ರಾರ್ಕವಾಗಿ ಬೆಳಗುತ್ತಲೇ ಸಾಗುತ್ತದೆ ಎಂಬ ಅಚಲವಿಶ್ವಾಸದಿಂದ ತಮ್ಮ ಜೀವನೋತ್ಸಾಹವನ್ನು ರೂಪಿಸಿಕೊಂಡ ಅಸಂಖ್ಯಾತ ಸೇವಾನಿಷ್ಠರಲ್ಲಿ ಎಸ್ತರ್ ಫೀಯರಿಂಗ್ ಸೇರಿ ಹೋಗಿದ್ದಾರೆ.

ಶ್ರೇಷ್ಠ ಸಾಧುಸಂತರ ಶ್ರೇಣಿಗೆ ಸೇರಲರ್ಹರಾದ ಅನೇಕ ವಿದೇಶೀ ಗಾಂಧೀ ಶಿಷ್ಯೆಯರು ಅವರ ನಂತರವೂ ಸ್ವತಂತ್ರ ಭಾರತದಲ್ಲಿ ತಮ್ಮ ತಮ್ಮ ಆಶ್ರಮಗಳನ್ನು ಸ್ಥಾಪಿಸಿ ನಡೆಸುತ್ತಲೇ ಸಾಗಿದರು. ಆದರೆ ಭಾರತದ ನಾಯಕ ಶ್ರೇಣಿ ಗಾಂಧಿ ಮಾರ್ಗದಿಂದ ವಿಚಲಿತರಾಗಿ ಪಾಶ್ಚಾತ್ಯ ನಾಗರಿಕತೆಯ ದಾಸರಾದುದನ್ನು ಕಂಡು ಭ್ರಮನಿರಸನಗೊಂಡರು. ಮೀರಾಬಹೆನ್, ಮಾರ್ಜೋರಿಸೈಕ್ಸ್, ಸರಳಾದೇವಿ ಮುಂತಾದ ವಿದೇಶಿ ಮಹಿಳಾ ಕಾರ್ಯಕರ್ತೆಯರಂತೆ ಎಸ್ತರ್ ಫಿಯರಿಂಗ್ ಕೂಡ ಕೊನೆಯ ದಿನಗಳನ್ನು ನಿರಾಶರಾಗಿಯೇ ಕಳೆಯಬೇಕಾಯಿತು.

○

4. ಟ್ಸೆಂಗ್ ಪಾನ್ ತಿ (ಶಾಂತಿ ಟ್ಸೆಂಗ್)
(ಚೀನಾ)

ಆಧುನಿಕ ಭಾರತದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಕವಿ ರವೀಂದ್ರರು 1924ರಲ್ಲಿ ಚೀನಾಕ್ಕೆ ಭೇಟಿಯಿತ್ತಿದ್ದರು. ಅಲ್ಲಿನ ತರುಣ ಸಾಹಿತಿ ಇಪ್ಪತ್ತು ವರ್ಷ ಹರೆಯದ ಟ್ಸೆಂಗ್-ಪಾನ್-ತಿ ಭಾರತದ ತೇಜಸ್ವೀ ಕಾವ್ಯಸಂಪತ್ತಿಗೆ ಮಾರುಹೋದರು. ರವೀಂದ್ರರ ಗೀತಾಂಜಲಿ, ಹಾರುವ ಹಕ್ಕಿಗಳು ಮತ್ತು ಸಣ್ಣಕಥೆಗಳ ಪರಿಚಯದಿಂದ ಭಾರತಭೂಮಿಯ ಸುಂದರ ಚಿತ್ರಗಳು ಅವರ ಚಿತ್ತಭಿತ್ತಿಯಲ್ಲಿ ಮೂಡಿದವು. ಅವರೇ ಅನ್ನುವಂತೆ "ದಟ್ಟ ಅರಣ್ಯಗಳು, ಮಂಜುಕವಿದ ಶಿಖರಗಳು, ಗಡ್ಡಬಿಟ್ಟ ಸಾಧುಸಂತರು, ಪೇಟಧಾರಿಗಳು, ಬುದ್ಧನ ಮೂರ್ತಿಗಳು ನನ್ನನ್ನು ಕಲ್ಪನೆಯ ಸಮುದ್ರದಲ್ಲಿ ಮುಳುಗಿಸಿಬಿಟ್ಟವು." ಸಂಸ್ಕೃತ ಕಲಿಯಲು ಭಾರತಕ್ಕೆ ಹೋಗುವ ಆಸೆ ಪ್ರಬಲವಾಯಿತು. ಕೂಡಲೇ ಸಂಕಲ್ಪಿಸಿ ಕಲ್ಕತ್ತೆಗೆ ಬಂದಿಳಿದು ಅಲ್ಲಿಂದ ಶಾಂತಿನಿಕೇತನಕ್ಕೆ ಧಾವಿಸಿದರು. ಅಲ್ಲಿನ ಚೀನೀಭವನ ಅವರನ್ನು ತೆರೆದ ಬಾಹುಗಳಿಂದ ಸ್ವಾಗತಿಸಿತು.

ಬೆಚ್ಚನೆಯ ನಿಸರ್ಗ ನಿರ್ಮಿತ ಹಕ್ಕಿಗೂಡುಗಳಂತಿದ್ದ ಗುಡಿಸಲುಗಳ ಸುಂದರ ತಾಣ ರವೀಂದ್ರರ ತಪೋಭೂಮಿ. ಆಶ್ರಮವಾಸಿಗಳೆಲ್ಲ ಸುಸಂಸ್ಕೃತರು ವಿದ್ಯಾಸಾಧಕರು. ಸರಳ ಜೀವಿಗಳಾಗಿ ಕಲಾಪ್ರಪಂಚದ ಸುಮಧುರ ಪರಿಸರದಲ್ಲಿ ಗುರುದೇವನ ಸಾನ್ನಿಧ್ಯವನ್ನು ಪಡೆದ ಈ ವಿಶಾಲ ಕುಟುಂಬಕ್ಕೆ ಟ್ಸೆಂಗ್ ಶ್ರಮವಿಲ್ಲದೆ ಸೇರಿಹೋದರು. ಅದೇ

ಕಾಲಕ್ಕೆ ಅಲ್ಲಿ ವಿದ್ಯಾರ್ಥಿಯಾಗಿದ್ದ ಸುಪ್ರಸಿದ್ಧ ಗಾಂಧೀವಾದಿ ಜಿ. ರಾಮಚಂದ್ರನ್ ಅವರ ನಿಕಟ ಸ್ನೇಹ ಈ ಚೀನೀ ಸೋದರನಿಗೆ ಅನಿರೀಕ್ಷಿತ ಪ್ರೇಮಧಾರೆಯಾಗಿ ಪರಿಣಮಿಸಿತು. ಇಬ್ಬರಿಗೂ ರವೀಂದ್ರರಲ್ಲಿ ಎಷ್ಟು ಗಾಢವಾದ ಪ್ರೇಮವೋ ಅಷ್ಟೇ ಗಾಢವಾದ ಭಕ್ತಿ ಗಾಂಧೀಜಿ ಅವರಲ್ಲಿ. ಯಾರನ್ನು ರವೀಂದ್ರರೇ ಮಹಾತ್ಮ ಎಂದು ಕರೆದು ಗೌರವಿಸಿದರೋ ಆ ಪುಣ್ಯಾತ್ಮನ ದರ್ಶನಕ್ಕಾಗಿ ಈ ಎಳೆಯ ಉದಯೋನ್ಮುಖ ಭಾವುಕ ಜೀವಿಗಳು ಹಾತೊರೆಯುತ್ತಿದ್ದರು.

ನಾಳೆ ಬೆಳಿಗ್ಗೆ ಮಹಾತ್ಮ ಗಾಂಧಿ ಬರುತ್ತಿದ್ದಾರೆ ಎಂದು 1925ರ ಆದಿಭಾಗದಲ್ಲಿ ಒಂದು ಸಂಜೆ ರಾಮಚಂದ್ರನ್ ತಮ್ಮ ಗೆಳೆಯ ಟ್ಸೆಂಗ್‌ಗೆ ತಿಳಿಸಿದರು. ಮಿಂಚು ಸುಳಿದಂತೆ ಆಯಿತು. ಬೆಳಗಿನ ಜಾವಕ್ಕೇ ಶಾಂತಿನಿಕೇತನದಲ್ಲಿ ಎಲ್ಲಿಲ್ಲದ ಸಂಭ್ರಮ. ಎಲ್ಲೆಲ್ಲೂ ಖಾದಿ ಟೋಪಿ ಧರಿಸಿದ ಸ್ವಯಂಸೇವಕರು. ಇಡೀ ಆಶ್ರಮಕ್ಕೆ ತಳಿರುತೋರಣಗಳ ಕಲಾತ್ಮಕ ಸಿಂಗಾರ. ಎರಡು ಮಹಾಚೇತನಗಳ ಸಮಾಗಮದ ಅಮೃತಘಳಿಗೆಗಾಗಿ ಪ್ರಕೃತಿ ಮಾತೆಯೇ ಸ್ವಾಗತಿಸಲು ನಿಂತಳು ಎನ್ನಿಸಿತು. ಕವಿ ಟ್ಸೆಂಗ್-ಷಾನ್-ತಿ ಗೆ ಅವರ ಆಕಾಂಕ್ಷೆಯಿೀಡೇರುವ ಸಮಯ ಬಂದಿತ್ತು.

ಗ್ರಾಮವಾಸಿಗಳ ಬೃಹತ್‌ಸಮೂಹವೆ ಬೋಲ್‌ಪುರ ರೈಲು ನಿಲ್ದಾಣದಲ್ಲಿ ತುಂಬಿ ತುಳುಕುತ್ತಿತ್ತು. "ಮಹಾತ್ಮ ಗಾಂಧೀ ಕಿ ಜೈ" ಘೋಷ ಗಗನ ಮುಟ್ಟುತ್ತಿತ್ತು. ಶಾಂತಿನಿಕೇತನದಿಂದ ಅಲಂಕೃತವಾದ ಕುದುರೆಗಾಡಿಯೊಂದನ್ನು ತಂದಿದ್ದರು. ಗಾಂಧೀಜಿ ಅದನ್ನು ಹತ್ತಲು ನಿರಾಕರಿಸಿ ನಡೆದೇ ಹೊರಟುಬಿಟ್ಟರು. ಜನಸ್ತೋಮ ಹಿಂಬಾಲಿಸುತ್ತಲೇ ಇತ್ತು. ಕವಿ ರವೀಂದ್ರರು ನೀಳವಾದ ರೇಷ್ಮೆ ನಿಲುವಂಗಿ ಧರಿಸಿ ಬಾಗಿಲಲ್ಲೇ ಕಾದಿದ್ದರು. ಅರೆಬೆತ್ತಲೆಯ ಬೈರಾಗಿ ಗಾಂಧೀಜಿಯನ್ನು ಕಾಣುತ್ತಲೇ ಓಡಿಬಂದು ತಬ್ಬಿಕೊಂಡು ಸ್ವಾಗತಿಸಿದರು. ಆ ದೃಶ್ಯ ಕಂಡು ಜನಸ್ತೋಮವೇ ಹೋ ಎಂದು ಭಾವಪೂರಿತರಾಗಿ ಧ್ವನಿಯೆತ್ತಿತ್ತು. ಭಾರತವೇ ಆ ಅಮೃತಘಳಿಗೆಯಲ್ಲಿ ಮೂಕವಾಗಿ ತನ್ನ ಅಮೃತಪುತ್ರರ

ಮೇಲೆ ಹರಕೆಯ ಮಳೆಗೆರೆದಂತೆ ಭಾಸವಾಯಿತು. ಟ್ಸೆಂಗ್ ಷಾನ್ ತಿ ಅವರ ಕವಿ ಹೃದಯವನ್ನು ಈ ಅಪೂರ್ವ ದೃಶ್ಯ ತುಂಬಿ, ಮಾತೇ ಹೊರಡದಾಯಿತು. ಧನ್ಯತೆಯ ಭಾವ ಹರಿಯಿತು.

ಗಾಂಧೀಜಿ ಜೊತೆಯಲ್ಲಿ ಮಹದೇವ ದೇಸಾಯಿ, ಪ್ಯಾರೆಲಾಲ್ ಮತ್ತು ರಾಮಚಂದ್ರನ್ ಇದ್ದರು. ಟ್ಸೆಂಗ್ ಅವರೂ ಅವರ ಗುಂಪಿನಲ್ಲಿ ಸೇರಿದರು. ಮಹದೇವ ಭಾಯಿ ಈ ಚೀನೀ ಸೋದರನನ್ನು ಗಾಂಧೀಜಿಗೆ ಪರಿಚಯಿಸಿದರು. ಟ್ಸೆಂಗ್ ಬುದ್ಧಧರ್ಮದ ವಿನಯದಿಂದಲೇ 'ನಮಸ್ತೆ ಮಹಾತ್ಮರಿಗೆ' ಅಂದರು. ಬಾಪೂ ಇಂಗ್ಲೀಷಿನಲ್ಲಿ "ಓ ನಿನಗೆ ಹಿಂದಿ ಬರುತ್ತದೆ ಹಾಗಾದರೆ!" ಎಂದರು. 'ಇಲ್ಲ, ಈ ಒಂದು ಪದ ಮಾತ್ರ' ಎಂದರು ಟ್ಸೆಂಗ್. "ನಿಧಾನವಾಗಿ ಕಲಿ, ಹಿಂದಿ ಬಹಳ ಸುಲಭ ಭಾಷೆ" ಎಂದು ಸುಮ್ಮನಾದರು. ಅನಂತರ ಗೆಳೆತನ ಬೆಳೆಯಿತು. ಚೀನೀಯರ ವ್ಯವಸಾಯಕ್ರಮಗಳ ಬಗ್ಗೆ ಗಾಂಧೀಜಿ ಕುತೂಹಲದಿಂದ ಕೇಳಿದರು. ನಮ್ಮಿಬ್ಬರದೂ ವ್ಯವಸಾಯ ಪ್ರಾಧಾನ ದೇಶಗಳು. ಈಗ ನಾವು ದಾರಿದ್ರ್ಯವನ್ನನುಭವಿಸುತ್ತಿದ್ದೇವೆ ಎಂದುಕೊಂಡರು. ಟ್ಸೆಂಗ್‌ನ ಹೆಸರು ಮತ್ತು ವಿವರಗಳನ್ನು ತಿಳಿದುಕೊಂಡರು ಬಾಪೂ. ಶಾಂತಿನಿಕೇತನದಲ್ಲಿ ಆತ ಸಂಸ್ಕೃತ ಕಲಿಯುತ್ತಿರುವುದನ್ನು ಕೇಳಿ ಹರ್ಷಿಸಿದರು. "ಸಬರಮತಿಯ ಬಳಿ ನಮ್ಮದೂ ಒಂದು ವಿದ್ಯಾಕೇಂದ್ರವುಂಟು. ಒಮ್ಮೆ ಅಲ್ಲಿಗೂ ಬಂದು ಹೋಗು" ಎಂದಾಗ ಟ್ಸೆಂಗ್ ಷಾನ್ ತಿ ಯ ಆನಂದಕ್ಕೆ ಪಾರವೇ ಇರಲಿಲ್ಲ.

ಒಂದು ತಿಂಗಳ ನಂತರ ಟ್ಸೆಂಗ್ ಶಾಂತಿನಿಕೇತನ ಬಿಟ್ಟು ಹಲವು ಬೌದ್ಧವಿಹಾರಗಳಲ್ಲಿ ವಾಸಿಸಬೇಕೆಂದುಕೊಂಡರು. ಜಿ. ರಾಮಚಂದ್ರನ್ "ಬೇಡ" ಅಂದರು. ಬದಲಾಗಿ "ಗಾಂಧೀ ಆಶ್ರಮಕ್ಕೆ ಹೋಗಿ ಬಾ" ಎಂದರು. ಟ್ಸೆಂಗ್ ಅವರಿಗೂ ಅದು ಸಮ್ಮತವೆನಿಸಿತು. ದೀನಬಂಧು ಆಂಡ್ರೂಸ್ ಆಗ ಶಾಂತಿನಿಕೇತನದಲ್ಲಿದ್ದರು. ಕಲ್ಕತ್ತೆಯಲ್ಲಿಯೇ ಬಿಡಾರಮಾಡಿ ಪ್ರವಾಸ ಕೈಗೊಳ್ಳುತ್ತಿದ್ದರು ಬಾಪೂ. ದೇಶಬಂಧು ಚಿತ್ತರಂಜನದಾಸ್ ಸ್ಮಾರಕವಾಗಿ ಆಸ್ಪತ್ರೆಯೊಂದನ್ನು ಕಟ್ಟಲು ಧನ

ಸಂಗ್ರಹಿಸುತ್ತಿದ್ದರು. ಆಂಡ್ರೂಸರು ಒಂದು ಪರಿಚಯ ಪತ್ರ ಕೊಟ್ಟು ಟ್ಸೆಂಗ್ ಅವರನ್ನು ಗಾಂಧೀಜಿಯ ಬಳಿಗೆ ಕಳುಹಿಸಿಕೊಟ್ಟರು. ಮಹದೇವ ದೇಸಾಯಿ ಅವರು ಈ ಚೀನೀ ಬಂಧುವನ್ನು ಆದರದಿಂದ ಸ್ವಾಗತಿಸಿ ಎಲ್ಲ ವಿವರಗಳನ್ನೂ ಗಾಂಧೀಜಿಗೆ ತಿಳಿಸಿದರು. "ಶಾಂತಿನಿಕೇತನವನ್ನು ಬಿಟ್ಟು ನಮ್ಮಲ್ಲಿರಲು ಬಂದಿದ್ದಾರೆ" ಎಂದು ಹೇಳಿದರು. ಗಾಂಧೀಜಿ ಸಂತೋಷದಿಂದಲೇ ತಮ್ಮ ಬಳಗಕ್ಕೆ ಬರಲು ಸಮ್ಮತಿಸಿದರು. ಆ ದಿನದಿಂದ ಎಲ್ಲರೊಡನೆ ಟ್ಸೆಂಗ್ ಅವರೂ ಆಶ್ರಮ ದಿನಚರಿಯನ್ನನುಸರಿಸಿ ಶಿಬಿರದ ಹಲವು ಕೆಲಸಗಳಲ್ಲಿ ಸಂತೋಷದಿಂದ ಭಾಗವಹಿಸಿದರು. ಎಲ್ಲಕ್ಕೂ ಮೊದಲು ಆವರಣದ ಶುಚಿತ್ವದ ಕೆಲಸಕ್ಕೆ ನೆರವಾದರು. ಶರೀರ ಶ್ರಮದ ಪ್ರತಿಷ್ಠೆ ಗಾಂಧೀ ಮಾರ್ಗದ ಪ್ರಥಮ ಪಾಠವಾಯಿತು.

ಚರಕದಲ್ಲಿ ನೂಲುವುದು ಟ್ಸೆಂಗ್‌ಗೆ ಅತ್ಯಂತ ಪ್ರಿಯ ಕಾಯಕವೆನಿಸಿತು. ಪ್ರಯಾಸಪಟ್ಟು ಕಲಿತರು. ಮಹದೇವ ಭಾಯಿಯ ಚರಕಕ್ಕೆ ಬಿಡುವಿದ್ದಾಗಲೆಲ್ಲ ನೂಲುತ್ತಿದ್ದರು. ಸರಿಯಾಗಿ ಒಂದೇ ಸಮನೆ ದಾರ ಬರುವುದು ಕೈಗೂಡಿದೊಡನೆ ಒಂದು ಇಡೀ ರಾತ್ರಿ ಕುಳಿತು ನೂಲುತ್ತಿದ್ದರಂತೆ. ಬೆಳಿಗ್ಗೆ ಏಳುವುದು ತಡವಾಗಿ ಅವರ ಇತರ ಹೊಣೆಹೊತ್ತ ಕೆಲಸಗಳಿಗೆ ಹೋಗಲಾಗಲಿಲ್ಲ. ಮಹದೇವ ದೇಸಾಯಿ ಮೊದಲು ಸಿಟ್ಟು ಮಾಡಿದರು. ನಂತರ ಇವರ ನೂಲುವಿಕೆಯ ಪರಿಣತಿಯನ್ನು ನೋಡಿ ವಿಸ್ಮಯಗೊಂಡು ಬಾಪುವಿನಲ್ಲಿಗೆ ಧಾವಿಸಿ "ಈ ಹುಡುಗನ ಸಾಹಸ ನೋಡಿ" ಎಂದು ಕೂಗಿದರು. "ಹಿಂದಿನ ರಾತ್ರಿಯೆಲ್ಲ ನೂಲುತ್ತಲೇ ಇದ್ದ" ಎಂದರು. ಗಾಂಧೀಜಿ ತುಂಬ ಸಂತೋಷಗೊಂಡು ಗಹಗಹಿಸಿ ನಕ್ಕುಬಿಟ್ಟರು. "ಆ ದಿನ ನನ್ನ ಸ್ಮೃತಿಯಲ್ಲಿ ನಿಂತ ಮಹಾ ಸಾಧನೆಯ ದಿನ" ಎನ್ನುತ್ತಾರೆ ಟ್ಸೆಂಗ್ ಷಾನ್ ತಿ.

'ನಿನ್ನ ಸಾಮಾನುಗಳನ್ನು ಕಟ್ಟಿ ಹೊರಡಲು ಸಿದ್ಧನಾಗು' ಎಂದು ನಾಲ್ಕನೆಯ ದಿನವೇ ಮಹದೇವ ಭಾಯಿ ಅಪ್ಪಣೆ ಮಾಡಿದರು. 'ಎಲ್ಲಿಗೆ?'

ಎಂದಾಗ 'ಆಮೇಲೆ ಹೇಳುತ್ತೇನೆ. ಮಹಾತ್ಮರ ಅಪ್ಪಣೆಯಾಗಿದೆ' ಎಂದರು. ದೇಸಾಯಿಯುವರೂ ಹೊರಡಲನುವಾಗುತ್ತಿದ್ದರು. ಜವರ್‌ಷೆಡ್‌ಪುರಕ್ಕೆ ಗಾಂಧೀ ಪರಿವಾರ ಹೊರಟಿತ್ತು. ಅಲ್ಲಿ ಒಂದು ಮಹಾಸಭೆ. ಟ್ಸೆಂಗ್ ಅವಾಕ್ಕಾಗಿ ಗಾಂಧೀಜಿಯ ಭಾಷಣ ಕೇಳಿದರು. ಹಿಂದಿ ಭಾಷೆ ಅರ್ಥವಾಗಲಿಲ್ಲ. ಆದರೆ ಆ ಸಭೆಯಲ್ಲಿ ನೆರೆದಿದ್ದ ಸಾವಿರಾರು ಬಂಗಾಳೀ ಸ್ತ್ರೀಯರು ಪುರುಷರು ಈ ಚಿಕ್ಕ ಸರಳ ಮೂರ್ತಿಯ ನಿರಾಡಂಬರವಾದ ಮೃದುವಚನದ ನಾದಕ್ಕೇ ಮಾರುಹೋಗಿ ನಿಶ್ಶಬ್ದವಾಗಿ ಕೇಳಿದರು. ಸಿ. ಆರ್. ದಾಸ್‌ರ ಸ್ಮಾರಕಕ್ಕೆ ಆ ಬೃಹತ್ ಸಭೆಯ ಅತ್ಯಂತ ಬಡ ಸೋದರ ಸೋದರಿಯರೂ ತಮ್ಮಲ್ಲಿದ್ದ ಹಣ ಆಭರಣ ಮಿಕ್ಕ ವಸ್ತುಗಳನ್ನೂ ಸ್ವಯಂಸ್ಫೂರ್ತಿಯಿಂದ ಅಲ್ಲಿನ ಸ್ವಯಂಸೇವಕರ ಮಡಿಲಿಗೆ ಹಾಕುತ್ತಿದ್ದರು. ಟ್ಸೆಂಗ್ ಆ ಅದ್ಭುತವನ್ನು ಕಂಡು ಗದ್ಗದಿತರಾದರು. ಮಾರನೆಯ ದಿನ ಬಾಪೂ ಈ ಚೀನೀ ಯುವಕನನ್ನು ಬಳಿಗೆ ಕರೆದು "ಈ ರಾಜಕೀಯ ಸಭೆಗಳಿಂದ ನೀನು ಪ್ರಯೋಜನ ಪಡೆಯಲಾರೆ. ನಿನ್ನ ಗುರಿ ಜ್ಞಾನ ಸಂಪಾದನೆ. ನಿನ್ನನ್ನು ನನ್ನ ಸಬರಮತಿ ಆಶ್ರಮಕ್ಕೆ ಕಳುಹಿಸಿಕೊಡುತ್ತೇನೆ. ಅಲ್ಲಿನ ಎಲ್ಲ ನಿಯಮಗಳನ್ನೂ ಪಾಲಿಸಿ ಅನುಭವ ಜ್ಞಾನ ಪಡೆದುಕೋ" ಎಂದು ಅನುಗ್ರಹಿಸಿದರು. ತನ್ನ ಇಷ್ಟಾರ್ಥ ಸಿದ್ಧಿಸಿದ್ದಕ್ಕಾಗಿ ಅವರಿಗೆ ವಂದಿಸಿ ಸಬರಮತಿ ಆಶ್ರಮಕ್ಕೆ ಬಂದರು.

ದಾರಿಯಲ್ಲಿ ವಾರ್ಧಾದಲ್ಲಿದ್ದ ವಿನೋಬಾ ಆಶ್ರಮಕ್ಕೂ ಭೇಟಿ ಕೊಟ್ಟರು. ಜಮ್ನಲಾಲರ ಪರಿಚಯವಾಯಿತು. ಸಬರಮತಿ ಸೇರಿದಾಗ ಜೊತೆಯಲ್ಲಿ ಕಲ್ಕತ್ತೆಯಿಂದ ಜೊತೆಗೆಂದು ಗಾಂಧೀಜಿಯೇ ಕಳುಹಿಸಿದ್ದ ನಾಗಿನಲಾಲ್ ಭಾಯಿ ಇದ್ದರು. ಆಶ್ರಮ ನಿಯಮಗಳನ್ನೂ ಆಶ್ರಮವಾಸಿಗಳನ್ನೂ ಪರಿಚಯಿಸಿದರು. ಸ್ವಭಾವಸಹಜವಾಗಿಯೇ ಸರಳ ಸಂಯಮ ಜೀವನಕ್ಕೆ ಒಗ್ಗಿದ್ದ ಟ್ಸೆಂಗ್ ಬಹುಬೇಗ ಹೊಂದಿಕೊಂಡುಬಿಟ್ಟರು.

ಕೆಲವು ದಿನಗಳ ನಂತರ ಆಶ್ರಮದಲ್ಲಿದ್ದ ಮಗನಲಾಲ್ ಗಾಂಧಿ ಟ್ಸೆಂಗ್‌ಗೆ ಬಂದಿದ್ದ ಒಂದು ಪತ್ರ ಕೊಟ್ಟರು. "ನೀನು ಆಶ್ರಮದಲ್ಲೇ

ನಿಂತು ಕಷ್ಟಪಟ್ಟು ಅಧ್ಯಯನ ಮಾಡುತ್ತೀ ಎಂದು ನನ್ನ ನಂಬಿಕೆ. ಅಷ್ಟೇ ಆಸ್ಥೆಯಿಂದ ಕೆಲಸವನ್ನೂ ಮಾಡಬೇಕು. ನಿನಗೆ ಸ್ವಚ್ಛತೆ ಕೆಲಸಗಳ ಬಗ್ಗೆ ಅಸಹನೆ ಇಲ್ಲದಿದ್ದಲ್ಲಿ ಆಶ್ರಮದ ಮುಖ್ಯಸ್ಥರು ವಹಿಸುವ ಕಾರ್ಯಗಳನ್ನು ಮನಸ್ಸಿಟ್ಟು ಮಾಡು–ಬಾಪೂ" ಎಂದು ಆ ಪತ್ರದಲ್ಲಿ ಬರೆದಿತ್ತು.*

"ಈ ಬಾಪೂ ಎಂದರೆ ಯಾರು?" ಮುಗ್ಧರಾಗಿ ಕೇಳಿದರು ಟ್ಸೆಂಗ್. ನನ್ನ ಬಗ್ಗೆ ಇವರಿಗೇಕೆ ಕಾಳಜಿ ಎಂದು ಕೊಂಡರು. ಆಶ್ರಮದ ಆತ್ಮೀಯ ಸ್ನೇಹಿತರನ್ನು ಪಿಸುಮಾತಿನಲ್ಲಿ ಕೇಳಿದಾಗ ಅವರು ಆಶ್ಚರ್ಯದಿಂದ "ನಿಜವಾಗಿ ನಿನಗೆ 'ಬಾಪು' ಎಂದರಾರು ಎಂದು ತಿಳಿಯದೇ? ಅವರೆ ನಮ್ಮೆಲ್ಲರಿಗೂ ತಂದೆ ಸಮಾನರಾದ ಮಹಾತ್ಮ ಗಾಂಧಿ" ಎಂದರು. ಆ ವೇಳೆಗೆ ಎರಡನೇ ಕಾಗದವೂ ಬಂದಿತ್ತು. ಸೊಟ್ಟಸೊಟ್ಟ ಕೈಬರದಲ್ಲಿದ್ದ ಕಾಗದ. ಇವು ಗಾಂಧಿಯವರದೇ ಬರಹವೆಂದು ತಿಳಿದೊಡನೆ ಈ ಚೀನೀ ಯುವಕನಿಗೆ ರೋಮಾಂಚನವಾಯಿತು. ಎಂಥ ಔದಾರ್ಯ! ಎಂಥ ವಾತ್ಸಲ್ಯ! ಎಂದುಕೊಂಡರು. ಕೂಡಲೇ ದೀರ್ಘವಾಗಿ ವಿನಯದಿಂದ ಉತ್ತರಿಸಿದರು. ಕ್ಷಮೆ ಬೇಡಿದರು. ಆಶ್ರಮದ ಮುಖ್ಯಸ್ಥರಲ್ಲಿ ಹೋಗಿ ತಮ್ಮ ದಡ್ಡತನಕ್ಕಾಗಿ ಮರುಗಿದರು. ಬಾಪೂ ಹೇಳಿದಂತೆ ದಯಮಾಡಿ ನನಗೆ ಶೌಚಾಲಯಗಳನ್ನು ಸ್ವಚ್ಛಮಾಡುವ ಕೆಲಸ ಕೊಡಿ ಎಂದು ಬೇಡಿಕೊಂಡರು. ದಿನದಿನವೂ ಬಕೆಟ್‌ಗಳಲ್ಲಿ ತುಂಬಿದ ಮಲವನ್ನು ಹೊಲಗಳಿಗೆ ಸಾಗಿಸಿ ಜೈವಿಕ ಗೊಬ್ಬರ ಮಾಡುವ ಗುಂಡಿಗಳಿಗೆ ತುಂಬುವ ಕೆಲಸವನ್ನು ಸಂತೋಷದಿಂದ ವಹಿಸಿದರು.

ತಮ್ಮ ಆಶ್ರಮದ ದಿನಚರಿಯನ್ನು ಟ್ಸೆಂಗ್ ತಮ್ಮ ಆತ್ಮಕಥೆಯಲ್ಲಿ ವಿವರಿಸಿದ್ದಾರೆ. ಚೀನಾದ ತಮ್ಮ ಬಂಧುಗಳಿಗೆ ಈ ಅಹಿಂಸಾ ಪ್ರವಾದಿಯ ವ್ಯಕ್ತಿತ್ವವನ್ನು ಬಣ್ಣಿಸಿ ಬರೆದರು. ಬೌದ್ಧಧರ್ಮಾನುಯಾಗಿದ್ದ ಟ್ಸೆಂಗ್ ಒಂದು ಹೊಸ ಜೀವನದೃಷ್ಟಿಯನ್ನು ಬೆಳೆಸಿಕೊಂಡರು. ಆಶ್ರಮವಾಸಿಗಳನ್ನು ಕುರಿತು ಹೀಗೆ ಬರೆದಿದ್ದಾರೆ.

---

* "ಜೈ ದಿ ಸೈಡ್ ಆಫ್ ಬಾಪು" – ಟ್ಸೆಂಗ್ ಪಾನ್ ತಿ, ಪು. 31.

"…. ಇವರು ಸಾಮಾನ್ಯ ಗ್ರಾಮವಾಸಿಗಳಾಗಿರಲಿಲ್ಲ. ಸ್ವಯಂಪ್ರೇರಿತ ಕಷ್ಟ ಸಹಿಷ್ಣುತೆಯ ಮೂಲಕ ಆತ್ಮಸಂಕಲ್ಪ ಶಕ್ತಿಯನ್ನು ಬೆಳೆಸಿಕೊಳ್ಳುತ್ತಿದ್ದ ಉದಾತ್ತ ಮನಸ್ಸಿನ ದೇಶಪ್ರೇಮಿಗಳ ಸಮೂಹ. ಕೇವಲ ಶಾಂತಿ ಸಮಾಧಾನಗಳನ್ನರಸಿ ಬಂದವರಲ್ಲ. ಅವರಲ್ಲಿ ಯಾವ ಬಗೆಯ ಸೇಡಿನ ಮನೋಭಾವವೂ ಮನೆಮಾಡಿರಲಿಲ್ಲ. ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ವಿಮೋಚನೆಯನ್ನು ಅಹಿಂಸಾತ್ಮಕ ಸಾಧನಗಳಿಂದ ಗಳಿಸಬೇಕೆಂದು ತೀವ್ರವಾಗಿ ಪ್ರಾಮಾಣಿಕವಾಗಿ ಆಶಿಸುವ ಶಿಕ್ಷಣಾರ್ಥಿಗಳು…

ದ್ವೇಷ ಬೆಳೆಸಿರುವ ಎದುರಾಳಿಯ ಹೃದಯ ಗೆಲ್ಲುವುದು ಸಾಧ್ಯ. ನಿರ್ಭಯತೆ, ನಿರ್ವಂಚನೆ, ನಿಸ್ವಾರ್ಥಬುದ್ಧಿಯ ಕರ್ಮಶುದ್ಧಿ ಮುಖ್ಯ. ರಹಸ್ಯರಹಿತವಾದ ನಡವಳಿಕೆಯಿಂದ ಸ್ವತಂತ್ರದೇಶವನ್ನು ರಚಿಸಿ ಭಾರತದ ಆರ್ಷೇಯ ಸಾಂಸ್ಕೃತಿಕ ಮೌಲ್ಯಗಳನ್ನು ಪುನರುತ್ಥಾನಗೊಳಿಸುವ ಜೀವನೋತ್ಸಾಹ ತುಂಬಿತುಳುಕುತ್ತಿತ್ತು…."*

ಆಶ್ರಮದಲ್ಲಿ ದೇವರ ಕೋಣೆಯಾಗಲಿ ವಿಗ್ರಹಗಳಾಗಲಿ ಇರಲೇ ಇಲ್ಲ. ಪ್ರಕೃತಿಯ ಮಡಿಲಲ್ಲಿ ಶಾಂತ ವೇಳೆಗಳಲ್ಲಿ ನಡೆಯುತ್ತಿದ್ದ ಸರ್ವಧರ್ಮೀಯ ಪ್ರಾರ್ಥನೆಯೇ ಆಧ್ಯಾತ್ಮಿಕ ಶಕ್ತಿಮೂಲ. ಏಕಾದಶವ್ರತ ಸಂಕಲ್ಪವೇ ಬಾಳಿನ ಮಾರ್ಗಸೂತ್ರ, ಗಾಂಧೀಜಿಯ ಅನಾಸಕ್ತಿಯೋಗವೇ ಕೈಪಿಡಿ. ಕಟ್ಟಕಡೆಯವನಿಗೂ ಮೋಕ್ಷಸಾಧನೆ ಸಾಧ್ಯ ಎಂದವರು ನಂಬಿದ್ದರು.

ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮದ ಸಂಘಟನೆಗಾಗಿ, ಸ್ವದೇಶೀ ಚಳುವಳಿಗಾಗಿ, ಸತ್ಯಾಗ್ರಹಿಗಳ ನಿರ್ಮಾಣಕ್ಕಾಗಿ ದೇಶಪರ್ಯಟನೆ ಮಾಡುತ್ತಲೇ ಇದ್ದರು. ಕೆಲವು ಕಾಲದ ನಂತರ ಆಶ್ರಮಕ್ಕೆ ಹಿಂತಿರುಗಿದಾಗ ಟ್ಸೆಂಗ್ ಪಾನ್‌ತಿ ಒಳ್ಳೆಯ ಸಾಧಕರೆನಿಸಿದ್ದರು. ಅವರ ಹೆಸರನ್ನು ಭಾರತೀಯ ರೀತಿಗೆ ಪರಿವರ್ತಿಸಿ ಅವರನ್ನು 'ಶಾಂತಿ ಟ್ಸೆಂಗ್' ಎಂದು ಕರೆದರು ಬಾಪೂ. ಆ ಹೆಸರೇ ನಿಂತುಹೋಯಿತು.

---

* ಸಬರಮತಿ ಆಶ್ರಮದಲ್ಲಿ, ಪು. 34.

"ನಾನೊಬ್ಬ ಏಕಾಕಿ ಎಂಬ ಭಾವನೆ ನಿನಗೇನಾದರೂ ಇದೆಯೇ" ಎಂದು ಗಾಂಧೀಜಿ ಶಾಂತಿ ಟ್ಸೆಂಗ್‌ನ ಹೆಗಲ ಮೇಲೆ ಕೈಯಿಟ್ಟು ಆತ್ಮೀಯತೆಯಿಂದ ವಿಚಾರಿಸಿದರು. ಆಶ್ರಮಕ್ಕೆ ಬಂದೊಡನೆ ಕಸ್ತೂರಿಬಾಗೆ ಈ ಯುವಕನ ಪರಿಚಯ ಮಾಡಿಸಿದರು. ಹರಕುಮುರುಕು ಇಂಗ್ಲೀಷಿನಲ್ಲೇ ಆ ಮಾತೆ ಸ್ವಾಗತಿಸಿ ತನ್ನ ಐದನೇ ಮಗನೆಂದು ಸ್ವೀಕರಿಸಿದರು. ಆ ಸಮಯಕ್ಕೆ ಯಾವ ಮಕ್ಕಳೂ ಆಶ್ರಮದಲ್ಲಿರಲಿಲ್ಲ. ದೇವದಾಸ್ ಎಂಬ ಬಾ ಅವರ ಪ್ರೀತಿಯ ಕೊನೆಯ ಮಗನೂ ಜೈಲಿಗೆ ಹೋಗಿದ್ದ. ಶಾಂತಿ ಟ್ಸೆಂಗ್‌ಗೆ ಎಲ್ಲ ರೀತಿಯ ಸೌಲಭ್ಯಗಳೂ ದೊರೆತವು. ಕಸ್ತೂರಿ ಬಾ ಅವರ ಮೊಮ್ಮಗ ಕಾಂತಿಲಾಲ್ (ಹಿರಾಲಾಲ್ ಗಾಂಧಿ ಮಗ; ಮುಂದೆ ಮೈಸೂರು ವೈದ್ಯಕೀಯ ಕಾಲೇಜು ವಿದ್ಯಾರ್ಥಿ) ಮುಸ್ಲಿಮ್ ಬಾಲಕ ರಷೀದ್ ಮತ್ತು ಸೀತಾ ಎಂಬ ಹುಡುಗಿ ಇವರ ಜೊತೆಯಲ್ಲಿ ಶಾಂತಿ ಟ್ಸೆಂಗ್ ಬಾ ಅವರ ಆತ್ಮೀಯ ವರ್ತುಲಕ್ಕೆ ಸೇರಿ ಹೋದರು. ಈ ಮಕ್ಕಳ ಮಧ್ಯೆ ಕುಳಿತು ಮಾತೆ ಕಸ್ತೂರಿ ಬಾ ಪ್ರೀತಿಯಿಂದ ಚಪಾತಿ-ಹಾಲು ಉಣಬಡಿಸುತ್ತಿದ್ದರು. ಆ ದಿನಗಳನ್ನು ನೆನೆದು ಟ್ಸೆಂಗ್ ಅವರ ಕಣ್ಣು ಹನಿಗೂಡುತ್ತಿತ್ತು.

ಎರಡು ವರ್ಷಗಳ ಆಶ್ರಮ ಜೀವನದಿಂದ ಶಾಂತಿ ಟ್ಸೆಂಗ್ ತುಂಬಾ ಪ್ರಭಾವಿತರಾದರು. ಬ್ರಿಟಿಷ್ ಸರ್ಕಾರ ಗಾಂಧೀಜಿಯ ಪಾಳಯದಲ್ಲಿದ್ದ ವಿದೇಶೀ ಶಿಷ್ಯರ ಬಗ್ಗೆ ಆಕ್ರೋಶ ತಾಳುತ್ತಲೇ ಇತ್ತು. ಈ ಚೀನೀ ಯುವಕ ಕಮ್ಯೂನಿಸ್ಟರ ಏಜೆಂಟು ಎಂಬ ಗುಲ್ಲೆಬ್ಬಿಸಿದರು. ಮೂವತ್ತರ ದಶಕದಲ್ಲಿ ಭಾರತದಲ್ಲಿ ಯಾರು ಕಮ್ಯೂನಿಸ್ಟರೊಡನೆ ಸಂಪರ್ಕ ಹೊಂದಿದ್ದರೋ ಅವರನ್ನು ಕ್ರೂರವಾಗಿ ಶಿಕ್ಷಿಸಲಾಗುತ್ತಿತ್ತು. ಆಶ್ರಮಕ್ಕೆ ತೊಂದರೆಯಾಗಬಾರದೆಂದು ಶಾಂತಿ ಟ್ಸೆಂಗ್ ತಾವೇ ಕೆಲವು ದಿನ ಸ್ವದೇಶಕ್ಕೆ ಹಿಂತಿರುಗಬೇಕೆಂದು ನಿಶ್ಚಯಿಸಿದರು. ಮಿಥ್ಯಾರೋಪಗಳ ಬಗ್ಗೆ ಮನಸ್ಸು ನೊಂದಿತ್ತು. ದೃಢವಾದ ಅಹಿಂಸಾವಾದಿಯಾಗಿ ಪರಿವರ್ತಿತರಾಗಿದ್ದ ಟ್ಸೆಂಗ್ ಅವರ ಬಗ್ಗೆ ಚೀನಾದ ಕಮ್ಯೂನಿಸ್ಟರೂ ಆಕ್ರೋಶಗೊಂಡಿದ್ದರು. ಆದರೆ ಇವಾವುದನ್ನೂ ಲೆಕ್ಕಿಸದೆ ಶಾಂತಿ ಟ್ಸೆಂಗ್

ಗಾಂಧೀಜಿ ಬಳಿಗೆ ಬಂದು ಸ್ವಲ್ಪ ಕಾಲ ಹೊರಗಿರಲು ಅಪ್ಪಣೆ ಬೇಡಿದರು. ಇವರ ಮನಸ್ಸಿನ ಬೇಗೆಯನ್ನರಿತ ಬಾಪೂ ಅನುಮತಿ ನೀಡುತ್ತಾ "ಮತ್ತೆ ಮರಳಿ ಬರುತ್ತೀ ತಾನೆ? ಹಾಗೆ ಭಾಷೆ ಕೊಡು" ಎಂದರು. ನಗುತ್ತಾ "ನನಗೆ ಇದೊಂದೇ ತಾಣದಲ್ಲಿ ಮನಸ್ಸಿಗೆ ನೆಮ್ಮದಿ ಸಿಗುವುದೆಂದು ಬಲ್ಲೆ. ಬರುತ್ತಿರುತ್ತೇನೆ" ಟ್ಸೆಂಗ್ ಆಶ್ವಾಸನೆ ನೀಡಿ ಬೀಳ್ಕೊಟ್ಟರು.

ಸಿಂಗಪುರದ ಪ್ರತಿಕಾಲಯವೊಂದು ಶಾಂತಿಟ್ಸೆಂಗ್‌ಗೆ ಆಶ್ರಯ ನೀಡಿತು. ಅಂಕಣಕಾರರಾಗಿದ್ದವರು ಪೂರ್ಣಸಮಯದ ಪತ್ರಿಕಾಕರ್ತರಾದರು. ಚೀನೀ ಪತ್ರಿಕೆಗಳಿಗೂ ಬರೆಯುತ್ತಿದ್ದರು. ಕೆಲವು ವರ್ಷಗಳ ನಂತರ ಚೀನಾಕ್ಕೆ ಹಿಂತಿರುಗಿ ಸಾಹಿತ್ಯ ಸೃಷ್ಟಿಗೆ ತೊಡಗಿದರು. ಚೀನಿ ಭಾಷೆಯಲ್ಲಿ ಗಾಂಧೀಜೀವನ ಕುರಿತು ಬರೆದು ಪ್ರಕಟಿಸಿದರು. ನಾಲ್ಕು ಆವೃತಿಗಳು ಖರ್ಚಾಗಿಹೋದವು. ಗಾಂಧೀವಾದವನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದ ಈ ಸಾಹಿತಿಯನ್ನು ಸಾಮ್ಯವಾದಿಗಳು ವಿರೋಧಿಸುತ್ತಿದ್ದರು. ಭಾರತದಲ್ಲಿ ಸಂಸ್ಕೃತವನ್ನು ಕಲಿತಿದ್ದ ಟ್ಸೆಂಗ್ ತಮ್ಮ ದೇಶಬಾಂಧವರಿಗೆ ಶಾಕುಂತಲ ನಾಟಕ ಪರಿಚಯಿಸಿದರು. ಟಾಗೋರರ ಹಲವು ಕೃತಿಗಳನ್ನು ಧಾರಾವಾಹಿಗಳಲ್ಲಿ ಭಾಷಾಂತರಿಸಿದರು. ಮಹದೇವ ಭಾಯಿ, ಜಿ. ರಾಮಚಂದ್ರನ್ ಇವರುಗಳೊಡನೆ ಸತತವಾಗಿ ಪತ್ರವ್ಯವಹಾರ ನಡೆಸುತ್ತಲೇ ಬಂದರು. ಮುಂದೆ ಹಲವು ವರ್ಷಗಳ ಕಾಲ ಭಾರತಕ್ಕೆ ಬರಲಾಗಲಿಲ್ಲ.

1932ರಲ್ಲಿ ಗಾಂಧೀಜಿ ಬ್ರಿಟಿಷರ ಭೇದನೀತಿಯ ಚುನಾವಣಾ ಮಸೂದೆಯನ್ನು ವಿರೋಧಿಸಿ ಆಮರಣಾಂತ ಉಪವಾಸ ಕೈಗೊಂಡಿದ್ದರು. ಈ ಸುದ್ದಿ ಚೀನಾಕ್ಕೆ ತಲುಪಿತು. ಶಾಂತಿಟ್ಸೆಂಗ್ ತೀವ್ರ ಆಘಾತಗೊಂಡು ಭಾರತಕ್ಕೆ ಧಾವಿಸಿ ಬಂದುಬಿಟ್ಟರು. ನೇರವಾಗಿ ಶಾಂತಿನಿಕೇತನಕ್ಕೆ ಹೋದರು. ಆ ದಿನವೇ ಉಪವಾಸ ಮುಕ್ತಾಯ ದಿನ. ರವೀಂದ್ರರು ಈ ಸಂಧಾನಗಳಿಗಾಗಿ ಪೂನಾದ ಯರವಾಡಾ ಸೆರೆಮನೆಗೆ ಹೋಗಿದ್ದರು. ಉಪವಾಸ ಮುಕ್ತಾಯದ ದಿನ ರವೀಂದ್ರರೇ ಗಾಂಧೀಜಿಯ ಬಳಿಯಲ್ಲಿದ್ದು ಪ್ರಾರ್ಥನೆ ಸಲ್ಲಿಸಿದ ಹೃದಯಸ್ಪರ್ಶಿ

ಸಮಾಚಾರದಿಂದ ದೇಶಕ್ಕೆ ದೇಶವೇ ಸಮಾಧಾನದಿಂದ ನಿಟ್ಟುಸಿರಿಟ್ಟಿತು. ಟ್ಸೆಂಗ್‌ಗೆ ಅಪರಿಮಿತ ಆನಂದವೆನಿಸಿ ಬಾಪೂಗೆ ಮನಬಿಚ್ಚಿ ಕೃತಜ್ಞತೆ ಸಲ್ಲಿಸಿ ಬರೆದರು. ತಾವೆ ಎರವಾಡಾ ಸೆರೆಮನೆಯ ಬಳಿಗೆ ಧಾವಿಸಿ ಬಂದರು. ಒಳಕ್ಕೆ ಅವರನ್ನು ಬಿಡಲಿಲ್ಲ. ನಿರಾಶರಾಗಿ ಅಲ್ಲೇ ತಂಗಿದ್ದರು. ಸ್ನೇಹಿತರಿಂದ ಮಹದೇವ ಭಾಯಿಯ ಸಂಪರ್ಕ ಸಾಧ್ಯವಾಯಿತು. ಗಾಂಧೀಜಿಗೂ ಈ ಚೀನೀ ಶಿಷ್ಯ ಬಂದಿರುವ ಸುದ್ದಿ ತಲುಪಿತು. ವಿದೇಶೀಯನ್ನು ಭೇಟಿಗೆ ಬಿಡಲು ಅಪ್ಪಣೆ ದೊರೆಯಲೇ ಇಲ್ಲ. ವಿಧಿಯನ್ನು ಶಪಿಸುತ್ತ ಟ್ಸೆಂಗ್ ಹಿಂತಿರುಗಲು ಹವಣಿಸುತ್ತಿದ್ದರು. ಆ ಬೆಳಿಗ್ಗೆ ಜೈಲಿನ ಅಧಿಕಾರಿಯೊಬ್ಬರು ಬಂದು "ನನ್ನ ಜೊತೆಯಲ್ಲಿ ಬನ್ನಿ, ಬಾಪೂ ನಿಮ್ಮನ್ನು ನೋಡಬಯಸುತ್ತಾರೆ" ಎಂದಾಗ ಟ್ಸೆಂಗ್ ಅವಾಕ್ಕಾದರು. ಯಾರಿಗೂ ನಿಲುಕದ ಅಪ್ಪಣೆ ದೊರೆತಿತ್ತು. ಹನಿಗಣ್ಣಿನಿಂದ ಗಾಂಧೀಜಿ ಮುಂದೆ ನಿಂತರು. ಮಾತೇ ಹೊರಡದು. ಕ್ಷೀಣ ಧ್ವನಿಯಲ್ಲಿ ಗಾಂಧೀಜಿಯೇ "ಹೇಗಿದ್ದೀಯ? ಇಷ್ಟು ದಿನ ಬರಲೇ ಇಲ್ಲವಲ್ಲ!" ಅಂದರು. ಟ್ಸೆಂಗ್ ಭಾವಪರವಶರಾದರು. ನನ್ನ ಬಂಧನಗಳನ್ನೆಲ್ಲ ಕಳಚಿ ಬಂದುಬಿಟ್ಟಿದ್ದೇನೆ. ಈಗ ನಿಮ್ಮ ಅಪ್ಪಣೆಗೆ ಕಾದಿದ್ದೇನೆ" ಎಂದರು. ಆಶ್ರಮ ನಿನಗಾಗಿ ತೆರೆದಿದೆ. ಅಲ್ಲಿಗೆ ಹೋಗಿರಲು ಚಿಂತಿಸಬೇಡ. "ಬಾಪೂ ಸೂಚನೆ ಆಗಲಿ ಎಂದಷ್ಟೇ ಹೇಳಿ ಹನಿಗಣ್ಣನ್ನೊರಸಿಕೊಂಡು ಟ್ಸೆಂಗ್ ನೇರವಾಗಿ ಸಬರಮತಿಗೆ ಹೋಗಿ ಬಿಡಾರ ಮಾಡಿದರು. ಎರವಾಡ ಜೈಲಿನಲ್ಲಿ ಬಾಪುವಿನ ಶುಶ್ರೂಷೆಗಾಗಿ ಕಸ್ತೂರಿಬಾ ಅವರನ್ನು ಸರ್ಕಾರದವರೇ ಅಲ್ಲಿಗೆ ಕರೆತಂದಿದ್ದರು. ಈ ಚೀನೀಕುವರನನ್ನು ಕಂಡು ಅವರ ಮಾತೃಹೃದಯ ಕರಗಿತು. "ಈ ಅಗ್ನಿಪರೀಕ್ಷೆಯ ಘಳಿಗೆಯಲ್ಲಿ ನನ್ನ ಮಕ್ಕಳಲ್ಲಿ ಒಬ್ಬರೂ ಸನಿಯದಲ್ಲಿಲ್ಲವಲ್ಲಾ ಎನಿಸುತ್ತಿತ್ತು. ನೀನು ಬಂದುದು ತುಂಬ ಸಮಾಧಾನ. ಆಶ್ರಮದಲ್ಲಿ ಮತ್ತೆ ನಿನ್ನನ್ನು ನೋಡಬಹುದಲ್ಲವೇ?" ಎಂದು ಬೀಳ್ಕೊಟ್ಟಿದ್ದರು.

ಕೆಲವು ತಿಂಗಳು ಸರಿದವು. ಟ್ಸೆಂಗ್‌ಗೆ ಚೀನಾದ ತಮ್ಮ ಬಂಧುಗಳಿಂದ ಪತ್ರ ಬಂತು. ಕಾಲೇಜಿನಲ್ಲಿ ಓದುತ್ತಿದ್ದ ಅವರ ಭಾವೀ ಪತ್ನಿ ಕಷ್ಟಕ್ಕೆ

ಸಿಕ್ಕಿರುವುದಾಗಿ ಕ್ಯಾಂಟನ್‌ನಿಂದ ಬರೆದಿದ್ದರು. ಉದ್ವೇಗಪೂರ್ಣವಾಗಿ ಗಾಂಧೀಜಿಗೆ "ನಾನು ಸ್ವದೇಶಕ್ಕೆ ತುರ್ತಾಗಿ ಹೋಗಬೇಕಾಗಿದೆ" ಎಂದು ಬರೆದು ತಿಳಿಸಿದರು. "ಆಶ್ರಮದಲ್ಲಿ ತೊಂದರೆಯೇ?" ಎಂದು ಬಾಪು ಕೇಳಿದಾಗ ಸತ್ಯವನ್ನು ಅವರಿಗೆ ಹೇಳಬೇಕಾಯಿತು. ತಮ್ಮ ಸಮಸ್ಯೆಗಳನ್ನು ವಿವರಿಸಿದರು.

"ನನ್ನ ಪ್ರೇಯಸಿ ಹಣದ ಮುಗ್ಗಟ್ಟಿಗೆ ಸಿಕ್ಕಿ ತನ್ನ ಕಾಲೇಜು ಶಿಕ್ಷಣ ನಿಲ್ಲಿಸಬೇಕಾಗಿದೆ. ಈ ಹುಡುಗಿಗೆ ಮತ್ತಾರ ಆಶ್ರಯವೂ ಇಲ್ಲ. ನಾನಿಲ್ಲಿಂದ ಸಹಾಯ ಮಾಡುವುದೂ ಕಠಿಣ. ಅಲ್ಲಿಗೇ ಹೋಗಿ ಯಾವುದಾದರೂ ಕಸುಬು ಹಿಡಿದು ಸಹಾಯ ಒದಗಿಸಬೇಕಾದುದು ನನ್ನ ಕರ್ತವ್ಯ ಎಂದು ಅನಿಸಿದೆ" ಎಂದು ಟ್ಸೆಂಗ್ ತನ್ನ ಅಳಲನ್ನು ತೋಡಿಕೊಂಡರು. ಬಾಪು ಕರುಣೆಯಿಂದ ಹೇಳಿದರು "ನೀನು ಕೂಡಲೇ ಜಮ್ನಲಾಲ್ ಬಜಾಜರ ಬಳಿಗೆ ಹೋಗಿ ನನ್ನ ಮಾತಿನ ಮೇಲೆ ಹಣ ಪಡೆದು ನಿನ್ನ ಬಾವಿ ಪತ್ನಿಗೆ ಕಳುಹಿಸು. ಕೂಡಲೇ ಹೋಗು." ಟ್ಸೆಂಗ್ ಕೂಡಲೇ ಹೊರಟರು. ಜಮ್ನಲಾಲರು ಹಣ ಕೊಟ್ಟರು. ಬಾಪುವಿನ ಔದಾರ್ಯಕ್ಕೆ ಕರಗಿಹೋದರು. ಟ್ಸೆಂಗ್ ಆಳವಾಗಿ ಯೋಚಿಸಿದರು. "ಸತ್ಯನಿಷ್ಠುರರಾದ ಈ ಮಹಾತ್ಮ ತನ್ನ ಸ್ವಂತ ಸುಖಗಳನ್ನೆಲ್ಲ ತೃಣವಾಗಿ ಕಂಡು ಈ ಬಡರಾಷ್ಟ್ರದ ವಿಮೋಚನೆಗಾಗಿ ಶ್ರಮಿಸುತ್ತಿದ್ದಾರೆ. ನನ್ನ ಈ ಸಣ್ಣ ಸ್ವಾರ್ಥಕ್ಕಾಗಿ ಈ ಸಾರ್ವಜನಿಕ ಹಣ ಬಳಸುವುದು ಸರಿಯೆ?" ಮನಸ್ಸಿಗೆ ನೋವೆನಿಸಿತು. ಕೂಡಲೇ ಬರೆದರು. "ಬಾಪೂ, ನಿಮ್ಮ ಔದಾರ್ಯ ದೊಡ್ಡದು. ಆದರೆ ಈ ಅಮೂಲ್ಯ ಹಣವನ್ನು ನಾನು ಸ್ವಾರ್ಥಹಿತಕ್ಕಾಗಿ ಉಪಯೋಗಿಸಲಾರೆ; ಚೀನಾಕ್ಕೆ ಹಿಂತಿರುಗುವಷ್ಟನ್ನು ಮಾತ್ರ ತೆಗೆದುಕೊಂಡಿದ್ದೇನೆ. ಅಲ್ಲಿಗೆ ಹೋಗಿ ಕೆಲಸಕ್ಕೆ ಸೇರಿ ನನ್ನ ಒಲವಿನ ಪ್ರೇಯಸಿಗೆ ಸಹಾಯಕನಾಗಿ ನಿಲ್ಲುತ್ತೇನೆ. ನಿಮ್ಮ ಆಶೀರ್ವಾದವಿದ್ದಲ್ಲಿ ಬೇಗ ಹಿಂತಿರುಗುತ್ತೇನೆ. ನಾನೆಲ್ಲಿದ್ದರೂ ನಿಮ್ಮ ದೂತನೆ." ಗಾಂಧೀಜಿ ಈ ನಿಲುವನ್ನು ಒಪ್ಪಿದರು. ಹೋಗಿ ಬರಲು ಅನುಮತಿಯಿತ್ತು ಶುಭ ಕೋರಿದರು. ತಮ್ಮ ದಾಂಪತ್ಯ ನಾಲ್ಕು ದಶಕಗಳು ಪ್ರೀತ್ಯಾದರಗಳಿಂದ ಸಾಗಿ ಬಂದುದು ಗಾಂಧೀಜಿಯ

ಕಾರಣದಿಂದ ಎಂದು ಟ್ಸೆಂಗ್‌ನ ಪತ್ನಿ ಚೆನ್-ಕೆಲ್-ಮೈ 1981ರಲ್ಲಿ ಸೇವಾ ಗ್ರಾಮದಲ್ಲಿ ಬಂದು ನೆಲೆಸಿದಾಗ ಕೃತಜ್ಞತೆಯಿಂದ ಸ್ಮರಿಸುತ್ತಿದ್ದರು.

ಆಶ್ರಮದಿಂದ ಹೊರಡುವಾಗ ಶಾಂತಿಟ್ಸೆಂಗ್ ಭಾವಪರವಶರಾದರು. ಅವರಿಗೆ ಆಶ್ರಮ ನೀಡಿದ ಹೊಸ ಹುಟ್ಟು ಸ್ಮರಣೀಯವಾಗಿತ್ತು. ಜೀವನ ಧ್ಯೇಯಗಳು ಹೊಸ ಆಯಾಮಗಳನ್ನು ಅಳವಡಿಸಿಕೊಂಡಿದ್ದವು. ಈ ಬಗ್ಗೆ ತಮ್ಮ ಸ್ಮೃತಿಗಳಲ್ಲಿ ಹೀಗೆ ಬರೆದಿದ್ದಾರೆ.

"ನನ್ನ ಪಾಲಿಗೆ ಆಶ್ರಮ ಒಂದು ಶಾಲೆಯೋ ಒಂದು ಕ್ರಾಂತಿ ಕೇಂದ್ರವೋ ಆಗಿರಲಿಲ್ಲ. ಅಥವಾ ಒಂದು ನೀರಸವಾದ ಏಕಾಕಿ ಜೀವನದ ಮಠವೂ ಆಗಿರಲಿಲ್ಲ. ತನ್ನದೇ ಆದ ವಿಶಿಷ್ಟವಾದ ನಿಯಮಗಳನ್ನು ಸ್ವಯಂಪ್ರೇರಿತವಾಗಿ ಪಾಲಿಸುತ್ತಿರುವ ಸೌಹಾರ್ದಪೂರ್ಣ ದೊಡ್ಡ ಅವಿಭಕ್ತ ಕುಟುಂಬದಂತಿತ್ತು. ಪ್ರಾಚೀನ ಭಾರತದಿಂದ ಹರಿದು ಬಂದಿರುವ ತತ್ವಶ್ರದ್ಧೆಯಲ್ಲಿ ಅಪಾರ ವಿಶ್ವಾಸವಿಟ್ಟು ಏಕರಸವಾಗಿದ್ದ ದೊಡ್ಡ ಕುಟುಂಬವಾಗಿತ್ತು. ಅಲ್ಲಿದ್ದಾಗ ಅದರೊಡನೆ ನಾನೂ ಸಹಜವಾಗಿ ಲೀನವಾಗಿಬಿಟ್ಟಿರುತ್ತಿದ್ದೆ. ಆದರೆ ಅದನ್ನು ಬಿಟ್ಟು ಹೊರಟಾಗ ಅದೆಂತಹ ದುರ್ವಾರ ಪ್ರೇಮಶಕ್ತಿಯಾಗಿ ನನ್ನನ್ನೂ ಹಿಡಿದಿಟ್ಟಿತ್ತು ಎಂಬ ತೀವ್ರ ಅನುಭವವಾಗುತ್ತಿತ್ತು. ಆಶ್ರಮದಲ್ಲಿನ ಪ್ರತಿಯೊಬ್ಬರೊಡನೆಯೂ ಅಲ್ಲಿನ ಮರ, ಗಿಡ, ಗುಡಿಸಲು, ಚರಕ ಎಲ್ಲದರೊಡನೆಯೂ ಯಾವುದೋ ಅವಿಭಾಜ್ಯ ಬಾಂಧವ್ಯ ಬೆಳೆದು ನಿಂತುಬಿಟ್ಟಿತ್ತು."*

ಶಾಂತಿ ಟ್ಸೆಂಗ್ ಸಿಂಗಪುರದ ಪತ್ರಿಕೆಯೊಂದರ ಕಾರ್ಯಾಲಯ ಸೇರಿ ದುಡಿದು ಸಂಪಾದಿಸಿರು. ಪ್ರೇಯಸಿಯ ವಿದ್ಯಾಭ್ಯಾಸ ಮುಗಿದ ಮೇಲೆ ಮದುವೆಯಾಗಿ ಸ್ವದೇಶದಲ್ಲಿ ಸಂಸಾರ ಹೂಡಿದರು. ಇಬ್ಬರೂ ದುಡಿಯುತ್ತಿದ್ದರು. ಬರವಣಿಗೆಯಿಂದ ಟ್ಸೆಂಗ್ ಮತ್ತು ಶಿಕ್ಷಕಿಯಾಗಿ ಪತ್ನಿ. ಸರಳಜೀವನ, ನಾಲ್ಕು ಮಕ್ಕಳು. ಬೌದ್ಧಧರ್ಮಿಗಳಾದುದರಿಂದ ಶಾಂತಿಪ್ರಿಯ ಆಚಾರಗಳು. ಆ ತತ್ವನಿಷ್ಠೆಗೆ ಗಾಂಧೀವಾದ ಪುಷ್ಟಿಕೊಟ್ಟಿತ್ತು.

---

* 'ಬೈ ದಿ ಸೈಡ್ ಆಫ್ ಬಾಪೂ' – ಪು. 83.

"ನನ್ನದು ವಿಶ್ವಮಾನವಧರ್ಮ ಅಹಿಂಸಾಧರ್ಮ, ನನಗೆ ಧಾರ್ಮಿಕ ಸಂಪ್ರದಾಯಕರ್ಮಗಳಲ್ಲಿ ನಂಬಿಕೆಯೇ ಇಲ್ಲ-ಆದರೆ ನಾನು ನಾಸ್ತಿಕನಲ್ಲ" ಎನ್ನುತ್ತಿದ್ದರು ಶಾಂತಿಟ್ಸೆಂಗ್.

ಅಂತಃಶುದ್ಧಿ ಆತ್ಮನಿರೀಕ್ಷಣೆ ಸಬರಮತಿ ಆಶ್ರಮದ ಜೀವನದಿಂದ ಟ್ಸೆಂಗ್‌ಗೆ ಸಹಜವಾಗಿತ್ತು. ಸಿಂಗಪುರದಿಂದ ಒಮ್ಮೆ ಆಶ್ರಮಕ್ಕೆ ಹಿಂತಿರುಗಿದಾಗ ತಮ್ಮೆಲ್ಲ ತಪ್ಪು ನೆಪ್ಪುಗಳನ್ನು ಬಾಪುವಿಗೆ ಆತ್ಮೀಯತೆಯಿಂದ ಒಪ್ಪಿಸಿ ದೀರ್ಘತತ್ವ ಬರೆದುಕೊಟ್ಟರು. ಅದರಲ್ಲಿ

"ಇತರ ಸಾವಿರಾರು ಚೀನೀ ಯುವಕರಂತೆಯೇ ನಾನು ಭಾರತಕ್ಕೆ ಬರುವ ಮುನ್ನ ಸಿಂಗಪುರದಲ್ಲಿ ಸ್ವೇಚ್ಛಾಚಾರದ ವಂಚಕಬಾಳಿನಲ್ಲೇ ಮುಳುಗಿಹೋಗಿದ್ದೆ. ನಿಮ್ಮ ಪಾದದಡಿಯಲ್ಲಿ ನನ್ನೆಲ್ಲ ಒಳಕೋಟೆಗಳನ್ನೂ ತೋಡಿಕೊಳ್ಳದ ತೀವ್ರ ಪ್ರೇರಣೆ ಉಂಟಾಗಿದೆ. ದಯಮಾಡಿ ಈ ವಿವರವಾದ ಪತ್ರವನ್ನು ಪರಾಂಬರಿಸಿ, ನನ್ನ ಆತ್ಮಶುದ್ಧಿಗಾಗಿ ಹತ್ತು ದಿನಗಳ ಉಪವಾಸ ಕೈಗೊಳ್ಳಲು ನನಗೆ ಅನುಮತಿಕೊಡಿ. ಅದರ ಕೊನೆಯಲ್ಲಿ ನಿಮ್ಮ ಸಮ್ಮುಖದಲ್ಲೇ ಕೆಲವು ಸಂಕಲ್ಪಗಳನ್ನು ಕೈಗೊಂಡು ದೀಕ್ಷಾಬದ್ಧನಾಗಲು ಇಚ್ಛಿಸುತ್ತೇನೆ."* ಎಂದಿದ್ದರು.

ಶಾಂತಿಟ್ಸೆಂಗ್ ಒಂದು ಆಧ್ಯಾತ್ಮಿಕ ತುಮುಲಕ್ಕೊಳಗಾಗಿರುವರೆಂದು ಗಾಂಧೀಜಿಗೆ ಭಾಸವಾಯಿತು. "ನಾನು ನಿಧಾನವಾಗಿ ನಿನ್ನ ದೀರ್ಘಪತ್ರ ಓದಿ ಮನನ ಮಾಡುವವರೆಗೆ ತಾಳು. ಉಪವಾಸವ್ರತ ಒಂದು ಗಂಭೀರವಾದ ವ್ರತನಿಷ್ಠೆ. ಅದಕ್ಕೆ ಅರ್ಹರಾಗುವುದು ಮುಖ್ಯ. ನಿನಗೇನು ಬೇಕೆನಿಸಿದೆ ಎಂದು ನಾನು ಕಂಡುಕೊಂಡು ತಿಳಿಸುತ್ತೇನೆ" ಎಂದರು.

ಆಶ್ರಮಜೀವನದಿಂದ ಈತನಲ್ಲಿ ಆತ್ಮನಿರೀಕ್ಷಣೆ ಮತ್ತು ಶುದ್ಧಿ ಕೈಗೊಳ್ಳುವ ತೀವ್ರ ಆಕಾಂಕ್ಷೆಯಿದೆ. ಮುಚ್ಚುಮರೆಯಿಲ್ಲದೆ ತನ್ನ ಅಂತರಂಗವನ್ನೆಲ್ಲ ಬಿಚ್ಚಿಟ್ಟಿದ್ದಾರೆ ಎನ್ನುವುದನ್ನು ಕಂಡು ಬಾಪುಗೆ

---

* ಗಾಂಧೀಜಿ ಅಂಡ್ ಚೈನೀಸ್ ಯೂತ್ - ಡಾ. ಜಿ. ರಾಮಚಂದ್ರನ್.

ತುಂಬ ಮರುಕವಾಯಿತು. ಅತ್ಯಂತ ಸಹಾನುಭೂತಿ ಮತ್ತು ಪಿತೃವಾತ್ಸಲ್ಯಗಳಿಂದ ಟ್ಸೆಂಗ್‌ನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಉಪವಾಸ ವ್ರತದ ನಿಯಮಗಳನ್ನೆಲ್ಲ ತಿಳಿಸಿ, ಅದನ್ನು ಕೈಗೊಳ್ಳಲು ಅನುಮತಿಯಿತ್ತರು. ಆ ಸಮಯದಲ್ಲಿ ಪ್ರತಿದಿನವೂ ಆತನ ಬಳಿಗೆ ಬಂದು ಕೆಲಸಮಯ ಇರುತ್ತಿದ್ದರು. ಅವರ ಮಾತುಗಳಿಂದ ಶಾಂತಿಟ್ಸೆಂಗ್‌ಗೆ ತುಂಬ ಸಮಾಧಾನವಾಗುತ್ತಿತ್ತು. ಯಾವ ಸಂಕಲ್ಪವನ್ನೂ ಹಗುರವಾಗಿ ಕೈಗೊಳ್ಳಬಾರದು. ಕೇವಲ ಭಾವನಾಪೂರ್ವಕ ವ್ರತಗಳು ಕೈಗೂಡುವುದಿಲ್ಲ. ಆಳವಾದ ಶ್ರದ್ಧೆಯಿಂದ ಬಾಳಿನ ಸಂಕಲ್ಪಗಳನ್ನು ಕೈಗೂಡಿಸಿಕೊಳ್ಳಬೇಕು ಎಂದು ಗಾಂಧೀಜಿ ಉಪದೇಶಿಸಿದರು. ಸಂತೋಷದಿಂದಲೇ ಈ ಅಗ್ನಿಪರೀಕ್ಷೆಗೆ ಒಳಗಾಗಿ ಉಪವಾಸ ಮುಕ್ತಾಯ ಮಾಡಿದ ದಿನ ಶಾಂತಿಟ್ಸೆಂಗ್ ಹಲವು ಸಂಕಲ್ಪಗಳನ್ನು ಕೈಗೊಂಡರು. ಗಾಂಧೀಜಿಯ ಸಾಕ್ಷಿಯಾದರು. ಅದರ ಎರಡು ಪ್ರತಿಗಳನ್ನು ಮಾಡಿಸಿ ಒಂದನ್ನು ಗಾಂಧೀಜಿಯ ಬಳಿಯೇ ಇಟ್ಟಿದ್ದರು. ಎಚ್ಚರಿಕೆಯಿಂದ ಈ ಸತ್ಯಾಗ್ರಹ ಮತ್ತು ಅಹಿಂಸಾ ಜೀವನದ ನಿಯಮಗಳನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಂಡು ಬಾಳಿದರು ಶಾಂತಿಟ್ಸೆಂಗ್.

1942ರ ಕ್ವಿಟ್ ಇಂಡಿಯಾ ಆಂದೋಲನದ ಕಾಲಕ್ಕೆ ಚೀನಾ ದೇಶಕ್ಕೆ ಯಾವ ಸುದ್ದಿಯೂ ಬರದೆ ಶಾಂತಿಟ್ಸೆಂಗ್ ಪರಿತಪಿಸುತ್ತಿದ್ದರು. ಭಾರತದ ಹಲವು ಸ್ನೇಹಿತರಿಗೆ ಪತ್ರ ಬರೆದು ತಿಳಿದುಕೊಳ್ಳುತ್ತಿದ್ದರು. ಚೀನಾ ಬಿಟ್ಟು ಬರಲು ಅವರಿಗೆ ಅನುಮತಿ ದೊರೆಯದೇ ಹೋಯಿತು. ಸಂಸಾರದ ಜವಬ್ದಾರಿಗಳೂ ಇದ್ದವು. ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಬೇಕಾಯಿತು. ಭಾರತದ ಸ್ವಾತಂತ್ರ್ಯ ದೇಶವಿಭಜನೆ, ಜಾತೀಯ ಘರ್ಷಣೆಗಳು, ಗಾಂಧೀಜಿಯ ನೌಖಾಲಿ ಯಾತ್ರೆ ಕೊನೆಗೆ ಬಾಪುವಿನ ಘೋರ ಹತ್ಯೆಗಳ ವಿವರಗಳನ್ನು ತಿಳಿದು ಶಾಂತಿಟ್ಸೆಂಗ್‌ಗೆ ಹೃದಯ ಮಿಡಿಯಿತು. ಭಾರತದ ಕರೆ ತೀವ್ರವಾಗುತ್ತಲೇ ಸಾಗುತ್ತಿತ್ತು.

1948ರಲ್ಲಿ ಚೀನಾಕ್ರಾಂತಿ ಆದಾಗ ಕೆಂಪು ಚೀನಾದಲ್ಲಿ ಉಳಿದರು ಶಾಂತಿಟ್ಸೆಂಗ್. ಅವರ ಬರಹಗಳ ಮೇಲೆ ನಿಯಂತ್ರಣ ಹೇರಲಾಗಿತ್ತು. ಗಾಂಧೀ ಜೀವನ ಚರಿತ್ರೆಯು ಪುನರ್ಮುದ್ರಣಕ್ಕೆ ಅನುಮತಿ ದೊರೆಯಲಿಲ್ಲ. ಷಾಂಘೈ ಬಳಿ ಒಂದು ಶ್ರಮವಸತಿ 'ಕಮ್ಯೂನ್'ನಲ್ಲಿ ಶಿಕ್ಷಕರಾಗಿ, ಪತ್ರಕರ್ತರಾಗಿ, ಭಾಷಾಂತರಕಾರರಾಗಿ ಕೆಲಸ ಮಾಡಿದರು. ಪತ್ನಿ ಉಪಾಧ್ಯಾಯಿನಿಯಾದರು ಮಕ್ಕಳು ತಾಂತ್ರಿಕ ತಜ್ಞರೂ, ವ್ಯವಸಾಯಗಾರರೂ ಆಗಿ ದುಡಿದು ಜೀವಿಸುತ್ತಿದ್ದರು.

ವರ್ಷಗಳುರುಳಿದವು. ಮಾವೋನನ್ನು ಸುತ್ತುಗಟ್ಟಿದ ದುಷ್ಟಚತುಷ್ಟಯ 'ಗ್ಯಾಂಗ್ ಆಫ್ ಫೋರ್' ಚೀನಾದ ಆರ್ಷೇಯ ಸಂಸ್ಕೃತಿಯನ್ನು ಬುಡಮೇಲು ಮಾಡಲು ಹವಣಿಸುತ್ತಿತ್ತು. ಈ ಬಿರುಗಾಳಿ ಕ್ರಾಂತಿ ಆ ರಾಷ್ಟ್ರದ ಸೂಕ್ಷ್ಮಮತಿಗಳನ್ನು ತಲ್ಲಣಿಸಿತ್ತು. ಶಿಕ್ಷಣ, ಧರ್ಮ, ಮನರಂಜನೆ ಆತ್ಮವಿಕಾಸ ಎಲ್ಲವೂ ಆ ಧಾಳಿಗೆ ಸಿಲುಕಿದ್ದವು. ಟ್ಸೆಂಗ್ ಅವರ ಪತ್ರವ್ಯವಹಾರಗಳೆಲ್ಲ ನಿಲ್ಲಿಸಲ್ಪಟ್ಟವು. ಪ್ರವಾಸಗಳು ರದ್ದಾದವು. ಭಾರತದ ಸಂಪರ್ಕ ನಿಷೇಧಿತವಾಯಿತು. 1962ರ ಘರ್ಷಣೆಗಳ ನಂತರ ಕಮ್ಯೂನಿಸ್ಟ್ ಸರ್ವಾಧಿಕಾರಿಗಳ ದಬ್ಬಾಳಿಕೆಯಿಂದ ಜನ ಕಂಗೆಟ್ಟಿದ್ದರು. ಈ ಕಿರುಕುಳ 1976ರವರೆಗೂ ಸಾಗಿತು. ಸ್ವಲ್ಪ ಉದಾರನೀತಿಯ ಸರ್ಕಾರ ಬಂತು. ಶಾಂತಿ ಟ್ಸೆಂಗ್ ಮತ್ತೆ ಭಾರತದ ಸಂಪರ್ಕ ಪಡೆದರು. ಗೆಳೆಯ ಜಿ. ರಾಮಚಂದ್ರನ್‌ಗೆ ದೀರ್ಘ ಪತ್ರಗಳನ್ನು ಬರೆಯುತ್ತಿದ್ದರು. ಗಾಂಧೀ ಶಾಂತಿ ಪ್ರತಿಷ್ಠಾನ ಅವರನ್ನು ದೆಹಲಿಗೆ ಬರಲು ಆಹ್ವಾನಿಸಿತು. ಚೀನಾ ಸರ್ಕಾರ ಅನುಮತಿ ನೀಡಿತು. ಪತ್ನಿಯೂ ಸಮ್ಮತಿಸಿದರು. ಮೊಮ್ಮಕ್ಕಳು ಅವರೊಡನೆ ಭಾರತ ಪ್ರವಾಸಕ್ಕೆ ಸಿದ್ಧರಾದರು.

1976ರಲ್ಲಿ ಪತ್ನಿ ಮತ್ತು ಇಬ್ಬರು ಮೊಮ್ಮಕ್ಕಳೊಡನೆ ಶಾಂತಿ ಟ್ಸೆಂಗ್ ಶಾಂತಿನಿಕೇತನಕ್ಕೆ ಭೇಟಿ ನೀಡಿ ದೆಹಲಿಗೆ ಬಂದಿಳಿದರು. ಸ್ವತಂತ್ರ ಭಾರತದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರು. ರಾಜಘಾಟಿನಲ್ಲಿ ದಿನವೂ ಪ್ರಾರ್ಥನೆ ಸಲ್ಲಿಸುತ್ತಾ ಗಾಂಧೀಪ್ರಣೀತ ಸಂಸ್ಥೆಗಳೊಡನೆ ಸಮಾಲೋಚಿಸಿದರು. ಅದೇ ಕಾಲಕ್ಕೆ ದೆಹಲಿಗೆ

ಬಂದಿದ್ದ ಪತ್ರಕರ್ತ ಗಾವ್ರೋ ಷೂ ಮಾವ್ರೋ ಚೀನಾದ ಪತ್ರಿಕೆಯಲ್ಲಿ ಶಾಂತಿ ಟ್ಸೆಂಗ್ ಅವರ ಬಗ್ಗೆ ಬರೆಯುತ್ತಾ ಹೇಗೆ ಈ ಚೀನೀ ಗಾಂಧೀವಾದಿ ಭಾರತ ಚೀನಾ ಸಾಂಸ್ಕೃತಿಕ ಸೌಹಾರ್ದದ ಪ್ರತೀಕವಾಗಿ ಜೀವಿಸುತ್ತಿದ್ದಾರೆ ಎಂದು ಹೃದಯಂಗಮವಾಗಿ ವರ್ಣಿಸಿದ್ದಾರೆ.

"ರಾಜಘಾಟಿನ ಬಳಿ ಶಾಂತಿಟ್ಸೆಂಗ್ ಅವರ ಭೇಟಿಯಾಯಿತು. ಅವರು ಗಾಂಧೀಜಿಯ ಹೃದಯವನ್ನು ಬಲ್ಲವರಾಗಿದ್ದರು. ಚೀನಾ ಬಗ್ಗೆ ಪ್ರಾಮಾಣಿಕ ಪ್ರೇಮ ಎಷ್ಟು ಗಾಢವಾಗಿತ್ತು ಎಂದು ತಿಳಿಸಿದರು. ಆಶ್ರಮದಲ್ಲಿ ಹೇಗೆ ತಾವು ಗಾಂಧೀಜಿಯ ಕುಟುಂಬದೊಳಗೆ ಸೇರಿಹೋಗಿದ್ದರೆಂದು ಬಣ್ಣಿಸಿದರು. ಅವರೇ ತಮ್ಮನ್ನು ಶಾಂತಿ ಎಂದು ಕರೆದಿದ್ದನ್ನು ಹೇಳಿದರು. ಗಾಂಧೀ ಒಮ್ಮೆ "ಚೀನೀಯರು ಶಾಂತಿಪ್ರಿಯರು ವಿನಯಶೀಲತೆಯನ್ನು ಸಾವಿರಾರು ವರ್ಷಗಳಿಂದ ಬೆಳೆಸಿಕೊಂಡಿದ್ದಾರೆ. ಭಾರತ ಚೀಣಾಗಳು ಭವಿಷ್ಯದಲ್ಲಿ ಪರಸ್ಪರ ಪ್ರೇಮದಿಂದ ಬಾಳುವುದು ಅನಿವಾರ್ಯ. ಅದು ಕೇವಲ ಆರ್ಥಿಕ ಅಥವಾ ರಾಜಕೀಯ ಬಾಂಧವ್ಯದ ಮೇಲೆ ನಿಲ್ಲುವುದಿಲ್ಲ. ಪರಸ್ಪರರಿಗೆ ಸಮಾನವಾದ ಗುಣ ವಿಶೇಷಗಳ ಮೇಲೆ ನಿಲ್ಲುತ್ತದೆ. ಆಗ ಮಾನವ ಕುಲದ ಸೌಹಾರ್ದಯುತ ಭ್ರಾತೃತ್ವವೂ ಸಾಧ್ಯವಾದೀತು" ಎಂದುದನ್ನು ಶಾಂತಿಟ್ಸೆಂಗ್ ಕೃತಜ್ಞತೆಯಿಂದ ತಿಳಿಸಿ ಹೇಳಿದರು.

ಹೀಗೆ ಹೇಳಿ ಶಾಂತಿ ಟ್ಸೆಂಗ್ "ಬಾಪೂ ಶಾಶ್ವತ ಶಾಂತಿಯೆಡೆಗೆ ಹೋಗಿದ್ದರೆ. ನನಗೂ ಎಪ್ಪತ್ತಾರು ವರ್ಷ. ಕಡೆಯ ದಿನಗಳನ್ನು ಗಾಂಧೀಜಿಯ ಆಶ್ರಮದಲ್ಲಿ ಕಳೆಯುತ್ತಾ ಅವರ ಬಗ್ಗೆ ಬರೆಯಬೇಕೆಂದು ಸಂಕಲ್ಪಿಸಿದ್ದೇನೆ" ಎಂದು ಕಂಬನಿ ತುಂಬಿ ನುಡಿದರು ಸಂಜೆಯ ಮೊಬ್ಬು ಬೆಳಕಿನಲ್ಲಿ ನಿಶ್ಶಬ್ದರಾಗಿ ನಡೆದು ಹೋದರು."

ದೆಹಲಿಯಿಂದ ನೇರವಾಗಿ ಸೇವಾಗ್ರಾಮ ಆಶ್ರಮಕ್ಕೆ ಬಂದು ಟ್ಸೆಂಗ್ ತಮ್ಮ ಪತ್ನಿ ಮತ್ತು ಇಬ್ಬರು ಮೊಮ್ಮಕ್ಕಳೊಡನೆ ನೆಲೆಸಿದರು. ಗಾಂಧೀಜಿ ನಂತರ ಮೂವತ್ತೈದು ವರ್ಷಗಳಲ್ಲಾದ ಪರಿವರ್ತನೆಯನ್ನು ಟ್ಸೆಂಗ್

ಸೂಕ್ಷ್ಮವಾಗಿ ವಿಶ್ಲೇಷಿಸಿದರು. ಗಾಂಧೀ ಸಾಹಿತ್ಯದ ಆಳವಾದ ಅಧ್ಯಯನ ಮಾಡಿದರು. ಹಿರಿಯ ಗಾಂಧೀವಾದಿಗಳೊಡನೆ ಚರ್ಚಿಸಿದರು. ಗಾಂಧೀ ಸಂದೇಶದ ಅಮರವಾಣಿ "ಗ್ರಾಮ ಭಾರತಕ್ಕೆ ಮರಳಿ" ಇಂದಿಗೂ ಪ್ರತಿಧ್ವನಿಸುತ್ತಲೇ ಇದೆ. ಇಂದಲ್ಲ ನಾಳೆ ಭಾರತದ ಅಭ್ಯುದಯಕ್ಕೆ ಅದೇ ತಾರಕ ಎಂದು ನಂಬಿದ್ದರು ಈ ಚೀನೀ ಭಾಯಿ.

ಸೇವಾಗ್ರಾಮದಲ್ಲಿ ಗಾಂಧೀಜಿಯ ಸೊಸೆ ನಿರ್ಮಲಾಬಹೆನ್ ಈ ಟ್ಸೆಂಗ್ ಸಂಸಾರವನ್ನು ಔದಾರ್ಯದಿಂದ ಬರಮಾಡಿಕೊಂಡರು. ಮಹದೇವ ದೇಸಾಯಿ ಕುಟೀರದಲ್ಲೇ ಅವರ ಬಿಡಾರ. ಅವರು ಸಸ್ಯಾಹಾರಿಗಳು. ಸರಳವಾದ ಅಡಿಗೆ ಮನೆ. ಎಲ್ಲವೂ ಯಾವಾಗಲೂ ಸ್ವಚ್ಛ; ಅಚ್ಚುಕಟ್ಟು, ಜೊತೆಯಲ್ಲಿ ಮಗನ ಮಗಳು ಹದಿನೈದು ವರ್ಷದ ಚೆಲುವೆ ಯೆ-ಲಾನ್-ಟ್ಸೆಂಗ್ ಮತ್ತು ಮಗಳ ಮಗ ಹತ್ತು ವರ್ಷದ ವೀ-ಹಾಂಗ್. ಇಬ್ಬರೂ ವಾರ್ಧಾದ ಶಾಲೆಗೆ ಸೇರಿದರು. ಇಂಗ್ಲಿಷ್ ಮತ್ತು ಹಿಂದಿಯನ್ನು ಯೆಲಾನ್ ಸ್ಫುಟವಾಗಿ ಮಾತನಾಡಲು ಕಲಿತಿದ್ದಳು. ಭಾರತೀಯತೆಯನ್ನು ಈ ಮಕ್ಕಳು ಅರಗಿಸಿಕೊಳ್ಳುವಂತೆ ಟ್ಸೆಂಗ್ ವೃದ್ಧದಂಪತಿಗಳು ಮಾರ್ಗದರ್ಶನ ಮಾಡುತ್ತಿದ್ದರು.

ಭಾರತ ಸಂಸ್ಕೃತಿಯ ಬಗ್ಗೆ ಚೀನೀ ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. ಅದರಿಂದಲೇ ತಮ್ಮ ಜೀವನವೆಚ್ಚವನ್ನು ಸಂಪಾದಿಸುತ್ತಿದ್ದರು. ರವೀಂದ್ರರ ಕಾದಂಬರಿ 'ನೌಕಾಘಾತ'ವನ್ನು ಚೀನೀ ಭಾಷೆಯಲ್ಲಿ ಬರೆದು ಸಿಂಗಪುರದ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. ಭಾರತದ ಚರಿತ್ರೆಯಲ್ಲಿ ಈ ಶತಮಾನ ತಂದುಕೊಟ್ಟ ಪುನರುಜ್ಜೀವನ ಕ್ರಾಂತಿಯನ್ನು ಕುರಿತು ಬರೆಯಲು ಸಾಮಗ್ರಿ ಸಂಗ್ರಹಿಸಿದ್ದರು. "ವಾಸ್ಕೋಡಗಾಮನಿಂದ ಗಾಂಧೀಜಿಯವರೆಗೆ ಎಂಬ ಶೀರ್ಷಿಕೆಯಲ್ಲಿ ಬೃಹದ್ ಕೃತಿ ಬರೆಯುವುದು ನನ್ನ ಕೊನೆಯ ಆಕಾಂಕ್ಷೆ" ಎನ್ನುತ್ತಿದ್ದರು.

ಸೇವಾಗ್ರಾಮದ ಜೀವನ ಪರಿಸರ ನನ್ನ ಬಾಳಿಗೆ ಕಲಶವಿಟ್ಟಂತಾಗಿದೆ ಎಂಬ ಧನ್ಯತೆ ಅವರಲ್ಲಿ ಎದ್ದುಕಾಣಿಸುತ್ತಿತ್ತು.

1981ರ ಮಾರ್ಚಿಯಲ್ಲಿ ಸೇವಾಗ್ರಾಮದಲ್ಲಿ ಈ ಚೀನೀ ದಂಪತಿಗಳನ್ನು ಈ ಲೇಖಕ ಭೇಟಿಯಾದಾಗ ತಮ್ಮ ಅನಿಸಿಕೆಗಳನ್ನೆಲ್ಲ ಬಿಚ್ಚುಮನಸ್ಸಿನಿಂದ ನಗೆಮುಖದಿಂದ ಹಂಚಿಕೊಂಡರು. ಎಪ್ಪತ್ತುಮೂರು ವರ್ಷದ ವೃದ್ಧ ಪತ್ನಿ ಬೆನ್‌ಕೆಲ್-ಮೈ ಕುಳಿತು ಕೇಳುತ್ತಿದ್ದರು. ಚುರುಕು ಮಾತಿನ ಮೊಮ್ಮಗಳು ಇಂಗ್ಲೀಷಿಗೆ ಭಾಷಾಂತರಿಸುತ್ತಿದ್ದಳು. ನಾಲ್ಕು ದಶಕಗಳ ಹಿಂದೆ ಈ ದಾಂಪತ್ಯದ ಹೊಸಲಿನಲ್ಲಿದ್ದಾಗ ಗಾಂಧೀಜಿ ಹರಸಿದ್ದ ಘಟನೆಯನ್ನು ಹೇಳುವಾಗ ಅವರ ಕಣ್ಣುಗಳು ಕೃತಜ್ಞತೆಯಿಂದ ಕಂಬನಿ ತುಂಬಿದವು. ಈ ಪ್ರೇಮಯಾತ್ರೆಗಾಗಿ ಬಂದದ್ದು ಗಾಂಧೀಜಿಯ ಹರಕೆಯಿಂದಲೇ ಎಂದು ಚೀನೀ ಭಾಷೆಯಲ್ಲಿ ನುಡಿದರು.

ಮುಂದೆ ಮೊಮ್ಮಗಳು ಭಾರತೀಯ ಯುವಕನನ್ನು ಮದುವೆಯಾಗಿ ನಾಗಪುರದಲ್ಲೇ ಉಳಿದಳು. ಟ್ಸೆಂಗ್ ತಮ್ಮ ಎಂಭತ್ತನೇ ವಯಸ್ಸಿನವರೆಗೆ ಸೇವಾಗ್ರಾಮದಲ್ಲೇ ಇದ್ದು ನಿಧನರಾದರು. ಪತ್ನಿ ಮತ್ತು ಮೊಮ್ಮಗ ಚೀನಾಕ್ಕೆ ಹಿಂದಿರುಗಿದರು.

5. ಮಾರಿಸ್ ಫ್ರೀಡ್‌ಮನ್
(ಸ್ವಾಮಿ ಭರತಾನಂದ)
(ಪೋಲೆಂಡ್)

ಭಾರತದ ನಾಗರಿಕರಾಗಿ ಭರತಾನಂದ ಎಂದು ಪ್ರಸಿದ್ಧರಾಗಿದ್ದ ಪೋಲೆಂಡಿನ ಯಹೂದಿ, ಮಾರಿಸ್ ಫ್ರೀಡ್‌ಮನ್, ಅವರದು ಅಸಾಧಾರಣ ವ್ಯಕ್ತಿತ್ವ ಅವರೊಬ್ಬ ಮೇಧಾವಿ ಇಂಜಿನಿಯರ್, ವೈಜ್ಞಾನಿಕ ಸಂಶೋಧಕ; ಆತ್ಮಜ್ಞಾನಸಾಧಕ. ಸಹಜವಾಗಿಯೇ ಅವರಿಗೆ ಭಾರತದ ಒಲವು. ಜೆ. ಕೃಷ್ಣಮೂರ್ತಿ, ರಮಣಮಹರ್ಷಿ, ಸ್ವಾಮಿ ರಾಮದಾಸ್ ಮತ್ತು ಮಹಾತ್ಮ ಗಾಂಧೀ ಅವರುಗಳ ನಿಕಟ ಸಹವಾಸ ಮತ್ತು ಆಳವಾದ ಪ್ರೇರಣೆ ಅವರದ್ದು. ಆಧ್ಯಾತ್ಮಿಕ ಪ್ರವೃತ್ತಿಗೆ ಸೆಳೆದೊಯ್ಯಿತು. ಆಧುನಿಕ ತಂತ್ರಜ್ಞಾನ ವಿಶಾರದರಾಗಿ ಭಾರತಕ್ಕೆ ಬಂದರು. ಸಾಧನಾಪಥದಲ್ಲಿ ಸೇವಾದೀಕ್ಷೆ ತೊಟ್ಟು ಸಂನ್ಯಾಸ ಸ್ವೀಕರಿಸಿದರು. ಸ್ವಾಮಿ ಭರತಾನಂದ ಎಂದು ಕರೆಯಲ್ಪಟ್ಟು ಭಾರತದ ಜನಕೋಟಿಯ ಸೇವೆಯಲ್ಲಿ ಮಗ್ನರಾಗಿಬಿಟ್ಟರು. 1935ರಲ್ಲಿ ಮೈಸೂರಿನ ಆಗಿನ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಆಹ್ವಾನದ ಮೇಲೆ ಹಳೆಯ ಮೈಸೂರು ಸಂಸ್ಥಾನದ ಸರ್ಕಾರೀ ವಿದ್ಯುತ್ ಕಾರ್ಖಾನೆ (ಈಗಿನ ಕ.ವಿ.ಕಾ.)ಯನ್ನು ಸ್ಥಾಪಿಸಿ ಮುಖ್ಯ ಇಂಜಿನಿಯರ್ ಆಗಿ ನಿರ್ದೇಶಿಸಲು ಬಂದರು. ಅಲ್ಲಿಂದ ನಲವತ್ತು ವರ್ಷಗಳ ಕಾಲ ಭಾರತದಲ್ಲೇ ಇದ್ದುಬಿಟ್ಟರು. ಗಾಂಧೀಜಿಯ ಪ್ರೇರಣೆಯಿಂದ ಭಾರತದ ಗ್ರಾಮ ಪುನರ್ರಚನೆಯಲ್ಲಿ ಅಖಂಡವಾಗಿ ತೊಡಗಿ ಸೇವೆ ಸಲ್ಲಿಸಿದರು.

ಫ್ರೀಡ್‌ಮನ್ ದಕ್ಷಿಣ ಪೋಲೆಂಡಿನ ಕ್ರಾಕೂವ್ ಎಂಬಲ್ಲಿ ಯಹೂದಿ ಪಾದ್ರಿಯೊಬ್ಬರ ಬಡಕುಟುಂಬದಲ್ಲಿ 1894ರಲ್ಲಿ ಹುಟ್ಟಿದರು. ಆಗ ರಷ್ಯದ ಸರ್ವಾಧಿಕಾರಿಗಳಾಗಿದ್ದ ಜಾರ್ ದೊರೆಗಳ ದಬ್ಬಾಳಿಕೆಯಲ್ಲಿ ಯಹೂದಿಗಳು ಘೋರ ತುಳಿತಕ್ಕೆ ಬಲಿಯಾಗಿದ್ದರು. ಘಟ್ಟೋಗಳಲ್ಲಿ ಅವರ ವಾಸ. ಮಾರಿಸ್ ಫ್ರೀಡ್‌ಮನ್ ಅತ್ಯಂತ ಮೇಧಾವಿ. ರಷ್ಯನ್, ಪೋಲಿಷ್, ಫ್ರೆಂಚ್, ಇಂಗ್ಲೀಷ್ ಮತ್ತು ಹಿಬ್ರೂ ಭಾಷೆಗಳಲ್ಲಿ ನಿಷ್ಣಾತರಾದರು. ಶಾಲೆಯಲ್ಲಿ ಪ್ರಥಮ ದರ್ಜೆಯಲ್ಲಿದ್ದು ಶಿಕ್ಷಕರ ವಿಶ್ವಾಸ ಗಳಿಸಿದ್ದರು. ಆ ಕಾರಣದಿಂದ ಜನಾಂಗ ವಿದ್ವೇಷಗಳ ಮಧ್ಯೆಯೂ ರಷ್ಯನ್ ಶಾಲೆಯಲ್ಲಿ ಪ್ರವೇಶ ಪಡೆದರು. ಪೋಲೆಂಡ್ ಪ್ರಾಂತದ ಪ್ರೌಢಶಾಲೆಯ ಪರೀಕ್ಷೆಯಲ್ಲಿ ಮೊದಲ ಸ್ಥಾನ ಅವರದಾಯಿತು. ತಂತ್ರಜ್ಞಾನ ವಿನ್ಯಾಸಗಳಲ್ಲಿ ಪ್ರವೀಣರೆನಿಸಿದರು. ವಿವಿಧ ಪ್ರಯೋಗಗಳಲ್ಲಿ ಯಶಸ್ವಿಯಾಗಿ ತಮ್ಮ ಇಪ್ಪತ್ತನೇ ವಯಸ್ಸಿಗೇ ಪ್ರಸಿದ್ಧ ಇಂಜಿನಿಯರ್ ಎನಿಸಿದ್ದರು. 1925ರ ವೇಳೆಗೆ ಉನ್ನತ ಸಂಶೋಧನ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಾ ಜರ್ಮನಿ, ಹಾಲೆಂಡ್, ಡೆನ್‌ಮಾರ್ಕ್‌ಗಳ ದೊಡ್ಡ ಔದ್ಯೋಗಿಕ ಸಂಸ್ಥೆಗಳಲ್ಲಿ ಆಹ್ವಾನಿತರಾದರು. ಎಲ್ಲಾ ಕಡೆಯೂ ಉನ್ನತ ಶ್ರೇಯಸ್ಸು ಗಳಿಸಿದ್ದರು.

ಇಪ್ಪತ್ತೈದನೇ ವಯಸ್ಸಿನಲ್ಲಿ ಈ ಮೇಧಾವಿ ವಿಜ್ಞಾನಿ ಆಳವಾದ ಆಂತರಿಕ ಒತ್ತಡಗಳಿಂದ ಪ್ರೇರಿತರಾಗಿ ದೈವಸಾಕ್ಷಾತ್ಕಾರದ ಹಂಬಲ ಬೆಳೆಸಿಕೊಂಡರು. ಯಹೂದಿ ಧರ್ಮಗ್ರಂಥಗಳ ಅಧ್ಯಯನದಿಂದ ತೃಪ್ತರಾಗಲಿಲ್ಲ. ಏಸುಕ್ರಿಸ್ತನ ಆಧ್ಯಾತ್ಮಿಕ ಚಿಂತನೆಯಲ್ಲಿ ಲೀನವಾಗಿ ಶ್ರದ್ಧೆಯಿಂದ ಅಧ್ಯಯನ ಮಾಡಿದರು. ರಷ್ಯನ್ ಧರ್ಮಗುರುಗಳ ಪಂಕ್ತಿಗೆ ಸೇರಿ ವೈರಾಗ್ಯದ ಜೀವನ ಕೈಗೊಂಡರು. ಅತೀಂದ್ರಿಯ ಸಿದ್ಧಾಂತ ಮನಸ್ಸನ್ನು ಸೆರೆಹಿಡಿಯಿತು. ಆತ್ಮಜ್ಞಾನ ಶೋಧನೆಯಲ್ಲಿ ಭಾರತದ ತತ್ವಜ್ಞಾನ ಅವರನ್ನಾಕರ್ಷಿಸಿತು. ಸಾಂಪ್ರದಾಯಿಕ ಧರ್ಮಪರಂಪರೆಗಳ ಜಡ ಆಚಾರಗಳು ನಿಷ್ಪ್ರಯೋಜಕ ಎನಿಸಿತು. ಸೈದ್ಧಾಂತಿಕ ಕಟ್ಟುಪಾಡುಗಳಿಂದ ಅಂತರಾತ್ಮನ ಸ್ವಚ್ಛಂದ ವಿಹಾರ

ಕುಂಠಿತವಾಗುತ್ತದೆ ಎನಿಸಿತು. ಎಲ್ಲ ಪೂರ್ವನಿರ್ಮಿತ ಪಂಥಗಳಿಂದಲೂ ವಿಮೋಚನೆ ಹೊಂದಿ ಸ್ವತಂತ್ರ ಚಿಂತನ ಸಾಧನಗಳಿಂದ ಮೇಲೇರಬೇಕು ಎಂಬ ಹಂಬಲ ತುಂಬಿಕೊಂಡಿತು. ಆ ಸಮಯಕ್ಕೆ ಯೂರೋಪಿನ ಪ್ರವಾಸದಲ್ಲಿದ್ದ ಶ್ರೀಮತಿ ಆನಿಬೆಸೆಂಟ್ ಮತ್ತು ಜೆ. ಕೃಷ್ಣಮೂರ್ತಿ ಅವರ ಪರಿಚಯವಾಯಿತು. ಸ್ವಿಟ್ಜರ್ಲೆಂಡಿನ ಆಲ್ಪ್ಸ್ ಪರ್ವತ ತಪ್ಪಲಿನ ಸುಂದರ ಪ್ರಶಾಂತ ತಾಣಗಳಲ್ಲಿ ನಡೆಯುತ್ತಿದ್ದ ಥಿಯಾಸಫಿ ಪಂಥದ ಗೋಷ್ಠಿಗಳಿಗೆ ಹೋದರು. ಕೃಷ್ಣಮೂರ್ತಿ ಅವರ ಆಕರ್ಷಕ ವ್ಯಕ್ತಿತ್ವ ಅವರನ್ನು ಸೂರೆಗೊಂಡಿತು. ಮುಂದೆ ಅವರು ಬದುಕಿರುವವರೆಗೂ ಅವರ ನಿಕಟಾನುವರ್ತಿಗಳಾಗಿಯೇ ಇದ್ದರು. ಆದರೆ ತಮ್ಮ ಸ್ವತಂತ್ರ ನಿರ್ಭಯ ಚಿತ್ತವೃತ್ತಿಯಿಂದ ತಮ್ಮ ಪಥವನ್ನು ತಾವೇ ತೀರ್ಮಾನಿಸಿ ನಡೆದರು. ಜೀವನವೃತ್ತಿಗಾಗಿ ಕೈಗೊಂಡ ತಂತ್ರ ವಿಜ್ಞಾನ ಕ್ಷೇತ್ರದಲ್ಲಿ ಪರಿಣಿತರಾಗಿ ಪಾರಿಸ್ ಯೂರೋಪಿನಲ್ಲಿ ಶ್ರದ್ಧೆಯಿಂದಲೇ ದುಡಿದು ಪ್ರಖ್ಯಾತರಾಗಿದ್ದರು. ಉದ್ಯೋಗವನ್ನರಸುತ್ತಾ ಪ್ಯಾರಿಸ್ಸಿಗೆ ಬಂದು ನೆಲೆಸಿದರು. ಕೈಯಲ್ಲಿ ಕಾಸಿಲ್ಲ. ತಂಗಲು ಸ್ಥಳವಿಲ್ಲ. ಸಾಹಸಪಟ್ಟು ಒಂದು ಹೊಸ ವಿದ್ಯುಚ್ಛಕ್ತಿ ಕಾರ್ಖಾನೆ ಸೇರಿದರು. ಕೆಲವೇ ದಿನಗಳಲ್ಲಿ ಆ ಸಂಸ್ಥೆಯ ಅಭ್ಯುದಯಕ್ಕೆ ಕಾರಣರಾಗಿ ಮೇಧಾವಿ ತಂತ್ರತಜ್ಞರೆನಿಸಿ ಮೇಲೇರಿದರು. 1934ರ ವೇಳೆಗೆ ಅಲ್ಲಿನ ನಿರ್ದೇಶಕರಾದರು. ಔದ್ಯೋಗಿಕ ಕ್ಷೇತ್ರದಲ್ಲಿ ನಿಪುಣ ವ್ಯವಸ್ಥಾಪಕರೆನಿಸಿದರು.

ಸಾಂಸಾರಿಕ ಜೀವನ ಅವರನ್ನು ಆಕರ್ಷಿಸಲೇ ಇಲ್ಲ. ಅವಿವಾಹಿತರಾಗಿಯೇ ಉಳಿದರು. ಅಧ್ಯಾತ್ಮ ಸಾಧನೆಯ ಹಸಿವು ಹೆಚ್ಚುತ್ತಲೇ ಇತ್ತು. ಸಾಮಾಜಿಕ ಉನ್ನತಿಗೆ ತಮ್ಮ ಭೌತಿಕ ಸಾಮರ್ಥ್ಯಗಳನ್ನು ಸತತವಾಗಿ ಧಾರೆಯೆರೆಯುತ್ತಾ ಸೇವಾಮನೋವೃತ್ತಿ ಬೆಳೆಸಿಕೊಂಡರು. ಭಾರತೀಯ ಆತ್ಮಜ್ಞಾನ ಸಾಧಕರ ಚಿಂತನೆಯ ಅಧ್ಯಯನ ಆಳವಾಯಿತು. ಗೀತೆ, ಮಹಾಭಾರತ, ಉಪನಿಷತ್ತುಗಳು ಹೊಸ ಬೆಳಕನ್ನು ತಂದು ಕೊಟ್ಟವು. ಪಾಲ್‌ಬ್ರಂಟನ್ನನ 'ರಮಣಮಹರ್ಷಿ' ಗ್ರಂಥ ಅವರ

ಗಮನವನ್ನು ವಿಶೇಷವಾಗಿ ಸೆಳೆಯಿತು. ಅವರ ಸ್ವತಂತ್ರ ಆತ್ಮಾನ್ವೇಷಣೆ ಮತ್ತು ಪ್ರತಿಯೊಬ್ಬರೂ ವ್ಯಕ್ತಿಗತ ಸಾಧನೆಯಿಂದಲೇ ಶಾಂತಿ ಪಡೆಯಬೇಕೆಂಬ ಬೋಧೆ ಹಿಡಿಸಿತು. ಭಾರತಕ್ಕೆ ಹೋಗಬೇಕು ಎಂಬ ಅಭಿಲಾಷೆಯೂ ತೀವ್ರವಾಗುತ್ತಲೇ ಸಾಗಿತು. ಯೂರೋಪಿನ ಯಾಂತ್ರಿಕ ಜೀವನ, ವಿಲಾಸೀ ಪ್ರವೃತ್ತಿಗಳು, ಬಾಹ್ಯಸುಖದ ಹಂಬಲ ಫ್ರೀಡ್‌ಮನ್ನರಿಗೆ ಬಹಳ ಕೀಳು ಸಂಸ್ಕೃತಿ ಎನಿಸಿತು. ಪೂರ್ವಾಭಿಮುಖರಾಗುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಮೈಸೂರು ಸಂಸ್ಥಾನದ ದಿವಾನ್ ಸರ್ ಮಿರ್ಜಾ ಸಾಹೇಬರು ಪ್ಯಾರಿಸ್ಸಿಗೆ ಬಂದಿದ್ದರು. ತಮ್ಮ ರಾಜ್ಯದ ಔದ್ಯೋಗೀಕರಣದ ಪ್ರಗತಿಗಾಗಿ ಒಂದು ವಿದ್ಯುಚ್ಛಕ್ತಿ ಕಾರ್ಖಾನೆ ಸ್ಥಾಪಿಸಿ ನಡೆಸಲು ಸೂಕ್ತ ತಜ್ಞರನ್ನು ಹುಡುಕುತ್ತಿದ್ದರು. ಮಾರಿಸ್ ಫ್ರೀಡ್‌ಮನ್ ನಿರ್ದೇಶಿಸುತ್ತಿದ್ದ ಕಾರ್ಖಾನೆಗೆ ಬಂದು ನೋಡಿ ಆಶ್ಚರ್ಯಚಕಿತರಾದರು. ಕೂಡಲೇ ಮಿರ್ಜಾಸಾಹೇಬರು "ನಮ್ಮ ರಾಜ್ಯಕ್ಕೆ ಬಂದು ದಯಮಾಡಿ ನಮಗೆ ಮಾರ್ಗದರ್ಶನ ಮಾಡುವಿರಾ" ಎಂದು ಕೇಳಿದರು. ತಮ್ಮ ಹಲವು ದಿನದ ಕನಸಾಗಿದ್ದ ಭಾರತದರ್ಶನಕ್ಕೆ ಹಾತೊರೆಯುತ್ತಿದ್ದ ಫ್ರೀಡ್‌ಮನ್ ಆ ಕೂಡಲೇ ಒಪ್ಪಿಬಿಟ್ಟರು. "ಇಗೋ ನಿಮ್ಮೊಡನೆಯೇ ಹೊರಟುಬಿಡುತ್ತೇನೆ" ಎಂದಾಗ ಮಿರ್ಜಾ ಅವರಿಗೆ ಸಂತೋಷವಾಯಿತು. ಬೆಂಗಳೂರಿನ ವಿದ್ಯುಚ್ಛಕ್ತಿ ಕಾರ್ಖಾನೆ ಯೋಜನೆಯನ್ನು ಅವರಿಗೊಪ್ಪಿಸಿದರು. ದಿವಾನರು ಮೂರು ಸಾವಿರ ಸಂಬಳ, ಕಾರು, ಮನೆ ನೀಡಲು ಮುಂದೆ ಬಂದರು. ಆ ಕಾಲಕ್ಕೆ ದಿವಾನರ ಸಂಬಳವೇ ಮೂರುಸಾವಿರ. ಯಾವ ಇಂಜಿನಿಯರಿಗೂ ಆ ಸ್ಥಾನ ಸಂಭಾವನೆಗಳಿರಲೇ ಇಲ್ಲ. ಅವುಗಳೊಂದೂ ಫ್ರೀಡ್‌ಮನ್ನರನ್ನು ಆಕರ್ಷಿಸಲಿಲ್ಲ. ಭಾರತಕ್ಕೆ ಬಂದು ಸೇವೆ ಸಲ್ಲಿಸುವುದೊಂದೇ ಅವರ ಗುರಿ ಆಗಿತ್ತು.

ಬೆಂಗಳೂರಿನಲ್ಲಿ ನೆಲಸಿದೊಡನೆ ಫ್ರೀಡ್‌ಮನ್ ಪ್ರತಿ ವಾರಾಂತ್ಯದಲ್ಲೂ ತಿರುವಣ್ಣಾಮಲೆಯ ರಮಣಾಶ್ರಮಕ್ಕೆ ಭೇಟಿ ನೀಡಲಾರಂಭಿಸಿದರು. ರಮಣಮಹರ್ಷಿಗಳ ಸನ್ನಿಧಿಯ ಆನಂದಾನುಭವ ಆತ್ಮಜ್ಞಾನದ

ದಿಗಂತಗಳನ್ನು ಅನಾವರಣ ಮಾಡುತ್ತಿತ್ತು. ಸಂನ್ಯಾಸ ಸ್ವೀಕರಿಸಬೇಕೆಂಬ ಪ್ರಬಲ ಇಚ್ಛೆಯಾಯಿತು. ಮಹರ್ಷಿಗಳು "ಕಾವಿ ವಸ್ತ್ರಗಳನ್ನು ನಾ ನಿನಗೆ ಕೊಡಲಾರೆ. ನಿನಗದು ಅಗತ್ಯವಲ್ಲ" ಎಂದುಬಿಟ್ಟರು. ಫ್ರೀಡ್‌ಮನ್ನರಿಗೆ ಸಮಾಧಾನವಾಗಲಿಲ್ಲ. ಬೇರೆ ಬೇರೆ ಆಶ್ರಮಗಳಿಗೆ ಹೋಗಿಬರತೊಡಗಿದರು. ಕೊನೆಗೆ ಕಾನ್ಹಂಗಡದ ಶ್ರೀರಾಮದಾಸರ ಆನಂದಾಶ್ರಮದಲ್ಲಿ ಕೆಲವು ಸಮಯ ಇದ್ದಾಗ ಸಂನ್ಯಾಸದೀಕ್ಷೆಯನ್ನು ತೆಗೆದುಕೊಂಡು ಕಾವಿ ಧರಿಸಲು ಪ್ರಾರಂಭಿಸಿದರು. ಪಾಶ್ಚಾತ್ಯ ರೀತಿನೀತಿಗಳನ್ನು ಬಿಟ್ಟು ಶುದ್ಧ ಸಸ್ಯಾಹಾರಿಯಾದರು. ಅತಿ ಸರಳ ಜೀವನಕ್ಕೆ ಒಲಿದರು. ತಲೆ ಬೋಳಿಸಿಕೊಂಡರು. ಭಿಕ್ಷೆಯಿಂದ ಅನ್ನ ಪಡೆದು ಉಣ್ಣುವ ಅಭ್ಯಾಸ ಮಾಡಿದರು. ಅತ್ಯಂತ ಪ್ರಾಮಾಣಿಕರಾಗಿ ದೃಢಶ್ರದ್ಧೆಯಿಂದ ಎಲ್ಲವನ್ನೂ ಅರಿತು ಮಾಡುತ್ತಿದ್ದರು. ಸುತ್ತಲಿನವರ ಪ್ರೇಮಕ್ಕೂ ಗೌರವಕ್ಕೂ ಪಾತ್ರರಾದರು. ತಮ್ಮ ಇಂಜಿನಿಯರರ ಕರ್ತವ್ಯಗಳನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿ ಎರಡೇ ವರ್ಷದಲ್ಲಿ ತಮ್ಮ ಕಾರ್ಖಾನೆಯನ್ನು ಉನ್ನತ ಶ್ರೇಣಿಗೇರಿಸಿದರು. ಪ್ರಗತಿಪರರಾಗಿದ್ದ ಮೈಸೂರು ಸಂಸ್ಥಾನದ ವಿದ್ಯುಚ್ಛಕ್ತಿ ಇಲಾಖೆಗೆ ಬೇಕಾದ ಉಪಕರಣಗಳನ್ನು ತಯಾರಿಸಿಕೊಟ್ಟರು. ಸ್ವದೇಶೀಯವಾದ ಬಳಕೆ ವಸ್ತುಗಳನ್ನು ತಯಾರಿಸುವ ತಂತ್ರಜ್ಞಾನವನ್ನು ತಮ್ಮ ಸಹೋದ್ಯೋಗಿಗಳಿಗೆ ಹೇಳಿಕೊಡುತ್ತಿದ್ದರು. ಹಳ್ಳಿಗರಿಗೆ ಉಪಯುಕ್ತವಾಗುವ ಅನೇಕ ಸಲಕರಣೆಗಳನ್ನು ಮಾಡುವ ವಿಧಾನಗಳನ್ನು ಅಳವಡಿಸಿಕೊಟ್ಟರು. ಮೊದಲಬಾರಿಗೆ ಬೇಕ್‌ಲೈಟ್ ಸಾಮಾನುಗಳು ಈ ಕಾರ್ಖಾನೆಯಿಂದ ಉತ್ಪಾದಿತವಾದವು. ಎಲ್ಲದಕ್ಕೂ ಸರಳವಾದ ಮತ್ತು ಹಳ್ಳಿಗರಿಗೆ ಸಾಧ್ಯವಾಗುವಂತಹ ತಂತ್ರಜ್ಞಾನವನ್ನವರು ಬಿತ್ತರಿಸುತ್ತಿದ್ದರು. ಬಹುಬೇಗ ಭಾರತದ ರಾಷ್ಟ್ರೀಯ ನಾಯಕರ ಗಮನವನ್ನು ಸೆಳೆದುಕೊಂಡರು.

ಮಹಾರಾಷ್ಟ್ರದ ಔಧ್ ಸಂಸ್ಥಾನ ಎಪ್ಪತ್ತೈದು ಗ್ರಾಮಗಳ ಸಣ್ಣ ರಾಜ್ಯ. ಅಲ್ಲಿನ ಮಹಾರಾಜ ಭವನರಾವ್, ಗಾಂಧೀಜಿಯ ಶಿಷ್ಯರು. ಗ್ರಾಮ ಪುನರ್‌ರಚನೆಯ ಕಾರ್ಯದಲ್ಲಿ ಅವರಿಗೆ ಗಾಂಧೀಜಿಯೇ

ಮಾರ್ಗದರ್ಶಕರಾಗಿದ್ದರು. ಗ್ರಾಮಗಳಿಗಾಗಿಯೇ ವಿಜ್ಞಾನ-ತಂತ್ರಜ್ಞಾನಗಳನ್ನು ಬಳಸಿ ಗ್ರಾಮಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಗ್ರಾಮ ಸ್ವಾವಲಂಬನೆಯ ಸ್ವರಾಜ್ಯದ ಕನಸನ್ನು ಸ್ವಾತಂತ್ರ್ಯ ಪ್ರಿಯರಾದ ಔಥ್ ಮಹಾರಾಜರು ಬಹಳ ಶ್ರದ್ಧೆಯಿಂದ ಬೆಳೆಸಿಕೊಂಡಿದ್ದರು. ಮಾರಿಸ್ ಫ್ರೀಡ್‌ಮನ್ ಈ ದೊರೆಗಳಿಗೆ ಸಲಹೆಗಳನ್ನು ನೀಡಿ ಸಹಕರಿಸುತ್ತಿದ್ದರು. ಉನ್ನತ ಶಿಕ್ಷಣ ಪಡೆದಿದ್ದ ರಾಜಕುಮಾರ ಅಪ್ಪಾಸಾಹೇಬ್ ಪಂತರು (ಅವರು ಸ್ವತಂತ್ರ ಭಾರತದಲ್ಲಿ ವಿದೇಶ ವ್ಯವಹಾರಗಳು ಮಂತ್ರಾಲಯದಲ್ಲಿ ಉನ್ನತಾಧಿಕಾರಿಗಳಾದರು) ಫ್ರೀಡ್‌ಮನ್‌ರೊಡನೆ ಸ್ನೇಹ ಬೆಳೆಸಿ ತಾವೂ ರಮಣಮಹರ್ಷಿಗಳ ಭಕ್ತರಾಗಿದ್ದರು. ಔಥ್ ಸಂಸ್ಥಾನದ ಉತ್ತರಾಧಿಕಾರಿಯಾಗಿದ್ದ ಈ ರಾಜಕುಮಾರನನ್ನು ರಾಜ್ಯಾಡಳಿತದಲ್ಲಿ ಶಿಕ್ಷಣ ಪಡೆಯಲು ಮಿರ್ಜಾಸಾಹೇಬರ ಬಳಿಗೆ ಕಳುಹಿಸಿಕೊಟ್ಟರು.

ಆಕ್ಸ್‌ಫರ್ಡ್ ಮತ್ತು ಲಂಡನ್‌ಗಳಲ್ಲಿ ನಾಲ್ಕೂವರೆ ವರ್ಷ ಶಿಕ್ಷಣ ಪಡೆದು ಆಗತಾನೇ ಹಿಂತಿರುಗಿದ್ದ ಅಪ್ಪಾಸಾಹೇಬ್ ಬೆಂಗಳೂರಿನಲ್ಲಿ ರಾಜ್ಯದ ಅತಿಥಿಯಾಗಿ ವಿವಿಧ ಇಲಾಖೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. ವಿಶ್ವಯುವಕ ವೃಂದದಲ್ಲಿ ಪ್ರಚಲಿತವಿದ್ದ ಸಾಮ್ಯವಾದ (ಕಮ್ಯೂನಿಸಮ್) ಅವರನ್ನೂ ಸೆರೆಹಿಡಿದಿತ್ತು. ಬ್ರಿಟಿಷ್ ಸಾಮ್ರಾಜ್ಯವನ್ನು ನಾಶಗೊಳಿಸಿ ಭಾರತದಲ್ಲಿ ರಷ್ಯದಂತೆ ಕಮ್ಯೂನಿಸ್ಟ್ ರಾಜ್ಯ ಕಟ್ಟಬೇಕೆಂಬ ಹಂಬಲ ಅವರಿಗೆ. ಆದರೆ ತಂದೆಗೆ ಭಾರತೀಯತೆಗನುಗುಣವಾಗಿದ್ದ ಗಾಂಧೀ ಮಾರ್ಗದಲ್ಲಿ ಅಪಾರ ಶ್ರದ್ಧೆ. ಮೈಸೂರಿನ ಕೃಷ್ಣರಾಜ ಒಡೆಯರ್ ಆ ಕಾಲಕ್ಕೆ ಒಬ್ಬ ಆದರ್ಶ ರಾಜರ್ಷಿ ಎನಿಸಿದ್ದರು. ಗಾಂಧೀಜಿಯ ಮನ್ನಣೆಯನ್ನೂ ಗಳಿಸಿದ್ದರು. ಅಪ್ಪಾಸಾಹೇಬರು ಈ ವಾತಾವರಣದಲ್ಲಿ ಶಿಕ್ಷಣ ಪಡೆಯಲಿ ಎಂದವರ ಆಸೆ. ಸರ್ ಮಿರ್ಜಾ ಅವರಲ್ಲಿಗೆ ಕಳುಹಿಸಿಕೊಟ್ಟಿದ್ದರು. ಕಚೇರಿಗಳ ಪರಿಚಯವಲ್ಲದೆ ಕಾರ್ಖಾನೆಗಳನ್ನು ಸ್ಥಾಪಿಸಿ ನಡೆಸುವುದನ್ನೂ ಈ ರಾಜಕುಮಾರ ಕಲಿಯಬೇಕಾಗಿತ್ತು. ಮಾರಿಸ್ ಫ್ರೀಡ್‌ಮನ್ ಬಳಿಗೆ ಅವರನ್ನು ಕಳುಹಿಸಿಕೊಟ್ಟರು.

ಆ ವೇಳೆಗೆ ಫ್ರೀಡ್‌ಮನ್ ಸಂನ್ಯಾಸ ಸ್ವೀಕರಿಸಿದ್ದರು. ಅದೇ ಕಾವಿ ಉಡುಪುಗಳಲ್ಲಿ ತಮ್ಮ ಉನ್ನತ ಹುದ್ದೆಯನ್ನೂ ದಕ್ಷತೆಯಿಂದಲೇ ನಡೆಸುತ್ತಿದ್ದರು. ತಮ್ಮ ವ್ರತನಿಷ್ಠೆಯಂತೆ ತಮ್ಮ ಸಂಭಾವನೆಯನ್ನೆಲ್ಲ ಬಡಬಗ್ಗರಿಗೆ ಹಂಚುತ್ತಾ ತಮ್ಮ ದಿನದಿನದ ಆಹಾರವನ್ನು ಭಿಕ್ಷೆಯಿಂದ ಪಡೆಯುತ್ತಿದ್ದರು. ಈ ವಿಷಯ ದಿವಾನ್ ಮಿರ್ಜಾ ಅವರಿಗೆ ತಿಳಿದು ಅವರು ಕಿಡಿಕಿಡಿಯಾದರು. "ನಾನು ಕರೆಸಿಕೊಂಡಿದ್ದು ಒಬ್ಬ ಇಂಜನಿಯರರನ್ನು.ನನಗೆ ಸಂನ್ಯಾಸಿ ಬೇಕಿಲ್ಲ. ಇನ್ನು ಮೇಲೆ ಈ ಉಡುಪಿನಲ್ಲಿ ಕಾರ್ಖಾನೆಯ ಕಛೇರಿಗೆ ಬರಬಾರದು" ಎಂದರು. ಮಾರಿಸ್ ಫ್ರೀಡ್‌ಮನ್ ಶಾಂತವಾಗಿಯೇ "ನನ್ನ ವ್ಯಕ್ತಿಗತ ಜೀವನದ ರೀತಿನೀತಿಗಳನ್ನು ಬೇರೆ ಯಾರೂ ತೀರ್ಮಾನಿಸುವುದು ಸಾಧ್ಯವಿಲ್ಲ. ನಿಮಗೆ ಸಮಾಧಾನವಾಗದಿದ್ದರೆ ಇದೋ ನನ್ನ ರಾಜೀನಾಮೆ" ಎಂದರು. ದಿವಾನರ ಅಧಿಕಾರಸ್ಥಾನಕ್ಕೆ ಸವಾಲನ್ನೆಂದೂ ಸಹಿಸದ ಮಿರ್ಜಾ ಕೋಪ ನುಂಗಿಕೊಂಡರು. ಫ್ರೀಡ್‌ಮನ್ ಮತ್ತೆ "ಈ ಕಾರ್ಖಾನೆಯ ಮುಖ್ಯ ಇಂಜನಿಯರ್ ಆಗಿ ನಿರ್ದೇಶಕರಾಗಿ ನನ್ನ ಕೆಲಸದಿಂದ ಯಾರನ್ನು ಬೇಕಾದರೂ ತೃಪ್ತಿಪಡಿಸಬಲ್ಲೆ" ಎಂದರು. ಆನಂತರ ಒಂದು ಒಪ್ಪಂದಕ್ಕೆ ಬಂದು ಫ್ರೀಡ್‌ಮನ್ ಕೆಲಸದ ಮೇಲಿದ್ದಾಗ ಯೂರೋಪಿನ ಉಡುಪನ್ನೇ ಧರಿಸಲು ಸಮ್ಮತಿಸಿದರು. ರಾಜ್ಯದ ಉನ್ನತಾಧಿಕಾರಿಗಳು ಆಗಿನ ಮಹಾರಾಜರುಗಳ ಆಳ್ವಿಕೆಯಲ್ಲಿ ಉಡುಪಿಗೆ ಮಹತ್ವ ನೀಡುತ್ತಿದ್ದರು. ಫ್ರೀಡ್‌ಮನ್ ಗಾಂಧೀವಾದಿ. ನಿರಾಡಂಬರ ಸರಳ ಉಡುಪಿಗೂ ಕಾರ್ಯದಕ್ಷತೆಗೂ ತಾಳೆ ಹಾಕಬಾರದು ಎಂದು ಹೇಳುತ್ತಿದ್ದರು. ಅವರ ಸಿಬ್ಬಂದಿಯವರಾರೂ ಅವರ ಸರಳತೆಯ ದುರ್ಲಾಭ ಪಡೆಯುತ್ತಿರಲಿಲ್ಲ. ಬದಲಾಗಿ ಉನ್ನತಾಧಿಕಾರಿಗಳೂ ಗೌರವದಿಂದಲೇ ಕಾಣುತ್ತಿದ್ದರು. ಅವರ ಮಾರ್ಗದರ್ಶನವೇ ಕಾರ್ಖಾನೆಯ ಯಶಸ್ಸಿಗೆ ಕಾರಣ ಎಂದು ಅಂಗೀಕರಿಸಿದ್ದರು. ಗಿರಣಿಯ ದುಡಿಮೆಗಾರರೊಡನೆ ಫ್ರೀಡ್‌ಮನ್ ಅತ್ಯಂತ ಪ್ರೀತಿ ಗೌರವಗಳಿಂದ ನಡೆದುಕೊಳ್ಳುತ್ತಿದ್ದರು. ಈ ಆದರ್ಶ ನಿರ್ದೇಶಕನ ಬಗ್ಗೆ ಎಲ್ಲರಿಗೂ ಅಭಿಮಾನ ಬೆಳೆದಿತ್ತು. ಮುಂದೆ

ಜೆ. ಕೃಷ್ಣಮೂರ್ತಿಯವರ ನಿಕಟ ಸಂಪರ್ಕ ಬೆಳೆದು ಫ್ರೀಡ್‌ಮನ್ ಅವರ ತತ್ವಶ್ರದ್ಧೆ ಬದಲಾಯಿತು. ಶ್ರೀರಮಣರು ಹೇಳಿದಂತೆ ಆತ್ಮಜ್ಞಾನ ಸಾಧನೆಗೆ ಸಂನ್ಯಾಸ ದೀಕ್ಷೆ ಅಗತ್ಯವಿಲ್ಲ ಎನಿಸಿತು. ಆ ಉಡುಪನ್ನು ಬಿಟ್ಟು ಸಾಧಾರಣ ಸರಳ ಉಡುಪನ್ನು ಧರಿಸುತ್ತಿದ್ದರು. ಆದರೆ ನಿರಾಡಂಬರವಾದ ಶುದ್ಧ ಜೀವನಕ್ಕೆ ಮಹತ್ವ ನೀಡಿದರು. ಗಾಂಧೀ ಜೀವನ ಮೌಲ್ಯಗಳು ಮತ್ತು ಅವರ ಬದುಕಿನ ರೀತಿ ನೀತಿಗಳು ಫ್ರೀಡ್‌ಮನ್‌ರನ್ನು ತೀವ್ರವಾಗಿ ಆಕರ್ಷಿಸಿದವು. ಸಾಮಾಜಿಕ ಸೇವಾಕಾರ್ಯದಲ್ಲಿ ಸಂಪೂರ್ಣ ಮಗ್ನರಾಗಿದ್ದುಕೊಂಡೇ ಭೋಗಜೀವನಕ್ಕೆ ವಿಮುಖರಾಗಿ ಆತ್ಮೋನ್ನತಿ ಸಾಧಿಸಬೇಕು ಎಂದು ಸಂಕಲ್ಪಿಸಿದರು. ಭಾರತದ ಅಸಂಖ್ಯಾತ ಗ್ರಾಮಜೀವಿಗಳ ಸೇವೆಗೆ ಕಂಕಣಬದ್ಧರಾದರು. ರಾಜಕುಮಾರ ಅಪ್ಪಾಸಾಹೇಬರು ವಿದೇಶೀ ಶಿಕ್ಷಣ ಪಡೆದು ಅಧಿಕಾರ ಚಲಾಯಿಸುವವರ ಠೀವಿಯಿಂದಲೇ 1937ರಲ್ಲಿ ಫ್ರೀಡ್‌ಮನ್ನರ ವಿದ್ಯುಚ್ಛಕ್ತಿ ಕಾರ್ಖಾನೆಗೆ ಬಂದಿಳಿದರು. ಈ ಅತಿಥಿ ರಾಜಕುಮಾರನಿಗೆ ಸಲ್ಲಬೇಕಾದ ಗೌರವಕ್ಕೆ ಎಲ್ಲೂ ಚ್ಯುತಿ ಬರಬಾರದು ಎಂದು ದಿವಾನರ ಅಪ್ಪಣೆಯಾಗಿತ್ತು. ರಾಜ್ಯ ಸರ್ಕಾರದ ಕಾರಿನಲ್ಲಿ ಬಂದರು. ಕಾರ್ಖಾನೆಯ ನಿರ್ದೇಶಕ ಫ್ರೀಡ್‌ಮನ್‌ರೇ ಬಾಗಿಲಿನಲ್ಲಿ ಸ್ವಾಗತಿಸಿ "ಯುವರಾಜರೇ ಬನ್ನಿ. ನಿಮಗೆ ವಿದ್ಯುಚ್ಛಕ್ತಿ ಬಗ್ಗೆ ಏನಾದರೂ ತಿಳಿದಿದೆಯೇ? ಇಲ್ಲದಿದ್ದರೆ ನನ್ನ ನಿಮ್ಮ ಸಮಯ ಹಾಳಾಗುವುದು ಬೇಡ!" ಎಂದು ನೇರವಾಗಿಯೇ ನುಡಿದರು. ಅಪ್ಪಾಸಾಹೇಬರಿಗೆ ಕೆಂಡದಂತಹ ಕೋಪ ಉಕ್ಕಿ ಮತ್ತೆ ಕಾರನ್ನು ಹತ್ತಿಬಿಟ್ಟರು. ಫ್ರೀಡ್‌ಮನ್ ಶಾಂತರಾಗಿ ಆ ಯುವಕನ ಕೈ ಹಿಡಿದು "ನಾನು ನಿಮ್ಮನ್ನು ಅವಮಾನಗೊಳಿಸಲು ಹೇಳಲಿಲ್ಲ. ಕ್ಷಮಿಸಿ, ಬನ್ನಿ. ಒಟ್ಟಿಗೆ ಕುಳಿತು ವಿಚಾರ ಮಾಡೋಣ" ಎಂದು ಮಂದಸ್ಮಿತರಾಗಿ ನುಡಿದಾಗ ಅವರ ಸ್ನೇಹಪೂರ್ಣ ನಡತೆ ಅಪ್ಪಾಸಾಹೇಬರನ್ನು ಗೆದ್ದುಕೊಂಡಿತು. ಅಲ್ಲಿಂದಾಚೆ ಇಬ್ಬರೂ ಒಂದು ಅಪೂರ್ವ ಸ್ನೇಹ ಬಾಂಧವ್ಯದಲ್ಲಿ ನಿಕಟಾನುವರ್ತಿಗಳಾದರು. ಅನಂತರ ಈ ರಾಜಕುಮಾರರ ಜೀವನರೀತಿಯೇ ಬದಲಾಗಿಬಿಟ್ಟಿತು. ಇಬ್ಬರೂ

ಅಂತರಂಗದಲ್ಲಿ ಆಧ್ಯಾತ್ಮಿಕ ಸಾಧಕರಾಗಿದ್ದುದರಿಂದ ಬಹುಬೇಗ ಹೃದಯಗಳು ಬೆಸೆದುಕೊಂಡವು. ಗ್ರಾಮಸೇವೆಯ ಹಂಬಲದಿಂದ ಇಬ್ಬರೂ ಗಾಂಧೀ ಪ್ರಭಾವಕ್ಕೆ ಶರಣು ಬಂದರು.

ಅಪ್ಪಾಸಾಹೇಬರು ಅನಂತರ ತಮ್ಮ ಆತ್ಮೀಯ ಗುರುವೆಂದು ಸ್ವೀಕರಿಸಿದ ಮಾರಿಸ್ ಫ್ರೀಡ್‌ಮನ್ ಅವರ ಬಗ್ಗೆ ಹೀಗೆ ಬರೆದಿದ್ದಾರೆ:-

"ಮಾರಿಸ್ ಅವರ ಅಚ್ಚುಕಟ್ಟು, ಶಿಸ್ತು ಮತ್ತು ಕ್ರಮಬದ್ಧ ವ್ಯಕ್ತಿತ್ವದಿಂದ ನನ್ನ ಅಂತರಂಗ ಪ್ರಭಾವಿತವಾಯಿತು. ಆತನ ಚಾಣಾಕ್ಷ ಬುದ್ಧಿ, ಆತನ ಸುಂದರ ಸರಳತೆ, ಆತನ ಸಹಜವಾದ ಪ್ರಾಮಾಣಿಕ ಪ್ರೇಮ ನನ್ನನ್ನು ಸೂರೆಗೊಂಡವು. ಅವರಲ್ಲಿ ಎಲ್ಲೂ ಅಸತ್ಯ ಸುಳಿಯುತ್ತಿರಲಿಲ್ಲ. ತೋರಿಕೆಗಾಗಿ ಅವರು ಏನನ್ನೂ ಕೈಗೊಳ್ಳುತ್ತಿರಲಿಲ್ಲ. ಪರಿಸ್ಥಿತಿಗೆ ಕ್ಷಿಪ್ರವಾಗಿ ಪ್ರತಿಕ್ರಿಯಿಸುವ ತೀಕ್ಷ್ಣತೆ ಅವರಲ್ಲಿತ್ತು. ಕರುಣೆಯ ದೃಷ್ಟಿ ತುಂಬಿರುತ್ತಿತ್ತು. ಸಂಕಟಪಡುವವರನ್ನು ಕಂಡೊಡನೆ ತಮ್ಮಲ್ಲಿದ್ದುದನ್ನೆಲ್ಲ ಯಾವ ಅಳುಕೂ ಇಲ್ಲದೆ ದಾನ ಮಾಡಿಬಿಡುತ್ತಿದ್ದರು. ಯಾವುದೇ ಒಂದು ಧರ್ಮ, ಮತ, ಸಿದ್ಧಾಂತ ಅಥವಾ ರಾಜಕೀಯ ಪಕ್ಷಕ್ಕೆ ಅವರು ಸೇರಿರಲಿಲ್ಲ. ಅವರದು ನಿಸ್ಸೀಮ ಮಾನವ ಮೌಲ್ಯಗಳ ಧರ್ಮ."

ಭಾರತದ ಜೀವಜೀವಾಳ ಅದರ ಗ್ರಾಮಗಳಲ್ಲಿದೆ ಎಂದು ಗಾಂಧೀಜಿಯಂತೆ ಮಾರಿಸ್ ಫ್ರೀಡ್‌ಮನ್ ಅವರೂ ಮನಗಂಡಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಗ್ರಾಮ ಕೈಗಾರಿಕೆಗಳಿಗೆ ಅಳವಡಿಸಿ ಅವುಗಳನ್ನು ಜೀವಂತಗೊಳಿಸುವ ಕಾರ್ಯದಲ್ಲಿ ಅವರಿಗೆ ಅಪಾರ ಶ್ರದ್ಧೆ. ಔಂಧ್ ಮಹಾರಾಜರು ಪಂಚಾಯತ್ ರಾಜ್ಯವನ್ನು ಅನುಷ್ಠಾನಗೊಳಿಸಿ ಗಾಂಧೀಜಿಯ ಮೆಚ್ಚಿಗೆ ಗಳಿಸಿದ್ದರು. ಪ್ರತಿಗಾಮವನ್ನೂ ಸ್ವಾವಲಂಬಿ ಸ್ವಪರಿಪೂರ್ಣಘಟಕ ಮಾಡುವ ಕಾರ್ಯದಲ್ಲಿ ನೆರವಾಗಲು ಅಪ್ಪಾಸಾಹೇಬರು ಮಾರಿಸ್ ಅವರ ನೆರವನ್ನು ಬೇಡಿದರು. ಸರ್ ಮಿರ್ಜಾ ಅವರನ್ನು ಕೇಳಿಕೊಂಡರು. ಸ್ವಲ್ಪಕಾಲ ಈ ತಂತ್ರಜ್ಞರ ಸೇವೆಯನ್ನು ಎರವಲಾಗಿ ಕೊಡಿ ಎಂದರು. ಮಿರ್ಜಾ ಸಾಹೇಬರು

ಪ್ಪಲಿಲ್ಲ. ನೇರವಾಗಿ ಈ ವಿಷಯವನ್ನು ಮಾರಿಸ್ ಫ್ರೀಡ್‌ಮನ್ನರೊಡನೆ ಪ್ರಸ್ತಾಪಿಸಿದರು. ಮಿರ್ಜಾ ಅವರು ನಿರಾಕರಿಸಿದ್ದನ್ನೂ ಹೇಳಿದರು. ಫ್ರೀಡ್‌ಮನ್ ಅವರಿಗೆ ಸ್ವಾಭಿಮಾನ ಕೆರಳಿ ನಿಂತಿತು "ಸರ್‌ಮಿರ್ಜಾ ಅವರಿಗೆ ನಾನು ನನ್ನನ್ನು ಮಾರಿಕೊಂಡಿಲ್ಲ. ನಾನಾರ ಗುಲಾಮನೂ ಅಲ್ಲ. ಇದೋ ನನ್ನ ರಾಜೀನಾಮೆ" ಎಂದು ಮೈಸೂರು ಸರ್ಕಾರಕ್ಕೆ ಸಲ್ಲಿಸಿಬಿಟ್ಟರು. ತಮ್ಮ ಸಂನ್ಯಾಸಿ ಉಡುಪಿನೊಂದಿಗೆ ಈ ಸ್ವಾಮಿ ಭರತಾನಂದ ನೇರವಾಗಿ ಔಧ್ ಸಂಸ್ಥಾನಕ್ಕೆ ನಡೆದುಬಿಟ್ಟರು.

ಆಳವಾಗಿ ಯೋಚಿಸುತ್ತ ಕುಳಿತಿದ್ದ ಅಪ್ಪಾ ಸಾಹೇಬರೆದುರಿನಲ್ಲಿ ಒಂದು ಬೆಳಿಗ್ಗೆ ಅವರ ಅರಮನೆಯ ಅಂಗಳದಲ್ಲಿ ತಮ್ಮ ಕಾವಿಬಟ್ಟೆಗಳ ಗಂಟನ್ನು ಕಟ್ಟಿಕೊಂಡು ಒಂದು ಕೋಲು ಹಿಡಿದು ಮಾರಿಸ್ ಪ್ರತ್ಯಕ್ಷರಾಗಿಬಿಟ್ಟರು. "ಇದೋ ಬಂದಿದ್ದೇನೆ. ಮಿರ್ಜಾ ಅವರು ನನ್ನ ಮೇಲೆ ದಬ್ಬಾಳಿಕೆ ಮಾಡಲಾರರು. ನಾನು ಸ್ವತಂತ್ರವಾಗಿ ಕೆಲಸ ಮಾಡಲು ಬಂದಿದ್ದೇನೆ. ಏಳಿ ಒಟ್ಟಿಗೆ ಕೆಲಸಕ್ಕೆ ಕೈ ಹಚ್ಚೋಣ" ಎಂದು ಎರಡೇ ಮಾತಿನಲ್ಲಿ ತಿಳಿಸಿಬಿಟ್ಟರು. ಅಪ್ಪಾಸಾಹೇಬರಿಗೆ ಗಾಬರಿಯಾಯಿತು. "ನಿಮಗೆ ಮೂರು ಸಾವಿರದ ಸಂಬಳ, ಕಾರು, ಬಂಗಲೆ ನಾವೆಲ್ಲಿ ಕೊಡಲು ಸಾಧ್ಯ! ಔಧ್ ಸಂಸ್ಥಾನದ ದಿವಾನರಿಗೆ ಎಪ್ಪತ್ತೈದು ರೂಪಾಯಿ ಸಂಬಳ. ಅವರಿಗೊಬ್ಬ ಮುಸಲ್ಮಾನ ಡ್ರೈವರ್‌ಗೆ ಎಪ್ಪತ್ತು. ಇದು ನಮ್ಮ ಸ್ಥಿತಿ" ಎಂದರು.

ಕೂಡಲೇ ಬಂತು ಸ್ವಾಮಿ ಭರತಾನಂದರ ಉತ್ತರ. "ಇದೋ ಈ ನಿಮ್ಮ ದೊಡ್ಡ ಮನೆಯ ಒಂದು ಮೂಲೆಯಲ್ಲಿ ನೆಲದ ಮೇಲೆ ಮಲಗುತ್ತೇನೆ. ಹಳೆಯ ಕಾಲದ ಒಂದು ಇಳಿಜಾರು ಮೇಜನ್ನು ಬರೆಯಲು ಕೊಡಿ. ನಿಮ್ಮ ತಾಯಿಯ ಕೈಯಿನ ಊಟ ಮಾಡುತ್ತೇನೆ. ನನ್ನ ಕಾಲುಗಳು ಬಲವಾಗಿವೆ. ಕಾಲು ನಡಗೆಯಲ್ಲೇ ಹಳ್ಳಿಗಳಿಗೆ ಹೋಗೋಣ. ನೀವೂ ಜೊತೆಗೆ ಬನ್ನಿ. ಔಧ್‌ನ ಎಪ್ಪತ್ತೈದು ಗ್ರಾಮಗಳಲ್ಲಿ ಕೂಡಿ ಕೆಲಸ ಮಾಡೋಣ. ಗಾಂಧೀಜಿಯ ಮಾರ್ಗದರ್ಶನ ನಮಗಿದ್ದೇ ಇದೆ" ಎಂದು ನಗುತ್ತಾ ನುಡಿದರು. ಅವರ ಒಂದೊಂದು ಮಾತೂ

ಘಂಟೆ ಹೊಡೆದಂತೆ ನಿರ್ಧಾರದ ಧ್ವನಿಯಿಂದ ಬಂತು. ಅಪ್ಪಾಸಾಹೇಬ್ ಚಕಿತರಾಗಿ ಅವರ ಕೃಪೆಯನ್ನು ಕೃತಜ್ಞತೆಯಿಂದ ಅಂಗೀಕರಿಸಿದರು. ಆ ಘಳಿಗೆಯಲ್ಲೇ ಔಧ್ ಸಂಸ್ಥಾನದ "ದ್ವಿಸದಸ್ಯ ಯೋಜನಾ ಮಂಡಲಿ" ಆ ಸೌಧದಲ್ಲೇ ಉದ್ಘಾಟಿತವಾಯಿತು. ವಿಕೇಂದ್ರೀಕೃತ ಸ್ವದೇಶೀ ಅರ್ಥವ್ಯವಸ್ಥೆಯ ಬುನಾದಿಯನ್ನು ಸಿದ್ಧಮಾಡಲು ಮಾರಿಸ್ ಫ್ರೀಡ್‌ಮನ್ ಸಂಕಲ್ಪಿಸಿದ್ದರು. ಔಧ್ ಮಹಾರಾಜರಿಗೆ ತುಂಬ ಸಂತೋಷವೆನಿಸಿತು. ಮೂವರೂ ಗಾಂಧೀಜಿಯ ಸೇವಾಗ್ರಾಮ ಆಶ್ರಮಕ್ಕೆ ಹೊರಟರು.

ಸೇವಾಗ್ರಾಮದ ಆ ಲೋಕವಿಖ್ಯಾತ ಕುಟೀರದಲ್ಲಿ ಗಾಂಧೀಜಿಯೊಡನೆ ಮಾರಿಸ್ ಆತ್ಮೀಯ ಸಂಭಾಷಣೆಯಲ್ಲಿ ತೊಡಗುತ್ತಿದ್ದರು. ಔಧ್ ಮಹಾರಾಜರ ಗ್ರಾಮಪಂಚಾಯತ್ ರಾಜ್ಯದ ರೂಪುರೇಷೆಗಳನ್ನು ವಿವರಿಸಿದರು. ಗ್ರಾಮಕೈಗಾರಿಕೆಗಳಿಗೆ ವೈಜ್ಞಾನಿಕ ಸಲಕರಣೆಗಳ ಭದ್ರ ಬುನಾದಿ ನಿರ್ಮಿಸಲು ಸಲಹೆ ಮಾಡಬೇಕೆಂದಿರುವರೆಂದು ತಿಳಿಸಿದಾಗ ಗಾಂಧೀಜಿ "ಶ್ರೀಮಂತರಾದ ಮೈಸೂರು ಮಹಾರಾಜರನ್ನು ಬಿಟ್ಟು ನೀವೀಗ ಬಡವರಾದ ಔಧ್‌ನ ರಾಜರನ್ನು ಹಿಡಿದಿದ್ದೀರಿ" ಎಂದರು. ಭರತಾನಂದರು ವಿನಮ್ರರಾಗಿ "ಸಂನ್ಯಾಸ ಸ್ವೀಕರಿಸಿದ ಮೇಲೆ ಅದೇ ವಿಹಿತವಾದ ಸ್ಥಾನ" ಎಂದು ಸಮರ್ಥಿಸಿಕೊಂಡರು.

ಎಂದಿನಂತೆ ಗಾಂಧೀಜಿ ನೂಲುತ್ತಲೇ ಮಾತನಾಡಿದರು. ಈ ಬಾರಿ ಅವರ ಕೈಯಲ್ಲಿ ತಕಲಿ ಆಡುತ್ತಿತ್ತು. ಪಕ್ಕದಲ್ಲೇ ಅವರ ಮೆಚ್ಚಿನ ಚರಕವೂ ಇತ್ತು. ಭರತಾನಂದ ಚರಕದಲ್ಲಿ ನೂಲುವುದನ್ನು ಬಲ್ಲವರಾಗಿದ್ದರು. ತಕಲಿಯಲ್ಲಿ ನೂಲು ತೆಗೆಯುವುದು ಬಹಳ ನಿಧಾನ ಎನಿಸಿತು. ಅವರ ತಂತ್ರಜ್ಞತೆಯ ಮನಸ್ಸು ಪರ್ಯಾಯ ಸಾಧನವೊಂದನ್ನು ಚಿಂತಿಸುತ್ತಿತ್ತು. ಕೂಡಲೇ ಪ್ರಯೋಗಗಳಲ್ಲಿ ತೊಡಗಿದರು. ಚರಕಕ್ಕೂ ತಕಲಿಗೂ ಮಧ್ಯವರ್ತಿಯಾದ ಒಂದು ಅತಿ ಸರಳವಾದ ಯಂತ್ರವೊಂದು ಸಿದ್ಧವಾಯಿತು. ಗಾಂಧೀಜಿ ಬಳಿಗೆ ಕೊಂಡೊಯ್ದರು. ಅವರಿಗೆ ಬಹಳ ಸಂತೋಷವೆನಿಸಿತು. ಮಿಕ್ಕ ಕೆಲಸ ಬದಿಗಿಟ್ಟು ತಾವೇ ಅದನ್ನು ಬಳಸುವ

ವಿಧಾನ ಕಲಿಸಲು ಕೇಳಿದರು. ಭರತಾನಂದರಿಗಂತೂ ಆನಂದಕ್ಕೆ ಪಾರವೇ ಇರಲಿಲ್ಲ. ಈ ಸಣ್ಣ ಸಾಧನವನ್ನು ಗಾಂಧೀಜಿಯೇ 'ಧನುಷ್ ತಕಲಿ' ಎಂದು ಕರೆದರು. ದೊಡ್ಡ ತಕಲಿಯೊಂದನ್ನು ಒಂದು ಚೌಕಟ್ಟಿನ ಮೇಲೆ ಅಡ್ಡಲಾಗಿ ಜೋಡಿಸಿಡಲಾಗಿತ್ತು. ಚಕ್ರಗಳಿರಲಿಲ್ಲ. ಕೈಯಲ್ಲಿ ತಿರುಗಿಸಿದರೆ ತಿರುಗುವಂತೆಯೇ ಆ ಚೌಕಟ್ಟಿನಲ್ಲೂ ಸರಾಗವಾಗಿ ತಿರುಗುತ್ತಿತ್ತು. ಅದರ ಬಿಲ್ಲೆ ಸ್ವಲ್ಪ ಅಗಲವಾಗಿರುತ್ತಿತ್ತು.ಆ ಬಿಲ್ಲೆಯ ಮೇಲೆ ಊರಿ ಬಲವಾಗಿ ಎಳೆಯುವಂತೆ ಒಂದು ಬಿಲ್ಲಿನಾಕಾರದ ಬಿದುರಿಗೆ ಉದ್ದನೆಯ ಚರ್ಮದ ಪಟ್ಟಿ ಬಿಗಿಯಲಾಗಿತ್ತು. ಆ ಧನುಸ್ಸಿನ ಚರ್ಮದ ಹುರಿಯನ್ನೆಳೆದಾಗ ತಕಲಿ ಬಿರುಸಿನಿಂದ ತಿರುಗುತ್ತಿತ್ತು. ಎಡಗೈಯಲ್ಲಿ ಹಂಜಿ ಹಿಡಿದು ಚರಕದಲ್ಲಿ ನೂಲುವಂತೆಯೇ ದಾರ ಎಳೆಯಲು ಅನುಕೂಲವಾಗುವಂತೆ ಜೋಡಿಸಲಾಗಿತ್ತು. ಕೆಲವೇ ನಿಮಿಷಗಳಲ್ಲಿ ಗಾಂಧೀಜಿಯ ಪಳಗಿದ ಕೈ ವೇಗವಾಗಿ ನೂಲಲು ಆರಂಭಿಸಿತ್ತು. ಸಾಧಾರಣ ತಕಲಿಗಿಂತ ನಾಲ್ಕುಪಟ್ಟು ವೇಗವಾಗಿ ದಾರ ಬರುತ್ತಿತ್ತು. ಒಂದು ದೊಡ್ಡ ಸಂಶೋಧನೆಯೇ ಕೈಗೂಡಿದಂತೆ ಭರತಾನಂದರೊಡನೆ ಗಾಂಧೀಜಿಯೂ ಪ್ರಸನ್ನತೆಯಿಂದ ಗಹಗಹಿಸಿ ನಗುತ್ತಾ ಈ ಧನುಷ್ ತಕಲಿಯ ಝೇಂಕಾರಕ್ಕೆ ಧ್ವನಿಗೂಡಿಸಿದ್ದರು. ಆಶ್ರಮದಲ್ಲೆಲ್ಲಾ ಈ ಸುದ್ದಿ ಹರಡಿ ಭರತಾನಂದರು ಎಲ್ಲರಿಗೂ ಆತ್ಮೀಯರಾದರು. ಗ್ರಾಮ ಕೈಗಾರಿಕೆಗಳಿಗೆ ಹೊಸ ಸಾಧನಗಳನ್ನಳವಡಿಸುವ ಕಾರ್ಯದಲ್ಲಿ ಮಾರಿಸ್ ಫ್ರೀಡ್‌ಮನ್ ಅವರ ಹೆಸರು ಪ್ರಮುಖವಾಯಿತು.

ಗಾಂಧೀಜಿಯೊಡನೆ ಮಾರಿಸ್ ಫ್ರೀಡ್‌ಮನ್ನರೂ ಅಪ್ಪಾಸಾಹೇಬರೂ ವಿವರವಾಗಿ ಚರ್ಚಿಸಿ ಔಧ್ ಸಂಸ್ಥಾನದಲ್ಲಿ ಒಂದು ಆದರ್ಶ ಗ್ರಾಮ ಪುನರ್ನಿರ್ಮಾಣ ಯೋಜನೆಯೊಂದನ್ನು ಸಿದ್ಧಮಾಡಿಕೊಂಡರು. ಮಾರಿಸ್ ಆ ಕೂಡಲೇ ಕಾರ್ಯೋನ್ಮುಖರಾಗಿಬಿಟ್ಟರು. ಭಾರತೀಯ ಗ್ರಾಮ ಪರಿಸರಕ್ಕೂ ಅಲ್ಲಿನ ಆರ್ಥಿಕ ಪುನರ್ರಚನೆಗೂ ಸಹಾಯಕವಾಗುವಂತೆ ವಿಜ್ಞಾನ ಬೆಳೆಯಬೇಕೇ ಹೊರತು ಈ ದೇಶಕ್ಕೆ ಬೃಹತ್ ಕೈಗಾರಿಕೆಗಳ ಅರ್ಥನೀತಿಯಿಂದ ಇನ್ನೂ ಬಡತನ ಹೆಚ್ಚುತ್ತದೆ ಎಂದು

ಮಾರಿಸ್ ಫ್ರೀಡ್‌ಮನ್ ಮನಗಂಡರು. ಗಾಂಧೀಜಿಯ ಆರ್ಥಿಕ ಯೋಜನೆಯೊಂದೇ ಸರಿಯಾದ ಮಾರ್ಗ ಎಂದರು. ಅದರ ಮೂಲ ಮೌಲ್ಯಗಳನ್ನಂಗೀಕರಿಸಿ ತಾವೇ ಸ್ವಯಂಸೇವಕರಾಗಿ ಒಂದು ಆದರ್ಶವನ್ನು ಮೆರೆದರು.

ಔಧ್‌ನ ಎಪ್ಪತ್ತೈದು ಹಳ್ಳಿಗಳನ್ನೂ ಪಾದಯಾತ್ರೆಯಲ್ಲಿ ಸಂದರ್ಶಿಸಿದರು. ಒಂದು ವಿಶಾಲವಾದ ಖುಷ್ಕಿ ಭೂಮಿಯ ಪ್ರದೇಶವನ್ನಾರಿಸಿಕೊಂಡರು. ಮಧ್ಯೆ ಒಂದು ಬೃಹದಾಕಾರದ ಮರ. ಅದರ ಆಶ್ರಯದಲ್ಲೇ ಸಂನ್ಯಾಸಿ ಭರತಾನಂದರು ನೆಲೆಸಿದರು. ಒಂದು ಸರಳ ಗುಡಿಸಲು ಬಿದಿರು ಚಾಪೆಗಳಿಂದ ರಚಿತವಾಯಿತು. ಮೇಲೆ ಛಳಿ ತಡೆಯಲು ಕಂಬಳಿಯ ಹೊದಿಕೆ. ಅತ್ಯಂತ ಸರಳ ಕಚ್ಚಾತರಕಾರಿ, ಹಣ್ಣುಗಳೇ ಹೆಚ್ಚಾಗಿರುತ್ತಿದ್ದ ಆಹಾರ. ಗಾಂಧೀಜಿಯಂತೆಯೇ ಮಾರಿಸ್ ತಮ್ಮ ಊಟದಲ್ಲಿ ಆರೋಗ್ಯಕರ ಸುಧಾರಣೆಗಳನ್ನು ಮಾಡುತ್ತಿದ್ದರು. ಕಠಿಣ ವ್ರತಗಳನ್ನಿಟ್ಟುಕೊಂಡರು. ಆಧ್ಯಾತ್ಮಿಕ ಸಾಧನೆಗೆ ತಕ್ಕ ಪ್ರಯೋಗಗಳನ್ನೂ ಮಾಡುತ್ತಿದ್ದರು. ಸ್ಥಳೀಯವಾಗಿ ದೊರೆಯುವ ಪದಾರ್ಥಗಳಿಂದಲೇ ತಮ್ಮ ಎಲ್ಲ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಂಕಲ್ಪಮಾಡಿದ್ದರು. ಹಳ್ಳಿಗರಿಗೆ ಸ್ವದೇಶೀ ತತ್ತ್ವದ ಒಂದು ಆದರ್ಶ ಬದುಕಿನ ಮೇಲ್ಪಂಕ್ತಿ ಹಾಕಿದರು. ಹಿಂದೀಭಾಷೆ ಕಲಿತರು.ವ್ಯಾವಹಾರಿಕ ಮರಾಠಿಯನ್ನೂ ಅಭ್ಯಾಸ ಮಾಡಿಕೊಂಡರು. ಹಳ್ಳಿಯ ಜನ ಅವರನ್ನು ಆತ್ಮೀಯ ಮಾರ್ಗದರ್ಶಕ ಎಂಬ ವಿಶ್ವಾಸ ಬೆಳೆಸಿಕೊಂಡರು. ಮುಂದಿನ ಹೆಜ್ಜೆ ಸುಗಮವಾಯಿತು.

ಔಧ್ ಮಹಾರಾಜರಿಗೂ ಮಾರಿಸ್ ವಿಶ್ವಾಸಾರ್ಹ ಸಲಹೆಗಾರರಾಗಿದ್ದರು. ಆ ಸಂಸ್ಥಾನದಲ್ಲಿ ಮರಣದಂಡನೆಯ ಶಾಸನವನ್ನು ರದ್ದು ಮಾಡಿದರು. ಅಷ್ಟಕ್ಕೆ ನಿಲ್ಲಲಿಲ್ಲ. ಮಹಾರಾಜರ ಬಳಿಗೆ ಹೋಗಿ ಔಧ್‌ನ ಕೇಂದ್ರ ಸೆರೆಮನೆಯಲ್ಲಿದ್ದ ಇಪ್ಪತ್ತೈದು ದೀರ್ಘಶಿಕ್ಷೆಯ ಖೈದಿಗಳನ್ನು ತಮಗೆ ಬಿಟ್ಟುಕೊಡಬೇಕೆಂದೂ ಅವರನ್ನು ತಮ್ಮ ಜಮೀನಿನಲ್ಲಿ ಒಂದು ಮುಕ್ತ ಸೆರೆಮನೆಯ

ಾವರಣದಲ್ಲಿ ದುಡಿಮೆಗಾರರನ್ನಾಗಿ ಪರಿವರ್ತಿಸುವುದಾಗಿಯೂ ೀಳಿಕೊಂಡರು. ಅರಮನೆ ಸಿಬ್ಬಂದಿಯ ಹಾಜಿ ಅಬ್ದುಲ್ ಅಜೀಜ್ ಮಾರಿಸ್‌ರವರ ಸಹಕಾರ್ಯಕರ್ತರಾಗಿ ಸೇರಿದರು. ಇಬ್ಬರೂ ೇರಿ ಈ ಖೈದಿಗಳ ಜೀವನಕ್ರಮವನ್ನೇ ಪರಿವರ್ತಿಸಿಬಿಟ್ಟರು. ಆ ಪ್ರದೇಶದಲ್ಲಿ ಒಂದು ದೊಡ್ಡ ಆಳವಾದ ಬಾವಿ ತೋಡಿಸಿದರು. ಆ ಬರಡು ಪ್ರದೇಶ ಫಲವತ್ತಾಯಿತು. ವ್ಯವಸಾಯ ಯೋಗ್ಯವಾಯಿತು. ಖೈದಿಗಳ ಸಂಸಾರಗಳನ್ನೂ ಕರೆಸಿಕೊಂಡರು. ಒಂದು ನೂತನ ಗ್ರಾಮ ಸೃಷ್ಟಿಯಾಯಿತು. 'ಸ್ವತಂತ್ರಪುರ' ಎಂದು ಹೆಸರಿಟ್ಟರು. ಕ್ರಮೇಣ ಅಪರಾಧಿಗಳೆಲ್ಲ ಸಜ್ಜನ ನಾಗರಿಕರಾದರು. ಕಾಯಕದಿಂದ ಬದುಕು ಸಾಗಿಸಲು ಸಿದ್ಧರಾಗಿದ್ದರು. ಸುತ್ತಲಿನ ಗ್ರಾಮಸ್ಥರು ಈ ಪವಾಡ ಕಂಡು ಚಕಿತರಾದರು. ಅನೇಕ ರೀತಿಗಳಲ್ಲಿ ಅದು ಒಂದು ಆದರ್ಶ ಗ್ರಾಮವಾಗಿ ಬೆಳೆಯತೊಡಗಿತು. ಔಧ್‌ನ ಪಂಚಾಯಿತ ರಾಜ್ಯ ಪ್ರಯೋಗಕ್ಕೆ ಅದು ತುಂಬ ಸಹಾಯಕವೆನಿಸಿತು. ಮಹಾರಾಜರು ಈ ಎಲ್ಲ ವಿವರಗಳನ್ನೂ ಗಾಂಧೀಜಿಗೆ ವರದಿಮಾಡಿ ಅವರ ಮೆಚ್ಚಿಗೆ ಪಡೆದಿದ್ದರು. ಇಂದಿಗೂ ಸ್ವತಂತ್ರಪುರ ಮತ್ತು ಅಲ್ಲಿ ತೆಗೆದ ದೊಡ್ಡ ಬಾವಿ ಇವೆ. ತೊಂಭತ್ತು ಮೀರಿರುವ ವೃದ್ಧ ಹಾಜಿ ಅಬ್ದುಲ್ ಅಜೀಜ್ ಆಗಾಗ್ಗೆ ಅಲ್ಲಿಗೆ ಭೇಟಿಯಿತ್ತು ಭರತಾನಂದರನ್ನು ಸ್ಮರಿಸುತ್ತಾ ಹನಿಗಣ್ಣಾಗುತ್ತಾರೆ.

ಗಾಂಧೀವಾದವನ್ನನುಸರಿಸಿ ಮಾರಿಸ್ ಫ್ರೀಡ್‌ಮನ್ ಒಂದು ವಿಕೇಂದ್ರಿತ ಯೋಜನಾಕ್ರಮವನ್ನು ಔಧ್‌ಗೆ ರಚಿಸಿಕೊಟ್ಟರು. ಡಾ. ಜೆ. ಸಿ. ಕುಮಾರಪ್ಪನವರ ಶಾಶ್ವತ ಅರ್ಥಶಾಸ್ತ್ರದ ಅನೇಕ ಅಂಶಗಳನ್ನವರು ಪ್ರಾಯೋಗಿಕವಾಗಿ ಸಿದ್ಧಮಾಡಿಕೊಟ್ಟಿದ್ದಾರೆ. ಭೂಮಿ ಮತ್ತು ದುಡಿಮೆಗಾರರ ಶ್ರಮಶಕ್ತಿ ಗ್ರಾಮಗಳಲ್ಲಿ ಸಮೃದ್ಧವಾಗಿವೆ. ಹಣ ಬಂಡವಾಳ ಕಡಿಮೆ, ದುಡಿಮೆಯೇ ಬಂಡವಾಳಕ್ಕಿಂತ ಹೆಚ್ಚು ಶಾಶ್ವತ ಬುನಾದಿ. ಪ್ರಕೃತಿಯ ಕೊಡುಗೆ ಎಂದಿಗೂ ಬತ್ತದ ಸಂಪತ್ಸಮೃದ್ಧಿ. ಕೇವಲ ವಿನಿಮಯಕ್ಕಾಗಿ ಕೃತಕ ಸೃಷ್ಟಿ ಹಣ. ಅದು ಯಾವಾಗಲೂ ಅನಿಶ್ಚಿತ ಬೆಲೆಯಾಗಿಯೇ ನಡೆದು ಬರುತ್ತಿರುತ್ತದೆ. ಎಲ್ಲವನ್ನೂ

ಹಣದ ಅಳತೆಯಲ್ಲೇ ತೀರ್ಮಾನಿಸುವ ಪದ್ಧತಿ ಶೋಷಣೆಗೆ ಮೂಲ. ದುಡಿಮೆಯೇ ಅದರಿಂದ ಅಪಮೌಲ್ಯಗೊಳ್ಳುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಹಣದ ದಾಸ್ಯಕ್ಕೆ ಗುರಿಯಾಗಿ ನಾಗರಿಕತೆಯ ಮೌಲ್ಯಗಳನ್ನೇ ಬದಲಿಸಿಬಿಟ್ಟಿದೆ. ಮಾನವೀಯ ಮೌಲ್ಯಗಳು ಪುನಃ ಪ್ರತಿಷ್ಠಿತವಾಗಬೇಕಾದರೆ ಗಾಂಧೀ ಚಿಂತನೆಯೇ ನಮಗೆ ದಾರಿದೀಪ ಎನ್ನುತ್ತಿದ್ದರು ಫ್ರೀಡ್‌ಮನ್.

ಆಧ್ಯಾತ್ಮಿಕ ಪ್ರವೃತ್ತಿ ಮಾರಿಸ್‌ರನ್ನು ಪ್ರಬಲವಾಗಿ ಆವರಿಸಿತ್ತು. ಆಜನ್ಮ ಬ್ರಹ್ಮಚರ್ಯದಲ್ಲೇ ಉಳಿದುಬಿಟ್ಟರು. ಶ್ರೀ ರಮಣಮಹರ್ಷಿಗಳು ಮತ್ತು ಜೆ. ಕೃಷ್ಣಮೂರ್ತಿಗಳ ದರ್ಶನಗಳು ಅವರಿಗೆ ಅತ್ಯಂತ ಅನುಸರಣಯೋಗ್ಯವೆನಿಸಿತು. ದೀನ ದಲಿತರ ಸೇವೆ, ನಿಸ್ವಾರ್ಥಸ್ವಭಾವ, ಸತತ ಕರ್ಮನಿರತ ಜೀವನ ಈ ಜೀವನ ಸೂತ್ರಗಳು ಫ್ರೀಡ್‌ಮನ್ನರ ದಾರಿದೀಪಗಳಾದವು. ಟಿಬೆಟನ್ ನಿರಾಶ್ರಿತರ ಸೇವೆಯಲ್ಲಿ ಅನೇಕ ವರ್ಷಗಳು ನಿರತರಾಗಿದ್ದರು. "ಯೋಗಃ ಕರ್ಮಸುಕೌಶಲಮ್" ಅವರ ಧ್ಯೇಯವಾಕ್ಯವಾಗಿತ್ತು. ಸ್ವತಂತ್ರ ಚಿಂತನ ವೃತ್ತಿಯನ್ನು ಬಹಳ ಎಚ್ಚರದಿಂದ ರಕ್ಷಿಸಿಕೊಂಡಿದ್ದರು ಫ್ರೀಡ್‌ಮನ್. ತಮ್ಮ ಅಂತರಂಗಕ್ಕೆ ಒಪ್ಪಿಗೆಯಾಗಿದ್ದಿದ್ದುದನ್ನೆಂದಿಗೂ ಅಂಗೀಕರಿಸುತ್ತಿರಲಿಲ್ಲ. ವಿನಯದಿಂದ ನಿರಾಕರಿಸಿಬಿಡುತ್ತಿದ್ದರು.

ತಮ್ಮ ಇಳಿವಯಸ್ಸಿನಲ್ಲಿ ಮಾರಿಸ್ ಫ್ರೀಡ್‌ಮನ್ ಬೊಂಬಾಯಿನಲ್ಲಿ ಅತಿಸಾಧಾರಣ ಮನೆಯೊಂದರಲ್ಲಿ ನೆಲೆಸಿದ್ದರು. ದೀನದಲಿತರ ಸೇವೆ ಅವ್ಯಾಹತವಾಗಿ ನಡದೇ ಇತ್ತು. ಬೊಂಬಾಯಿನ ಒಬ್ಬ ಸಾಮಾನ್ಯ ಚಿಲ್ಲರೆ ವ್ಯಾಪಾರಿಯಾಗಿ ನೆಲೆಸಿ ನಂತರ ತಮ್ಮ ಆಧ್ಯಾತ್ಮಿಕ ಶಕ್ತಿ ವಿಶೇಷಗಳಿಂದ ನಿಸರ್ಗದತ್ತ ಮಹರಾಜ್ ಎಂದು ಪ್ರಸಿದ್ಧರಾದ ಯೋಗಿಯೊಬ್ಬರ ಪರಿಚಯವಾಯಿತು. ತಮ್ಮೆಲ್ಲ ಸಾಧನೆಗಳ ಪರಾಕಾಷ್ಠೆಯನ್ನು ಈ ಅತ್ಯಂತ ಸಾಮಾನ್ಯ ಸರಳಜೀವಿಯ ಬ್ರಹ್ಮಸಾಕ್ಷಾತ್ಕಾರ ಸಾಧನೆಯಲ್ಲಿ ಕಂಡು ಫ್ರೀಡ್‌ಮನ್ ಅವರ ನಿಕಟಾನುವರ್ತಿಗಳಾದರು.

ತಮ್ಮ ದೀರ್ಘಾಯುಷ್ಯದ ಅರ್ಧಭಾಗವನ್ನು ಭಾರತೀಯ ಪ್ರಜೆಯಾಗಿ ಕಳೆದು ಮಾರಿಸ್ ಫ್ರೀಡ್‌ಮನ್ 1976ರ ಮಾರ್ಚ್ 9ರಂದು ಬೊಂಬಾಯಿನಲ್ಲಿ ನಿಧನರಾದರು. ಅವರ ಅತ್ಯಂತ ಆಪ್ತರಲ್ಲಿ ಅಚ್ಯುತ್ ಪಟ್ಟವರ್ಧನ್, ರಾವ್‌ಸಾಹೇಬ್ ಪಟ್ಟವರ್ಧನ್, ಅಪ್ಪಾಸಾಹೇಬ್ ಪಂತ್, ಮುಖ್ಯರಾದವರು. ಅವರ ಅಂತ್ಯ ಕಾಲದಲ್ಲಿ ನಿಸರ್ಗದತ್ತ ಮಹರಾಜ್ ಪಕ್ಕದಲ್ಲಿದ್ದರು. 'ನಿಸರ್ಗಯೋಗ' ಎಂಬ ಗ್ರಂಥವನ್ನು ಫ್ರೀಡ್‌ಮನ್ ಪ್ರಕಟಿಸಿದ್ದಾರೆ. ಭಾರತೀಯ ತತ್ವಜ್ಞಾನದ ಪುಸ್ತಕಗಳನ್ನು ಪೋಲಿಶ್ ಭಾಷೆಗೂ ಭಾಷಾಂತರಿಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಅವರ ನೈತಿಕ ಬೆಂಬಲ ಅಪಾರವಾಗಿತ್ತು.

ಮಾರಿಸ್ ಫ್ರೀಡ್‌ಮನ್‌ರ ನಿಧನದ ನಂತರ ಒಮ್ಮೆ ನಿಸರ್ಗದತ್ತ ಮಹಾರಾಜ್ ಮಾತನಾಡುತ್ತಾ "ನಾಮರೂಪಗಳ ಮೋಹ ನಮ್ಮಲ್ಲಿ ಭಯದ ಮೂಲ. ಯಾರು ನಾಮರೂಪಗಳಿಂದ ತಾನು ಅಲಿಪ್ತ ಎಂದು ತಿಳಿದಿರುತ್ತಾನೋ, ಶೂನ್ಯ ಸ್ಥಿತಿಯನ್ನು ಸಾಕ್ಷಾತ್ಕಾರಿಸಿಕೊಂಡಿರುವನೋ ಆತ ನಿರ್ಭಯನಾಗುತ್ತಾನೆ. ಮೃತ್ಯುವಿಗೆ ಅವನೆಂದೂ ಅಂಜುವವನಲ್ಲ. ಪ್ರೇಮದಿಂದಲೇ ಸ್ವಾಗತಿಸುತ್ತಾನೆ. ಅಂಥ ಧೀರಾತ್ಮ ಮಾರಿಸ್ ಫ್ರೀಡ್‌ಮನ್" ಎಂದರು.

6. ಫ್ಯೂಜಿ ಗುರೂಜಿ (ಜಪಾನ್)

"ನಮ್ಯೋ–ಹೋ–ರೇಂಗೇ–ಕ್ಯೋ–ಹೋ" –ಗಾಂಧೀ ಆಶ್ರಮದ ನಿತ್ಯಪ್ರಾರ್ಥನೆಯ ಮೊದಲಿನಲ್ಲಿ ಉಚ್ಚಸ್ವರದಲ್ಲಿ ಪಠಿಸುವ ಈ ಬುದ್ಧ ಮಂತ್ರ ಮಾನವನ ಅಂತರಾಳದ ಶಾಂತಿ ಹಂಬಲದ ಸುಸ್ವರ. ಭಗವಾನ್ ಬುದ್ಧನ ಅಮರವಾಣಿಯ ಜೀವಂತ ಪ್ರತಿಧ್ವನಿ. ಸೇವಾಗ್ರಾಮದ ಗಾಂಧಿ ಕುಟೀರ 1936ರಲ್ಲಿ ಪ್ರಾರಂಭವಾದಾಗಿನಿಂದಲೂ ಒಬ್ಬ ಬೌದ್ಧಭಿಕ್ಷು ಆ ಪ್ರದೇಶದ ಸುತ್ತಲೂ ತನ್ನ ಚಿಕ್ಕ ತಮಟೆಯ ಗಂಭೀರ ನಾದವನ್ನು ಲಯಬದ್ಧವಾಗಿ ಬಡಿಯುತ್ತಾ "ನಮೋ ಹೋ ರೆಂಗೇ ಕ್ಯೋ ಹೋ" ಎಂಬ ಮಂತ್ರ ಭಜಿಸುತ್ತಾ ಬೆಳಗಿನ ಝಾವಕ್ಕೆ ಎಚ್ಚರಗೊಳಿಸುತ್ತಿದ್ದ ಅನುಭವ ಅಲ್ಲಿಗೆ ಹೋದವರ ಹೃದಯದಲ್ಲಿ ಶಾಶ್ವತವಾಗಿ ಪ್ರತಿಧ್ವನಿಸುತ್ತಲೇ ಇರುತ್ತಿತ್ತು. "ಸಕಲ ಶಾಂತಿ ಸಂದೇಹವಾಹಕರಿಗೆ ನಮೋ ನಮಃ" ಅನ್ನುವುದೇ ಭಿಕ್ಷುಗಳ ಮೂಲ ಮಂತ್ರ.

1933ರಲ್ಲಿ ಗಾಂಧೀಜಿ ವಾರ್ಧಾಕ್ಕೆ ಬಂದು ನೆಲಸಿದರು. ಸೇಠ್ ಜಮನಲಾಲ್ ಬಜಾಜ್ ಅವರ ಅತಿಥಿಯಾಗಿ ಅದೇ ವರ್ಷ ಅಕ್ಟೋಬರಿನಲ್ಲಿ ಜಪಾನಿನ ಪರಮಪೂಜ್ಯ ನಿಚಿಡಾಟ್ಸುಫ್ಯೂಜಿ ಬಂದರು. ಗಾಂಧೀಜಿಯವರೊಡನೆ ಅವರ ಮೊದಲ ಭೇಟಿಯಾದುದು 1933ರ ಅಕ್ಟೋಬರ್ 4 ರಂದು, ಫ್ಯೂಜಿಯವರು ಆ ವೇಳೆಗಾಗಲೇ ವಿಶ್ವಶಾಂತಿ ಪ್ರಸಾರದಲ್ಲಿ ತೊಡಗಿದ್ದ ವಿಖ್ಯಾತ ಬೌದ್ಧ ಸಂನ್ಯಾಸಿಯಾಗಿದ್ದರು. ಜಗತ್ತಿನ ಹಲವೆಡೆ ಶಾಂತಿ ಪಗೋಡಾಗಳನ್ನು ನಿರ್ಮಿಸಿ ಬುದ್ಧನ

ಅಹಿಂಸಾತತ್ತ್ವದ ಪ್ರತಿಪಾದಕರಾಗಿದ್ದರು. ಬುದ್ಧ-ಸಂಘ ಧರ್ಮ ಈ ತ್ರಿವಿಧ ಸಂಸ್ಕಾರಕ್ಕೆ ಶರಣು ಎಂದು ಮಾನವನ ಅಂತರ್ಜ್ಯೋತಿಯನ್ನು ಬೆಳಗಿಸಿನ ಸಮಗ್ರ ಶಾಂತಿಯನ್ನು ನೆಲೆಗೊಳಿಸಲು ಫ್ಯೂಜಿಯವರು ಒಂದು ಬೃಹತ್ ಸಂನ್ಯಾಸಿಪಂಥವನ್ನೇ ನಿರ್ಮಿಸಿದ್ದರು. ಅವರ ಬಗ್ಗೆ ಸಹಜವಾಗಿಯೇ ಗಾಂಧೀಜಿಗೆ ಗೌರವ. ಗಾಂಧೀಜಿಯ ಜೀವನ ಸಂದೇಶವಾದ ಸತ್ಯ-ಅಹಿಂಸೆಗಳ ಅತ್ಯಂತ ಯಶಸ್ವಿ ಪ್ರಯೋಗಗಳನ್ನು ತಿಳಿದು ಫ್ಯೂಜಿಯವರಿಗೆ ಬುದ್ಧನ ಜನ್ಮಭೂಮಿಯಲ್ಲಿ ಮತ್ತೊಮ್ಮೆ ಅವನ ಅಮರವಾಣಿ ಹೊಸ ತೇಜಸ್ಸಿನಿಂದ ಪ್ರಜ್ವಲಿತವಾಗುತ್ತಿದೆ ಅನಿಸಿತು. ಅತ್ಯಂತ ಗೌರವದಿಂದ ಗಾಂಧೀಜಿಗೆ ಪ್ರಣಾಮ ಮಾಡಿ ಅವರನ್ನು ಲೋಕಗುರುವೆಂದು ಅಂಗೀಕರಿಸಿದರು. ತಮಗಿಂತ ಹದಿನಾರು ವರ್ಷ ಚಿಕ್ಕವರಾದ ಫ್ಯೂಜಿ ಅವರನ್ನು ಗಾಂಧೀಜಿಯೇ "ಫ್ಯೂಜಿ ಗುರೂಜಿ" ಎಂದು ಸಂಬೋಧಿಸಿದರು. ಅಂದಿನಿಂದ ಫ್ಯೂಜಿ ಗುರೂಜಿ ಎಂದೇ ಪ್ರಸಿದ್ಧರಾದ ಈ ಬೌದ್ಧ ಭಿಕ್ಷು "ಜಪಾನಿನ ಗಾಂಧಿ" ಎಂದು ಭಾರತೀಯರಿಗೆ ಸುಪರಿಚಿತರಾದರು.

ಆಧ್ಯಾತ್ಮಿಕ ಸಾಧಕ

ಫ್ಯೂಜಿ ಗುರೂಜಿ ಅವರ ಹುಟ್ಟೂರು ಜಪಾನಿನ ಸಾಕನಾಷಿ. ಕ್ರಿ.ಶ. 1885ರ ಆಗಸ್ಟ್ 6ರಂದು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ ಯೋಷಿಟೋ ಎಂಬ ಈ ಬಾಲಕ ಉಸುಕು ಕೃಷಿ ವಿಶ್ವವಿದ್ಯಾಲಯದಲ್ಲಿ ಪದವೀಧರನಾದ ಮೇಲೆ ಆಧ್ಯಾತ್ಮಿಕ ಸಾಧನೆಗೆ ತಿರುಗಿ ತನ್ನ 19ನೇ ವಯಸ್ಸಿಗೆ ಬೌದ್ಧಭಿಕ್ಷುವಾಗಿಬಿಟ್ಟ. ಜಪಾನಿನ ಬೌದ್ಧರಿಗೆ ಪರಮಗುರು ಮಹಾಬೋಧಿಸತ್ವ ನಿಚಿರೆನ್ ಪಂಥ ಅವರನ್ನು ಸೆಳೆಯಿತು. ಆರುನೂರು ವರ್ಷಗಳ ಕೆಳಗೆ ಈ ಗುರು ಬೋಧಿಸಿದ ಮಂತ್ರ "ಮನ್ಯೋ ಹೋ ರೇಂಗೇ ಕ್ಯೋ ಹೋ" ಬುದ್ಧ ಗುರುವಿನ ಈ ಬೋಧನೆಯ ತಿರುಳು ಜಪಾನಿನಲ್ಲಿ ಮೊಳಗಿ ಕ್ರಮೇಣ ಬುದ್ಧನ ಜನ್ಮಭೂಮಿ ಭಾರತಕ್ಕೆ ಹಿಂತಿರುಗುತ್ತದೆ-ಎಂಬ ಭವಿಷ್ಯವಾಣಿ ಯೋಷಿಟೋನನ್ನು ಬಲವಾಗಿ ಸೆರೆಹಿಡಿಯಿತು. ಭಾರತಕ್ಕೆ ಹೋಗಬೇಕು ಎಂಬ ಹಂಬಲ ಪ್ರಬಲವಾಗಿ ಬೆಳೆಯಿತು.

ನಿಚಿಟಾಟ್ಸು ಫ್ಯೂಜಿ ಎಂದು ಪರಿವರ್ತಿತರಾದ ಯೋಷಿಟೋ ಮುಂದೆ ಬೌದ್ಧಧರ್ಮದ ಅಷ್ಟವಿಧ ಪಥವನ್ನು ಆಳವಾಗಿ ಅಧ್ಯಯನ ಮಾಡಿ 1918ರ ವೇಳೆಗೆ ಜಪಾನಿನ ಸುಪ್ರಸಿದ್ಧ ಶಾಂತಿಗುರುವೆನಿಸಿದರು. ಚೀಣಾ, ಮಂಚೂರಿಯ, ಕೊರಿಯಾ ದೇಶಗಳಲ್ಲಿ ಅವರ ಪಂಥ ಬೆಳೆಸಲು ಪರ್ಯಟನೆ ಮಾಡಿದರು. ಯುದ್ಧವಿರೋಧಿ ಶಾಂತಿ ಚಳವಳಿಯಲ್ಲಿ ನೆರವಾಗಲು ನೂರಾರು ಜನ ಫ್ಯೂಜಿ ಅವರ ಅನುಯಾಯಿಗಳಾದರು. ಸರ್ವತ್ಯಾಗಕ್ಕೂ ಸಿದ್ಧರಾದ ಭಿಕ್ಷುಗಳಾದರು. ಕೈಯಲ್ಲೊಂದು ಚಿಕ್ಕ ತಮಟೆ ಬಡಿಯುತ್ತಾ "ನಮ್ಯೋ ಹೋ" ಮಂತ್ರ ಜಪಿಸುತ್ತ ಅಲ್ಲಲ್ಲಿ ಬುದ್ಧಮಂದಿರಗಳನ್ನು ಸ್ಥಾಪಿಸತೊಡಗಿದರು. "ನಿಪ್ಪೋನ್‌ಜಾನ್ ಮೈಯೋಹೋಜಿ" ಎಂದು ಪ್ರಸಿದ್ಧವಾಗಿರುವ ಮೊದಲ ಸ್ತೂಪವನ್ನು ಫ್ಯೂಜಿ ಗುರೂಜಿ 1924ರಲ್ಲಿ ಜಪಾನಿನ ಮೌಂಟ್‌ಫ್ಯೂಜಿ ಪರ್ವತದ ಬಳಿಯ ಟಾಗೋಸಾರ ಎಂಬ ಸ್ಥಳದಲ್ಲಿ ಸ್ಥಾಪಿಸಿದರು. ಅಲ್ಲಿಂದಾಚೆ ಪ್ರಪಂಚದ ಮೂಲೆಮೂಲೆಗಳಲ್ಲಿ ಶಾಂತಿ-ಅಹಿಂಸೆಗಳ ಮೂಲಸ್ಫೂರ್ತಿಯಾಗಿ ಪಗೋಡಾಗಳ ನಿರ್ಮಾಣಕ್ಕಾಗಿ ಫ್ಯೂಜಿ ಜಪಾನಿನಿಂದ ಹೊರಹೊರಟು ಹಲವಾರು ಪ್ರಮುಖ ಸ್ಥಳಗಳಲ್ಲಿ ಅವುಗಳನ್ನು ಪೂರ್ಣಗೊಳಿಸಿದ್ದಾರೆ. ತನ್ನ ಗುರು ಬೋಧಿಸತ್ತ್ವ ನಿಚಿರೆನ್‌ನ ಭವಿಷ್ಯವಾಣಿಯನ್ನು ನೆನೆದು ಭಗವಾನ್ ಬುದ್ಧನ ಜನ್ಮಭೂಮಿ ಭಾರತಕ್ಕೆ ಬಂದರು.

ಸಂಕಲ್ಪದೀಕ್ಷೆ

'ರಿಷ್ಯೋ ಅಂಕೋಕು' – ಎಂದರೆ ನಿಜವಾದ ಶಾಂತಿಗಾಗಿ ಧರ್ಮಪುನರುಜ್ಜೀವನ –ಎಂಬ ಸಂದೇಶ ಹೊತ್ತು ಫ್ಯೂಜಿ ಗುರೂಜಿ 1931ರ ಜನವರಿ 16ರಂದು ಮಹಾಬೋಧಿಸತ್ತ್ವ ನಿಚಿರೆನ್ ಗುರುವಿನ 65ನೇ ನಿರ್ವಾಣದಿನದಂದು ಕಲ್ಕತ್ತದಲ್ಲಿ ಬಂದಿಳಿದರು. ಅಲ್ಲಿಂದ ಬೌದ್ಧರ ಯಾತ್ರಾಸ್ಥಳಗಳಾದ ರತ್ನಗಿರಿ, ಬೋಧಗಯಾ, ಕುಶೀನಾರ ಸಂದರ್ಶಿಸಿ ಬುದ್ಧನ ತತ್ತ್ವಗಳ ಪುನರುತ್ಥಾನಕ್ಕಾಗಿ 1932ರಲ್ಲಿ ಬಿಹಾರದ ರಾಜಗಿರ್ ಮಂದಿರದಲ್ಲಿ ಮಹಾಸಂಕಲ್ಪದ ದೀಕ್ಷೆ ಕೈಗೊಂಡರು.

ಮುಂಬಯಿಯಲ್ಲಿ ಮಹಾಜನರ ಬೆಂಬಲದಿಂದ ಮೊದಲನೆಯ "ನಿಪ್ಪೋನ್‌ಜಾನ್ ಮೈಯೋಹೋಜಿ" ಮಂದಿರ ಸ್ಥಾಪಿಸಿದರು.

ಆಗತಾನೆ ಮಹಾತ್ಮ ಗಾಂಧಿ ಲಂಡನ್ನಿನ ದುಂಡುಮೇಜಿನ ಪರಿಷತ್ತಿಗೆ ಹೋಗಿಬಂದು ವಾರ್ಧಾದಲ್ಲಿ ನೆಲೆಸಿದ್ದರು. ಉಪ್ಪಿನ ಸತ್ಯಾಗ್ರಹ ಜ್ವಲಂತಗೊಳಿಸಿದ್ದ ಅಹಿಂಸಾತ್ಮಕ ಸ್ವಾತಂತ್ರ್ಯ ಸಂಗ್ರಾಮದ ಮಹಾಪೂರ ಭಾರತವನ್ನು ಜಾಗೃತಗೊಳಿಸಿತ್ತು. ಸತ್ಯ-ಅಹಿಂಸೆಗಳ ಅಂತಃಶಕ್ತಿ ಜನಕೋಟಿಯ ಹೃದಯಗಳಲ್ಲಿ ಅವ್ಯಾಹತವಾಗಿ ದೇದೀಪ್ಯಮಾನವಾಗಿ ಪಸರಿಸಿ ನಿಂತಿತ್ತು. ಫ್ಯೂಜಿ ಗುರೂಜಿಗೆ ಈ ಅದ್ಭುತ ಪವಾಡ ಭಗವಾನ್ ಬುದ್ಧನ ಅಮರವಾಣಿಯ ಪ್ರತಿಧ್ವನಿಯಂತೆ ಭಾಸವಾಯಿತು. ಕೂಡಲೇ ವಾರ್ಧಾಕ್ಕೆ ಪ್ರಯಾಣ ಬೆಳೆಸಿದರು. 1933ರ ಅಕ್ಟೋಬರ್‌ನಲ್ಲಿ ಗಾಂಧೀಜಿಯನ್ನು ಕಂಡೊಡನೆ ಈ ಬೌದ್ಧಸಂನ್ಯಾಸಿ ಸಂತೋಷದಿಂದ ಅವರ ಅನುಯಾಯಿಯಾದರು. ಎಲ್ಲ ಧರ್ಮಗಳೂ ಬೋಧಿಸಿರುವ ಸತ್ಯ-ಅಹಿಂಸೆಗಳನ್ನು ಅನುಸರಿಸಲು ತಮ್ಮ ತಮ್ಮ ಸ್ವಧರ್ಮಗಳ ಆಳವಾದ ಅಧ್ಯಯನದಿಂದ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ನೇರವಾದ ದಾರಿ-ಎನ್ನುವ ಗಾಂಧೀವಾಣಿ ಅವರಿಗೆ ಸ್ಫೂರ್ತಿ ನೀಡಿತು. ಗಾಂಧೀಜಿಯೂ ತಮ್ಮ ಪ್ರಾರ್ಥನಾಸಭೆಯಲ್ಲಿ "ನಮ್ಯೋ-ಹೋ-ರೆಂಗೇ-ಕ್ಯೋ-ಹೋ" ಎಂದು ಉಚ್ಚಕಂಠದಲ್ಲಿ ಪಠಿಸಿದರು. ಸರ್ವಧರ್ಮೀಯ ಪ್ರಾರ್ಥನೆಯ ಮೂಲಕ ವಿಶ್ವಶಾಂತಿಯ ಹೊಸ ಶಕ್ತಿಗಳು ಗಾಂಧೀಮಾರ್ಗದಿಂದ ಹೊರಹೊಮ್ಮಿ ಜಗದ್ವ್ಯಾಪಕವಾಗಿ ಮಾನವೀಯ ಮೌಲ್ಯಗಳನ್ನು ಪ್ರತಿಷ್ಠಾಪಿಸುತ್ತವೆ ಎಂಬ ಪೂರ್ಣ ವಿಶ್ವಾಸ ಗುರೂಜಿಯಲ್ಲಿ ಮೂಡಿತು. ಈ ಸಂದೇಶವನ್ನು ಜಗತ್ತಿನ ಮೂಲೆ ಮೂಲೆಯಲ್ಲಿ ಪ್ರಸಾರ ಮಾಡುವ ಸಂಕಲ್ಪ ಮಾಡಿದರು.

ಅಹಿಂಸಾ ಜೀವನ ಮಾರ್ಗ

ಭಾರತದ ಆಧ್ಯಾತ್ಮಿಕ ಪರಂಪರೆ ಪಾಶ್ಚಾತ್ಯರ ಭೌತಿಕ ನಾಗರಿಕತೆಯ ಮೋಹಕ್ಕೆ ಸಿಕ್ಕಿ ತನ್ನ ಶಕ್ತಿಮೂಲಗಳನ್ನು ಕಳೆದುಕೊಳ್ಳುತ್ತಿದೆ ಎನಿಸಿತು

ಫ್ಯೂಜಿ ಗುರೂಜಿಗೆ. ಗಾಂಧೀಜೀ ಮತ್ತು ವಿನೋಬಾಜಿ ಅವರೊಡನೆ ಅತ್ಯಂತ ಗಂಭೀರವಾಗಿ ಚರ್ಚಿಸಿ, ಆತ್ಮಶಕ್ತಿಯ ಪುನರುತ್ಥಾನಕ್ಕೆ ವ್ಯಾವಹಾರಿಕ ಮಾರ್ಗಗಳನ್ನು ಜನತೆಯಲ್ಲಿ ಮೂಡಿಸಲು ಸತ್ಯಾಗ್ರಹ ಜೀವನಮಾರ್ಗ ಬೌದ್ಧ ಧರ್ಮಾನುಯಾಯಿಗಳಿಗೂ ಅಗತ್ಯ ಎಂದು ದೃಢಪಡಿಸಿಕೊಂಡರು. ಜಪಾನೀಯರ ಅಂತರಾಳದಲ್ಲಿ ಈಗಲೂ ಬುದ್ಧ ಚೇತನದ ಸ್ಫೂರ್ತಿ ಜೀವಂತವಾಗಿರುವುದನ್ನು ಕಂಡರು. "ಆತ್ಮ ದೀಪೋಭವ" ಎನ್ನುವ ಭಗವಾನ್ ಬುದ್ಧನ ವಾಣಿ ಸರ್ವೋದಯ ವಿಚಾರಕ್ಕೆ ತಳಹದಿಯೆನಿಸಿತು. ದುರಾಸೆ, ಅಹಂಕಾರ, ವೈರ –ಇವುಗಳನ್ನು ವೃದ್ಧಿಸುತ್ತಾ ವ್ಯಕ್ತಿ ಸ್ವಾರ್ಥಿಯಾಗುವುದನ್ನು ಭೌತಿಕ ನಾಗರಿಕತೆ ವೈಭವೀಕರಿಸಿದೆ. ಇದು ವಿನಾಶದ ದಾರಿ; ವಿಭಜನೆಯ ದುಷ್ಟಶಕ್ತಿ, ನಿರ್ವ್ಯಾಜಪ್ರೇಮ ಮಾನವಲೋಕದಲ್ಲಿ ಅನಿರ್ಬಂಧವಾಗಿ ಹರಿಯುತ್ತಿರಬೇಕು. ರಾಷ್ಟ್ರರಾಷ್ಟ್ರಗಳ ಮಧ್ಯೆ ಅವ್ಯಾಹಕವಾಗಿ ನಡೆದುಬಂದ ಯುದ್ಧಸಂಸ್ಕೃತಿ ಪರಸ್ಪರ ನಾಗರಿಕತೆಯನ್ನು ನಾಶಮಾಡುತ್ತಿದೆ. ಎಲ್ಲ ಸಂಘರ್ಷಗಳನ್ನೂ ಅಹಿಂಸಾಮಾರ್ಗದಲ್ಲಿ ಪರಸ್ಪರ ವಿಶ್ವಾಸದಿಂದ ರಾಗದ್ವೇಷರಹಿತವಾದ ಸಂತ ಮುಂದಾಳುಗಳ ಮೂಲಕ ಪರಿಹರಿಸಿಕೊಳ್ಳಿ ಎನ್ನುವ ಗಾಂಧೀಬೋಧೆ ಫ್ಯೂಜಿ ಗುರೂಜಿಯನ್ನು ಸೆರೆಹಿಡಿಯಿತು. ಅಲ್ಲಿಂದಾಚೆ ತಮ್ಮ ಕೊನೆಯುಸಿರಿನವರೆಗೂ ಅದನ್ನು ವ್ಯಾಪಕವಾಗಿ ಪ್ರಚಾರ ಮಾಡಿದರು. ಲಕ್ಷಾಂತರ ಅನುಯಾಯಿಗಳಿಗೆ ಅಹಿಂಸೆಯ ಮಹತ್ತ್ವವನ್ನು ಬೋಧಿಸಿದರು.

ಶಾಂತಿಪಂಥ ಪ್ರಚಾರ

ಜಪಾನಿಗೆ ಹಿಂತಿರುಗಿ ಫ್ಯೂಜಿ ಗುರೂಜಿ "ಜಪಾನ್–ಭಾರತ ಸರ್ವೋದಯ ಮಿತ್ರತಾ ಸಂಸ್ಥೆ" ಸ್ಥಾಪಿಸಿದರು. ಜಪಾನೀ ಭಾಷೆಯಲ್ಲಿ "ಸರ್ವೋದಯ" ಎಂಬ ಪತ್ರಿಕೆ ಪ್ರಕಟಿಸಲು ಪ್ರಾರಂಭಿಸಿದರು. ನವನಲಂದಾ ಮಹಾವಿಹಾರ ಸಂಸ್ಥೆಯೊಡನೆ ನಿಕಟ ಸಂಪರ್ಕವಿರಿಸಿಕೊಂಡು ಬೌದ್ಧಧರ್ಮದ ಇತಿಹಾಸ ಮತ್ತು ತತ್ತ್ವಶಾಸ್ತ್ರದ ಬೋಧನೆ ಮತ್ತು ಸಂಶೋಧನೆಗಳಲ್ಲಿ ತೊಡಗಿದರು. ಭಾರತದ ಮತ್ತು

ಪೂರ್ವ ಏಷ್ಯದ ಬೌದ್ಧ ತತ್ತ್ವಜ್ಞಾನಿಗಳ ಮಧ್ಯೆ ಸಂಪರ್ಕ ಬೆಳೆಸಿದರು. 1974ರಲ್ಲಿ ಫ್ಯೂಜಿ ಗುರೂಜಿ ಅವರಿಗೆ ನಲಂದಾ ವಿಶ್ವವಿದ್ಯಾಲಯ "ವಿದ್ಯಾವಾರಿಧಿ" ಎಂಬ ಪ್ರಶಸ್ತಿ ನೀಡಿ ಗೌರವಿಸಿತು. ಭಾರತದ ಉದ್ದಗಲಕ್ಕೂ ಅನೇಕ ಬಾರಿ ಪರ್ಯಟನೆ ಮಾಡಿ ಶಾಂತಿಸ್ತೂಪಗಳನ್ನು ನಿರ್ಮಾಣ ಮಾಡಿದ್ದಾರೆ. ಭಗವಾನ್ ಬುದ್ಧನ 2500ನೇ ವರ್ಷದ ಆಚರಣೆಗೆ ಜವಹರಲಾಲ್ ನೆಹರೂ ಅವರಿಗೆ ಸ್ಫೂರ್ತಿ ನೀಡಿದರು ಫ್ಯೂಜಿ ಗುರೂಜಿ. ಅವರ ಪ್ರೇರಣೆ ಮತ್ತು ಸಕ್ರಿಯ ಸಹಾಯದಿಂದ ಭಾರತದಲ್ಲಿ ರಾಜಗಿರ್, ಬೊಂಬಾಯಿ, ಕಲ್ಕತ್ತ, ಭುವನೇಶ್ವರ, ಡಾರ್ಜಿಲಿಂಗ್ ಮತ್ತು ವಾರ್ಧಾಗಳಲ್ಲಿ ಭವ್ಯವಾದ ಪಗೋಡಾಗಳು ನಿರ್ಮಾಣವಾದವು. ಭಾರತ ಮತ್ತು ಜಪಾನೀ ಬೌದ್ಧ ಭಿಕ್ಷುಗಳನ್ನು ಸರ್ವೋದಯದ ಶಾಂತಿಮಾರ್ಗವನ್ನು ಅವ್ಯಾಹತವಾಗಿ ಪ್ರಚಾರ ಮಾಡಲು ದೀಕ್ಷಾಬದ್ಧರಾಗಿ ಕೆಲಸ ಮಾಡುವಂತೆ ಮಾಡಿದರು.

1969ರಲ್ಲಿ ಗಾಂಧೀ ಜನ್ಮಶತಾಬ್ದಿಯ ಸಂದರ್ಭ. ದೆಹಲಿಯಲ್ಲಿ ಒಂದು ಅಂತರರಾಷ್ಟ್ರೀಯ ಶಾಂತಿಸೇವಕರ ಬೃಹತ್ ಸಮ್ಮೇಳನ. ಫ್ಯೂಜಿ ಗುರೂಜಿ ತಮ್ಮ ನೂರಾರು ಭಿಕ್ಷು ಶಿಷ್ಯರೊಡನೆ ಬಂದಿದ್ದರು. ಇಂಗ್ಲೆಂಡಿನ ಪ್ರಸಿದ್ಧ ಶಾಂತಿವಾದಿ ಸರ್ ಫಿಲಿಪ್‌ನೊಯೆಲ್–ಬೇಕರ್, ಹಾರೇಸ್ ಅಲೆಕ್ಸಾಂಡರ್, ಸ್ವಾಮಿ ರಂಗನಾಥಾನಂದ ಮುಂತಾದ ಮಹನೀಯರು ಫ್ಯೂಜಿ ಗುರೂಜಿ ಅವರ ಅಣ್ವಸ್ತ್ರ ವಿರೋಧಿ ಮಹಾಚಳವಳಿಗಳ ಅಹಿಂಸಾತ್ಮಕ ಸಂಘಟನೆಗಳು ವಿಶ್ವದಲ್ಲೆಲ್ಲ ಹರಡಿ ನಿಲ್ಲುತ್ತಿರುವುದನ್ನು ಶ್ಲಾಘಿಸಿ ಬೆಂಬಲವಿತ್ತರು.

ಆದರ್ಶಮಾರ್ಗ

1981ರಲ್ಲಿ ಫ್ಯೂಜಿ ಗುರೂಜಿ "ಧಾರ್ಮಿಕ ಸಾಧಕರ ಜವಾಬ್ದಾರಿ" 'ಬೌದ್ಧಧರ್ಮ ಮತ್ತು ವಿಶ್ವಶಾಂತಿ' ಎಂಬ ಪತ್ರಿಕೆಯಲ್ಲಿ ಲೇಖನ ಬರೆಯುತ್ತಾ ಹೀಗೆಂದಿದ್ದಾರೆ:

"ಭಾರತದ ಸ್ವಾತಂತ್ರ್ಯ ಸಂಗ್ರಾಮ ಅಹಿಂಸಾತ್ಮಕ ಶಕ್ತಿಮೂಲಗಳ ಆಧಾರದ ಮೇಲೆ ಸಂಘಟಿತವಾದ ಚಳವಳಿ. ಆಧುನಿಕ ಕ್ಲಿಷ್ಟ

ರಾಜಕೀಯ ಪರಿಸ್ಥಿತಿಗೆ ಅನ್ವಯ ಮಾಡಿದ ವ್ಯಾವಹಾರಿಕ ಅಹಿಂಸೆಯ ಪ್ರಯೋಗ. ಅಂತರರಾಷ್ಟ್ರೀಯ ಪರಿಸ್ಥಿತಿಗೆ ಇದೇ ಏಕೈಕ ಶಾಂತಿಸ್ಥಾಪನಾ ಸಾಧನ. ಮಹಾತ್ಮ ಗಾಂಧಿ ಈ ದಿವ್ಯ ಅಹಿಂಸಾಪಥವನ್ನು ಭಾರತದ ವಿಮೋಚನೆಗಾಗಿ ಬಳಸಿ ಆ ಸಂಘರ್ಷದಲ್ಲಿ ಹೋರಾಡಿದರು. ಒಂದು ಗುಂಡನ್ನೂ ಅವರು ಹಾರಿಸಲಿಲ್ಲ. ಇದೊಂದು ಐತಿಹಾಸಿಕವಾದ ಪವಾಡಸದೃಶವಾದ ಘಟನೆ. ಇಡೀ ಮಾನವಕುಲ ಶಾಂತಿಯಿಂದ ಬಾಳಿ ಬದುಕಲು ಇದೇ ದಿವ್ಯಪಥ. ಎಲ್ಲ ಧರ್ಮಗಳೂ ಬೋಧಿಸುವ ಅಹಿಂಸಾಪಥವೇ ಈ ಮಾರ್ಗದ ಜೀವಜೀವಾಳ. ಮಾನವನ ಅಂತಃಕರಣದಲ್ಲಿ ಮಾನವೀಯ ಮೌಲ್ಯಗಳು ನಶಿಸದಿರಲು ಗಾಂಧೀಜಿಯ ಆದರ್ಶಸಾಧನೆಯ ಬೆಳಕಿನಲ್ಲಿ ನಡೆಯಬೇಕು."

ಜನಶಕ್ತಿ ಜಾಗರಣ

ವಾರ್ಧಾದ ಸೇವಾಗ್ರಾಮದಲ್ಲಿ ನಡೆದ ವಿಶ್ವ ಸರ್ವೋದಯ ಸಮ್ಮೇಳನದಲ್ಲಿ ಫ್ಯೂಜಿ ಗುರೂಜಿ ಹೀಗೆ ಹೇಳಿದರು:-

"ಭಾರತದಲ್ಲಿ ಅನೇಕ ಬುದ್ಧ ವಿಹಾರಗಳಿವೆ, ಮಂದಿರಗಳಿವೆ. ಆಧ್ಯಾತ್ಮಿಕ ಕೇಂದ್ರಗಳಿವೆ. ಆದರೆ ಭಾರತೀಯ ಜೀವನದಲ್ಲಿ ಆ ಬೋಧನೆಗಳು ಆಳವಾಗಿ ಬೇರೂರದೆ ಹೋಗಿವೆ. ನಾನು ಗಾಂಧೀಜಿಯನ್ನು ಭೇಟಿಯಾಗದೇ ಹೋಗಿದ್ದಿದ್ದರೆ ನಾನೂ ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟುತ್ತಾ ಅಷ್ಟರಲ್ಲೇ ಇದ್ದುಬಿಡುತ್ತಿದ್ದೆ. ಗಾಂಧೀಜೀ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಧರ್ಮಪ್ರಜ್ಞೆ ಹೇಗೆ ಬಾಳಿಗೆ ಅನ್ವಯವಾಗುವಂತೆ ಪ್ರಕಟವಾಗಬೇಕು ಎಂದು ತೋರಿಸಿಕೊಟ್ಟರು. ನಾನು ಹೋದೆಡೆಗಳಲ್ಲೆಲ್ಲ ಸಾವಿರಾರು ಜನ ಅಹಿಂಸಾತ್ಮಕ ಶಕ್ತಿಸಂಘಟನೆಗಾಗಿ ಕಾತರರಾಗಿರುವುದನ್ನು ಕಂಡಿದ್ದೇನೆ. ಅಣ್ವಸ್ತ್ರವಿರೋಧೀ ಚಳವಳಿಗಳು, ಯುದ್ಧ ವಿರೋಧಿ ಸಂಘಟನೆಗಳು, ಅಂತರರಾಷ್ಟ್ರೀಯ ಶಾಂತಿ ಸೇವಾಸಂಘಟನೆಗಳು, ವಿಶ್ವಭ್ರಾತೃತ್ವ ಕೂಟಗಳು, ಮೈತ್ರಿ ಸಮ್ಮೇಳನಗಳು ಎಲ್ಲಕ್ಕೂ ಮಹಾತ್ಮ ಗಾಂಧಿ ಪ್ರೇರಕಶಕ್ತಿಯಾಗಿದ್ದಾರೆ."

ವಿಜ್ಞಾನ ಮತ್ತು ತಂತ್ರಜ್ಞಾನಗಳು ಸೃಷ್ಟಿಸಿರುವ ಆಧುನಿಕ ನಾಗರಿಕತೆ ತನ್ನ ರಾಕ್ಷಸೀಸೃಷ್ಟಿಗೆ ಭಸ್ಮಾಸುರನಂತೆ ತಾನೇ ಬಲಿಯಾಗುತ್ತಿದೆ. ಯುದ್ಧಗಳ ಮೇಲೆ ಅವಲಂಬನೆ ಇರುವತನಕ ಈ ಭಯ ಹೋಗದು. ನೈತಿಕ ಶಕ್ತಿ ಖಂಡಿತ ವಿಜ್ಞಾನದಿಂದ ಬರುವುದಿಲ್ಲ. ಮತ್ತೆ ಬುದ್ಧ ದೇವನಂತಹ ಆಧ್ಯಾತ್ಮಿಕ ಬೋಧಕರಿಂದಲೇ ಅದು ಸಾಧ್ಯ ಎನ್ನುತ್ತಾರೆ ಫ್ಯೂಜಿ ಗುರೂಜಿ.

ವಿಶ್ವಪರ್ಯಟನೆ

ಭಾರತದಲ್ಲಿ ಮತ್ತು ಜಪಾನಿನಲ್ಲಲ್ಲದೆ 'ನಿಪ್ಪೋನ್‌ಜಾನ್ ಮೈಯೋಹೋಜಿ' ಎಂಬ ಈ ಪಗೋಡಾಗಳು ಅಮೆರಿಕದ ವಾಷಿಂಗ್ಟನ್, ಲಾಸ್ ಆಂಜಲೀಸ್, ಸಾನ್‌ಫ್ರಾನ್ಸಿಸ್ಕೋ, ಸಿಯಾಟ್ಸ್, ನ್ಯೂ ಇಂಗ್ಲೆಂಡ್, ಮೆಸ್ಸಾಚುಸೆಟ್ಸ್, ಪಿಟ್ಸ್‌ಬರ್ಗ್, ನ್ಯೂಯಾರ್ಕ್‌ಗಳಲ್ಲೂ ಇಂಗ್ಲೆಂಡಿನ ಲಂಡನ್, ಮಿಲ್ಟನ್ ಕೇನ್ಸ್, ಆಸ್ಟ್ರಿಯಾದ ಫ್ರೀಜನ್ಸ್ ಪಗೋಡಾ, ಇಟಲಿಯ ಏಂಜಲೋನಿರೋಸಿ, ಸ್ವೀಡನ್ನಿನ ವಿಷ್ಟಿ, ನೈಜೀರಿಯ, ಶ್ರೀಲಂಕಾ ಮುಂತಾದ ಕಡೆಗಳಲ್ಲಿ ಫ್ಯೂಜಿ ಗುರೂಜಿ ಸ್ಥಳೀಯ ಜನಬೆಂಬಲ ಗಳಿಸಿ ಶಾಂತಿಪಗೋಡಾಗಳನ್ನು ನಿರ್ಮಿಸಿದರು. ವರ್ಷವರ್ಷವೂ ವಿಶ್ವಪರ್ಯಟನೆ ಮತ್ತು ಅಹಿಂಸಾ ಸಂಘಟನೆಯ ಪ್ರಚಾರದಲ್ಲಿ ತೊಡಗಿರುತ್ತಿದ್ದರು. ವಿಶ್ವಶಾಂತಿ ಸಮ್ಮೇಳನಗಳು, ಶಾಂತಿಗಾಗಿ ಜನತಾ ಚಳವಳಿಗಳು, ಯುದ್ಧವಿರೋಧಿ ಪ್ರತಿಭಟನೆಗಳು, ಸರ್ವಧರ್ಮ ಸಮ್ಮೇಳನಗಳು–ಎಲ್ಲದರಲ್ಲಿಯೂ ಭಾಗವಹಿಸುತ್ತಾ ಫ್ಯೂಜಿ ಗುರೂಜಿ ಒಂದು ನೂರು ವರ್ಷ ತುಂಬುಬಾಳನ್ನು ನಡೆಸಿ 1985ರ ಜನವರಿ 9ರಂದು ನಿಧನರಾದರು.

ಸಾರ್ಥಕ ಜೀವನ

ಹಿರೋಷಿಮಾ–ನಾಗಸಾಕಿಯ ಅಣುಬಾಂಬ್ ಸ್ಫೋಟದ ಮಹಾದುರಂತ ಒಂದೂವರೆ ಲಕ್ಷ ಮುಗ್ಧ ಜಪಾನೀಯರ ಬಲಿ ತೆಗೆದುಕೊಂಡಾಗ ಫ್ಯೂಜಿ ಅವರು ವ್ಯಾಕುಲರಾಗಿ ತಮ್ಮ ಶಾಂತಿ

ಚಳವಳಿಯು ಸಂಕಲ್ಪ ಮಾಡಿದರು. ಭಾರತದಿಂದ ಬುದ್ಧನ ಅವಶೇಷಗಳನ್ನು ಪಂಡಿತ್ ನೆಹರು ಅವರಿಂದ ಪಡೆದು ಜಪಾನ್ ಮತ್ತು ಭಾರತದ ಬೌದ್ಧ ಮಂದಿರಗಳನ್ನು ಉದ್ದೀಪನಗೊಳಿಸಿದರು. ಅವರ ಒಂದು ನೂರನೆಯ ಹುಟ್ಟುಹಬ್ಬದಂದೇ ಲಂಡನ್ನಿನ ಭವ್ಯ ಪಗೋಡಾ ನಿರ್ಮಾಣ ಪ್ರಾರಂಭವಾಗಿತ್ತು. ಅದರ ಉದ್ಘಾಟನೆ ಮಾತ್ರ ಅವರ ಮರಣಾನಂತರ ಪೂರ್ಣಗೊಂಡಿತು. ಅವರಿಗೆ ಅತ್ಯಂತ ಪ್ರಿಯವೆನಿಸಿದ್ದ ವಾರ್ಧಾದಲ್ಲಿ ಜಮನಲಾಲ್ ಬಜಾಜರ ಕುಟುಂಬದವರು ನೆರವಿನಿಂದ 1983ರಲ್ಲೇ ಪ್ರಾರಂಭಿಸಿದ ಶಾಂತಿಪಗೋಡಾ 1993ರ ಫೆಬ್ರವರಿ 15ರಂದು ರಾಷ್ಟ್ರಪತಿ ಶಂಕರದಯಾಳ್ ಶರ್ಮಾರಿಂದ ಉದ್ಘಾಟಿಸಲ್ಪಟ್ಟಿತು. ಹೀಗೆ ವಿಶ್ವದಾದ್ಯಂತ ಜಪಾನಿನ ಗಾಂಧಿ ಎಂದೇ ಪ್ರಸಿದ್ಧರಾಗಿದ್ದ ಫ್ಯೂಜಿ ಗುರೂಜಿ ಅವರಿಗೆ 1978ರಲ್ಲಿ ಭಾರತದ ಅತ್ಯುಚ್ಚ ಪ್ರಶಸ್ತಿಗಳಲ್ಲೊಂದಾದ ಜವಾಹರಲಾಲ್ ನೆಹರು ಸ್ಮಾರಕ ಅಂತರರಾಷ್ಟ್ರೀಯ ಸೌಹಾರ್ದದ್ಯೋತಕ ಪುರಸ್ಕಾರ ನೀಡಲಾಯಿತು. ಶತಾಯುಷಿ ನಿಚಿಡಾಟ್ಸು ಫ್ಯೂಜಿ ಭಾರತದ ಋಷಿ ಪರಂಪರೆಗೆ ಸೇರಿ ಅಮರರಾಗಿದ್ದಾರೆ.

7. ಮಾರ್ಜೋರಿ ಸೈಕ್ಸ್ (ಇಂಗ್ಲೆಂಡ್)

ಕ್ರೈಸ್ತಮತದ ಕ್ವೇಕರ್ ಪಂಥದ ಅನುಯಾಯಿ ಕುಮಾರಿ ಮಾರ್ಜೋರಿ ಸೈಕ್ಸ್ ಶಾಲಾ ಶಿಕ್ಷಕಿಯಾಗಿ 1928ರಲ್ಲಿ ಭಾರತಕ್ಕೆ ಬಂದು ಇಲ್ಲೇ ನೆಲಸಿ ಭಾರತೀಯ ನಾಗರಿಕಳಾದ ಸೇವಾನಿರತ ಗಾಂಧೀವಾದಿ. ಆಕೆ "ಗಾಂಧೀಜಿಯ ಹೋರಾಟದ ಬಳುವಳಿ" ಎಂಬ ಪುಸ್ತಕ ಬರೆದಿದ್ದಾರೆ. ಮತ್ತೊಬ್ಬ ಗಾಂಧೀ ಶಿಷ್ಯ ಬೊಂಬಾಯಿನ ಶ್ರೀಮಂತ ವರ್ತಕ ಶ್ರೀ ಜಹಂಗೀರ್ ಪಟೇಲ್ ಆಕೆಯೊಡನೆ ಈ ಪುಸ್ತಕದ ಸಹ ಲೇಖಕ. ಅದರ ಮುನ್ನುಡಿಯಲ್ಲಿ

"ಅನೇಕ ಶ್ರೀಸಾಮಾನ್ಯ ಸ್ತ್ರೀ ಪುರುಷರ ಬಾಳಿಗೆ ಒಂದು ನೂತನ ಸಾರ್ಥಕ ಉದ್ದೇಶವನ್ನೂ ಒಂದು ಹೊಸ ದಿಸೆಯನ್ನೂ ನೀಡುವಂತಹ ಗಾಂಧೀ ಬಾಂಧವ್ಯ ಪಡೆದವರಂತೆ ನಾವೂ ಅವರ ನಿಕಟ ಸಂಪರ್ಕದಿಂದ ಪ್ರಭಾವಿತರಾದೆವು. ಕಷ್ಟಕರವೆನಿಸಿದರೂ ಒಂದು ಜ್ಯೋತಿರ್ಮಯ ಪಥವನ್ನೂ ಒಂದು ಗುರಿಯ ಇಣಕು ನೋಟವನ್ನೂ ನಾವು ಕಂಡುಕೊಂಡೆವು. ಈ ಅಗ್ನಿಪಥವೇ ಗಾಂಧೀ ಮಾರ್ಗ. ಭಾರತಕ್ಕೂ ಮಾನವ ಲೋಕಕ್ಕೂ ನೆಮ್ಮದಿಯ ಭವಿಷ್ಯ ಸಾಧಿಸಿಕೊಡಲು ಇದೊಂದೇ ದಿವ್ಯಪಥ ಎಂದೇ ನಮ್ಮ ನಂಬಿಕೆ" ಎಂದಿದ್ದಾರೆ.

ಇಂಗ್ಲೆಂಡಿನ ಯಾರ್ಕ್‌ಷೈರಿನ ವೇಕ್ ಫೀಲ್ಡ್‌ನಲ್ಲಿ ಶಾಲಾ ಉಪಾಧ್ಯಾಯರಾಗಿದ್ದ ಮಾರ್ಜೋರಿಯ ತಂದೆ. ಶ್ರೀ ಸೈಕ್ಸ್ 1914ರ

ಮಹಾಯುದ್ಧದ ಸಮಯಕ್ಕೆ ದೇಶಪ್ರೇಮದಿಂದ ಯುದ್ಧೋದ್ಯಮದಲ್ಲಿ ಭಾಗವಹಿಸಿದ್ದರು. ಆ ಕಾಲಕ್ಕೆ ಚಿಕ್ಕ ಹುಡುಗಿ ಮಾರ್ಜೊರಿ ರೋಗಗ್ರಸ್ತಳಾಗಿದ್ದ ತನ್ನ ತಾಯಿಯ ಸೇವೆಯಲ್ಲಿ ನಿರತಳಾದಳು. ಯುದ್ಧದ ನಂತರ ಹಿಂತಿರುಗಿದ ತಂದೆ ಒಂದು ಹಳ್ಳಿಯ ಶಾಲೆಯ ಮುಖ್ಯೋಪಾಧ್ಯಾಯರಾದರು. ಬಡತನದಲ್ಲಿ ಸಂಸಾರ ನಡೆಯುತ್ತಿತ್ತು. ಬಾಳಿನ ಅನುಭವಗಳು ಮಾರ್ಜೊರಿಗೆ ಶಿಕ್ಷಣಬುನಾದಿ ಎನಿಸುತ್ತಿತ್ತು. ಮನೆಯಲ್ಲೇ ದುಡಿಯುತ್ತ ಕಲಿತಳು. ಸಹಜವಾಗಿಯೇ ಮುಂದೆ ಗಾಂಧೀಜಿಯ ಜೀವನ ಶಿಕ್ಷಣ ಆಕರ್ಷಕವೆನಿಸಿತು.

ಕೇಂಬ್ರಿಡ್ಜ್‌ನ ನ್ಯೂಹೇಮ್ ಕಾಲೇಜಿನಲ್ಲಿ 1923ರಲ್ಲಿ ಓದುತ್ತಿದ್ದಾಗ ಬಾಲಕ ಜಹಂಗೀರ್ ಪಟೇಲ್ ಕೂಡ ಅಲ್ಲೇ ಓದುತ್ತಿದ್ದ. ಮಾರ್ಜೊರಿಗೆ ವಿದ್ಯಾರ್ಥಿವೇತನ ಬರುತ್ತಿತ್ತು. ಭಾರತದ ಅನೇಕ ವಿದ್ಯಾರ್ಥಿಗಳು ಆ ಕಾಲಕ್ಕೇ ಕೇಂಬ್ರಿಡ್ಜ್‌ನಲ್ಲಿದ್ದರು.

ಆ ವೇಳೆಗಾಗಲೇ ಭಾರತದಲ್ಲಿ ಸ್ವರಾಜ್ಯ ಚಳುವಳಿ ರಂಗೇರುತ್ತಿತ್ತು. ಸ್ವಾತಂತ್ರ್ಯ, ಸಮತೆ, ಸೌಹಾರ್ದಗಳ ಸಂದೇಶ ಹೊತ್ತ ಮಹಾನಾಯಕನೊಬ್ಬ ತಮ್ಮನ್ನು ನಡೆಸುತ್ತಿದ್ದಾನೆ ಎಂದು ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಭಿಮಾನದಿಂದ ಹೇಳುತ್ತಿದ್ದರು. ಅಹಿಂಸಾತ್ಮಕ ಸಂಗ್ರಾಮದ ತುಣುಕು ಸುದ್ದಿಗಳಿಂದ ಮಹಾತ್ಮ ಗಾಂಧಿ ಅವರ ಹೆಸರು ಮಾರ್ಜೊರಿಗೆ ಪರಿಚಯವಾಯಿತು. ಕೇಂಬ್ರಿಡ್ಜ್‌ನ ಶಿಕ್ಷಣದಲ್ಲಿ ಮಾರ್ಜೊರಿ ಸೈಕ್ಸ್‌ಗೆ ಗಂಭೀರ ವೈಚಾರಿಕತೆ ಅಭ್ಯಾಸವಾಯಿತು. ಧಾರ್ಮಿಕತೆ, ದೈವಭಕ್ತಿ ಮತ್ತು ಆತ್ಮಜ್ಞಾನಗಳ ಬಗ್ಗೆ ಕ್ರೈಸ್ತ ಪಾದ್ರಿಗಳ ವಿಚಾರಗಳು ಹೃದಯವನ್ನು ಸೂರೆಗೊಳ್ಳುತ್ತಿದ್ದವು. ಆದರೆ ಬೈಬಲ್ಲಿನ ಮಾತುಗಳಲ್ಲಿ ಅಡಗಿದ್ದ ಗೂಢಾರ್ಥಗಳೂ ಜೀವನ ಸಂದೇಶಗಳೂ ಅರ್ಥವಾಗಿರಲಿಲ್ಲ. ಜೀಸಸ್ ಒಂದು ವಿಶಿಷ್ಟ ಜೀವನ ವಿಧಾನದ ಮಾದರಿ ಎಂಬ ಅಂಶ ಒಬ್ಬ ಪಾದ್ರಿಯ 'ದಿನನಿತ್ಯದ ಧಾರ್ಮಿಕತೆ' (ಎವ್ವರಿಡೇ ರಿಲಿಜನ್) ಎಂಬ ಪುಸ್ತಕದಿಂದ ಅರಿವಾಯಿತು. "ಗಾಂಧೀಜಿಗೆ ರಸ್ಕಿನ್‌ನ ಅನ್‌ಟು ದಿಸ್ ಲಾಸ್ಟ್ ಪುಸ್ತಕದಂತೆಯೇ ನನ್ನ ಜೀವನದಲ್ಲೂ ಈ ಪುಸ್ತಕ ಅಗಾಧ

ಪರಿಣಾಮ ಮಾಡಿತು" ಎಂದು ಸ್ಮರಿಸಿದ್ದಾರೆ ಸೈಕ್ಸ್. ಕೇಂಬ್ರಿಡ್ಜ್‌ನ ಹಲವು ಚಿಂತನಶೀಲ ಪ್ರಾಧ್ಯಾಪಕರು ರಾಷ್ಟ್ರಗಳ ವೈಷಮ್ಯ, ಯುದ್ಧ, ದ್ವೇಷ ಮತ್ತು ಸೇಡಿನ ಮನೋಭಾವಗಳು ಏಸುವಿನ ಬೋಧೆಗೆ ತೀರ ವಿರುದ್ಧ ನಡವಳಿಕೆ ಎಂದು ವಿಶ್ಲೇಷಿಸುತ್ತಿದ್ದರು. ಮಾರ್ಜೊರಿ ಗಂಭೀರವಾಗಿ ಯೋಚಿಸಿದರು. ಅಹಿಂಸೆಗೆ ಕ್ರೈಸ್ತಧರ್ಮದ ವ್ಯಾಖ್ಯಾನ ಏನು? ಏಸುವಿನ ಜೀವನ ಸಂದೇಶ ಇಂದಿನ ಬಾಳಿಗೆ ಅನ್ವಯವಾಗುವುದು ಹೇಗೆ? ಈ ಪ್ರಶ್ನೆಗಳು ಕಾಡಿದವು. ಇತರ ಧಾರ್ಮಿಕ ಗೆಳೆಯರೊಡನೆ ಚರ್ಚಿಸಿ ಅನ್ಯಧರ್ಮಗಳ ಬೋಧೆಗಳನ್ನೂ ತಿಳಿಯುತ್ತಿದ್ದರು. ಭಾರತದ ಸಂಸ್ಕೃತಿಯ ಪರಂಪರೆಯನ್ನು ಗಂಭೀರವಾಗಿ ಅಭ್ಯಸಿಸಿ ಗೌರವ ಬೆಳೆಸಿಕೊಂಡಿದ್ದ ಕ್ರೈಸ್ತ ಧಾರ್ಮಿಕರು ಹೇರಳವಾಗಿದ್ದರೂ ಇಂಗ್ಲೀಷ್ ಸಾಮ್ರಾಜ್ಯಶಾಹಿಗಳ ದುರಹಂಕಾರ ಮತ್ತು ಭಾರತೀಯರ ಮೇಲಿನ ಅವರ ದಬ್ಬಾಳಿಕೆ ಕಂಡು ಮರುಗುತ್ತಿದ್ದರು. ಗಾಂಧೀಜಿ ಅಂಥ ಒಬ್ಬ ಭಾರತೀಯ ಸಂತ, ರಾಜಕೀಯ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲೂ ಏಸು ಪ್ರಣೀತ ಅಹಿಂಸೆ, ಕರುಣೆ, ಸತ್ಯನಿಷ್ಠೆಗಳನ್ನು ಪ್ರಯೋಗ ಮಾಡುತ್ತಿರುವುದನ್ನು ಕೇಳಿ ಮಾರ್ಜೊರಿ ಪ್ರಯೋಗಗಳನ್ನು ಗಮನಿಸಿದರು. ಮಕ್ಕಳ ಸ್ವಭಾವ ಸಹಜ ಕುತೂಹಲದಿಂದ ನಿಸರ್ಗದ ಅನುಭವಗಳಲ್ಲಿ, ಕೆಲಸದ ಆನಂದದಲ್ಲಿ, ಆಟದ ಸಂತೋಷದಲ್ಲಿ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂಬ ಕಲ್ಪನೆ ದೃಢವಾಗತೊಡಗಿತು.

ಶಿಕ್ಷಣ ಕ್ಷೇತ್ರವೇ ಮಾರ್ಜೊರಿ ಸೈಕ್ಸ್‌ಗೆ ಅತ್ಯಂತ ಶ್ರೇಷ್ಠ ಸಾಧನಾ ಕ್ಷೇತ್ರವೆನಿಸಿತು. ಭಾರತದ ದಾರ್ಶನಿಕರು ಯಾವುದನ್ನು ನಿಷ್ಕಾಮಕರ್ಮ ಎಂದು ಕರೆಯುವರೋ ಅದರ ಸಾಮ್ಯಗಳನ್ನು ಕ್ರಿಶ್ಚಿಯನ್ ಬೋಧೆಗಳಲ್ಲೂ ಕಂಡುಕೊಂಡರು. ಗಾಂಧೀಜಿ ಸರ್ವಧರ್ಮ ಸಮಭಾವದ ಅನ್ವಯವನ್ನು ಬಾಳಿನಲ್ಲಿ ಹೇಗೆ ಮಾಡಿಕೊಂಡಿದ್ದಾರೆ ಎಂದು ಕೂತೂಹಲದಿಂದ ಅಧ್ಯಯನ ಮಾಡಿದರು. ಅವರ ಮಾತುಗಳಾದ "ನಾನು ಹಿಂದುವಿಗೆ ಒಳ್ಳೆಯ ಹಿಂದುವಾಗು, ಕ್ರಿಶ್ಚಿಯನ್ನನಿಗೆ ಒಳ್ಳೆಯ

ಕ್ರೈಸ್ತನಾಗು, ಮುಸಲ್ಮಾನನಿಗೆ ಒಳ್ಳೆಯ ಮುಸ್ಲಿಮ್ ಆಗು ಎಂದು ಬೋಧಿಸುತ್ತೇನೆ. ನನ್ನ ಮತ ಶ್ರೇಷ್ಠ, ಅದಕ್ಕೆ ಮತಾಂತರಗೊಂಡರೇ ನಿನಗೆ ಮೋಕ್ಷ ಎಂದು ಬೋಧಿಸಲಾರೆ. ನಾನು ಸನಾತನಿ ಹಿಂದು. ಆದರೆ ಇತರ ಧರ್ಮಗ್ರಂಥಗಳನ್ನು ಗೌರವಾದರಗಳಿಂದ ಅಧ್ಯಯನ ಮಾಡಿದುದರಿಂದ ನನ್ನ ಧರ್ಮವನ್ನು ಚೆನ್ನಾಗಿ ಅರಿಯಲು ಹೆಚ್ಚಿನ ಪ್ರೇರಣೆ ಪಡೆದೆ. ಎಲ್ಲ ಧರ್ಮಗಳೂ ಮಾನವ ನಿರ್ಮಿತವೇ. ಎಲ್ಲದರಲ್ಲೂ ಕೆಲವು ದೋಷಗಳು ನುಸುಳಿಬಂದಿರುತ್ತವೆ. ಅವನ್ನು ನಿವಾರಿಸುವುದು ಆಯಾ ಧರ್ಮಾನುಯಾಯಿಗಳ ಪವಿತ್ರ ಕರ್ತವ್ಯ" ಎನ್ನುವುದು ಮಾರ್ಜೋರಿಗೆ ಮಾರ್ಗದರ್ಶಕ ಸಂದೇಶವೆನಿಸಿತು.

1926ರಲ್ಲಿ ಮಾರ್ಜೋರಿ ಸೈಕ್ಸ್ ಕೇಂಬ್ರಿಡ್ಜ್‌ನಲ್ಲಿ ಶಿಕ್ಷಣಶಾಸ್ತ್ರದ ಉನ್ನತ ಪದವಿ ಪಡೆದುಕೊಂಡರು. ಏಷಿಯಾ ಮತ್ತು ಆಫ್ರಿಕ ಖಂಡಗಳ ಅನೇಕ ಶಿಕ್ಷಣವೇತ್ತರ ಪರಿಚಯವಾಯಿತು. ಪಾಶ್ಚಾತ್ಯ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನೂ ಅರಗಿಸಿಕೊಂಡು ತಮ್ಮ ದೇಶೀಯ ಸಂಸ್ಕೃತಿಯ ಬೇರುಗಳನ್ನು ಉಳಿಸಿಕೊಳ್ಳುವುದೇ ಭವಿಷ್ಯದಲ್ಲಿ ಶಿಕ್ಷಣ ಪದ್ಧತಿಯ ಗುರಿಯಾಗಬೇಕು ಎಂದವರು ಆಶಿಸಿದ್ದರು. ಅನೇಕ ಕ್ರೈಸ್ತ ಧರ್ಮೀಯ ಪಂಥಗಳು ಆ ಖಂಡಗಳಲ್ಲಿ ಶಾಲೆಗಳನ್ನು ನಡೆಸಲು ಹೋಗುತ್ತಿದ್ದವು. ಪಿಯಾನೋದಲ್ಲಿ ಸುಶ್ರಾವ್ಯ ಸಂಗೀತ ಮೂಡಿಬರಲು ಕರಿಯ ಮತ್ತು ಬಿಳಿಯ ಮನೆಗಳು ಜೊತೆಜೊತೆಯಾಗಿಯೇ ಇರಬೇಕಾಗುವಂತೆ ಜಗತ್ತಿನ ಭವಿಷ್ಯ ಸಂಸ್ಕೃತಿ ಪಶ್ಚಿಮ ಮತ್ತು ಪೂರ್ವಗಳ ಸುಸಂಗತ ಸಮಾವೇಶದ ಮೇಲೆ ನಿರ್ಮಾಣವಾಗಬೇಕು ಎಂದುಕೊಂಡರು. 1928ರಲ್ಲಿ ಮದ್ರಾಸಿನ ಬೆಂಟಿಂಕ್ ಮಹಿಳಾ ಪ್ರೌಢಶಾಲೆಯ ಶಿಕ್ಷಕಿಯಾಗಿ ಭಾರತಕ್ಕೆ ಬಂದರು.

ಮಾರ್ಜೋರಿ ಸೈಕ್ಸ್ ಭಾರತಕ್ಕೆ ಬಂದ ವರ್ಷದಲ್ಲೇ ಬ್ರಿಟಿಷ್ ಸರ್ಕಾರದಿಂದ ನೇಮಿತವಾದ 'ಸೈಮನ್ ಕಮಿಷನ್' ಭಾರತಕ್ಕೆ ಬಂದಿತು. ಭಾರತದ ಸ್ವಾಯತ್ತತೆಯ ಸ್ವರೂಪ ನಿರ್ಧರಿಸಲು ಈ ಕಮಿಷನ್ ನೇಮಿತವಾಗಿತ್ತು. ಆದರೆ ಅದರಲ್ಲಿ ಒಬ್ಬನಾದರೂ ಭಾರತೀಯನಿರಲಿಲ್ಲ.

ಇಡೀ ದೇಶವೇ ಈ ನಿಯೋಗಕ್ಕೆ ಬಹಿಷ್ಕಾರ ಹಾಕಿ ಪ್ರಚಂಡ ವಿರೋಧ ಪ್ರದರ್ಶಿಸಿತು. 1922ರ ಅಸಹಕಾರ ಚಳುವಳಿಯಲ್ಲಿ ಗಾಂಧೀಜಿಗೆ ಆರು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿತ್ತು. ದೇಶದಲ್ಲಿ ನಡೆದ ಹಿಂಸಾತ್ಮಕ ಚಳುವಳಿಯಲ್ಲಿ ಗಾಂಧೀಜಿಗೆ ಆರು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿತ್ತು. ದೇಶದಲ್ಲಿ ನಡೆದ ಹಿಂಸಾತ್ಮಕ ಘಟನೆಗಳಿಂದ ನೊಂದು ಅವರು ಮುಂದೆ ಉಪ್ಪಿನ ಸತ್ಯಾಗ್ರಹದವರೆವಿಗೂ ಜನತೆಯಲ್ಲಿ ಸತ್ಯಾಗ್ರಹ ಸಿದ್ಧತೆಯ ಶಿಕ್ಷಣರೂಪದ ಹದಿನೆಂಟು ವಿವಿಧ ರಚನಾತ್ಮಕ ಕಾರ್ಯಕ್ರಮ ಹಾಕಿ ಅದರ ನಿರ್ದೇಶನದಲ್ಲಿ ತಲ್ಲೀನರಾಗಿದ್ದರು. ಮುಖ್ಯವಾಗಿ ಖಾದಿ ಗ್ರಾಮೋದ್ಯೋಗ, ಹಿಂದೂ ಮುಸ್ಲಿಮ್ ಐಕ್ಯತೆ, ಅಸ್ಪೃಶ್ಯತಾನಿವಾರಣೆ ಅವರ ಪ್ರಧಾನ ಪ್ರಚಾರಕ್ಷೇತ್ರವಾಗಿತ್ತು.

1922ರಲ್ಲಿ ಶ್ರೀ ಎ. ಎ. ಪಾಲ್ ಎಂಬ ಭಾರತೀಯ ಕ್ರೈಸ್ತಯುವಕ ಮದ್ರಾಸಿನಲ್ಲಿ ಇಂಟರ್‌ನ್ಯಾಷನಲ್ ಫೆಲೋಷಿಪ್ ಎಂಬ ಸಂಸ್ಥೆ ನಡೆಸುತ್ತಿದ್ದ. ಗಾಂಧೀಜಿಯ ಭಾಷಣಗಳಿಂದ ಪ್ರಭಾವಿತನಾಗಿ ರಾಜಕೀಯ ಸಂಗ್ರಾಮ ನಡೆದಿದ್ದರೂ ಇಂಗ್ಲೀಷರನ್ನು ದ್ವೇಷಿಸುವುದು ಅಹಿಂಸಾಧರ್ಮಕ್ಕೆ ವಿರೋಧ ಎಂಬ ಧೋರಣೆಗನುಗುಣವಾಗಿ ಈ ಸ್ನೇಹ ಬಳಗ ಕೆಲಸ ಮಾಡುತ್ತಿತ್ತು. ಇಂಥ ಅನೇಕ ಸ್ನೇಹವೃಂದಗಳು ಭಾರತದ ಹಲವೆಡೆ ಪ್ರಾರಂಭವಾಗಿ ಅಖಿಲ ಭಾರತ ಕೂಟವೊಂದು ಗಾಂಧೀಜಿಯ ಪ್ರೇರಣೆಯಿಂದ ಸಬರಮತಿಯಲ್ಲಿ ಸಮಾವೇಶಗೊಂಡಿತು. ಮದ್ರಾಸಿನ ಬೆಂಟಿಂಕ್ ಶಾಲೆಯಿಂದ ಮಾರ್ಜೊರಿಯ ಸಹೋದ್ಯೋಗಿಯೊಬ್ಬರು ಈ ಸಭೆಗೆ ಹೋಗಿಬಂದು ಗಾಂಧೀಜಿಯ ಮನೋವೈಶಾಲ್ಯವನ್ನೂ ವಿನಯಪೂರ್ಣ ವಿಶ್ವಾಸವನ್ನೂ ಬಣ್ಣಿಸಿದರು. ಮಾರ್ಜೊರಿ ಸೈಕ್ಸ್ ಆ ಕೂಡಲೇ ಶ್ರೀ ರಾಜಗೋಪಾಲಾಚಾರಿ ಅವರ ಸಂಪರ್ಕ ಪಡೆದು ಅವರು ಸೇಲಮ್ ಜಿಲ್ಲೆಯಲ್ಲಿ ನಡೆಸುತ್ತಿದ್ದ ಖಾದಿ ಕೇಂದ್ರಕ್ಕೆ ಭೇಟಿಯಿತ್ತರು. ಅಸ್ಪೃಶ್ಯತಾನಿವಾರಣೆ ಮತ್ತು ಖಾದಿ ಪ್ರಚಾರಗಳ ಬಗ್ಗೆ ರಾಜಾಜಿಯವರ ಕಾರ್ಯ ಮತ್ತು ಮಾತುಕತೆಗಳಿಂದ ಮಾರ್ಜೊರಿಗೆ ಗಾಂಧೀ ಮಾರ್ಗದ ಸ್ಪಷ್ಟಕಲ್ಪನೆ ಗೋಚರವಾಯಿತು.

ಈ ಮಧ್ಯೆ ಯುವಕ ಜಹಂಗೀರ್ ಪಟೇಲ್ ಸಬರಮತಿಗೆ ಹೋಗಿ ಗಾಂಧೀಜಿಯನ್ನು ಕಂಡರು. ಈ ಶ್ರೀಮಂತ ಪಾರ್ಸಿ ವ್ಯಾಪಾರಿಗೆ ಗಾಂಧೀಜಿಯ ಮನೋರಂಗ ಸಂಕುಚಿತವೆನಿಸಿತು. ನೇರವಾಗಿ ಪ್ರಶ್ನೆ ಮಾಡಿದರು. ಕೇಂಬ್ರಿಡ್ಜ್ ಶಿಕ್ಷಣದ ಪ್ರಭಾವದಿಂದ ಇಂಗ್ಲೀಷರ ದೃಷ್ಟಿಯಿಂದಲೇ ಜೀವನವನ್ನು ಕಾಣುವ ಪರಿಪಾಠವಾಗಿತ್ತು. ಗಾಂಧೀಜಿ ಅಂದರು "ಮಾನವಸೇವೆ ನನ್ನ ಆದರ್ಶ. ಭಾರತೀಯನಾಗಿ ಹುಟ್ಟಿದ್ದೇನೆ ಆದ್ದರಿಂದ ಒಳ್ಳೆಯ ಭಾರತೀಯ ಎನಿಸಿಕೊಳ್ಳುವುದು ನನ್ನ ಪ್ರಥಮ ಜವಾಬ್ದಾರಿ. ಆ ಮೂಲಕ ಮಾನವ ಕುಲದ ಒಬ್ಬ ಸತ್ಪ್ರಜೆಯಾಗಲು ಬಯಸುತ್ತೇನೆ. ಹಾಗೆಯೇ ನಾನು ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ. ಆ ಧರ್ಮದ ಶ್ರೇಷ್ಠ ಅನುಯಾಯಿಯಾಗಿಯೇ ನನ್ನ ಅರ್ಹತೆಗಳಿಸಿ ಇತರ ಧರ್ಮೀಯರೊಡನೆಯೂ ಇತರ ಜನತೆಗಳೊಂದಿಗೂ ಸಮರಸವಾಗಿ ಸಂಕೋಚ ರಹಿತನಾಗಿ ಸ್ನೇಹದಿಂದಿರ ಬಯಸುತ್ತೇನೆ." ಈ ದೃಷ್ಟಿ ಜಹಂಗೀರ್ ಪಟೇಲರನ್ನು ಪೂರ್ಣವಾಗಿ ಆವರಿಸಿಬಿಟ್ಟಿತು. ಅದನ್ನವರು ಮಾರ್ಜೋರಿಯೊಡನೆ ಬರೆದಿರುವ ಪುಸ್ತಕದಲ್ಲಿ ಬಣ್ಣಿಸಿದ್ದಾರೆ.

ಮಾರ್ಜೋರಿ ಸೈಕ್ಸ್ ಮದ್ರಾಸಿನಲ್ಲಿ ಮಹಿಳಾ ಸೇವಾ ಸಂಘಗಳ ಸಂಪರ್ಕ ಪಡೆದು ಗಾಂಧೀಜಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸತೊಡಗಿದರು. 1930ರಲ್ಲಿ ದೇಶ ಉಪ್ಪಿನ ಸತ್ಯಾಗ್ರಹಕ್ಕೆ ಅಣಿಯಾಗತೊಡಗಿತ್ತು. ಮಹಿಳೆಯರ ಪಾತ್ರ ಅಮೋಘವಾಗಿತ್ತು. ಹಿಂದೆಂದೂ ಕಾಣದ ಉತ್ಸಾಹ ಭಾರತೀಯ ಮಹಿಳೆಯರಲ್ಲಿ ತುಂಬತೊಡಗಿತ್ತು. ದೇಶದ ವಿಮೋಚನೆಗೆ ಸರ್ವತ್ಯಾಗಕ್ಕೂ ಸಿದ್ಧರಾಗಿ ಚಳುವಳಿಗೆ ಇಳಿದರು. ಬೆಂಟಿಂಕ್ ಶಾಲೆಯ ಶಿಕ್ಷಕಿಯರಲ್ಲಿ ಗಾಂಧೀಜಿ, ರವೀಂದ್ರನಾಥ ಠಾಕೂರರು ಮತ್ತು ರಾಜಾಜಿಯವರ ಅಭಿಮಾನಿಗಳಿದ್ದರು. ಶಾಲೆಯಲ್ಲಿ ಅನೇಕ ರೀತಿಯ ದೇಶಸೇವಾ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದರು. ಸ್ವದೇಶಿ ಪ್ರೇಮ, ಅಂತರರಾಷ್ಟ್ರೀಯ ಸೌಹಾರ್ದ, ಜಾತೀಯ ಐಕ್ಯತೆ, ಸರ್ವಸಮಾನತೆಯ ಭಾವನೆ ಇವುಗಳಿಗೆ ಒತ್ತುಕೊಟ್ಟು ಬಾಲಕಿಯರಿಗೆ ಶಿಕ್ಷಣ ಕೊಡುತ್ತಿದ್ದರು. ಸ್ವಚ್ಛತೆಯ ಕಾರ್ಯದಲ್ಲಿ ಎಲ್ಲರೂ ಭಾಗವಹಿಸಿ

ಶಾಲೆಯನ್ನೆಲ್ಲ ಚೊಕ್ಕಟವಾಗಿಡುತ್ತಿದ್ದರು. ಮಾರ್ಜೊರಿ ಸೈಕ್ಸ್ ಕ್ರಮೇಣ ಈ ಎಲ್ಲ ಕಾರ್ಯಗಳ ಹಿಂದಿದ್ದ ಮೂಲ ಭಾರತೀಯ ಪ್ರೇರಣಾಶಕ್ತಿಗಳ ಬಗ್ಗೆ ಶ್ರದ್ಧೆ ಬೆಳಸಿಕೊಂಡರು. ರವೀಂದ್ರರು ಮತ್ತು ಗಾಂಧೀಜಿ ಆಕೆಯ ಆರಾಧ್ಯದೈವಗಳಾದರು. ತಾಯ್ನಾಡಿನಲ್ಲಿ ದೊರೆಯುವ ಶಿಕ್ಷಣವೇ ನಿಜವಾದ ಶಿಕ್ಷಣ ಎಂಬ ನಿಲುವು ಆಕೆಗೆ ಸರಿಎನಿಸಿತು.

1934ರಲ್ಲಿನ ಒಂದು ಘಟನೆ ಮಾರ್ಜೊರಿಯ ಮೇಲೆ ಗಾಢವಾದ ಪರಿಣಾಮ ಮಾಡಿತು. ಒಬ್ಬ ಮರಾಠಿ ಬ್ರಾಹ್ಮಣ ಗೃಹಸ್ಥ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದ. ಕಾಲೇಜ್ ವ್ಯಾಸಂಗ ಮುಗಿಸಿದ್ದ ಆತನ ಇಬ್ಬರು ಮಕ್ಕಳು ಗಾಂಧೀವಾದಿಗಳು. ಬ್ರಾಹ್ಮಣವರ್ಗ ಈ ಸಂಸಾರಕ್ಕೆ ತುಂಬ ಕಿರುಕುಳ ಕೊಡುತ್ತಿತ್ತು. ಮಕ್ಕಳು ಮಾತ್ರ ಮತಾಂತರಗೊಳ್ಳಲು ನಿರಾಕರಿಸಿದ್ದರು. ಗಾಂಧೀಜಿಗೆ ತಮ್ಮ ಸ್ಥಿತಿಯನ್ನು ವಿವರಿಸಿ ಬರೆದಾಗ ಅವರು ಹೀಗೆ ಉತ್ತರಿಸಿದರು.

"ನಿಮ್ಮ ತಂದೆಗೆ ಸರಿತೋರಿ ಹಾಗೆ ಮಾಡಿದ್ದರೆ ಏನೂ ಚಿಂತೆಯಿಲ್ಲ. ಅವರ ನಿರ್ಧಾರಕ್ಕೆ ನೀವು ಅಡ್ಡಿ ಮಾಡದಿರುವುದಕ್ಕಾಗಿ ಅಭಿನಂದಿಸುತ್ತೇನೆ. ನಿಮಗೆ ಹಿಂದೂ ಧರ್ಮದಲ್ಲಿ ಆಂತರಿಕ ಶಾಂತಿಸಮಾಧಾನಗಳು ಸಿಗುವುದಾದರೆ ನೀವು ಅದಕ್ಕೇ ಶರಣು ಬರಬೇಕು. ನಿಮ್ಮ ತಂದೆಯ ನಿರ್ಧಾರಕ್ಕೆ ಅಡ್ಡಿಯಾಗಬಾರದು." ಆನಂತರ ಆ ಸಂಸಾರದಲ್ಲಿ ಕ್ರೈಸ್ತ ತಂದೆ ಹಿಂದೂ ಮಕ್ಕಳು ಒಟ್ಟಿಗೆ ಬಾಳಿದರು.

ಆಧ್ಯಾತ್ಮಿಕ ಸಾಧನೆಗೆ ಮತಾಂತರ ಅಗತ್ಯವಿಲ್ಲ ಎಂದೇ ಗಾಂಧೀಜಿ ಎಲ್ಲ ಪಾದ್ರಿಗಳಿಗೂ ತಿಳಿಸುತ್ತಿದ್ದರು. ಅವರವರ ಧರ್ಮವನ್ನು ಶ್ರದ್ಧೆಯಿಂದ ಅರಿತುಕೊಳ್ಳದವರು ಬೇರೆ ಧರ್ಮವನ್ನೂ ಅರಿಯಲಾರರು. ಕೇವಲ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳಲು ಮತಾಂತರಗೊಳಿಸುವುದು ಸರಿಯಲ್ಲ ಎಂದು ವಾದಿಸುತ್ತಿದ್ದರು. ಒಮ್ಮೆ ರೆವೆರೆಂಡ್ ಆಂಡ್ರೂಸ್ ಗಾಂಧೀಜಿಯನ್ನು ಕೇಳಿದರು "ನನ್ನ ಭಾಷಣದಿಂದ ಪ್ರಭಾವಿತನಾಗಿ ತಾನು ಕ್ರೈಸ್ತನಾಗಲು ಬಯಸಿಬಂದವನಿಗೆ ನಾನೇನು ಹೇಳಲಿ?"

ನೇರವಾಗಿ ಬಂತು ಗಾಂಧೀಜಿಯ ಉತ್ತರ "ಆತನನ್ನು ತನ್ನ ಧರ್ಮಗ್ರಂಥಗಳನ್ನು ಶ್ರದ್ಧೆಯಿಂದ ಓದು. ಆ ಪಥದಲ್ಲೇ ಈ ಆತ್ಮ ಜ್ಞಾನ ಖಂಡಿತ ದೊರೆಯುತ್ತದೆ ಎಂದು ಹೇಳು."

ಈ ದೃಷ್ಟಿ ಮಾರ್ಜೊರಿಗೆ ಅತ್ಯಂತ ಸಮಂಜಸ ನಿಲುವು ಎಂದು ಅನಿಸಿತು. ತನ್ನದೇ ಶ್ರೇಷ್ಠ ಧರ್ಮ ಮಿಕ್ಕೆಲ್ಲವೂ ಕೀಳು ಎಂಬ ಅಹಂಕಾರವೇ ಒಂದು ಅಧರ್ಮದೃಷ್ಟಿ ಎಂದು ಮನದಟ್ಟಾಗಿತ್ತು. ಮುಂದೆ ಕ್ವೇಕರ್‌ಪಂಥಕ್ಕೆ ಸೇರಿದಾಗ ಎಲ್ಲ ಧರ್ಮೀಯರೊಡನೆ ಸಮರಸವಾಗುವ ಬಾಳೇ ಧಾರ್ಮಿಕ ಜೀವನ ಎಂದನುಸರಿಸಿದರು...

ಒಮ್ಮೆ ಇಂಗ್ಲೆಂಡಿಗೆ ಭೇಟಿಯಿತ್ತಾಗ ಮಾರ್ಜೊರಿ ಸೈಕ್ಸ್ ಅಲ್ಲಿನ ಸುಪ್ರಸಿದ್ಧ ಗಾಂಧೀವಾದಿ ಮತ್ತು ಕ್ವೇಕರ್ ಪಂಥದ ಹೊರೆಸ್ ಅಲೆಕ್ಸಾಂಡರ್ ಪರಿಚಯವಾದರು. 1927–28 ಅವರು ಭಾರತದಲ್ಲಿ ಗಾಂಧೀಜಿಯವರೊಡನೆ ಕೆಲಕಾಲ ಇದ್ದವರು. ಧಾರ್ಮಿಕ ಜೀವನಕ್ಕೆ ತನ್ನದೇ ಬೇರೆ ಕ್ಷೇತ್ರವಿಲ್ಲ. ಜೀವನದ ಅತ್ಯಂತ ಚಿಕ್ಕ ಕ್ರಿಯೆಯಲ್ಲೂ ಅದೇ ಮೌಲ್ಯಗಳು ವ್ಯಾಪಿಸಿನಿಂತಾಗ ಮಾತ್ರವೇ ಅದು ನಿಜವಾದ ಧಾರ್ಮಿಕತೆ ಎಂದು ಗಾಂಧೀಜಿ ಹೇಳಿದ್ದನ್ನು ಮತ್ತೆ ಆಚರಿಸುತ್ತಿದ್ದುದನ್ನು ಅಲೆಕ್ಸಾಂಡರ್ ಮನಸಾರೆ ಅಂಗೀಕರಿಸಿದ್ದರು. ಕ್ವೇಕರ್ ಪಂಥವೂ ಅದೇ ನಿಟ್ಟಿನಲ್ಲಿ ಚಿಂತನೆ ಮಾಡುತ್ತಿತ್ತು. ಮಾನವನ ಅಂತಃಕರಣದ ಆಳದಲ್ಲಿ ದೈವೀಸಂಪತ್ತು ಹುದುಗಿದೆ. ಆದ್ದರಿಂದಲೇ ಮಾನವನಿಗೆ ಸ್ವಾರ್ಥದಿಂದ ಮೇಲೇರಲು ಸಾಧ್ಯ. ಈಶ್ವರಶಕ್ತಿಯ ಉಗಮ ನಮ್ಮ ಆತ್ಮಸಾಕ್ಷಿ. ಪ್ರತಿಯೊಬ್ಬ ಮಾನವನೂ ಮೂಲತಃ ದೈವೀಸ್ವರೂಪವೆ ಎಂಬ ಭಾವನೆ ಇದ್ದಲ್ಲಿ ಎಲ್ಲರನ್ನೂ ಜೀಸಸ್‌ನಂತೆ ಪ್ರೇಮಿಸುವುದು ಸಾಧ್ಯ. ಆದ್ದರಿಂದ ಅಹಿಂಸೆಯೇ ಪರಮಧರ್ಮ. ಕ್ವೇಕರ್ ಪಂಥದವರ ಈ ನಂಬಿಕೆಗಳು ಅವರನ್ನು ಗಾಂಧೀಜಿಯ ಆತ್ಮೀಯ ಸ್ನೇಹವೃಂದಕ್ಕೆ ಸೆಳೆಯುತ್ತಿತ್ತು. 1931ರಲ್ಲಿ ಗಾಂಧೀಜಿ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಹೊರೆಸ್ ಅಲೆಕ್ಸಾಂಡರ್, ಶ್ರೀಮತಿ ಮೂರಿಯಲ್ ಲೆಸ್ಟರ್, ಅಗಥಾ ಹ್ಯಾರಿಸನ್ ಮುಂತಾದವರ ಸಹವಾಸದಲ್ಲಿ ಲಂಡನ್ನಿನ

ವೆಸ್ಟ್‌ಎಂಡ್‌ನಲ್ಲಿದ್ದ ಅವರ ಕೇಂದ್ರದಲ್ಲೇ ಬಿಡಾರ ಮಾಡಿದ್ದರು. ಈ ನಿಕಟ ಪರಿಚಯದಿಂದ ಮಾರ್ಜೊರಿ ಸೈಕ್ಸ್ ಕೂಡ ಗಾಂಧೀ ಬಳಗಕ್ಕೆ ಸೇರಿಹೋದರು.

1938ರಲ್ಲಿ ಮದ್ರಾಸಿಗೆ ಬಂದ ಕ್ವೇಕರ್ ಹೆಚ್. ಜಿ. ವುಡ್ ಅವರು ಶಾಂತಿನಿಕೇತನದಲ್ಲಿದ್ದು ರವೀಂದ್ರರ ನಿಕಟಾನುಯಾಯಿಗಳಾಗಿದ್ದವರು. ಅವರನ್ನು ಗುರುದೇವ ಠಾಕೂರ್ ತಮಗೆ ಒಬ್ಬ ಒಳ್ಳೆಯ ಕ್ವೇಕರ್ ಪಂಥದ ಶಿಕ್ಷಕಿ ಶಾಂತಿನಿಕೇತನದಲ್ಲಿ ಕೆಲಸ ಮಾಡಲು ಬೇಕು ಎಂದು ಕೇಳಿದ್ದರು. ಮಾರ್ಜೊರಿಸೈಕ್ಸ್ ಆ ಕೂಡಲೇ ಈ ಅವಕಾಶವನ್ನಂಗೀಕರಿಸಿ ಶಾಂತಿನಿಕೇತನಕ್ಕೆ ಹೋಗಲು ತೀರ್ಮಾನಿಸಿಬಿಟ್ಟರು. ಮದ್ರಾಸಿನಿಂದ ಹೊರಟವರು ಗಾಂಧೀಜಿಯ ವಾರ್ಧಾ ಆಶ್ರಮದ ಮೂಲಕ ಹೋಗಲು ನಿರ್ಧರಿಸಿದರು. ಆಗತಾನೇ ಪ್ರಖ್ಯಾತ ಸೇವಾಗ್ರಾಮ ಆಶ್ರಮ ತಲೆಯೆತ್ತಿ ನಿಂತಿತ್ತು. ಅಲ್ಲಿ ಒಂದು ಮೂಲಕಶಿಕ್ಷಣ ಶಾಲೆಯನ್ನು ಸ್ಥಾಪಿಸಲಾಗಿತ್ತು. ಗಾಂಧೀಜಿಯ ಶೈಕ್ಷಣಿಕ ವಿಚಾರಗಳ ಪ್ರಯೋಗ ಸಾಗಿತ್ತು. ಮಾರ್ಜೊರಿ ಸೈಕ್ಸ್ ಕೆಲಕಾಲ ಅಲ್ಲಿ ನಿಂತು ಜೀವನದ ಮೂಲಕ ಜೀವನಕ್ಕಾಗಿ ಮೂಲ ಶಿಕ್ಷಣದ ವಿವಿಧ ವಿಚಾರಗಳನ್ನು ಸ್ವಂತ ಅನುಭವದಿಂದ ತಿಳಿದುಕೊಂಡರು.

ಕೇವಲ ಕೆಲವೇ ದಿನಗಳೊಳಗಾಗಿ ಭಾರತದ ಅಂದಿನ ಅತ್ಯುನ್ನತ ಶ್ರೇಷ್ಠ ವ್ಯಕ್ತಿಗಳೆನಿಸಿದ್ದ ಮಹಾತ್ಮ ಗಾಂಧಿ ಮತ್ತು ಗುರುದೇವ ರವೀಂದ್ರನಾಥ ಠಾಕೂರ ಇವರಿಬ್ಬರ ಪ್ರಭಾವದಾವರಣದೊಳಕ್ಕೆ ಮಾರ್ಜೊರಿಸೈಕ್ಸ್ ಆನಂದದಿಂದ ಪ್ರವೇಶಿಸಿದರು. ಚಿಕ್ಕೆಗಳ ಮಧ್ಯೆ ಚಂದ್ರಮನಂತೆ ಮಕ್ಕಳ ಮಧ್ಯೆ ಗಾಂಧೀಜಿ ಅವರ ಕಲ್ಪನಾಲೋಕದಲ್ಲಿ ದಿನವೂ ಕೆಲವು ಕಾಲ ತಲ್ಲೀನರಾಗಿಬಿಡುತ್ತಿದ್ದರು. ಎಷ್ಟೇ ಗುರುತರ ಕಾರ್ಯ ಕಾದಿದ್ದರೂ ಆ ಕೆಲವು ನಿಮಿಷಗಳು ಎಲ್ಲವನ್ನೂ ಬದಿಗಿಟ್ಟು ನಲಿಯುತ್ತಿದ್ದರು. ಆ ದೃಶ್ಯವೇ ಮಾರ್ಜೊರಿಗೆ ಹೊಸ ಅನುಭವ. "ನನ್ನ ಭಾಗ್ಯಕ್ಕೆ ಮಕ್ಕಳ ಸಹವಾಸ ಮತ್ತು ಸಹಜವಾದ ಹಾಸ್ಯಪ್ರಜ್ಞೆ ಇಲ್ಲದೇ ಹೋಗಿದ್ದರೆ ನಾನು ಸತ್ತು ಎಷ್ಟೋ ಕಾಲವಾಗಿರುತ್ತಿತ್ತು" ಎಂದು

ಮಹಾತ್ಮರು ತುಂಬು ಭಾವನೆಯಿಂದ ಹೇಳುತ್ತಿದ್ದರು. ಇಡೀ ದೇಶದ ನಾಯಕತ್ವದ ಭಾರ ಅವರ ಹೆಗಲ ಮೇಲೆ ಅತ್ಯಂತ ಹಗುರವಾಗಿ ಕುಳಿತಿರುತ್ತಿತ್ತು. ಅವರ ಆವರಣದಲ್ಲಿದ್ದ ಶಾಲೆ ಸರ್ವೋದಯ ಆದರ್ಶದ ಪ್ರತೀಕವಾಗಿತ್ತು. ಅಸ್ಪೃಶ್ಯರೆನಿಸಿದ್ದವರೂ ಉತ್ತಮ ಜಾತಿಯವರೂ ಯಾವ ಭೇದವೂ ಇಲ್ಲದೆ ಒಂದೇ ಕೌಟುಂಬಿಕ ಭಾವನೆಯಿಂದ ನಡೆಯುತ್ತಿದ್ದ ಆ ಸೇವಾಗ್ರಾಮದ ವಾತಾವರಣವೇ ಮಾನವತೆಯ ಅತ್ಯುಚ್ಚ ಧ್ಯೇಯಗಳೆಡೆಗೆ ಅನಾಯಾಸವಾಗಿ ಕೊಂಡೊಯ್ದುಬಿಡುತ್ತಿತ್ತು ಎನ್ನುತ್ತಾರೆ ಮಾರ್ಜೋರಿ ತಮ್ಮ ಪುಸ್ತಕದಲ್ಲಿ. ಮಕ್ಕಳಲ್ಲಿನ ಆನಂದದಾಯಕ ಶ್ರಮ ನಿಷ್ಠೆ, ಸಹಜ, ಸ್ವಚ್ಛತೆ, ಕಾಯಕದ ಮೂಲಕ ಬೆಳೆಯುವ ಬುದ್ಧಿಕುಶಲತೆ, ಸೌಂದರ್ಯಾನುಭವದ ಪುಳಕ, ತಿಳಿಯುವ ಕುತೂಹಲ-ಎಲ್ಲವೂ ಸಮರಸವಾಗಿ ಬೆಸೆಯುತ್ತಿದ್ದ ಶಿಕ್ಷಣಕ್ರಮ ಅಲ್ಲಿ ರೂಪಿತವಾಗುತ್ತಿತ್ತು. "ದಿನನಿತ್ಯದ ಕಾರ್ಯಗಳನ್ನು ವೈಜ್ಞಾನಿಕವಾಗಿ ವಿಚಾರ ಮಾಡಿ ಕೈಗೊಳ್ಳುವುದೇ ನನ್ನ ಶಿಕ್ಷಣಕ್ರಮ ಎನ್ನುತ್ತಿದ್ದರು ಬಾಪೂ" ಇದಕ್ಕಾಗಿ ಶಿಕ್ಷಕ-ಶಿಕ್ಷಕಿಯರ ತರಬೇತಿಯೂ ಮುಖ್ಯವಾಗಿತ್ತು. ಶಿಕ್ಷಣಶಾಸ್ತ್ರದ ಪರಿಣಿತರು ಹೊಸಹೊಸ ಪ್ರಯೋಗಗಳನ್ನು ಮಾಡಲು ಸ್ಫೂರ್ತಿ ಪಡೆಯುತ್ತಿದ್ದರು. ಪ್ರಕೃತಿಯ ಜೀವಂತ ಪರಿಸರದ ಮಧ್ಯೆ ಮಾನವಶಿಶು ಏಕರಸವಾಗಿ ತನ್ನ ವಿಶಿಷ್ಟ ಶಕ್ತಿಯಾದ ಬುದ್ಧಿಯನ್ನು ಸರ್ವಜೀವಗಳ ನೆಮ್ಮದಿಗೆ ಬಳಸುವ ಕಲೆ ಜೀವನಶಿಕ್ಷಣ ಎಂದು ಬಾಪೂ ಅರಿತಿದ್ದರು. ಶಿಕ್ಷಣತಜ್ಞೆಯಾಗಿ ಇಪ್ಪತ್ತು ವರ್ಷಗಳಿಗೂ ಮೀರಿ ಶಿಕ್ಷಕವೃತ್ತಿಯನ್ನು ಮಾಡಿದ್ದ ಮಾರ್ಜೋರಿಸೈಕ್ಸ್‌ಗೆ ಗಾಂಧೀಜಿ ಮತ್ತು ರವೀಂದ್ರರ ಮನೋನಂದನ ಒಂದು ಹೊಸ ಸಂಶೋಧನೆಯಾಗಿಯೇ ಪರಿಣಮಿಸಿತು. ಆಶ್ರಮದ ಸರಳತೆ, ಅಲ್ಲಿನ ಜೀವನವಿಧಾನ, ಪ್ರಾರ್ಥನಾಸಭೆಗಳು, ಸ್ವಚ್ಛಸೌಂದರ್ಯ, ಆನಂದಾನುಭೂತಿ, ವೈಜ್ಞಾನಿಕ ಮನೋಧರ್ಮ ನಿರ್ಭಯ ಪ್ರಯೋಗಶೀಲತೆ ಎಲ್ಲವೂ ಆಕೆಯನ್ನು ಸಂಪೂರ್ಣವಾಗಿ ಸೂರೆಗೊಂಡವು. ಗಾಂಧೀಜಿಯೊಡನೆ ನಿಸ್ಸಂಕೋಚವಾಗಿ ಚರ್ಚಿಸಿ ತನ್ನ ಅನುಮಾನಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. "ನನ್ನದು ತಪ್ಪಾಗಿದ್ದರೆ

ದಯಮಾಡಿ ತಿಳಿಸು. ಯಾವುದೇ ಪ್ರಾಮಾಣಿಕ ವಿನಯಪೂರ್ಣ ಅಭಿಪ್ರಾಯವಿದ್ದರೂ ನಾನು ಅಂಗೀಕರಿಸುತ್ತೇನೆ" ಎಂದು ಬಾಪೂ ಆತ್ಮೀಯವಾಗಿ ನುಡಿದಾಗ ಅವರ ವಿಶಾಲ ಮನೋಧರ್ಮ ಕಂಡು ಮಾರ್ಜೊರಿ ಆಶ್ಚರ್ಯಚಕಿತರಾಗುತ್ತಿದ್ದರು. ಹಲವು ಕಾಲ ಸೇವಾಗ್ರಾಮದಲ್ಲಿ ಕಳೆದು, ಅನುಭವ ಪಡೆದು ರವೀಂದ್ರರ ಶಾಂತಿನಿಕೇತನದಲ್ಲಿ ಹೊಸ ಹುದ್ದೆಯನ್ನು ಅಂಗೀಕರಿಸಿದರು. ಶಾಂತಿನಿಕೇತನ ಆಕೆಯ ಅನ್ವೇಷಣೆಯಾಗಿದ್ದ ಜೀವನ ಸೌಂದರ್ಯ ಸಾಧನೆಯ ಪಥಕ್ಕೆ ಬೆಳಕು ತೋರಿತು.

ಶಾಂತಿನಿಕೇತನದ ಜೀವನ, ಅಲ್ಲಿನ ಪರಿಸರ, ಗುರುದೇವರ ವ್ಯಕ್ತಿತ್ವ ಅವರ ನಿಸ್ಸೀಮ ಮಾನವಪ್ರೇಮ ಮಾರ್ಜೊರಿಯನ್ನು ಹೆಜ್ಜೆ ಹೆಜ್ಜೆಯಾಗಿ ಭಾರತೀಯ ಸಂಸ್ಕೃತಿಯ ಆರಾಧಕಳನ್ನಾಗಿ ಮಾಡಿತು. ಗಾಂಧೀ ಪಥಕ್ಕೂ ರವೀಂದ್ರರ ಪ್ರಯೋಗಗಳಿಗೂ ಮೂಲಭೂತ ಆಧಾರ ಒಂದೇ ಎನಿಸಿತು. ದರಿದ್ರ ನಾರಾಯಣನ ಸೇವೆ ಇಬ್ಬರಿಗೂ ಪರಮವ್ರತವಾಗಿತ್ತು. ಗೀತಾಂಜಲಿಯ ಒಂದು ಪದ್ಯವನ್ನು ಮಾರ್ಜೊರಿ ಉದಹರಿಸಿದ್ದಾರೆ. ಭಗವಂತನ ಬಗ್ಗೆ ಕುರಿತು ಚಿಂತಿಸುತ್ತಾ ಠಾಕೂರರು

"ಇರುವನಲ್ಲಿ ಇಳೆಯ ಉಳುವವನ ಬಳಿಯಲ್ಲಿ !
ಅಗೋ ಅಲ್ಲಿ! ದಾರಿ ಮಾಡುವನು ಕಲ್ಲುಗಳ ಒಡೆಯುತ್ತ ಶ್ರಮಿಸುವಲ್ಲಿ ॥
ಬಿಸಿಲಿರಲಿ ಮಳೆಯಿರಲಿ ಅವರ ಎಡೆಬಿಡದೆ ನಿಂತಿಹನು
ಧೂಳಡರಿ ಮಲಿನವಾಗಿಹ ವಸ್ತ್ರವನೆ ಧರಿಸಿ" ಎಂದಿದ್ದಾರೆ.

ಸೌಂದರ್ಯೋಪಾಸನೆಯ ಶಾಂತಿನಿಕೇತನದ ಅವಳಿಯಾಗಿ ಜನಿಸಿದ ಶ್ರೀನಿಕೇತನ ವಿಶ್ವಭಾರತಿಗೆ ಪೂರ್ಣತೆಯ ರೂಪಕೊಟ್ಟಿತ್ತು. ಸ್ವಾವಲಂಬನೆ ಮತ್ತು ಶ್ರಮನಿಷ್ಠೆ ಅಲ್ಲಿನ ಗ್ರಾಮೀಣ ಯುವಕರ ಶಿಕ್ಷಣದಲ್ಲಿ ಪ್ರಧಾನವಾಗಿತ್ತು. ಗಾಂಧೀಜಿಯೇ ಒಮ್ಮೆ ಬರೆದಂತೆ "ಗುರುದೇವನೊಡನೆ ಭಿನ್ನಾಭಿಪ್ರಾಯದ ಕಾರಣವಾಗಿ ನಾನು

ಅವರೊಡನೆ ವಿವಾದ ಹುಡುಕಲು ಹೊರಟೆ, ಕೊನೆಗೆ ಯಾವ ಭೇದವನ್ನು ಕಾಣದೆ ವಿಸ್ಮಿತನಾದೆ... ನಮ್ಮಿಬ್ಬರ ಕಾರ್ಯವೂ ಪರಸ್ಪರ ಪೂರಕ ಎನ್ನುವುದು ಸ್ಪಷ್ಟ." ಮುಂದೆ ಒಂದು ಸಲ ಕವಿ ರವೀಂದ್ರರನ್ನು "ತನ್ನ ಕೊಳಲಿನ ಮಧುರಗಾನಕ್ಕೆ ಗೋಪಿಯರು ನರ್ತಿಸುವಂತೆ ಮಾಡಿದ ಕೃಷ್ಣನಂತೆ" ಎಂದು ಹೋಲಿಸಿ ತಾವು ಸೀತಾದೇವಿಯನ್ನು (ಚರಕ) ರಕ್ಷಿಸ ಹೊರಟ ಯೋಧನೆನಿಸಿದ ರಾಮಚಂದ್ರನಂತೆ ಎಂದರು ಗಾಂಧೀಜಿ. ಪ್ರಕೃತಿ ದೇವಿಯ ಲಾವಣ್ಯದಲ್ಲಿ ಲೀನವಾಗುವ ಕಲೆಗಾರನೂ ಆರ್ತರ ಸೇವೆಗಾಗಿ ಯೋಧನಾಗಿ ನಿಂತ ಸತ್ಯಾಗ್ರಹಿಯೂ ಒಂದು ಪೂರ್ಣತೆಯ ಎರಡು ಮುಖಗಳಂತಿದ್ದರು ಎಂದು ದೀನಬಂಧು ಆಂಡ್ರೂಸರು ವರ್ಣಿಸಿದುದನ್ನು ಮಾರ್ಜೊರಿ ಹೃತ್ಪೂರ್ವಕವಾಗಿ ಅನುಮೋದಿಸಿದರು.

ಶಾಂತಿನಿಕೇತನಕ್ಕೆ ಬಂದು ನಿಂತ ವಿಖ್ಯಾತ ವಿದ್ವಾಂಸ ಶ್ರೀ ಗುರುದಯಾಲ್ ಮಲ್ಲಿಕ್ ಗಾಂಧೀಜಿ ಮತ್ತು ರವೀಂದ್ರರಿಬ್ಬರನ್ನೂ ತಮ್ಮ ಗುರುಗಳೆಂದು ಅಂಗೀಕರಿಸಿದ್ದವರು. ಮಾರ್ಜೊರಿಗೂ ಅವರು ಆತ್ಮೀಯರಾದರು. ಆತ ತನ್ನದೇ ಆದ ಮಣ್ಣಿನ ಗುಡಿಸಿಲಿನಲ್ಲಿ ಸಂತಾಲ ಗಿರಿಜನರ ರೀತಿಯಲ್ಲಿ ಸರಳ ಕಲಾತ್ಮಕ ಋಷಿಜೀವನವನ್ನು ರೂಪಿಸಿಕೊಂಡಿದ್ದರು. ಸ್ಫಟಿಕ ಸ್ವಚ್ಛತೆ ಅವರ ಒಳಗು ಹೊರಗನ್ನು ತುಂಬಿರುತ್ತಿತ್ತು. ರವೀಂದ್ರರ ಗೀತಾಂಜಲಿಯ "ದೇವಾ! ನನ್ನ ಸ್ವಾರ್ಥಕಣದಲ್ಲಿ ಕಣವಾಗಿ ಕರಗಿ ನನ್ನ ಸರ್ವಸ್ವವನ್ನೂ ನಿನಗರ್ಪಿಸುವಂತೆ ಕರುಣಿಸು!" ಎಂಬ ಧ್ಯೇಯವಾಕ್ಯ ಅವರ ಗೋಡೆಯನ್ನಲಂಕರಿಸಿತ್ತು.

ಸೇವಾಗ್ರಾಮ ಮತ್ತು ಶಾಂತಿನಿಕೇತನಗಳ ಮಧ್ಯೆ ಮಾರ್ಜೊರಿ ಸೈಕ್ಸ್ ಧಾರಾಳವಾಗಿ ಓಡಾಡುತ್ತಾ ಎರಡು ಆಶ್ರಮಗಳಲ್ಲೂ ಆತ್ಮೀಯ ಬಂಧುತ್ವ ಬೆಳೆಸಿಕೊಂಡರು. ಗುರುಗಳಿಬ್ಬರಲ್ಲೂ ವಿಶ್ವಾಸಗಳಿಸಿ ಬಾಳಿನ ಧ್ಯೇಯಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡರು. ಶಿಕ್ಷಣ ಕ್ಷೇತ್ರವೇ ಆಕೆಯ ಪ್ರಧಾನ ಕಾರ್ಯರಂಗ ಗಾಂಧೀಜಿಯ "ನಯೀತಾಲೀಮ್" (ನೂತನ

ಶಿಕ್ಷಣ ಪದ್ಧತಿ) ಆಕೆಯನ್ನು ಸೆರೆಹಿಡಿಯಿತು. ಶಾಂತಿನಿಕೇತನದಲ್ಲಿದ್ದಾಗ ಸಿಲೋನಿನವರಾದ ಇ. ಡಬ್ಲ್ಯೂ. ಆರ್ಯನಾಯಕಮ್ ಅವರೂ ಅಲ್ಲಿ ರವೀಂದ್ರರ ಆಪ್ತಶಿಷ್ಯರಾಗಿದ್ದರು. ಶಿಕ್ಷಣತಜ್ಞರೂ ಮೇಧಾವಿಗಳೂ ಆಗಿದ್ದ ಶ್ರೀ ಆರ್ಯನಾಯಕಮ್ ಗಾಂಧೀಜಿಯ ಶಿಕ್ಷಣ ಯೋಜನೆಗಳಿಗೆ ಮಾರುಹೋದರು. ಶಾಂತಿನಿಕೇತನದಲ್ಲಿರುವಾಗಲೆ ಮತ್ತೊಬ್ಬ ಶಿಕ್ಷಣತಜ್ಞೆ ಶ್ರೀಮತಿ ಆಶಾದೇವಿಯುವರೊಡನೆ ಅವರ ವಿವಾಹವಾಯಿತು. ಪ್ರೊ. ಅಧಿಕಾರಿ ಆಶಾದೇವಿಯ ತಂದೆ. ಈ ಸಿಲೋನೀ-ಬಂಗಾಳೀ ಬಾಂಧವ್ಯದ ವಿವಾಹವನ್ನು ಗುರುದೇವರ ಸನ್ನಿಧಿಯಲ್ಲೆ ನೆರವೇರಿಸಲಾಯಿತು. ಮಾರ್ಜೊರಿ ಸೈಕ್ಸ್‌ಗೆ ಈ ವಿದ್ವಾಂಸ ದಂಪತಿಗಳ ನಿಕಟ ಪರಿಚಯವಾಯಿತು. ಮುಂದೆ ಆರ್ಯನಾಯಕಮ್ ಮತ್ತು ಆಶಾದೇವಿ ಗಾಂಧೀಜಿಯ ಆಹ್ವಾನದ ಮೇಲೆ ನಯೀತಾಲೀಮ್ ಪ್ರಯೋಗಗಳ ಮಹಾನಿರ್ದೇಶಕರಾಗಿ ಸೇವಾಗ್ರಾಮಕ್ಕೆ ಬಂದು ನೆಲೆಸಿದರು. ಮಾರ್ಜೊರಿಸೈಕ್ಸ್ ಅವರ ಸೇವೆಯನ್ನೂ ಗಾಂಧೀಜಿ ಕೇಳಿ ಪಡೆದುಕೊಂಡರು.

ಸೇವಾಗ್ರಾಮದಲ್ಲಿದ್ದಾಗ ಮಾರ್ಜೊರಿಗೆ ಈ ಅಹಿಂಸಾತಪಸ್ವಿ ತನ್ನ ಸಂಗಡಿಗರಿಗೆ ಅತ್ಯಂತ ಚಿಕ್ಕ ವಿಷಯದಲ್ಲೂ ಹೇಗೆ ಮೌಲ್ಯಪ್ರಜ್ಞೆ ಜಾಗೃತವಾಗಿರಬೇಕೆಂಬ ಪಾಠ ಕಲಿಸುತ್ತಿದ್ದರೆಂದು ಅನುಭವವಾಯಿತು. ಆಗ ಮೀರಾಬಹೆನ್ ಅವರು ಗಾಂಧೀಜಿಯ ಬಳಿ ಇರಲಿಲ್ಲ. ರೋಮೇನ್ ರೋಲಾ ಅವರ ಪತ್ರ ಬಂದಿತ್ತು. ಅವರು ಯಾವಾಗಲೂ ಫ್ರೆಂಚ್ ಭಾಷೆಯಲ್ಲೇ ಬರೆಯುತ್ತಿದ್ದರು. ಭಾಷಾಂತರಿಸಲು ಮಾರ್ಜೊರಿ ಸೈಕ್ಸ್ ಅವರನ್ನು ಬಾಪು ಕೇಳಿಕೊಂಡರು. ಆಕೆಗೆ ತುಂಬ ಸಂತೋಷವಾಯಿತು. ಸ್ವಲ್ಪ ಭಯದಿಂದಲೇ ಮೊದಲ ಬಾರಿಗೆ ಈ ಗುರುವಿನ ಬಳಿ ಕುಳಿತು ಪತ್ರದ ಭಾಷಾಂತರಕ್ಕೆ ತೊಡಗಿದರು. ಮಧ್ಯದಲ್ಲಿ ಆಕೆಯ ಪೆನ್ನಿನ ಶಾಯಿ ಮುಗಿದುಹೋಯಿತು. ಇನ್ನೂ ಹೊಸಬಳಾದ್ದರಿಂದ ಮತ್ತು ಹಿಂದಿಭಾಷೆ ಗೊತ್ತಿಲ್ಲದಿದ್ದುದರಿಂದ ಅಲ್ಲಲಿದ್ದವರನ್ನು ಕೇಳಿ ಬೇರೆ ಪೆನ್ನನ್ನು ಪಡೆಯಲು ಸಂಕೋಚವಾಯಿತು. ಕೊನೆಯ ವಾಕ್ಯಗಳನ್ನು

ಅಲ್ಲಿದ್ದ ಪೆನ್ಸಿಲ್‌ನಲ್ಲೇ ಬರೆದು ಮುಗಿಸಬೇಕಾಯಿತು. ಆ ಬರಹ ಸ್ವಲ್ಪ ಮಸುಕಾಯಿತು. ಗಾಂಧೀಜಿ ಸೈಕ್ಸ್ ಅವರನ್ನು ವಂದಿಸಿ, ನಗುನಗುತ್ತಲೇ ಹೀಗೆಂದರು. "ಇಲ್ಲೇಕೆ ಶಾಹಿಬರಹ ಇಲ್ಲ! ನೋಡಿ ಈ ಬರಹದಿಂದ ನನ್ನ ಕಣ್ಣಿಗೆ ಎಂಥ ಹಿಂಸಾಚಾರವಾಗುತ್ತದೆ ಎಂದು ಬಲ್ಲಿರಾ?" ಮರ್ಜೋರಿಗಾಗ ಅನಿಸಿತು "ಸಮಯದಲ್ಲಿ ಸಂಕೋಚದಿಂದ ಹಿಂತೆಗೆಯುವುದೂ ಒಮ್ಮೊಮ್ಮೆ ಹೀಗೆ ಹಿಂಸೆಗೆ ಕಾರಣವಾಗುತ್ತದೆ" ಎಂದುಕೊಂಡರು.

1937ರಲ್ಲಿ ಬ್ರಿಟಿಷ್ ಪ್ರಾಂತಗಳಲ್ಲಿ ಚುನಾವಣೆ ನಡೆದು ಕಾಂಗ್ರೆಸ್ ಪ್ರಚಂಡ ಜಯಗಳಿಸಿತು. ಆ ಕೂಡಲೇ ಗಾಂಧೀಜಿ ಅದುವರೆಗೆ ಕೆಲವೇ ಕೇಂದ್ರಗಳಿಗೆ ಸೀಮಿತವಾಗಿದ್ದ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ರಾಷ್ಟ್ರವ್ಯಾಪಿಗೊಳಿಸಿದರು. ಖಾದಿ ಗ್ರಾಮೋದ್ಯೋಗಗಳು, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ ಮತ್ತು ಮೂಲ ಶಿಕ್ಷಣ ಪದ್ಧತಿಗಳನ್ನು ಎಲ್ಲ ಸರ್ಕಾರಗಳೂ ಅಂಗೀಕರಿಸಿ ಶಾಸನಗಳನ್ನು ಮಾಡುತ್ತಿದ್ದವು. ಆರ್ಯನಾಯಕಮ್-ಆಶಾದೇವಿ ನೇತೃತ್ವದಲ್ಲಿ ಒಂದು ಸಂಪೂರ್ಣ ಶ್ರೇಣೀಕೃತ ಶಿಕ್ಷಣಕ್ರಮ ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಸಿದ್ಧವಾಗಿತ್ತು. ಪ್ರಾಂತ ಸರ್ಕಾರಗಳ ಶಿಕ್ಷಣಾಧಿಕಾರಿಗಳು, ಮುಖ್ಯೋಪಾಧ್ಯಾಯರುಗಳು, ಖಾಸಗಿ ಶಿಕ್ಷಣ ಸಂಸ್ಥೆಗಳವರು ತಂಡೋಪತಂಡವಾಗಿ ಸೇವಾಗ್ರಾಮಕ್ಕೆ ಬಂದು ಹಂತಹಂತವಾಗಿ ತರಬೇತಿ ಪಡೆದರು. ಮಾರ್ಜೋರಿ ಸೈಕ್ಸ್ ಮದ್ರಾಸಿನಲ್ಲಿ ಅದೇ ಪ್ರಯೋಗಗಳನ್ನು ಆರಂಭಿಸಿ ನಡೆಸುತ್ತಿದ್ದರು. ಆ ಕಾಲಕ್ಕೆ ಸಿ. ರಾಜಗೋಪಾಲಾಚಾರಿ ಮದ್ರಾಸಿನ ಮುಖ್ಯಮಂತ್ರಿ ಅವರೇ ಇತರರಿಗೆ ಮಾದರಿ. ಮಾರ್ಜೋರಿ ಕೂಡ ರಾಜಾಜಿ ಅವರ ಸಂಪರ್ಕಕ್ಕೆ ಬಂದರು. ಸೇಲಮ್ ಬಳಿಯ ಅವರ ತಿರುಚಂಗೂಡು ಖಾದಿ ಕೇಂದ್ರಕ್ಕೆ ಭೇಟಿ ನೀಡಿ ಕಾರ್ಯನಿರತರಾದರು. ಆನಂತರ ಶಾಂತಿನಿಕೇತನದಲ್ಲಿರುವಾಗಲೂ ಬಂಗಾಳ ಮತ್ತು ಬಿಹಾರಗಳಲ್ಲಿನ ಬೃಹತ್‌ಪ್ರಮಾಣದ ಶಾಲಾ

ಪ್ರಯೋಗಗಳೊಡನೆ ಮಾರ್ಜೋರಿ ಸೈಕ್ಸ್ ನಿಕಟವಾಗಿ ಕ್ರಿಯಾತ್ಮಕವಾಗಿ ಪಾಲುಗೊಳ್ಳುತ್ತಿದ್ದರು. ರವೀಂದ್ರರೂ ಈ ಕಾರ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರು. ಗ್ರಾಮಭಾರತದ ಪೂರ್ಣ ಪುನರುತ್ಥಾನವೇ ನಿಜವಾದ ಸ್ವರಾಜ್ಯ ಎಂದು ಭಾರತದ ಸ್ವಾತಂತ್ರ್ಯಯೋಧರು ನಂಬಿ ಶ್ರದ್ಧೆಯಿಂದ ರಚನಾತ್ಮಕ ಕ್ರಾಂತಿಯ ಬುನಾದಿ ಸಿದ್ಧಮಾಡುತ್ತಿದ್ದರು.

1942–44ರಲ್ಲಿ ಸೆರೆಮನೆಯಲ್ಲಿದ್ದ ಕಾಲಕ್ಕೆ ಗಾಂಧೀಜಿ ಅತ್ಯಂತ ಗಂಭೀರವಾಗಿ ರಾಷ್ಟ್ರದ ಶಿಕ್ಷಣಕ್ರಮದ ಸಮಗ್ರ ಪರಿವರ್ತನೆಯ ಬಗ್ಗೆ ಆಲೋಚಿಸುತ್ತಿದ್ದರು. ಅನೇಕ ಶಿಕ್ಷಣತಜ್ಞರೊಡನೆ ಚರ್ಚಿಸಿ 'ನಯೀತಾಲೀಮ್'ನ ನಕ್ಷೆಯನ್ನು ತಯಾರಿಸಿ ಕೊಟ್ಟರು. ಡಾ. ಝಕೀರ್ ಹುಸೇನ್ ಅವರ ನೇತೃತ್ವದಲ್ಲಿ ಒಂದು ತಜ್ಞರ ಸಮಿತಿ ನೇಮಿತವಾಗಿ 'ವಾರ್ಧಾ ಶಿಕ್ಷಣ ಯೋಜನೆ' ಸಿದ್ಧಮಾಡಿತು. ಮಾರ್ಜೋರಿ ಸೈಕ್ಸ್ ಈ ಎಲ್ಲ ಚಿಂತನ ಅಭಿಕ್ರಮಗಳಲ್ಲೂ ಸಕ್ರಿಯವಾಗಿ ಪಾಲ್ಗೊಂಡು ತಜ್ಞರ ಜೊತೆ ತಜ್ಞರೆನಿಸಿಕೊಂಡರು. ಈ ಬಗ್ಗೆ ಅನೇಕ ಸೇವಾನಿರತ ಶಿಕ್ಷಕ ಶಿಕ್ಷಕಿಯರು ಗಾಂಧೀಪ್ರಣೀತ ಜೀವನಶಿಕ್ಷಣ ಸಿದ್ಧಾಂತಗಳಿಗೆ ಸಂಪೂರ್ಣ ಪರಿವರ್ತಿತರಾದರು.

ಸೇವಾಗ್ರಾಮದಲ್ಲಿ ಅನೇಕ ಸ್ವಯಂಸೇವಕರು ನಿಂತು ಸುತ್ತಲಿನ ಹಳ್ಳಿಗಳಲ್ಲಿ ಜೀವನಶಿಕ್ಷಣ ಪ್ರಯೋಗಗಳನ್ನು ಮಾಡತೊಡಗಿದರು. ಅವರಲ್ಲಿ ಶ್ರೀಮತಿ ಶಾಂತ ನರೂಲ್ಕರ್ ಅತ್ಯಂತ ಉತ್ಸಾಹದಿಂದ ಗ್ರಾಮೀಣ ಮಕ್ಕಳಿಗೆ ಶಾಲೆ ಪ್ರಾರಂಭಿಸಿದ್ದರು. ಮಾರ್ಜೋರಿ ಸೈಕ್ಸ್‌ಗೆ ಈಕೆ ಅಮೂಲ್ಯ ಸಂಗಾತಿಯಾದರು. ‘‘ಮಕ್ಕಳಿಗೆ ಗೊತ್ತಿರುವ ವಿಷಯಗಳಿಂದಲೇ ಪ್ರಾರಂಭಿಸಿ; ಅವರ ಸುತ್ತಲೂ ಲಭ್ಯವಿರುವ ಸಾಮಗ್ರಿಗಳಿಂದಲೇ ನಿರ್ಮಾಣ ಮಾಡಿ" ಎಂಬ ಸೂತ್ರವಾಕ್ಯ ಅವರಿಗೆ ಮಾರ್ಗದರ್ಶಿಯಾಗಿತ್ತು. ಅನೇಕ ಹೊಸಹೊಸ ಪ್ರಯೋಗಗಳಲ್ಲಿ ಶಾಂತಾ ಯಶಸ್ವಿಯಾಗಿದ್ದರು. ಮರ್ಜೋರಿ ತಮ್ಮ ಬರಹಗಳಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಸ್ವಚ್ಛತೆ, ಸ್ವಾವಲಂಬನೆ, ಆರೋಗ್ಯ,

ಸಹಕಾರ, ವ್ಯವಸಾಯ, ಪ್ರಕೃತಿ ಪಾಠಗಳು ಎಲ್ಲದರಲ್ಲೂ ಗ್ರಾಮ ಸಮಾಜದ ಮಕ್ಕಳು ನಿರೀಕ್ಷೆಗಿಂತಲೂ ಹೆಚ್ಚು ಬುದ್ಧಿವಂತಿಕೆಯಿಂದ ನಡೆದುಕೊಳ್ಳುತ್ತಿದ್ದರು ಎಂದು ಅವರು ಸ್ಮರಿಸಿದ್ದಾರೆ.

1944ರಲ್ಲಿ ಮಾರ್ಜೊರಿ ಸೈಕ್ಸ್ ಮತ್ತು ಜಹಂಗೀರ್ ಪಟೇಲ್ ಸೇವಾಗ್ರಾಮದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಗಾಂಧೀಮಾರ್ಗದ ಶ್ರದ್ಧೆಯಿಂದ ಸಹಕಾರ್ಯಕರ್ತರಾಗಿ ಈ ಇಬ್ಬರು ಕೇಂಬ್ರಿಡ್ಜ್ ಶಿಕ್ಷಿತ ಮೇಧಾವಿಗಳೂ ಒಂದು ಹೊಸ ಉತ್ಸಾಹದ ಕ್ಷೇತ್ರವನ್ನೇ ಸೃಷ್ಟಿಸಿದರು. ಸ್ವಾತಂತ್ರ್ಯ, ಸ್ವರಾಜ್ಯ ಸಾಂಸ್ಕೃತಿಕ ವಿಕಾಸಗಳು ಹೊಸ ಅರ್ಥಗಳನ್ನೇ ಅಳವಡಿಸಿಕೊಂಡವು. ಬಾಂಧವ್ಯಗಳಲ್ಲಿನ ಮಾನವೀಯ ಮೌಲ್ಯಗಳು ಸ್ಪಷ್ಟವಾದವು. ಸೇವಾಗ್ರಾಮ ಆ ಸಮಯದಲ್ಲಿ ಜೀವನೋತ್ಸಾಹದಿಂದ ತುಂಬಿ ತುಳುಕುತ್ತಿತ್ತು. ಅವೆಲ್ಲದರ ಕೇಂದ್ರ ಸ್ಫೂರ್ತಿಚಿಲುಮೆಯಾಗಿ ಸ್ವತಃ ಗಾಂಧೀಜಿಯೇ ಅಲ್ಲಿ ಕ್ರಿಯಾಶೀಲರಾಗಿದ್ದರು. ದಿನನಿತ್ಯದ ಪ್ರಾರ್ಥನಾಸಭೆಯಲ್ಲಿ ಮಾರ್ಜೊರಿ ಒಂದಲ್ಲ ಒಂದು ಕ್ರೈಸ್ತಧರ್ಮದ ಪ್ರಸಿದ್ಧ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಕ್ವೇಕರ್ ಪಂಥದವರಿಗೂ ಗಾಂಧೀವಾದಿಗಳಿಗೂ ನಿಕಟವಾದ ತಾತ್ವಿಕ ಸಾಮ್ಯವಿರುವುದನ್ನು ಕಂಡುಕೊಳ್ಳುತ್ತಿದ್ದರು. ಆಶ್ರಮದಲ್ಲಿ ಡಾ. ಸೌಂದರಮ್ ರಾಮಚಂದ್ರನ್, ಶ್ರೀ ಕನುಗಾಂಧಿ, ಶ್ರೀಮತಿ ಅಭಾ ಮತ್ತು ಮನು ಗಾಂಧಿ ಇವರೆಲ್ಲರೂ ಗಾಂಧೀ ಬಳಗದಲ್ಲಿದ್ದರು. ಮಾರ್ಜೊರಿ ಸೈಕ್ಸ್ ಅವರೆಲ್ಲರಿಗೂ ಆತ್ಮೀಯ ಸಹಕಾರ್ಯಕರ್ತೆಯೆನಿಸಿದ್ದರು. ಸುಂದರವಾದ ಪರಿಸರ, ಸಂಯಮ ಜೀವನದ ಗಾಂಭೀರ್ಯ, ವಾತ್ಸಲ್ಯದ ಸೌರಭ, ಪ್ರೇಮಪೂರ್ಣ ಸ್ನೇಹ ಎಲ್ಲವೂ ಮಾರ್ಜೊರಿಯವರ ವ್ಯಕ್ತಿತ್ವವನ್ನೇ ವಿಕಾಸಗೊಳಿಸಿದವು. ಸತ್ಯ, ಪ್ರೇಮ, ಕರುಣೆಗಳಿಗೆ ಬಾಳಿನಲ್ಲಿ ಚಾಲನೆಯ ಶಕ್ತಿ ಮೈಗೂಡಿಕೊಂಡಿತು ಎಂದಿದ್ದಾರೆ.

ಅದೇ ಕಾಲಕ್ಕೆ ಮಾರ್ಜೊರಿ ದೀನಬಂಧು ಸಿ. ಎಫ್. ಆಂಡ್ರೂಸರ ಜೀವನ ಚರಿತ್ರೆ ಬರೆಯಲು ನಿಯೋಜಿತರಾದರು. ಆಂಡ್ರೂಸರು ಗಾಂಧೀಜಿಗೆ ಬರೆದ ಪತ್ರಗಳ ಕಡತ ಸಬರಮತಿ ಆಶ್ರಮದಲ್ಲಿತ್ತು.

ಅವುಗಳನ್ನೆಲ್ಲ ಪರಿಶೀಲಿಸಿ ತನ್ನ ಸಾಮಗ್ರಿ ಸಿದ್ಧಪಡಿಸಿಕೊಳ್ಳುವಂತೆ ಗಾಂಧೀಜಿಯೇ ಆಕೆಯನ್ನು ಅಹಮದಾಬಾದಿನ ಸಬರಮತಿ ಆಶ್ರಮಕ್ಕೆ ಒಂದು ಪರಿಚಯ ಪತ್ರ ಕೊಟ್ಟು ಕಳುಹಿಸಿದರು. ಅತ್ಯಂತ ರಹಸ್ಯವೆನಿಸಿದ್ದ ವೈಯಕ್ತಿಕ ಪತ್ರಗಳನ್ನು ನೋಡಲು ಮಾರ್ಜೊರಿಗೆ ಪರವಾನಿಗೆ ಸಿಕ್ಕಿತ್ತು. ಆಕೆಯನ್ನು ಗಾಂಧೀಜಿ ಅಷ್ಟು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಒಮ್ಮೆ ಆಂಡ್ರೂಸರಿಗೆ ಬರೆಯುತ್ತ ತಮ್ಮನ್ನು ತಾವೇ ಸಂಬೋಧಿಸಿ ಗಾಂಧೀಜಿ ಹೀಗೆ ಬರೆದಿದ್ದರು "ನನಗೆ ತಿಳಿದ ಮಟ್ಟಿಗೆ ಈ ಗಾಂಧೀ ತನ್ನ ಬಾಳಿನಲ್ಲಿ ಎಂದೂ ಯಾವ ಬಗೆಯ ರಹಸ್ಯ ಯೋಜನೆಗಳನ್ನೂ ಹೊಂದಿರಲಿಲ್ಲವೆಂಬುದನ್ನು ಆಣೆಯಿಟ್ಟು ಹೇಳಬಲ್ಲೆ" ಈ ಸಂಪೂರ್ಣ ಬಹಿರಂಗ ಮನೋಧರ್ಮ ರಾಜಕಾರಣಿಗಳಿಗೆ ಅನೇಕ ವೇಳೆ ಹಿಡಿಸುತ್ತಿರಲಿಲ್ಲ. ಪ್ರಾಮಾಣಿಕತೆಯನ್ನು ಒಂದು ರಾಜಕೀಯ ಪಿತೂರಿ ಎಂದೇ ಭಾವಿಸಿದವರುಂಟು; ಎಂದು ಬರೆದಿದ್ದಾರೆ ಮಾರ್ಜೊರಿ ಸೈಕ್ಸ್. ಎಲ್ಲೂ ಯಾರನ್ನೂ ಸಂಶಯ ದೃಷ್ಟಿಯಿಂದ ನೋಡಿದವರೇ ಅಲ್ಲ ಬಾಪೂ. ಶತೃ ಎಂದುಕೊಳ್ಳುವವರೊಂದಿಗೂ ಬಿಚ್ಚುಮನಸ್ಸಿನಿಂದ ಎಲ್ಲವನ್ನೂ ತೆರೆದಿಟ್ಟುಬಿಡುತ್ತಿದ್ದರು.

ರವೀಂದ್ರರು ನಿಧನರಾಗುವ ಮುನ್ನ 1940ರಲ್ಲಿ ಗಾಂಧೀಜಿ ಅವರನ್ನು ಭೇಟಿಯಾದಾಗ "ಶಾಂತಿನಿಕೇತನವನ್ನು ನಿಮ್ಮ ಮಡಿಲಿಗೆ ಹಾಕುತ್ತಿದ್ದೇನೆ. ಅದನ್ನು ರಕ್ಷಿಸುವ ಭಾರವನ್ನು ಯೋಗ್ಯರ ಕೈಗೆ ಕೊಡುತ್ತಿದ್ದೇನೆ ಎಂಬ ಸಮಾಧಾನದಿಂದ ಕೊನೆಯುಸಿರೆಳೆಯುತ್ತಿದ್ದೇನೆ" ಎಂದಿದ್ದರು. ಗಾಂಧೀಜಿಯೂ ಅಂಗೀಕರಿಸಿದ್ದರು. ಅಂತೆಯೇ 1945ರಲ್ಲಿ ಶಾಂತಿನಿಕೇತನಕ್ಕೆ ಬಂದಾಗ ಮಾರ್ಜೊರಿ ಸೈಕ್ಸ್ ಅಲ್ಲಿ ಉಪಸ್ಥಿತರಿದ್ದರು. ರವೀಂದ್ರರ ಆತ್ಮೀಯ ಬಾಂಧವ್ಯಗಳನ್ನೂ ಇಬ್ಬರಿಗೂ ಸಮಾನವಾಗಿದ್ದ ಆದರ್ಶಗಳನ್ನೂ ಕುರಿತು ಗಾಂಧೀಜಿ ಶಾಂತಿನಿಕೇತನದ ಸದಸ್ಯರೆಲ್ಲರೊಡನೆ ಮನಬಿಚ್ಚಿ ಮಾತುಕತೆ ನಡೆಸಿದರು. "ಗುರುದೇವರ ಸಂದೇಶ ಇಡೀ ಮಾನವ ಕುಲಕ್ಕೆ ಅನ್ವಯವಾಗುವಂತಹುದು.

ಭಾರತೀಯ ಸಮಗ್ರ ಸಮುದಾಯದ ಪ್ರತಿನಿಧಿಯಾಗಿದ್ದರು. ದೀನದಲಿತರೊಡನೆ ಏಕರಸವಾಗಿ ಬಾಳಿ ಬೆಳಗಿದರು. ಅವರ ಸಾಧನಾಪಥ ಮಾನವಕೋಟಿಯ ದಾಸ್ಯವಿಮೋಚನೆ. ಆ ಗುರಿ ಸಾಧಿಸುವ ಕಾಯಕವೇ ಅವರಿಗೆ ಶ್ರದ್ಧಾಂಜಲಿಯಾಗಬೇಕು" ಎಂದರು.

ಸಾಮಾಜಿಕ ಕ್ರಾಂತಿಯನ್ನು ಸಾಧಿಸುವುದು ಹೇಗೆ ಎಂಬ ಬಗ್ಗೆ ವಿಫುಲವಾದ ಚರ್ಚೆಯಾಯಿತು. ಗಾಂಧೀಜಿ ಅಂದರು:-

"ರಾಜಕೀಯ ಕ್ರಾಂತಿಗಿಂತಲೂ ಸಾಮಾಜಿಕ ಕ್ರಾಂತಿ ಸಾಧಿಸುವುದು ಕಠಿಣ. ಆದರೆ ಸಾಮಾಜಿಕ ಪರಿವರ್ತನೆಯಾಗದೆ ಭಾರತದ ಭವಿಷ್ಯ ಹೆಚ್ಚು ಸಂತೋಷದಾಯಕವಾಗದು. ಈ ಪರಿವರ್ತನೆಗಿರುವುದು ಒಂದೇ ರಾಜಮಾರ್ಗ. ನಮ್ಮ ನಮ್ಮ ಜೀವನದ ಪ್ರತಿಯೊಂದು ವಿವರದಲ್ಲೂ ನೂತನ ಸಮಾಜದ ಆದರ್ಶವನ್ನು ಅಭ್ಯಾಸ ಮಾಡುತ್ತ ಸಾಗುವುದು... ಮರಳಿಯತ್ನವ ಮಾಡು, ಮರಳಿ ಯತ್ನವ ಮಾಡು" – ಇದೇ ಬೀಜ ಮಂತ್ರ. ನಾನು ಸೋತೆ ಎಂದುಕೊಳ್ಳಬಾರದು. ಜನತೆ ನಿಷ್ಪ್ರಯೋಜಕರು ಎಂದು ಭಾವಿಸಬಾರದು. ನಿಮ್ಮ ಕಡೆಗೆ ಅವರು ಸ್ಪಂದಿಸದೇ ಹೋದಲ್ಲಿ ಅದು ನಿಮ್ಮ ವಿಫಲತೆಯೇ ಹೊರತು ಅವರದಲ್ಲ."

ಸಮಾಜಸೇವಕರ ಪ್ರಾಮಾಣಿಕ ತಪಶ್ಚರ್ಯೆಯೇ ಎಲ್ಲ ಸೃಜನಾತ್ಮಕ ಪರಿವರ್ತನೆಗಳ ಮೂಲ ಎಂಬುದನ್ನು ಗಾಂಧೀಜಿ ಒತ್ತಿಹೇಳುತ್ತಿದ್ದರು. ಪ್ರೇಮಪೂರ್ವಕ ಸೇವೆಯೊಂದೇ ಸಮಾಜ ಜೀವನದ ಶಕ್ತಿಚಿಲುಮೆ. ಅಹಿಂಸೆಯಲ್ಲಿ ಶ್ರದ್ಧೆ ಇಲ್ಲದೆ ಈ ಸೇವೆ ನಿಷ್ಫಲವಾಗುತ್ತದೆ.

ಎರಡನೇ ಮಹಾಯುದ್ಧದ ಜ್ವಾಲೆ ದೇಶದಲ್ಲೆಲ್ಲ ಹರಡಿತ್ತು. ಭಾರತ ಸ್ವಾತಂತ್ರ್ಯ ಬೇಡಿಕೆಯೂ ಪ್ರಚಂಡ ಶಕ್ತಿಗೂಡಿಕೊಳ್ಳುತ್ತಿತ್ತು. ಕೊನೆಗೊಮ್ಮೆ ಹಿರೋಷಿಮಾದ ಅಣುಬಾಂಬು ಆಸ್ಫೋಟ ದುರಂತದಿಂದ ಯುದ್ಧ ಕೊನೆಗೊಂಡಿತು. ಸಾಮ್ರಾಜ್ಯವಾದಿಗಳು ದೇಶದ ವಿಭಜನೆಯ ದುರ್ಘಟನೆಗೆ ಪ್ರೋತ್ಸಾಹ ನೀಡುತ್ತಾ ಅನಾವಶ್ಯಕವಾಗಿ ಸ್ವಾತಂತ್ರ್ಯದ

ಮಾತುಕತೆಗಳನ್ನು ಲಂಬಿಸುತ್ತಾ ಬಂದರು. ಅಹಿಂಸಾತ್ಮಕ ಸಮರದ ದುರ್ಲಾಭ ಪಡೆಯಲೆತ್ನಿಸಿದರು. ಅನುನಯದ ವಿಶ್ವಾಸಪೂರ್ಣ ಚರ್ಚೆಗಳೆಲ್ಲ ವಿಫಲವಾದವು. 1942ರ ಕ್ವಿಟ್ ಇಂಡಿಯಾ ಚಳುವಳಿ ಆಸ್ಫೋಟಿಸಿತ್ತು. ಆ ಕಾಲಕ್ಕೆ ಮಾರ್ಜೋರಿ ಸೈಕ್ಸ್ ಇಂಗ್ಲೆಂಡಿನಲ್ಲಿದ್ದರು. ಸಿ. ಎಫ್. ಆಂಡ್ರೂಸರ ಜೀವನ ಕಥೆಗಾಗಿ ಸಾಮಗ್ರಿಯನ್ನು ಸಂಶೋಧಿಸುತ್ತಾ ಹಲವಾರು ಮಿತ್ರರನ್ನು ಸಂದರ್ಶಿಸಿದರು. ಕ್ವೇಕರ್ ಪಂಥದ ಹಲವು ಪ್ರಮುಖ ಪ್ರಚಾರಕರೂ, ಲೇಬರ್ ಪಕ್ಷದ ಕೆಲವು ಪಾರ್ಲಿಮೆಂಟ್ ಸದಸ್ಯರೂ, ಇಂಡಿಯಾ ಲೀಗ್‌ನಂತಹ ಮುಖ್ಯ ಸಂಸ್ಥೆಗಳೂ ಆಗ ಭಾರತದ ಸ್ವಾತಂತ್ರ್ಯದ ಪರವಾಗಿ ವಾದಿಸುತ್ತಿದ್ದವು. ಮಾರ್ಜೋರಿ ಸೈಕ್ಸ್ ಈ ಸಾರ್ವಜನಿಕಾಭಿಪ್ರಾಯಕ್ಕೆ ಪೋಷಕವಾಗಿ ಗಾಂಧೀಜಿಯ ಪ್ರಾಮಾಣಿಕ ಸ್ನೇಹಪರ ಉದ್ದೇಶಗಳನ್ನು ವಿವರಿಸುತ್ತಾ ಹೇಗೆ ಅವರು ಇಂಗ್ಲೆಂಡಿಗೂ ಉಪಕಾರ ಮಾಡಬಯಸುತ್ತಾರೆ ಎಂದು ತಿಳಿಸಿದರು. 1947ರ ಹೊತ್ತಿಗೆ ಭಾರತಕ್ಕೆ ಹಿಂತಿರುಗಿ ಬಂದರು. ಅವರು ಬರೆದ ಶ್ರೀ ಆಂಡ್ರೂಸರ ಜೀವನ ಚರಿತ್ರೆಗೆ ಗಾಂಧೀಜಿಯೇ ಒಂದು ಚಿಕ್ಕ ಮುನ್ನುಡಿ ಬರೆದರು. 8-12-1947ರಲ್ಲಿ ಬರೆದು ಕೊಟ್ಟ ಈ ನಾಲ್ಕು ವಾಕ್ಯಗಳಲ್ಲಿ ಆಂಡ್ರೂಸರ ಬಗ್ಗೆ ತಮ್ಮ ಗಾಢವಾದ ಪ್ರೀತಿ ಗೌರವಗಳನ್ನು ತಿಳಿಸಿದರು. “ಚಾರ್ಲಿ ಆಂಡ್ರೂಸರ ಸರಳತೆ ಒಂದು ಶಿಶುವಿನಂತೆ ಅಕೃತ್ರಿಮವಾದುದು. ಅವರ ಸಚ್ಚಾರಿತ್ರ್ಯ ಸ್ಫಟಿಕದಂತೆ ಸ್ವಚ್ಛ. ಅವರು ತುಂಬ ನಾಚುವ ಸ್ವಭಾವದವರು. ಅವರ ಈ ಚರಿತ್ರೆಕಾರರು ಪ್ರೇಮಪೂರ್ಣ ಶ್ರಮವಹಿಸಿದ್ದಾರೆ ಆಂಡ್ರೂಸರಂತಹ ಸಜ್ಜನರ ಕಥೆಗೆ ಯಾವ ಮುನ್ನುಡಿಯ ಅವಶ್ಯಕತೆಯೂ ಇಲ್ಲ. ಅದೇ ಅದರ ಮುನ್ನುಡಿ.” ಈ ಮುನ್ನುಡಿ ತೀರ ಚಿಕ್ಕದಾಯಿತೆಂದು ಹೊರೆಸ್ ಅಲೆಕ್ಸಾಂಡರ್ ಗಾಂಧೀಜಿ ಬಳಿ ಬಂದು ಸ್ವಲ್ಪ ಹಿಗ್ಗಿಸಿಕೊಡಿ ಎಂದರು. ಆ ದಿನ ಗಾಂಧೀಜಿಯ ಮೌನವ್ರತವಿದ್ದುದರಿಂದ ಪೆನ್ಸಿಲ್ಲಿನಲ್ಲಿ ಹೀಗೆ ಬರೆದರು “ನನ್ನ ಹೃದಯಾಂತರಾಳದಿಂದ ಬಂದ ನುಡಿಗಳವು. ಹೆಚ್ಚು ಹೇಳುವುದು ಉಚಿತವಲ್ಲ” ಅಲ್ಲಿಗೆ ಆ ಮಾತು ಮುಗಿದು ಮುನ್ನುಡಿ

ಅಷ್ಟೇ ವಾಕ್ಯಗಳಲ್ಲಿ ಪ್ರಕಟವಾಯಿತು. ಗಾಂಧೀಜಿಯ ಅಕ್ಷರಗಳನ್ನೇ ಪಡಿಯಚ್ಚು ಮಾಡಿ ಮಾರ್ಜೋರಿ ಅಚ್ಚು ಮಾಡಿದ್ದಾರೆ.

1947ರಲ್ಲಿ ದೇಶವಿಭಜನೆಯ ದಾರುಣ ದಿನಗಳು ಹಾದು ಹೋಗುತ್ತಿದ್ದವು. ಭೀಕರ ರಕ್ತಪಾತ ದ್ವೇಷದ ಕಾಡ್ಗಿಚ್ಚು ಲಕ್ಷಾಂತರ ಹೃದಯುಗಳನ್ನು ತಲ್ಲಣಿಸಿದವು. ಸಾವಿರಾರು ಮುಗ್ಧ ಜನರ ಕೊಲೆ ನಡೆಯುತ್ತಲೇ ಇತ್ತು. ದೇಶವನ್ನು ಇಬ್ಭಾಗ ಮಾಡುವ ಘೋಷಣೆಗೆ ಗಾಂಧೀಜಿ ಸಮ್ಮತಿಸಿರಲಿಲ್ಲ. ಖಾನ್ ಅಬ್ದುಲ್ ಗಫಾರ್ ಖಾನರಂತೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಪ್ರಬಲವಾಗಿ ವಿರೋಧಿಸಿದರು. ಆದರೆ ಸಫಲರಾಗಲಿಲ್ಲ. ಬಿಹಾರಿನ ಮತೀಯ ದ್ವೇಷದ ಜ್ವಾಲೆಯನ್ನಾರಿಸುತ್ತಾ ಗಾಂಧೀಜಿ ಹಳ್ಳಿಯಿಂದ ಹಳ್ಳಿಗೆ ಯಾತ್ರೆ ಮಾಡುತ್ತಿದ್ದರು. ಉನ್ನತ ಮಟ್ಟದಲ್ಲಿ ನಡೆಯುತ್ತಿದ್ದ ರಾಜಕೀಯ ಸಂಧಾನಗಳಲ್ಲಿ ಯಾವ ಆಸಕ್ತಿಯೂ ಅವರಿಗುಳಿದಿರಲಿಲ್ಲ. ಮಾರ್ಜೋರಿ ಸೈಕ್ಸ್ ಅವರ ಮಿತ್ರ ಜಹಂಗೀರ್ ಪಟೇಲ್ ಆಮೇಲೆ ದುಃಖತಪ್ತರಾಗಿ ಬಾಪುವಿನ ಬಳಿ ಬಂದು "ಈ ದುರಂತ ಹೇಗಾಯಿತು?" ಎಂದು ಕೇಳಿದರು. ಖಿನ್ನರಾಗಿದ್ದ ಗಾಂಧೀಜಿ "ಜವಹರಲಾಲ್, ವಲ್ಲಭಾಯಿ, ಜಿನ್ನಾ ಮತ್ತು ಮೌಂಟ್‌ಬೇಟನ್ ಈ ನಾಲ್ಕು ಮಹಾನಾಯಕರು ತಾವೇ ತೀರ್ಮಾನಿಸಿಬಿಟ್ಟರು. ನನ್ನನೇನೂ ಕೇಳಲಿಲ್ಲ ನಾನು ಬಿಹಾರದ ಯಾತ್ರೆಯಲ್ಲಿದ್ದಾಗ ಈ ತೀರ್ಮಾನ ಒಪ್ಪಿಕೊಂಡುಬಿಟ್ಟಿದ್ದೇವೆ ಎಂದು ತಿಳಿಸಿದರು. ಆ ಘಳಿಗೆಯಲ್ಲಿ ನನಗೆ ನನ್ನ ಇಡೀ ಜೀವನ ಕಾರ್ಯವೇ ಸಂಪೂರ್ಣ ನಾಶವಾದಂತೆ ಭಾಸವಾಯಿತು" ಎಂದರೆಂದು ಮಾರ್ಜೋರಿ ತಮ್ಮ ಪುಸ್ತಕದಲ್ಲಿ ಉದ್ಧರಿಸಿದ್ದಾರೆ.

ಕಲ್ಕತ್ತೆಯಲ್ಲಿ ಭೀಕರ ಮಾರಣಹೋಮ ನಡೆದಿತ್ತು. ರಕ್ತಸಿಂಚಿತ ಪರಿಸರ, ದ್ವೇಷ ಸೇಡುಗಳ ದಳ್ಳುರಿ, ಅಮಾನುಷ ಕೊಲೆಗಳ ಮಧ್ಯೆ ಹಿಂದೂ ಮುಸ್ಲಿಮರನ್ನು ಸಾಂತ್ವನಗೊಳಿಸಿ ದಂಗೆಯನ್ನಡಗಿಸಲು ತಮ್ಮ ಜೀವನವನ್ನೇ ಪಣವಾಗಿಟ್ಟು ಗಾಂಧೀಜಿ ಅಲ್ಲಿ ಹೋರಾಡುತ್ತಿದ್ದರು. ಅಹಿಂಸಾಮೂರ್ತಿಯ ಈ ಮಹೋನ್ನತ ತಪಶ್ಚರ್ಯೆಯಿಂದಾಗಿ

ಒಂದು ಪವಾಡಸದೃಶ ಪರಿಣಾಮವಾಯಿತು. ಮೌಂಟ್‌ಬೇಟನ್ ಈ ಘಟನೆಯನ್ನು ನೋಡಿ ಅವಾಕ್ಕಾದರು. ಪಂಜಾಬಿನಲ್ಲಿ ದೊಡ್ಡ ಸೇನೆ ಸಾಧಿಸಲಾರದೇ ಹೋದ ಕಾರ್ಯವನ್ನು ಗಾಂಧೀಜಿ ಒಬ್ಬರೇ ನಿಸ್ಸೀಮ ನಿರ್ಭಯತೆಯಿಂದ ಕೈಗೊಂಡು ಸತ್ಯಾಗ್ರಹಿಯ ಪ್ರಬಲ ಶಕ್ತಿಯನ್ನು ಪ್ರಕಟಗೊಳಿಸಿದ್ದರು. 1947ರ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನ ರಾಷ್ಟ್ರಪಿತ ದೆಹಲಿಯ ಸಮಾರಂಭಗಳಿಂದ ದೂರವಾಗಿ ದುಃಖತಪ್ತ ನಿರ್ಭಾಗ್ಯರ ಕಣ್ಣೀರನ್ನೊರೆಸಲು ಹವಣಿಸುತ್ತಾ ಉಪವಾಸ ಮಾಡಿದರು. ಮಾರ್ಜೊರಿ ಸೈಕ್ಸ್ ಆ ಸಮಯಕ್ಕೆ ಬಿಹಾರಿನ ಚಂಪಾರಣ್ಯ ಜಿಲ್ಲೆಯಲ್ಲಿ ಈ ಹಿಂದೆ ಸ್ಥಾಪನೆಯಾಗಿದ್ದ ಮೂಲಶಿಕ್ಷಣ ಶಾಲೆಗಳನ್ನು ಪರಿಶೀಲಿಸುತ್ತಿದ್ದರು. ಅಲ್ಲಿಂದ ನೇರವಾಗಿ ಕಲ್ಕತ್ತೆಗೆ ಬಂದು ಗಾಂಧೀಜಿಯ ಬಳಿಸಾರಿದರು. ಅವರಾಗ ಅಲ್ಲಿನ ವಿಧ್ವಂಸಕ ದಂಗೆಯನ್ನು ಶಾಂತಗೊಳಿಸಲು ಅಮರಣಾಂತ ಉಪವಾಸ ಘೋಷಿಸಿಬಿಟ್ಟಿದ್ದರು. ಮಾರ್ಜೊರಿಗೆ ಆ ಅನಿರೀಕ್ಷಿತ ಘಟನೆ ಮನಸ್ಸು ಹೃದಯಗಳನ್ನು ಪ್ರಬಲವಾಗಿ ಕಲಕಿತ್ತು. ಈ ಉಪವಾಸದ ಅಸ್ತ್ರವನ್ನು ಗಾಂಧೀಜಿ ಅತ್ಯಂತ ಉತ್ಕಟ ಸಂದರ್ಭಗಳಲ್ಲಿ ಪ್ರಯೋಗಿಸುತ್ತಿದ್ದರು. ಅವರೇ ಹೇಳುತ್ತಿದ್ದಂತೆ "ಕೇವಲ ಲಘುಮನೋಭಾವದಿಂದ ನಾನು ಉಪವಾಸ ಕೈಗೊಳ್ಳುವುದಿಲ್ಲ. ನನಗೆ ತೀವ್ರ ಸಂಕಟವಾಗುವುದಿಲ್ಲ ಎಂದು ಯಾರೂ ಭಾವಿಸಬಾರದು. ಈ ನೋವನ್ನು ಭರಿಸಲು ನಾನು ಸಮರ್ಥನಾಗುವುದು ಈ ಉಪವಾಸಗಳನ್ನು ಬಲವತ್ತರವಾದ ಒಂದು ಮಹೋನ್ನತ ಈಶ್ವರಶಕ್ತಿಯ ಪ್ರೇರಣೆಯಿಂದ ಕೈಗೊಳ್ಳುವುದರಿಂದಲೇ. ನನ್ನ ಶಕ್ತಿ ಬಹಳ ಸೀಮಿತ." ಕಲ್ಕತ್ತೆಯ ಉಪವಾಸ ಆಶ್ಚರ್ಯಕರ ಪ್ರಭಾವ ಬೀರಿತು. ನೂರಾರು ಜನ ಈ ಜ್ವಲಂತ ಅಹಿಂಸಾಶಕ್ತಿಗೆ ಶರಣು ಬಂದು ಶಸ್ತ್ರಾಸ್ತ್ರಗಳನ್ನೆಲ್ಲ ಸಮರ್ಪಣ ಮಾಡಿದರು. ಬದ್ಧದ್ವೇಷಿಗಳೆನಿಸಿದ್ದ ನೆರೆಹೊರೆಯವರು ಒಬ್ಬರನ್ನೊಬ್ಬರು ಆಲಂಗಿಸಿದರು. ಬಂಗಾಳದ ರಾಜ್ಯಪಾಲ ರಾಜಗೋಪಾಲಾಚಾರಿ ಸಂಧಾನಗಳಲ್ಲಿ ತನ್ಮಯರಾಗಿ ಕೆಲಸ ಮಾಡಿದರು. ಜವಾಹರಲಾಲರು ದೆಹಲಿಯಿಂದ ಧಾವಿಸಿ

ಬಂದರು. ಗಾಂಧೀ ಶಕ್ತಿ ಪ್ರಚಂಡವಾಗಿ ಪ್ರಜ್ವಲಿಸಿತು. ಪ್ಯಾರೆಲಾಲರು "ದಿ ಮಿರಕಲ್ ಆಫ್ ಕಲ್ಕಟಾ" ಎಂಬ ಹೊತ್ತಿಗೆಯುಲ್ಲಿ ಹೃದಯಂಗಮವಾಗಿ ಬಣ್ಣಿಸಿದ್ದಾರೆ.

ಮಾರ್ಜೊರಿ ಸೈಕ್ಸ್ ಕಲ್ಕತ್ತೆಯಿಂದ ಮದ್ರಾಸಿಗೆ ಬಂದು ಅಲ್ಲಿನ ತಮ್ಮ ಜವಾಬ್ದಾರಿಗಳನ್ನೆಲ್ಲ ಮುಕ್ತಾಯಗೊಳಿಸಿ ಸೇವಾಗ್ರಾಮಕ್ಕೆ ಹೋಗಿ ನೆಲಸಲು ಹೊರಟುಬಿಟ್ಟರು. ನಯೀತಾಲೀಮ್ ಶಾಲೆಯ ಶಿಕ್ಷಕಿಯಾಗಿ ಹಿಂದೂಸ್ತಾನಿ ತಾಲಮಿ ಸಂಘದ ಪ್ರಮುಖ ಸದಸ್ಯೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಮಾರ್ಜೊರಿ ಸೈಕ್ಸ್ ಅವರಿಗೆ ಅನೇಕ ಸಂದರ್ಭಗಳಲ್ಲಿ ಗಾಂಧೀಜಿಯ ಹೃದಯ ವೈಶಾಲ್ಯ, ಅವರ ಸಂವೇದನಾಶೀಲ ಮನಸ್ಸು, ಇತರ ಪ್ರಾಮಾಣಿಕ ಅಭಿಪ್ರಾಯಗಳ ಬಗ್ಗೆ ಗೌರವ ಈ ಮುಂತಾದ ಸಹಜಗುಣಗಳು ಅನುಭವದಿಂದ ವೇದ್ಯವಾಗಿತ್ತು. ಒಬ್ಬ ಮಹಾಗುರುವಾಗಿ ಅವರು ನೀಡುತ್ತಿದ್ದ ವ್ಯಾವಹಾರಿಕ ಪಾಠಗಳು ಶಿಕ್ಷಣಕ್ರಮಕ್ಕೆ ಅತ್ಯಮೂಲ್ಯ ಕಾಣಿಕೆ ಎನಿಸಿತು.

1946ರಲ್ಲಿ ಒಮ್ಮೆ ಆಹಾರಕೊರತೆ ತೀವ್ರವಾಗಿದ್ದಾಗ ಗಾಂಧೀಜಿ ಮೀನಿನ ಬಳಕೆಯನ್ನು ಹೆಚ್ಚಿಸಲು ಸಲಹೆ ಮಾಡಿದ್ದರು. ಸಮುದ್ರತೀರದ ಮತ್ತು ನದೀತೀರಗಳ ಅನೇಕ ಜನಾಂಗಗಳು ಅದನ್ನು ಆಹಾರವಾಗಿ ಅಂಗೀಕರಿಸಿರುವುದರಿಂದ ಈ ಕಠಿಣ ಸಮಯದಲ್ಲಿ ಅದನ್ನು ವ್ಯಾಪಕಗೊಳಿಸುವುದು ಸೂಕ್ತ ಎಂದವರ ಮತ. ಸಂಪ್ರದಾಯ ಶರಣರು ಅದನ್ನು ವಿರೋಧಿಸಿದರು. ಅದು ಹಿಂಸೆಯಾಗುವುದೆಂದರು. ಸಾವಧಾನವಾಗಿಯೇ ಗಾಂಧೀಜಿ ಉತ್ತರಿಸಿದರು "ಸಸ್ಯಾಹಾರದಲ್ಲೂ ಹಿಂಸೆಯ ಅಂಶ ಇದ್ದೇ ಇದೆ. ಕನಿಷ್ಠ ಹಿಂಸೆ ಎಲ್ಲ ಜೀವಿಗಳಿಗೂ ಅನಿವಾರ್ಯ. ಆದರೆ ಮೀನು ತಿನ್ನುವವರನ್ನು ತಿನ್ನಬೇಡಿ ಎಂದು ಬಲಾತ್ಕರಿಸುವುದು ಇನ್ನೂ ಹೆಚ್ಚಿನ ಹಿಂಸೆ. ನಮ್ಮ ಅಭಿಪ್ರಾಯಗಳನ್ನು ಬಲಾತ್ಕಾರವಾಗಿ ಮತ್ತೊಬ್ಬರ ಮೇಲೆ ಹೇರುವುದು ನಾವೇ ಬಯಸಿ

ಮಾಡುವ ಹಿಂಸೆ ಎನಿಸುತ್ತದೆ. ನನ್ನ ಮಟ್ಟಿಗೆ ಮಾಂಸಾಹಾರ ಒಂದು ಪಾಪ. ಆದರೆ ಸಹಜವಾಗಿಯೇ ಮಾಂಸಾಹಾರಿಗಳಾದವರಿಗೆ ಅದು ಹಾಗೆನಿಸದು. ಕೇವಲ ನನ್ನನ್ನು ಅನುಕರಿಸುವುದಕ್ಕಾಗಿ ತಮ್ಮ ಮನಸ್ಸಿಲ್ಲದೆ ಒಪ್ಪಿದರೆ ಅದೂ ಒಂದು ವಂಚನೆ ಆಗುತ್ತದೆ." ಈ ಔದಾರ್ಯವನ್ನು ಕಂಡು ಮಾರ್ಜೊರಿ ಮಾರುಹೋದರು.

ನಿಸ್ಸೀಮ ಬಲಿದಾನಕ್ಕೆ ಸಿದ್ಧರಾಗಿ ಅಹಿಂಸಾತತ್ವನಿಷ್ಠೆಯ ಅಪ್ರತಿಹತ ಯೋಧನಂತೆ ಮತೀಯ ಸಂಘರ್ಷದ ಅಗ್ನಿಜ್ವಾಲೆಯೊಳಕ್ಕೆ ಧುಮುಕಿ, ಗಾಂಧೀಜಿ ಕೊನೆಗೊಮ್ಮೆ ಆತ್ಮಾರ್ಪಣೆ ಮಾಡಿಬಿಟ್ಟರು. ಕೊನೆಯುಸಿರಿನಲ್ಲೂ ತಮ್ಮೊಳಗಿನ ವಿಶ್ವಾತ್ಮನ ದಿವ್ಯನಾಮ ಸ್ಮರಿಸುತ್ತಾ ನಿಗೂಢಭೂತದಲ್ಲಿ ಲೀನವಾದರು. ಮತ್ತೊಬ್ಬ ಕ್ರಿಸ್ತ ನಮ್ಮ ಒಡನೆಯೇ ಜೀವಿಸಿ ನಮ್ಮನ್ನು ಪ್ರೇಮದಿಂದ ಮೇಲೆತ್ತಿ ತಾನು ಶಿಲುಬೆಗೇರಿಬಿಟ್ಟ ಎಂದು ಮಾರ್ಜೊರಿ ದುಃಖತಪ್ತಳಾಗಿ ಮರುಗಿದರು. ತನ್ನ ಗ್ರಂಥದಲ್ಲಿ ಆತ್ಮಾವಲೋಕನ ಮಾಡುತ್ತಾ "ತಮ್ಮ ದೈನಂದಿನ ಕಾರ್ಯಗಳಲ್ಲಿ ಮಾನವೀಯ ಬಾಂಧವ್ಯಗಳನ್ನು ತಮ್ಮ ಸಂಪರ್ಕಕ್ಕೆ ಬಂದ ಸಾಮಾನ್ಯ ಸ್ತ್ರೀಪುರುಷರಲ್ಲಿ ಸ್ಥಾಯೀಗೊಳಿಸುವ ನೈತಿಕ ಮತ್ತು ಆಧ್ಯಾತ್ಮಿಕ ಅಧಿಕಾರ ಈ ಮಾನವಶ್ರೇಷ್ಠನ ಏಕೈಕ ಶಕ್ತಿಯಾಗಿತ್ತು. ತಾಳ್ಮೆಯಿಂದ, ಅದಮ್ಯ ನಂಬಿಕೆಯಿಂದ ಪ್ರತಿಯೊಬ್ಬ ಮಾನವನಲ್ಲೂ ಆತ್ಮದೀಪವನ್ನು ಬೆಳಗುತ್ತಿದ್ದರು. ಅವರವರ ಸತ್ಯದರ್ಶನದ ಪಥದಲ್ಲಿ ಸಂವೇದನೆಯ ಶ್ರುತಿಯನ್ನು ಶುದ್ಧಗೊಳಿಸಿ ಋಜುಮಾರ್ಗದಲ್ಲಿ ನಡೆಸುತ್ತಿದ್ದರು. ಅವರ ಅಚಲ ಶ್ರದ್ಧೆ ಮಾನವಾತೀತ ಈಶ್ವರ ಶಕ್ತಿಯಲ್ಲಿ ಅಪರಿಮಿತ ಭರವಸೆಯನ್ನು ನೀಡಿ ಅವರನ್ನೂ ಅವರ ಸುತ್ತಲಿನ ಸಮಾಜವನ್ನೂ ನೈತಿಕ ವಿಕಾಸದೆಡೆಗೆ ನಡೆಸುತ್ತಿತ್ತು. ಜೀವನೋತ್ಸಾಹದ ಮೂಲಶಕ್ತಿ ಮಾನವನ ಆಧ್ಯಾತ್ಮಿಕತೆಯ ಚಿಲುಮೆಯಲ್ಲಿದೆ. ಆ ಅನಂತ ಶಕ್ತಿಯನ್ನು ಪರಿಮಿತ ಜೀವಿಯಾದ ಮಾನವ ಜಾಗೃತಗೊಳಿಸಿಕೊಳ್ಳುವುದೇ ಅತ್ಯುನ್ನತ ಸಾಧನೆ" ಎಂದಿದ್ದಾರೆ.

ಸ್ವಾತಂತ್ರ್ಯಾನಂತರ ಮಾರ್ಜೊರಿ ಸೈಕ್ಸ್ ತಮಿಳುನಾಡಿನ ನೀಲಗಿರಿಯಲ್ಲಿ ತಮ್ಮದೇ ಒಂದು ಅಹಿಂಸಾ ಜೀವನ ಶಿಕ್ಷಣದ ಆಶ್ರಮ

ಸ್ಥಾಪಿಸಿದರು. ತಮಿಳಿನಲ್ಲಿ ಅದಕ್ಕೆ "ಅಮೈದಿ ಅಘಂ" (ಪ್ರೇಮದ ಮನೆ) ಎಂದು ಕರೆದಿದ್ದರು. ಪ್ರತಿ ವರ್ಷ ನೂರಾರು ಶಿಕ್ಷಕ ಶಿಕ್ಷಕಿಯರಿಗೆ ಅಲ್ಲಿ ಗಾಂಧೀಜಿಯ ಮೂಲಶಿಕ್ಷಣ ಪದ್ಧತಿಯ ಬಗ್ಗೆ ತರಬೇತಿ ನಡೆಯುತ್ತಿತ್ತು. ಕೆಲವು ವರ್ಷಗಳ ನಂತರ ಭಾರತದಲ್ಲಿದ್ದ ಕ್ವೇಕರ್ ಕ್ರೈಸ್ತಬಾಂಧವರೂ, ಹಲವು ಗಾಂಧೀವಾದಿಗಳೂ ಸೇರಿ ಮಧ್ಯಪ್ರದೇಶ ಹೊಷಂಗಾಬಾದ್ ಬಳಿ 'ಫ್ರೆಂಡ್ಸ್ ಕಾಲೋನಿ' ಎಂಬ ಒಂದು ಗಾಂಧಿ ಮಾರ್ಗಾನುಯಾಯಿಗಳ ಶ್ರಮಜೀವನ ಪ್ರಧಾನವಾದ ಚಿಕ್ಕ ಗ್ರಾಮ ಸ್ಥಾಪಿಸಿದರು. ಮಾರ್ಜೋರಿ ಸೈಕ್ಸ್ ಅಲ್ಲಿ ಬಂದು ನೆಲೆಸಿದ್ದರು. ಎಂಭತ್ತು ವರ್ಷದ ವೃದ್ಧೆ ಉತ್ಸಾಹದಿಂದ ಅಲ್ಲಿನ ವ್ಯವಸಾಯ ಕ್ಷೇತ್ರದಲ್ಲಿ ದುಡಿಯುತ್ತಿದ್ದರು. ಕೊನೆಕೊನೆಗೆ ಆರೋಗ್ಯ ತೀರ ಕೆಟ್ಟಿತು. ಇಂಗ್ಲೆಂಡಿಗೆ ಹೋಗಿ ವಿಶ್ರಾಂತಿ ಪಡೆಯುತ್ತಿದ್ದರು. ಭಾರತೀಯರಲ್ಲಿ ಭಾರತೀಯರಾಗಿ ಅರವತ್ತು ವರ್ಷಗಳಿಗೂ ಹೆಚ್ಚುಕಾಲ ಅಸಾಮಾನ್ಯ ಸಮಾಜಸೇವೆಗೈದ ಸಾಧ್ವಿ ಮಾರ್ಜೋರಿ ಸೈಕ್ಸ್ 1995ರ ಆಗಸ್ಟ್ 17ರಂದು ಇಂಗ್ಲೆಂಡಿನಲ್ಲೇ ನಿಧನರಾದರು. ಗಾಂಧೀ ಬಳಗದ ವಿದೇಶೀಯ ಬಂಧುವರ್ಗದ ಅಮೂಲ್ಯ ರತ್ನ ಎಂದು ಅವರನ್ನು ಸ್ಮರಿಸುತ್ತೇವೆ.

ಗಾಂಧೀ ವಿಶ್ವಬಳಗದ ಇತರ ಬಂಧುಗಳು

ಮೀರಾ ಬಹೆನ್

ಭಾರತ ಭಾಗ್ಯವಿಧಾತರೆನಿಸಿದ ಮಹಾತ್ಮ ಗಾಂಧಿ ಅಸಂಖ್ಯಾತ ವಿದೇಶೀ ಶಾಂತಿಪ್ರಿಯ ಚಿಂತಕರ ಭಾವನಾಕ್ಷಿತಿಜಗಳನ್ನು ಆವರಿಸಿ ನಿಂತ ಅಪೂರ್ವ ವ್ಯಕ್ತಿ. ವಿಶ್ವದ ಮೂಲೆಮೂಲೆಗಳಿಂದ ಈ ಅಹಿಂಸಾಜ್ಯೋತಿಯ ಸಾನ್ನಿಧ್ಯ, ಸಾಯುಜ್ಯ, ಸಾಮೀಪ್ಯಗಳಿಗಾಗಿ ಹಂಬಲಿಸುತ್ತಿದ್ದ ಅವರ ಸಂಖ್ಯೆ ಅಪಾರ. ತಮ್ಮ ಜೀವನಾದರ್ಶಗಳನ್ನು ರೂಪಿಸಿಕೊಳ್ಳಲು ಅವರೆಲ್ಲ ಗಾಂಧೀಜಿಯಿಂದ ಸ್ಫೂರ್ತಿ ಪಡೆದರು. ವಿಶ್ವಶಾಂತಿಯ ವಿಕಾಸ ಸಾಧನೆಗೆ ಈ ಸಾಧಕರ ಕಾಣಿಕೆ ಅನುಪಮ. ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಈ ಶಾಂತಿಪ್ರಿಯ ಬಳಗ ಇತ್ತ ನೈತಿಕ ಪ್ರಭಾವದ ಅಪರಿಮಿತ ಅಂತಃಶಕ್ತಿಯಂತೂ ಸ್ಮರಣೀಯ.

"ಬಾಪೂ ಸಾನ್ನಿಧ್ಯದಲ್ಲಿ ನಮ್ಮ ವ್ಯಕ್ತಿತ್ವವೇ ಊರ್ಧ್ವಮುಖವಾಗುತ್ತದೆ. ಅವರು ಮೈಕಟ್ಟಿನಲ್ಲಿ ಅಂಥ ಭವ್ಯತೆಯಾಗಲಿ, ಮಾತಿನಲ್ಲಿ ಮೋಹಕತೆಯಾಗಲಿ ಕಾಣದು. ಆದರೆ ಅವರ ಸರಳತೆಯ ಸೆಳೆತವೇ ಪ್ರಪಂಡಶಕ್ತಿ. ಆ ಬಡಕಲು ದೇಹ, ಸತ್ಯಪೂರ್ಣ ಆ ಮಾತುಗಳಲ್ಲಿ ಮೂರ್ತಿವೆತ್ತು ನಿಂತ ಆತ್ಮವೇ ನಮ್ಮನ್ನೆದುರುಗೊಳ್ಳುತ್ತದೆ. ಒಂದು ಸಹಜಗಾಂಭೀರ್ಯ, ಸ್ವಭಾವಸಹಜ ವಿನಯ, ಅವರಲ್ಲಿ ತುಂಬಿತುಳುಕುತ್ತದೆ. ಸರ್ವವ್ಯಾಪಿಯೂ ಶ್ರದ್ಧಾಪೂರ್ಣವೂ ಆದ

ಆಧ್ಯಾತ್ಮಿಕತೆ ಅವರ ಬಳಿ ಅನುಭವವಾಗುತ್ತದೆ. ಎಲ್ಲವೂ ಯಾವುದೋ ಹೊಸ ಜೀವನಾನಂದದ ಸ್ವರ್ಣಲೋಕಕ್ಕೆ ಕರೆದೊಯ್ದುಬಿಡುತ್ತದೆ. ಈ ಮಹಾವ್ಯಕ್ತಿಯ ಅಂತರ್ವಲಯಕ್ಕೆ ನೇರವಾಗಿ ಹೊಕ್ಕಾಗ ನನ್ನ ಭಾವಜೀವನವೇ ಪರಿವರ್ತಿತವಾಗಿಬಿಟ್ಟಿತು."

ಈ ಮಾತುಗಳನ್ನು "ದಿ ಸ್ಪಿರಿಟ್ಸ್ ಪಿಲಿಗ್ರಿಮೇಜ್" ಎಂಬ ತಮ್ಮ ಆತ್ಮಕಥೆಯಲ್ಲಿ ನಿರೂಪಿಸಿದವರು ಮಿಸ್ ಮ್ಯಾಡಲಿನ್ ಸ್ಲೇಡ್. 1924ರಲ್ಲಿ ರೋಮೇನ್‌ರೋಲಾ ಅವರ ಮೂಲಕ ಗಾಂಧೀಜಿಯ ಜೀವನ ಚರಿತ್ರೆಯನ್ನು ತಿಳಿದು ಭಾರತಕ್ಕೆ ಬಂದ ಈ ಬ್ರಿಟಿಷ್ ಯುವತಿ ಬ್ರಿಟನ್ನಿನ ನೌಕಾದಳದ ಉನ್ನತಾಧಿಕಾರಿಯಾಗಿದ್ದ ಸರ್ ಎಡ್ಮಂಡ್ ಸ್ಲೇಡ್ ಅವರ ಮಗಳು. ಈಕೆ ಸಂಪೂರ್ಣವಾಗಿ ಭಾರತೀಯ ಜೀವನಶೈಲಿಯನ್ನು ಅಂಗೀಕರಿಸಿ ಸಬರಮತಿ ಆಶ್ರಮ ಸೇರಿ ಗಾಂಧೀಜಿಯ ಆತ್ಮೀಯ ಬಳಗದವರಲ್ಲೊಬ್ಬರಾದರು. ಶ್ರೀಮಂತ ಭೋಗಜೀವನ ತ್ಯಜಿಸಿ ಆಜನ್ಮ ಬ್ರಹ್ಮಚಾರಿಣಿಯಾಗಿ ಸರಳ ಗ್ರಾಮಜೀವಿಯಂತೆ ಸಾಮಾಜಿಕ ಕಾರ್ಯಕರ್ತರಾಗಿಬಿಟ್ಟರು. ಈ ಭಾವಪೂರ್ಣ ಸಾಧ್ವಿಯನ್ನು ಗಾಂಧೀಜಿ ಮೀರಾಬಹೆನ್ ಎಂದು ಕರೆದರು. "ಇಂದಿನಿಂದ ನೀನು ನನ್ನ ಮಗಳು" ಎಂದರು ಗಾಂಧೀಜಿ. ಆ ದಿನವನ್ನು ಮೀರಾಬಹೆನ್ ತನ್ನ ಎರಡನೇ ಹುಟ್ಟುಹಬ್ಬವೆಂದೇ ಆಚರಿಸುತ್ತಿದ್ದರು. "ನನ್ನ ಆಕಾಂಕ್ಷೆ ಪೂರ್ಣವಾಯಿತು. ಮಂಜು ಮುಸುಕುಗಳ ಮಧ್ಯೆ ತಡಕಾಡುತ್ತಾ ಸಾಗುತ್ತಿದ್ದಾಗ, ಯಾವುದೋ ಅಂತರಾಳದ ಒತ್ತಡ ನನ್ನನ್ನಿಲ್ಲಿಗೆ ತಂದುಬಿಟ್ಟಿತ್ತು. ಈಗ ಪ್ರಜ್ವಲ ಸೂರ್ಯಪ್ರಕಾಶದೆಡೆಗೆ ಹೊರಹೊಮ್ಮಿ ಸತ್ಯಶೋಧನೆಯ ಕಡಿದಾದ ಇಕ್ಕಟ್ಟಾದ ಸಾಧನಾಪಥಕ್ಕೆ ಚಲುವಿನ ದಾರಿ ಎಂದು ಕಂಡುಕೊಂಡೆ" ಎಂದಿದ್ದಾರೆ ಆಕೆ ಆ ಸಂದರ್ಭವನ್ನು ಕುರಿತು.

ತೊಂಬತ್ತು ವರ್ಷಗಳ ತುಂಬು ಬಾಳಿನುದ್ದಕ್ಕೂ ಸೇವಾನಿರತರಾಗಿ ಆಕೆ ಭಾರತಕ್ಕೂ ವಿಶ್ವಕ್ಕೂ ಅನುಪಮ ಸೇವೆ ಸಲ್ಲಿಸಿ 1982ರಲ್ಲಿ

ಏಯುನ್ನಾದಲ್ಲಿ ನಿಧನರಾದರು. ಗಾಂಧೀ ಬಳಗದ ಅನರ್ಘ್ಯ ರತ್ನವೆಂದೇ ಅವರು ಚಿರಸ್ಮರಣೀಯರು. (ವಿವರವಾದ ಜೀವನ ಚರಿತ್ರೆ "ನಾಲ್ಕು ಗಾಂಧೀವಾದಿಗಳು" ಎಂಬ ಪುಸ್ತಕದಲ್ಲಿ ಬಂದಿದೆ.)

ದೀನಬಂಧು ಸಿ. ಎಫ್. ಆಂಡ್ರ್ಯೂಸ್

ಗಾಂಧೀಜಿಯ ಪರಮಮಿತ್ರರಾದ ದೀನಬಂಧು ಸಿ. ಎಫ್. ಆಂಡ್ರ್ಯೂಸ್ ಭಾರತೀಯರಿಗೆ ಚಿರಪರಿಚಿತರಾದವರು. ಬಾಪುವಿನ ಪ್ರಭಾವದಿಂದ ಪರಿವರ್ತಿತರಾದ ಈ ಇಂಗ್ಲೀಷ್ ಸಂತ 1904ರಲ್ಲಿ ದೆಹಲಿಯ ಸೆಂಟ್ ಸ್ಟೀಫನ್ ಕಾಲೇಜಿಗೆ ಪ್ರಾಧ್ಯಾಪಕರಾಗಿ ಬಂದ ಪಾದ್ರಿ. ಗೋಖಲೆಯವರು ಅವರನ್ನು ದಕ್ಷಿಣ ಆಫ್ರಿಕದ ಸತ್ಯಾಗ್ರಹ ಸಮರದ ಕಾಲಕ್ಕೆ ಸಂಧಾನದೂತರನ್ನಾಗಿ ಕಳುಹಿಸಿಕೊಟ್ಟರು. ಗಾಂಧೀಜಿಯ ಬಗ್ಗೆ ತಿಳಿದಿದ್ದ ಆಂಡ್ರ್ಯೂಸರು ಸಂತೋಷದಿಂದ ಈ ವರ್ಣಸಂಘರ್ಷದಲ್ಲಿ ನ್ಯಾಯ ದೊರಕಿಸಿ ಕೊಡಲು ಸತ್ಯನಿಷ್ಠ ಕಾರ್ಯಕರ್ತರಾದರು. ಅವರು ಗಾಂಧೀ ಬಳಗದಲ್ಲಿ ವಾತ್ಸಲ್ಯಪೂರ್ಣ ಹಿರಿಯಣ್ಣನಂತೆ ಸೇರಿಹೋದರು. ಪುಟವಿಟ್ಟ ಅಹಿಂಸಾ ಪ್ರವಾದಿ ಎನಿಸಿಕೊಂಡರು. ರವೀಂದ್ರನಾಥ ಠಾಕೂರರ ಶಾಂತಿನಿಕೇತನ ಸೇರಿದ ಆಂಡ್ರೂಸ್ ಗಾಂಧೀಜಿಗೂ ಗುರುದೇವ ಠಾಕೂರರಿಗೂ ಮಧ್ಯದ ಸುವರ್ಣಸೇತುವೆಯಾಗಿ ಮಿಂಚಿದರು.

ಏಸುಕ್ರಿಸ್ತನ ಪ್ರತಿರೂಪವನ್ನೇ ಬಾಪೂವಿನಲ್ಲಿ ಕಂಡುಕೊಂಡ ಈ ದೀನ ಬಂಧು ದಕ್ಷಿಣ ಆಫ್ರಿಕದಲ್ಲಿ ಕ್ರೈಸ್ತ ಚರ್ಚೊಂದರಲ್ಲಿ ಅದನ್ನೇ ಪ್ರತಿಪಾದಿಸಿದರು. ಸತ್ಯಾಗ್ರಹ ಪಥ ಹೇಗೆ ಏಸುವಿನ ಪ್ರೇಮಮಾರ್ಗಕ್ಕೆ ಸಂವಾದಿ ಎಂಬುದನ್ನು ಮನಮುಟ್ಟುವಂತೆ ವಿವರಿಸಿದರು. ಗಾಂಧೀಜಿಯೇ ಆ ಸಮಯಕ್ಕೆ ಆ ಪ್ರಾರ್ಥನಾಸಭೆಗೆ ಬಂದಾಗ ಬಿಳಿಯರಲ್ಲ ಎಂಬ ಕಾರಣಕ್ಕಾಗಿ ಅವರನ್ನು ಒಳಗೆ ಬಿಡಲೇ ಇಲ್ಲ. ಆಂಡ್ರ್ಯೂಸ್ ಈ ಬಗ್ಗೆ ಬರೆಯುತ್ತಾ ಹೇಗೆ ಕ್ರಿಶ್ಚಿಯನ್ನರು ಒಬ್ಬ ವಿನಮ್ರ ಕ್ರಿಸ್ತಾನುಯಾಯಿಯನ್ನೇ ನಿರಾಕರಿಸಿಬಿಟ್ಟರು ಎಂದು

ತುಂಬ ವಿಷಾದಿಸಿದರು. ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ ಗಾಂಧೀಜಿಗೆ ಬೆಂಬಲವಾಗಿ ನಿಂತು ಸಂಧಾನ ಕುದುರಿಸಿದರು ಚಾರ್ಲಿ ಆಂಡ್ರೂಸ್. ಅನಂತರ ಭಾರತದಲ್ಲೇ 37 ವರ್ಷಗಳ ಕಾಲ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಸತ್ಯಾಗ್ರಹಿಗಳಿಗೆ ಒಂದು ನೈತಿಕ ಮಹಾಶಕ್ತಿಯಾಗಿ ನಿಂತರು. ಶಾಂತಿನಿಕೇತನ, ಸಬರಮತಿ ಮತ್ತು ಸೇವಾಗ್ರಾಮ ಆಶ್ರಮಗಳಲ್ಲಿ ಚಿರಪರಿಚಿತ ಬಂಧುವಿನಂತೆ ಅವರು ವಾಸಿಸಿದರು. ಅವರು 1941ರಲ್ಲಿ ಕಲ್ಕತ್ತೆಯಲ್ಲಿ ನಿಧನರಾದಾಗ, ಬಾಪೂ "ಚಾರ್ಲಿ ಆಂಡ್ರೂಸರಿಗಿಂತ ಉತ್ತಮ ಕ್ರಿಶ್ಚಿಯನ್ನನನ್ನು ನಾನು ಕಂಡಿಲ್ಲ. ಇಂಗ್ಲೆಂಡಿಗೂ ಭಾರತಕ್ಕೂ ಅವರು ಅನುಪಮ ಸೇವೆ ಸಲ್ಲಿಸಿದ್ದಾರೆ" ಎಂದರು. (ಜೀವನ ಚರಿತ್ರೆ ಪ್ರಕಟವಾಗಿದೆ.)*

ಆಲ್ಬರ್ಟ್ ವೆಸ್ಟ್

ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಗೆ ದೊರೆತ ಸಹಕಾರ್ಯಕರ್ತ ಇಂಗ್ಲೆಂಡಿನ ಆಲ್ಬರ್ಟ್ ವೆಸ್ಟ್. ಸಸ್ಯಾಹಾರಿ ಉಪಾಹಾರ ಗೃಹವೊಂದರಲ್ಲಿ ಗಾಂಧೀಜಿಯವರಿಗೆ ವಿದ್ಯಾವಂತ ತರುಣನ ಪರಿಚಯವಾಯಿತು. ಪತ್ರಿಕೋದ್ಯಮ ಮತ್ತು ಮುದ್ರಣಾಲಯ ತಜ್ಞನೆನಿಸಿದ್ದ ವೆಸ್ಟ್ ಗಾಂಧೀಜಿಯ ಸಮಾಜ ಸೇವಾ ಕಾರ್ಯಗಳಲ್ಲಿ ಉತ್ಸಾಹದಿಂದ ಧುಮುಕಿದ. ಅವರು ನಡೆಸುತ್ತಿದ್ದ 'ಇಂಡಿಯನ್ ಒಪಿನಿಯನ್' ಪತ್ರಿಕೆಗಾಗಿ ತನ್ನ ಮುದ್ರಣಾಲಯವನ್ನು ಮೀಸಲಾಗಿಟ್ಟು ಸಹಕರಿಸಿದ. 1904ರಲ್ಲಿ ಪ್ಲೇಗ್ ಪಿಡುಗು ಹರಡಿದಾಗ ಜೀವದ ಹಂಗು ತೊರೆದು ಕರಿಯ ಆಫ್ರಿಕನ್ನರ ವಸತಿಗಳಲ್ಲಿ ಗಾಂಧೀಜಿ ಸೇವೆಗೆ ತೊಡಗಿದ್ದಾಗ ವೆಸ್ಟ್ ಕೂಡ ಹಿಂಜರಿಯದೆ ನಿರ್ಭಯವಾಗಿ ರೋಗಿಗಳ ಸೇವೆಗೆ ನಿಂತ. ಗಾಂಧೀ ಜೀವನ ತತ್ವಗಳು ಅವನನ್ನು ಸೂರೆಗೊಂಡಿದ್ದವು. ಫೀನಿಕ್ಸ್ ಆಶ್ರಮಕ್ಕೆ ಪತ್ರಿಕೆಯ ಕಾರ್ಯಾಲಯವನ್ನು ಬದಲಿಸಿದಾಗ ವೆಸ್ಟ್ ತನ್ನ ಜೀವನದ ಪ್ರಮುಖ ತೀರ್ಮಾನ ಕೈಗೊಂಡು ತಾನೂ ಆಶ್ರಮವಾಸಿಯಾಗಿ ದುಡಿಮೆಗಾರ ವರ್ಗಕ್ಕೆ ಸೇರಿಕೊಂಡ.

ಕೊನೆಯುವರೆಗೂ ಸೇವಾಧೀಕ್ಷೆಯಿಂದ ಸಾರ್ವಜನಿಕ ಕಾರ್ಯದಲ್ಲಿ ತೊಡಗಿ ಆತ ಗಾಂಧೀವಾದಿಯಾದ.

ಜೋಸೆಫ್ ಡೋಕ್

1912ರಲ್ಲೇ ಗಾಂಧೀಜಿಯ ಮೊದಲ ಜೀವನ ಚರಿತ್ರೆ ಪ್ರಕಟಿಸಿದ ಕ್ರೈಸ್ತ ಪಾದ್ರಿ ರೆವರೆಂಡ್ ಜೋಸೆಫ್ ಡೋಕ್ ಮತ್ತೊಬ್ಬ ಅಹಿಂಸಾವಾದಿ. ದಕ್ಷಿಣ ಆಫ್ರಿಕದ ಸತ್ಯಾಗ್ರಹ ಸಮರ ಹಾಗೂ ಅಹಿಂಸಾವಾದಿ ಗಾಂಧೀಜಿ ನಡೆಸಿದ ಸಮರ ರೀತಿಯನ್ನು ನಿಕಟವಾಗಿ ಗಮನಿಸಿದ್ದ ಡೋಕ್ ಗಾಂಧೀಜಿಯನ್ನು ಅಪೂರ್ವ ಸಂತನೆಂದು ಪರಿಗಣಿಸಿದ್ದ. ಒಮ್ಮೆ ಈ ಸಮರದಲ್ಲಿ ತಮ್ಮ ಜೊತೆಗಾರರ ವಿಕೋಪಕ್ಕೆ ಗುರಿಯಾಗಿ ಗಾಂಧೀಜಿ ಬಲವಾದ ಪೆಟ್ಟು ತಿಂದು ರಸ್ತೆಯಲ್ಲಿ ಜ್ಞಾನತಪ್ಪಿ ಬಿದ್ದಾಗ ಡೋಕ್ ದಂಪತಿಗಳೇ ಅವರನ್ನು ತಮ್ಮ ಮನೆಗೆ ಕರೆದೊಯ್ದು ಶುಶ್ರೂಷೆ ಮಾಡಿದರು. ಡೋಕ್ ದಂಪತಿಗಳು ತಮ್ಮ ಸೇವೆಯಲ್ಲಿ ತಲ್ಲೀನರಾದುದನ್ನು ನೋಡಿ ಗಾಂಧೀಜಿಯ ಹೃದಯ ಕರಗಿ ಹೋಯಿತು. ಅವರ ಈ ನಿಕಟ ಬಾಂಧವ್ಯ ಕೊನೆಯುವರೆಗೆ ಹಸಿರಾಗಿಯೇ ಉಳಿಯಿತು. ಶ್ರೀಮತಿ ಡೋಕ್ ಸುಶ್ರಾವ್ಯವಾಗಿ ಹಾಡುತ್ತಿದ್ದ ಕ್ರೈಸ್ತ ಭಕ್ತಿಗೀತೆಗಳು ಗಾಂಧೀಜಿಯ ಅಹಿಂಸಾ-ಸತ್ಯ ನಿಷ್ಠೆಗಳನ್ನು ನೂರ್ಮಡಿ ದೃಢಗೊಳಿಸುವಂತಿದ್ದವು. ಡೋಕ್ ಅವರು ಬರೆದ ಗಾಂಧೀಜಿ ಜೀವನಪರಿಚಯ ಪುಸ್ತಕ ಹಾಗೂ ಸತ್ಯಾಗ್ರಹ ಸಮರದ ಮೂಲತತ್ವಗಳು ಮಹರ್ಷಿ ಟಾಲ್‌ಸ್ಟಾಯ್ ಅವರ ಮೆಚ್ಚುಗೆ ಗಳಿಸಿದ್ದವು. ಗಾಂಧೀಜಿಗೆ ಬರೆದ ಮಹತ್ವಪೂರ್ಣ ಪತ್ರದಲ್ಲಿ "ಈ ಸತ್ಯಾಗ್ರಹ ಮಾರ್ಗವೇ ಮಾನವ ಕುಲಕ್ಕೆ ಇರುವ ಆಶಾದೀಪ. ಮುಂದೆ ಒಂದು ದಿನ ಮಾನವರು ಇದನ್ನರಿತಾರು!" ಎಂದು ಟಾಲ್‌ಸ್ಟಾಯ್ ಉಲ್ಲೇಖಿಸಿದ್ದಾರೆ.

ರೊಮೆನ್ ರೋಲಾ

ನೊಬೆಲ್ ಪಾರಿತೋಷಕ ವಿಜೇತ ಫ್ರೆಂಚ್ ರೊಮೆನ್ ರೋಲಾ ಗಾಂಧೀಜಿಯ ಆತ್ಮೀಯ ಬಳಗಕ್ಕೆ ಸೇರಿದ ಇನ್ನೊಬ್ಬ ಸಂತ. ಭಾರತದಲ್ಲಿ ನಡೆದಿದ್ದ ಗಾಂಧೀಪ್ರಣೀತ ಸತ್ಯಾಗ್ರಹ ಮಾರ್ಗ ಆತನನ್ನು ಬಹುವಾಗಿ ಆಕರ್ಷಿಸಿತು. ತಮ್ಮ ಆಧ್ಯಾತ್ಮಿಕ ಸಾಧನೆಗೆ ಭಾರತದ ಪುಣ್ಯಜೀವಿಗಳಾಗಿದ್ದ ರಾಮಕೃಷ್ಣ, ವಿವೇಕಾನಂದ ಮತ್ತು ರವೀಂದ್ರನಾಥ ಠಾಕೂರರ ಮೂಲಕ ಅಖಂಡ ಸ್ಫೂರ್ತಿ ಪಡೆದಿದ್ದ ರೋಲಾ 1924ರಲ್ಲಿ ಫ್ರೆಂಚ್ ಭಾಷೆಯಲ್ಲಿ ಗಾಂಧೀ ಜೀವನ ಚರಿತ್ರೆಯನ್ನು ಬರೆದರು. ರಕ್ತಸಿಂಚಿತ ಯುದ್ಧಗಳಲ್ಲಿ ಮುಳುಗಿಹೋಗಿದ್ದ ಯೂರೋಪಿನಲ್ಲಿ ಶಾಂತಿಗಾಗಿ ಹಂಬಲಿಸುತ್ತಿದ್ದ ಮೂಕ ಜನಕೋಟಿಯ ಮುಖವಾಣಿಯಾಗಿದ್ದ ರೋಲಾ ಭಾರತದ ಅಧ್ಯಾತ್ಮ ಪರಂಪರೆಯ ವಿಭೂತಿ ಪರಂಪರೆಯನ್ನು ತಮ್ಮ ಜನಕ್ಕೆ ಪರಿಚಯಿಸಲು ಆಜನ್ಮಪರಿಯಂತ ಶ್ರಮಿಸಿದರು. ಭಾರತಕ್ಕೆ ಬರುವ ಅವರ ಹಂಬಲ ಈಡೇರಲೇ ಇಲ್ಲ. ಸತತವಾಗಿ ಗಾಂಧೀಜಿ ಮತ್ತು ಗುರುದೇವ ಠಾಕೂರರೊಡನೆ ಪತ್ರವ್ಯವಹಾರ ನಡೆಸುತ್ತಲೇ ಅವರ ಆತ್ಮೀಯರಾದರು. ಸಿ. ಎಫ್. ಆಂಡ್ರೂಸ್, ಮೀರಾ ಬಹೆನ್, ಡಾ. ಕಾಳಿದಾಸನಾಗ್ ಮುಂತಾದ ಪ್ರಸಿದ್ಧ ಗಾಂಧೀವಾದಿಗಳನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅವರು ಭಾರತದ ಬಗ್ಗೆ ಮಾಹಿತಿ ಪಡೆಯುತ್ತಿದ್ದರು. ಗಾಂಧಿಯವರೊಡನೆ ಅವರು ನಡೆಸಿದ ಪತ್ರವ್ಯವಹಾರ ಒಂದು ಸಾವಿರ ಪುಟದ ಬೃಹದ್‌ಗ್ರಂಥವಾಗಿ ಪ್ರಕಟವಾಗಿದೆ.

ಗಾಂಧೀಜಿ ಲಂಡನ್ನಿನ ದುಂಡುಮೇಜಿನ ಪರಿಷತ್ತಿನಿಂದ ಹಿಂದಿರುಗುವಾಗ 1931ರಲ್ಲಿ ಫ್ರಾನ್ಸಿನಲ್ಲಿಳಿದು ರೋಲಾ ಅವರ ನಿಸರ್ಗ ಸುಂದರ 'ವಿಲ್ಲಾ'ದಲ್ಲಿ ಅತಿಥಿಯಾಗಿ ತಂಗಿದ್ದರು. ಅದೊಂದು ಅವಿಸ್ಮರಣೀಯ ವಿಭೂತಿ ಸಮಾಗಮ. ಆನಂದದಿಂದ ಪುಳಕಿತರಾದ ರೋಲಾ ತಮ್ಮ ದಿನಚರಿಯಲ್ಲಿ ತಮ್ಮ ಪೂಜ್ಯ ಅತಿಥಿಯನ್ನು ಕುರಿತು ಹೀಗೆ ಬರೆದಿದ್ದಾರೆ. "ಆ ಅಪೂರ್ವ ನಗೆತುಂಬಿದ ಮುಖ

ಮಳೆಹನಿಯಿಂದ ತೊಯ್ದ ಅವರ ಬೋಳುತಲೆ. ಅವರು ನನ್ನನ್ನು ಆತ್ಮೀಯವಾಗಿ ಅಪ್ಪಿಕೊಂಡಾಗ ಆ ಹನಿಸಿಂಚಿತ ತಲೆ ನನ್ನ ಕೆನ್ನೆಗೆ ಹಿತವಾಗಿ ಸವರಿತು. ಆನಂದ ಪರವಶನಾದೆ. ಸಂತ ಫ್ರಾನ್ಸಿಸ್ ಸಂತ ಡೋಮಿನಿಕ್ ಸಂಧಿಸಿ ಚುಂಬಿಸಿದ ಪವಿತ್ರಮಿಲನದ ನೆನಪಾಯಿತು."

ಮೀರಾ ಬಹೆನ್ ಮೊಟ್ಟಮೊದಲಿಗೆ ಗಾಂಧೀಜಿಯ ಹೆಸರು ಕೇಳಿದ್ದು ಅವರ ಆಗಿನ ಆರಾಧ್ಯ ದೈವವೆನಿಸಿದ್ದ ರೋಲಾ ಅವರಿಂದಲೇ. 1924ರಲ್ಲಿ ಸ್ವಿಟ್ಜರ್ಲೆಂಡಿನಲ್ಲಿ ಭೇಟಿಯಾದಾಗ ಈ ಇಂಗ್ಲೀಷ್ ಶ್ರೀಮಂತ ತರುಣಿಯನ್ನು ಕುರಿತು ರೋಲಾ "ನೀನು ಗಾಂಧೀಯ ಹೆಸರು ಕೇಳಿದ್ದೀಯ? ಅವರೊಬ್ಬ ಆಧುನಿಕ ಏಸುಕ್ರಿಸ್ತ" ಎಂದರು. ಆತ್ಮಸಾಧನೆಯ ಹಂಬಲದಿಂದ ಗುರುವನ್ನು ಅರಸುತ್ತಿದ್ದ ಪರಮಭಕ್ತೆ ಈ ಮ್ಯಾಡಲೀನ್ ಸ್ಲೇಡ್ ಆ ಗಳಿಗೆಯಲ್ಲೇ ಗಾಂಧೀ ಪ್ರಭಾವ ಸೌರಭಕ್ಕೆ ಮಾರುಹೋದರು.

ಇತರ ಬಂಧುಗಳು

ಲಂಡನ್ನಿನ ಭೇಟಿಯಲ್ಲಿ ಗಾಂಧೀಜಿಯ ಪ್ರಭಾವಕ್ಕೆ ಆಕರ್ಷಿತರಾಗಿ ತಮ್ಮ ಜೀವನ ಶೈಲಿಯನ್ನು ಸತ್ಯ-ಅಹಿಂಸಾ ಮಾರ್ಗದ ನೆಲೆಯಲ್ಲಿ ಪರಿವರ್ತಿಸಿಕೊಂಡ ಶಿಷ್ಯವಲಯ ಅಪಾರ. ಅಲ್ಲಿನ ಬಡವರ ವಸತಿಯಲ್ಲಿ ಸೇವಾನಿರತರಾಗಿ ವೆಸ್ಟ್‌ಎಂಡ್‌ನಲ್ಲಿ ಕ್ವೇಕರ್ ಪಂಥದವರು ಒಂದು ಕೇಂದ್ರವನ್ನು ನಡೆಸುತ್ತಿದ್ದರು. ಅದರ ಮುಖ್ಯಸ್ಥೆ ಮ್ಯೂರಿಯಲ್ ಲೆಸ್ಟರ್ ಅವರ ಅತಿಥಿಯಾಗಿಯೇ ಗಾಂಧೀಜಿ 1931ರಲ್ಲಿ ತಂಗಿದ್ದರು. ಬ್ರಿಟಿಷ್ ಸರ್ಕಾರದ ವೈಭವೋಪೇತ ಅತಿಥಿಗೃಹಗಳಿಗೆ ಹೋಗದೆ ಈ ಭಾರತದ ಸ್ವಾತಂತ್ರ್ಯ ಬೆಂಬಲಿಗರೂ, ಬಡವರ ಬಂಧುಗಳೂ ಆದ ಮಿತ್ರರಲ್ಲಿ ಇಳಿದುಕೊಂಡಾಗ ಅನೇಕ ಸಹೃದಯ ಇಂಗ್ಲೀಷರು ಅವರಿಗೆ ಆತ್ಮೀಯರಾಗಿಬಿಟ್ಟರು. ಮ್ಯೂರಿಯಲ್ ಲೆಸ್ಟರ್ ಅನೇಕ ಬಾರಿ ಭಾರತಕ್ಕೆ ಬಂದು ಇಲ್ಲಿಯೂ ಸೇವಾಕಾರ್ಯಗಳನ್ನು ಕೈಗೊಂಡರು. ಹಾಗೆಯೇ ಅಗಥಾ ಹ್ಯಾರಿಸನ್ ಕಿಂಗ್ಸ್ಲೆ ಮಾರ್ಟಿನ್, ಹೊರೆಸ್ ಅಲೆಕ್ಸಾಂಡರ್,

ರೋನಾಲ್ಡ್ ರೈನಾಲ್ಡ್ಸ್ ಮುಂತಾದ ಅನೇಕ ಮಿತ್ರರು ಗಾಂಧೀ ಬಳಗಕ್ಕೆ ಸೇರಿ ಹೋದರು. ಗಾಂಧೀಗಾಳಿ ಪ್ರಚಂಡವಾಗಿ ಬೀಸಿ ಯಾರನ್ನು ಬ್ರಿಟಿಷ್ ಸರ್ಕಾರ ತನ್ನ ಪ್ರಬಲ ಪ್ರತಿರೋಧಿ ಎಂದು ಭಾವಿಸಿ ಆಕ್ರೋಶಗೊಂಡಿತ್ತೋ ಆ ಪ್ರೇಮಮೂರ್ತಿ ಆ ನಾಡಿನಲ್ಲೇ ಸಾಮಾನ್ಯರ ಹೃದಯ ಸಾಮ್ರಾಜ್ಯವನ್ನು ಗೆದ್ದುಕೊಂಡಿತ್ತು. ಅವರು ಲಂಡನ್ನಿನಲ್ಲಿದ್ದಾಗ ಚಿತ್ರನಟ ಚಾರ್ಲಿಚಾಪ್ಲಿನ್‌ಗೆ ಭಾರತದ ಈ ಅರೆನಗ್ನ ಅದ್ಭುತ ವ್ಯಕ್ತಿಯ ಬಗ್ಗೆ ಕೇಳಿ ಅತ್ಯಾಶ್ಚರ್ಯವೆನಿಸಿತು. ಅವರೇಕೆ ಯಂತ್ರನಾಗರಿಕತೆಯ ವಿರೋಧಿ ಎಂದು ಕುತೂಹಲವಾಯಿತು. ಪಾಶ್ಚಿಮಾತ್ಯ ಸಮಾಜದಲ್ಲಿ ಹರಡುತ್ತಿದ್ದ ಮಾನವತಾ ಶೂನ್ಯ ನಡವಳಿಕೆ, ಬಡವರ ಬಗ್ಗೆ ಅಸಹ್ಯ ತಿರಸ್ಕಾರ ದುಡಿಮೆಗಾರರನ್ನು ಯಂತ್ರಗಳಂತೆಯೇ ದುಡಿಸಿಕೊಳ್ಳುವ ಅಮಾನುಷ ಮನೋಧರ್ಮ ಚಾಪ್ಲಿನ್ನನನ್ನು ಕಾಡುತ್ತಿತ್ತು. ನೇರವಾಗಿ ಗಾಂಧೀಜಿ ಬಳಿಗೆ ಬಂದು ಕುಳಿತು ಚರ್ಚಿಸಿದರು. ಈ ಅಹಿಂಸಕ ಕ್ರಾಂತಿನಾಯಕನ ನೇರಕರ್ತ, ಅವರ ತತ್ವನಿಷ್ಠೆ, ಪ್ರೇಮ ಅನುಕಂಪಗಳು ಅಪ್ರತಿಹತವೆನಿಸಿದವು. ಮುಂದೆ ಚಾಪ್ಲಿನ್ ನಿರ್ಮಿಸಿದ 'ಮಾಡರ್ನ್ ಟೈಮ್ಸ್' ಎಂಬ ವಿಡಂಬನಪ್ರಧಾನ ಮೂಕಚಿತ್ರ ಆಧುನಿಕ ನಾಗರಿಕತೆ ಹೇಗೆ ಮಾನವನನ್ನೇ ಜಡಯಂತ್ರವನ್ನಾಗಿ ಮಾರ್ಪಡಿಸುತ್ತಿದೆ ಎಂಬುದನ್ನು ಮನೋಜ್ಞವಾಗಿ ಪ್ರದರ್ಶಿಸಿತು. ನಾಲ್ಕು ದಶಕಗಳಿಗೂ ಮೀರಿ ಇಂದಿಗೂ ಆ ಚಲನಚಿತ್ರ ಜನಪ್ರಿಯವಾಗಿ ನಡೆಯುತ್ತಿದೆ. ಗಾಂಧೀ ಮಾರ್ಗದ ಸಮರ್ಥ ಪ್ರತಿಪಾದನೆ ಎಂದು ಪ್ರಸಿದ್ಧವಾಗಿದೆ. ಗಾಂಧೀ ಮತ್ತು ಚಾಪ್ಲಿನ್ ಅವರ ಸಮಾಗಮ ಒಂದು ಅಪೂರ್ವ ಸಂದರ್ಭ. ಆ ಪ್ರಭಾವ ಚಾಪ್ಲಿನ್ನನ ಮನೋಭೂಮಿಕೆಯ ಮೇಲೆ ಶಾಶ್ವತವಾಗಿ ಅಚ್ಚೊತ್ತಿ ನಿಂತಿತ್ತು.

ಗಾಂಧೀ ಬಳಗಕ್ಕೆ ಸೇರಿಹೋದ ಅಮೆರಿಕನ್ನರು ಅನೇಕರಿದ್ದರು. ಸುಪ್ರಸಿದ್ಧ ಪಾದ್ರಿ ರೆವರೆಂಡ್ ಹೈಲ್ಸ್ ಹೋಮ್ಸ್ ಬರೆದ ಗಾಂಧೀ ಜೀವನ ಚರಿತ್ರೆ ಮೂವತ್ತರ ದಶಕದಲ್ಲೇ ಪ್ರಕಟವಾಗಿತ್ತು. ಪಾಶ್ಚಿಮಾತ್ಯ

ದೇಶಗಳಲ್ಲಿ ಅದು ಇಂದಿಗೂ ಓದುಗರ ಗಮನ ಸೆಳೆಯುತ್ತಿದೆ. ಹಾಗೆಯೇ ಗಾಂಧೀಜಿಯ ಕ್ರಾಂತಿಕಾರಕ ಆರ್ಥಿಕ ನೀತಿಧೋರಣೆಗಳನ್ನು ಆಳವಾಗಿ ಅಭ್ಯಸಿಸಿ ಭಾರತಕ್ಕೆ ಬಂದ ಶಾಸ್ತ್ರಜ್ಞ ರಿಚರ್ಡ್ ಗ್ರೆಗ್ ಖಾದಿಯ ಅರ್ಥಶಾಸ್ತ್ರವನ್ನು ಸಮರ್ಥವಾಗಿ ಪ್ರತಿಪಾದಿಸಿ ಅನೇಕ ಪುಸ್ತಕಗಳನ್ನು ಬರೆದರು. ಆಶ್ರಮವಾಸಿಯಾಗಿ, ಸರಳಜೀವಿಯೆನಿಸಿ, ಖಾದಿ ಉಡುಪನ್ನೇ ಕೊನೆಯವರೆಗೆ ಧರಿಸಿ ಮೂರು ದಶಕಗಳ ಕಾಲ ಗಾಂಧೀವಾದಿಗಳ ಪ್ರಮುಖ ಬೆಂಬಲಿಗರಾಗಿದ್ದರು. ರಿಚರ್ಡ್‌ಗ್ರೆಗ್ ಅಹಿಂಸಾ ಸಮಾಜದ ರೂಪರೇಷೆಗಳನ್ನು ಗ್ರೆಗ್ ಪದರಪದರವಾಗಿ ಸರಳಭಾಷೆಯಲ್ಲಿ ವಿವರಿಸಿದ್ದಾರೆ. ನವಜೀವನ ಪ್ರಕಾಶನದವರು ಪ್ರಕಟಿಸಿರುವ ಅವರ ಕೃತಿಗಳು 'ಎ ಡಿಸಿಪ್ಲಿನ್ ಫಾರ್ ನಾನ್‌ವಯೋಲೆನ್ಸ್', 'ಎಕನಾಮಿಕ್ಸ್ ಆಫ್ ಖಾದಿ,' 'ವ್ಹಿಚ್ ವೆ ಲೈಸ್ ಹೋಪ್ಸ್', 'ಪವರ್ ಆಫ್ ನಾನ್‌ವಯೊಲೆನ್ಸ್', ರಿಚರ್ಡ್‌ಗ್ರೆಗ್ ಅವರ ಕೊನೆಯ ಕೃತಿ "ಎ ಕಂಪಾಸ್ ಫಾರ್ ಸಿವಿಲಿಜೇಷನ್" ನಾಗರಿಕತೆಗೆ ದಿಗ್ದರ್ಶನ ಮಾಡುವ ಅಮೂಲ್ಯ ಗ್ರಂಥ. ಮಾನವೀಯತೆಯ ಉಳಿವಿಗಾಗಿ ನಮ್ಮ ಜೀವನದೃಷ್ಟಿಯೇ ಬದಲಾಗಬೇಕೆಂಬ ಗಾಂಧೀವಾದಕ್ಕೆ ಈ ಕೃತಿ ಪುಷ್ಟಿಕೊಟ್ಟಿತು. ಏಸುಕ್ರಿಸ್ತನ ಬೋಧೆಗಳಿಗನುಗುಣವಾಗಿ ಕ್ರಿಶ್ಚಿಯನ್ ಪ್ರಪಂಚ ತತ್ವನಿಷ್ಠವಾಗಿ ನಡೆಯಲು ಪ್ರಾಮಾಣಿಕ ಪ್ರಯತ್ನ ಮಾಡಿದಲ್ಲದೆ ವಿಶ್ವಶಾಂತಿ ಎಂದೂ ಕೈಗೂಡದು ಎಂದು ಗ್ರೆಗ್ ಕೊನೆಯುಸುರಿನ ವರೆವಿಗೂ ಪ್ರತಿಪಾದಿಸಿದರು.

ಅಮೆರಿಕದಿಂದ ಬಂದು ಭಾರತದಲ್ಲಿ ನೆಲಸಿ ಗಾಂಧಿಪ್ರಣೀತ ರಚನಾತ್ಮಕ ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ತ್ಯಾಗಜೀವಿ ರೆವೆರೆಂಡ್ ರಾಲ್ಫ್ ರಿಚರ್ಡ್ ಖೈಥಾನ್ ಬೆಂಗಳೂರಿನವರಿಗೆ ಚಿರಪರಿಚಿತರಾಗಿದ್ದರು. ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಬಂದವರು ಸಂಪೂರ್ಣವಾಗಿ ಸರ್ವಧರ್ಮ ಸಮನ್ವಯಾಚಾರ್ಯರೆನಿಸಿದ ಈ ಸೇವಾಶರಣ ಸಾಮಾಜಿಕ ಕಾರ್ಯಕರ್ತ 1937ರಲ್ಲಿ ಕೆಂಗೇರಿ ಗುರುಕುಲಾಶ್ರಮದ ಸಂಸ್ಥಾಪಕರಲ್ಲೊಬ್ಬರಾದರು.

ವೈದ್ಯಳಾದ ಪತ್ನಿಯೊಡನೆ ಹಳ್ಳಿಯಲ್ಲಿ ನೆಲಸಿ ಗ್ರಾಮಪುನರುಜ್ಜೀವ ಕಾರ್ಯದಲ್ಲಿ ಮಗ್ನರಾಗಿದ್ದರು. ಬೆಂಗಳೂರಿನ ದೀನಸೇವಾ ಸಂಘ, ಹರಿಜನಬಾಲಕರಿಗಾಗಿ ಗಾಂಧೀ ಪಾಠಶಾಲೆ, ಅನಾಥಾಶ್ರಮಗಳಲ್ಲೆಲ್ಲ ತದೇಕಚಿತ್ತರಾಗಿ ಸೇವೆ ಸಲ್ಲಿಸಿದ್ದರು. ಸ್ವಾತಂತ್ರ್ಯಾನಂತರ ತಮಿಳುನಾಡಿನ ಗಾಂಧಿ ಗ್ರಾಮ ಸಂಸ್ಥೆಗಳು, ಕುಮಾರಪ್ಪನವರ ಕಲ್ಲುಪಟ್ಟಿ, ಆಶ್ರಮಗಳೊಡನೆ ಸಹಕರಿಸಿ ಕೆಲಸ ಮಾಡಿದರು. ಕೊನೆಗೆ ಕೊಡೈಕೆನಾಲ್ ಬಳಿ ಬಟ್ಲಗುಂಡು ಎಂಬ ಗ್ರಾಮದಲ್ಲಿ ತಮ್ಮದೇ ಆದ ಸೇವಾ ಕೇಂದ್ರ ಸ್ಥಾಪಿಸಿದರು. ಬಡವರಲ್ಲಿ ಬಡವರಂತೆ ಜೀವಿಸುತ್ತಾ ಸರ್ವೋದಯ ಚಳುವಳಿಯಲ್ಲಿ ಭಾಗವಹಿಸಿದ್ದರು. ವಿನೋಬಾಜಿ ಅವರ ಭೂದಾನ-ಗ್ರಾಮದಾನ ಪಾದಯಾತ್ರೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅಖಿಲ ಭಾರತ ಸರ್ವೋದಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

ಜರ್ಮನಿಯಲ್ಲಿ ಹುಟ್ಟಿ ಇಂಗ್ಲೆಂಡಿನಲ್ಲಿ ಬೆಳೆದು ಭಾರತಕ್ಕೆ ಶಿಕ್ಷಕಿಯಾಗಿ ಬಂದು ನೆಲೆಸಿದ್ದ ಮಿಸ್ ಕ್ಯಾಥಲಿನ್ ಹಿಲ್‌ಮನ್ ಮತ್ತೊಬ್ಬ ಗಾಂಧೀ ಶರಣೆ. ಗಾಂಧಿ ಬಳಗಕ್ಕೆ ಸರಳಾದೇವಿ ಎಂದು ಚಿರಪರಿಚಿತರಾದ ಈಕೆ ಸೇವಾಗ್ರಾಮದ ಆಶ್ರಮದಲ್ಲಿ ಮೂಲಶಿಕ್ಷಣ ಶಾಲೆಯ ಅಧ್ಯಾಪಕಿಯಾದರು. 1942ರಲ್ಲಿ ಹಿಮಾಲಯ ತಪ್ಪಲಿನ ಕೌಸಾನಿಯಲ್ಲಿ ಲಕ್ಷ್ಮಿ ಆಶ್ರಮ ಸ್ಥಾಪಿಸಿ ಗುಡ್ಡಗಾಡಿನ ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಸೇವೆಯಲ್ಲಿ ನಲವತ್ತು ವರ್ಷ ದುಡಿದರು. ಅರಣ್ಯ ಪರಿಸರದ ನಾಶವನ್ನು ಪ್ರತಿಭಟಿಸಿ 'ಚಿಪ್ಕೊ' ಚಳುವಳಿಗೆ ಸ್ಫೂರ್ತಿ ನೀಡಿದರು ಸರಳಾದೇವಿ.

ಆಚಾರ್ಯ ವಿನೋಬಾ ಅವರ ನಿಕಟಾನುವರ್ತಿಗಳಾಗಿ ಅವರು ಪ್ರಾರಂಭಿಸಿದ ಸ್ತ್ರೀ ಶಕ್ತಿ ಜಾಗೃತಿ ಆಂದೋಲನಕ್ಕೆ ಬೆಂಬಲ ನೀಡುತ್ತಾ ದೇಶದಲ್ಲೆಲ್ಲಾ ಪರ್ಯಟನ ಮಾಡುತ್ತಿದ್ದರು. ಈ ಸೇವಾನಿರತವೃದ್ಧೆ ಕರ್ನಾಟಕದಲ್ಲಿ ಹಲವು ತಿಂಗಳ ಕಾಲ ಸಂಚರಿಸಿ ಕಾರ್ಯಕರ್ತರಿಗೆ ಬಲ ನೀಡುತ್ತಿದ್ದರು. 1980ರಲ್ಲಿ ಅವರು ನಿಧನರಾದಾಗ

ಗ್ರಾಮಸೇವಾನಿರತ ಗಾಂಧೀವಾದಿಗಳಿಗೆ ಮಾತೃಸದೃಶ ಶಕ್ತಿಯೊಂದು ಕಣ್ಮರೆಯಾದಂತಾಯಿತು.

ಫ್ರಾನ್ಸಿನ ಶಾಂತಿದಾಸ್ ಎಂದು ಪ್ರಖ್ಯಾತರಾದ ಲೆನಾರ್ಡೋಡವಾಸ್ಟಾ ಯೂರೋಪಿನ ಪ್ರಚಂಡ ಅಣುಯುಗ ನಾಗರಿಕತೆಯ ಮಧ್ಯದಲ್ಲೇ ಗಾಂಧೀವಿಚಾರ ಪ್ರತಿಪಾದಕರಾಗಿ ತಮ್ಮ ಜೀವನ ಪ್ರಯೋಗಗಳನ್ನು ರೂಪಿಸಿಕೊಂಡವರು. ಪ್ಯಾರಿಸ್ಸಿನ ಬಳಿ 'ಆರ್ಕ್' ಎಂಬ ನೂತನ ಶ್ರಮಜೀವನ ಪ್ರಧಾನ ಸರಳಬಾಳಿನ ತಾತ್ವಿಕ ಅನುಷ್ಠಾನಕ್ಕಾಗಿ ಆಶ್ರಮವನ್ನು ಸ್ಥಾಪಿಸಿ ನಡೆಸಿದರು. ವ್ಯವಸಾಯ, ಸ್ವಂತ ಪರಿಶ್ರಮದ ಗ್ರಾಮ ಕೈಗಾರಿಕೆಗಳ ಮೂಲಕ ಎಲ್ಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು, ಸರ್ವಧರ್ಮ ಸಮಭಾವ, ಅಹಿಂಸಾತ್ಮಕ ಸಮಾಜ-ರಚನೆ ಇವು 'ಆರ್ಕ್' ವಸತಿ ಕ್ಷೇತ್ರದ ಧ್ಯೇಯಗಳು. ಗಾಂಧೀಜಿಯೇ ಶಾಂತಿದಾಸ್ ಅವರ ಪ್ರೇರಣಾಶಕ್ತಿ. ಭಾರತಕ್ಕೆ ಅನೇಕ ಬಾರಿ ಬಂದು ಗಾಂಧಿ ಬಳಗದವರೊಡನೆ ಬಾಂಧವ್ಯ ಬೆಳೆಸಿ ಆಶ್ರಮಗಳಲ್ಲಿ ಬಿಡಾರಮಾಡುತ್ತಿದ್ದರು. 'ಆರ್ಕ್' ಈಗಲೂ ಒಂದು ಪ್ರಯೋಗ ಕ್ಷೇತ್ರವಾಗಿ ಅನೇಕ ವಿದೇಶೀ ಸಾಧಕರನ್ನು ಆಕರ್ಷಿಸಿದೆ. ಮಾನವೀಯ ಮೌಲ್ಯಗಳ ಅಹಿಂಸಾ ಪ್ರಧಾನ ವಿಶ್ವಮಾನವ ಸಮಾಜದ ತಾತ್ವಿಕ ಜಿಜ್ಞಾಸುಗಳಿಗೆ ಅದೊಂದು ಯಾತ್ರಾಸ್ಥಳ.

ಸಿಸಿಲಿ ದೇಶದಲ್ಲಿ ನೆಲಸಿ ಅಲ್ಲಿನ ಬಡ ಮೀನುಗಾರರ ಮಧ್ಯೆ ಸಾಮಾಜಿಕ ಆರ್ಥಿಕ ಮೇಲ್ಮೆಗಾಗಿ ಆಜೀವ ಸೇವಾನಿರತರಾದ ಡಯಾನೋ ಡೋಲ್ಚಿ ಮತ್ತೊಬ್ಬ ಗಾಂಧೀವಾದಿ. ಯುದ್ಧ ವಿರೋಧಿ ಚಳುವಳಿಗಳು, ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಬಡತನದ ಭವಣೆಗೆ ಸತತವಾಗಿ ನೂಕಲ್ಪಡುವ ದುಡಿಮೆಗಾರರ ಪರವಾದ ಚಳುವಳಿಗಳು, ಅಣ್ವಸ್ತ್ರ ನಿಷೇಧ ಚಳುವಳಿ ಮುಂತಾದವುಗಳ ಮುಂಚೂಣಿಯಲ್ಲಿ ಡೋಲ್ಚಿ ಅವಿರತವಾಗಿ ಕಾರ್ಯನಿರತರು. ಗಾಂಧೀವಿಚಾರ ಪ್ರಚಾರಕ್ಕಾಗಿ ಜಮ್ನಲಾಲ್ ಬಜಾಜ್ ಟ್ರಸ್ಟಿನವರು ನೀಡುವ ಅಂತರ್ರಾಷ್ಟ್ರೀಯ ಪ್ರಶಸ್ತಿ ವಿಜೇತರು.

ಬರಲಿರುವ ಮಾನವ ಇತಿಹಾಸಕ್ಕೆ ಗಾಂಧೀಜೀವನ ಮೌಲ್ಯಗಳು ಅತ್ಯಂತ ಅಮೂಲ್ಯ ಕೊಡುಗೆ ಎನ್ನುತ್ತಾರೆ ಸುಪ್ರಸಿದ್ಧ ಇತಿಹಾಸಕಾರ ಇಂಗ್ಲೆಂಡಿನ ಆರ್ನಾಲ್ಡ್ ಟಾಯನ್‌ಬಿ. ಅಣುಶಕ್ತಿಯ ರಾಕ್ಷಸೀ ಪ್ರಭಾವಗಳನ್ನು ತಡೆಗಟ್ಟಿ ಮಾನವನನ್ನು ಮಾನವೀಯತೆಯ ಆತ್ಮ ಸಂಸ್ಕಾರದ ಸುಪಥದಲ್ಲಿ ತೊಡಗಿಸಿ ವಿಶ್ವಶಾಂತಿ ಸಾಧಿಸುವ ಮಾರ್ಗವನ್ನು ಗಾಂಧೀಜಿ ಅನಾವರಣ ಮಾಡಿರುವರೆಂದು ಜಗತ್‌ಪ್ರಸಿದ್ಧ ಚಿಂತಕ ಶ್ರೇಷ್ಠರು ಅಂದಿಗೂ ಇಂದಿಗೂ ಪ್ರಬಲವಾಗಿ ಪ್ರತಿಪಾದಿಸುತ್ತಲೇ ಬರುತ್ತಿದ್ದಾರೆ. ಅವರ ಸತ್ಯಶೋಧನೆಯ ಪ್ರಯೋಗಗಳಿಗೆ ಆಕರ್ಷಿತರಾಗಿ ವಿಪುಲ ವ್ಯಾಖ್ಯಾನಗಳನ್ನು ಬರೆದಿರುವ ವಿದೇಶೀ ಮಹಾಚೇತನಗಳು ಹಲವರು. ಜಪಾನಿನ ಡಾ. ಕಗಾವಾ, ಇಂಗ್ಲೆಂಡಿನ ಪರ್ಲ್‌ಬಕ್, ವಿಜ್ಞಾನಿ ಹಾಲ್ಡೇನ್, ಸ್ವೀಡನ್ನಿನ ಗುನ್ನಾರ್‌ಮಿರ್ಡಲ್, ನೀಗ್ರೋ ನಾಯಕರಾದ ಮಾರ್ಟಿನ್‌ಲೂಥರ್ ಕಿಂಗ್, ಬಿಯಾರ್ಡ್ ರಸ್ಕಿನ್, ಇಂಗ್ಲೆಂಡಿನ ಫಿಲಿಪ್‌ನೋಯಲ್ ಬೇಕರ್–ಹೀಗೆ ಈ ವಿಶ್ವಶಾಂತಿ ಅನ್ವೇಷಕರ ಜ್ಯೋತಿಪಥ ಗಾಂಧೀವಿಚಾರ ಮಾರ್ಗವನ್ನು ಪ್ರಚಂಡವಾಗಿ ಪ್ರಚುರಪಡಿಸಿದೆ. 1915ರಿಂದ ಭಾರತದ ಭಾಗ್ಯವಿದಾತ ಎಲ್ಲರ ಭಾವನಾ ಕ್ಷಿತಿಜಗಳನ್ನು ಆವರಿಸಿ ಜಗತ್ತಿನ ಚಿಂತನಧಾರೆಗೆ ಹೊಸ ಆಯಾಮಗಳನ್ನು ಸೃಷ್ಟಿಸಿದ್ದಾನೆ.

ಗಾಂಧೀಜಿಯನ್ನು ವೈಯಕ್ತಿಕವಾಗಿ ಕಾಣದಿದ್ದರೂ ಅವರ ವಿಶಿಷ್ಟ ಶಕ್ತಿಗಳಿಗೆ ಮಾರುಹೋದ ಅಣುಶಕ್ತಿ ಸಂಶೋಧಕ ಆಲ್ಬರ್ಟ್ ಐನ್‌ಸ್ಟೀನ್ 1939ರಲ್ಲಿ ಗಾಂಧೀಜಿಯ ಎಪ್ಪತ್ತನೇ ಹುಟ್ಟುಹಬ್ಬದ ಸಂದರ್ಭಕ್ಕೆ ಕಳುಹಿಸಿದ ಸಂದೇಶ ಆ ವಿಜ್ಞಾನವಿಭೂತಿ ಈ ಆತ್ಮವಿಜ್ಞಾನ ಸಂಶೋಧಕನಿಗೆ ನೀಡಿದ ಅವಿಸ್ಮರಣೀಯ ಶ್ಲಾಘನೆ. ಎಲ್ಲ ಕಾಲಕ್ಕೂ ಮಾನವನಿಗೆ ಮಾರ್ಗದರ್ಶನ ಮಾಡುವಂತಹ ಅವರ ವಾಕ್ಯಗಳು ಹೀಗಿವೆ:–

"ಯಾವ ಬಾಹ್ಯ ಅಧಿಕಾರಶಕ್ತಿಯನ್ನೂ ಪಡೆಯದಿರುವ ಈ ಜನನಾಯಕ; ಯಾವ ಯುಕ್ತಿ ಕೌಶಲಗಳಿಂದಾಗಲಿ, ತಾಂತ್ರಿಕ

ಉಪಕರಣಗಳ ಸಹಾಯದಿಂದಾಗಲಿ ಅಲ್ಲದೆ ಕೇವಲ ತನ್ನ ವ್ಯಕ್ತಿ ಪ್ರಭಾವದ ಶಕ್ತಿಯಿಂದಲೇ ಜಯಗಳಿಸಿದ ರಾಜಕಾರಣಿ; ಬಲಾತ್ಕಾರದ ಮುಷ್ಟಿಯುನ್ನು ಸತತವಾಗಿ ತಿರಸ್ಕರಿಸುತ್ತಲೇ ವಿಜಯಿಯಾದ ಧೀರಯೋಧ; ವಿನಯಶೀಲನಾದ ಜ್ಞಾನಿ; ದೃಢಸಂಕಲ್ಪ ಬದ್ಧನಾಗಿ ನಡೆದ ಧೈರ್ಯಶಾಲಿ ಮಹಾತ್ಮ ಗಾಂಧಿ. ತನ್ನ ಸಕಲ ಸಾಮರ್ಥ್ಯವನ್ನೂ ತನ್ನ ಜನತೆಯ ಮೇಲ್ಮೆಗಾಗಿಯೇ ಅವರ ಸ್ಥಿತಿ ಸುಧಾರಣೆಗಾಗಿಯೇ ವಿನಿಯೋಗಿಸುತ್ತಾ ಇರುವ ಧುರೀಣ. ಯೂರೋಪಿನ ಬರ್ಬರ ದಬ್ಬಾಳಿಕೆಯನ್ನು ಒಬ್ಬ ಧೀಮಂತ ಸರಳ ಸಾಮಾನ್ಯ ಮಾನವನಾಗಿಯೇ ನಿಂತು ಎದುರಿಸಿ ಎಲ್ಲ ಸಂಘರ್ಷದಲ್ಲೂ ಇತರರಿಗಿಂತ ಮೇಲ್ಮಟ್ಟದಲ್ಲೇ ನಿಂತ ಮಹಾವ್ಯಕ್ತಿ ಗಾಂಧಿ.

"ಇಂಥ ಒಬ್ಬ ಧೀರ ಮಾನವ ದೇಹ ಹೊತ್ತು ನಮ್ಮ ಈ ಭೂಮಿಯ ಮೇಲೆ ಓಡಾಡುತ್ತಿದ್ದನೆಂಬುದನ್ನೇ ಬರಲಿರುವ ಪೀಳಿಗೆಗಳವರು ನಂಬುವುದು ಕಷ್ಟವಾದೀತು." (ಆಲ್ಬರ್ಟ್ ಐನ್‌ಸ್ಟೀನ್ – ಐಡಿಯೊಸ್ ಅಂಡ್ ಒಪಿನಿಯನ್ಸ್ ರೂಪಾ ಪ್ರಕಟನೆ, ಪು. 77–78).

ಗಾಂಧೀ ಬಳಗದ ಈ ವಿದೇಶೀ ಚಿಂತಕರ ಪರಂಪರೆ ಇಂದಿಗೂ ವರ್ಧಿಸುತ್ತಲೇ ಇದೆ. ಜಗತ್ತು ಆಧುನಿಕ ವೈಜ್ಞಾನಿಕ ಪ್ರಗತಿಯಲ್ಲಿ ಧಾವಿಸುತ್ತಾ ಮಾನವನ ಆಂತರಂಗಿಕ ನೆಮ್ಮದಿಯನ್ನು ನುಚ್ಚುನೂರು ಮಾಡುತ್ತಿರುವ ಸಂದರ್ಭದಲ್ಲಿ ಮತ್ತೆ ಮತ್ತೆ ಗಾಂಧಿ ವಿಚಾರಮಾರ್ಗ ನಿರಂತರ ಆಶಾಕಿರಣವಾಗಿ ಚಿಮ್ಮುತ್ತಲೇ ಇರುತ್ತದೆ.

1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಕಾಲಕ್ಕೆ ಇಂಗ್ಲೆಂಡಿನ "ಮ್ಯಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಗೆ 'ನಾಳಿನ ಜಗತ್ತು' ಎಂಬ ಶೀರ್ಷಿಕೆಯಲ್ಲಿ ಗಾಂಧೀಜಿ ಬರೆದ ಲೇಖನ ಜಗತ್ಪ್ರಸಿದ್ಧ. ಆದರೆ ಕೆಲವು ವಾಕ್ಯಗಳು ಹೀಗಿವೆ:–

"…. ನನಗೆ ಕಾಣುವಂತೆ, ಬರಲಿರುವ ಮಾನವ ಸಮಾಜಕ್ಕೆ ಅಹಿಂಸೆಯೇ ತಳಹದಿಯಾಗಿದ್ದೀತು; ಆಗಲೇಬೇಕು. ಅದೇ ಪ್ರಥಮ ನಿಯಮ. ಆ ನಿಯಮದಿಂದಲೇ ಉಳಿದೆಲ್ಲ ಶುಭಪ್ರಸಾದ ಹರಿದು ಬಂದಾವು. ಅಂತೆಯೇ ಅದು ಪ್ರಥಮ ನಿಯಮ… ದ್ವಿತೀಯ ಮಹಾನಿಯಮ ಸರ್ವಸಮವಿಭಾಗ ಎಂದು ನಾನು ನಂಬಿದ್ದೇನೆ. ಪ್ರತಿಯೊಬ್ಬನಿಗೂ ನೆಮ್ಮದಿಯಿಂದ ಬದುಕಲು ಬೇಕಾದ ಸೌಲಭ್ಯ ವಿರತಣೆಯೇ ಈ ಮಹಾನಿಯಮ……

….. ನೀಚ ಸ್ವಾರ್ಥದ ಸಂಗ್ರಹ ಬುದ್ಧಿ ತೊರೆದು ಲೋಕವನ್ನು ಇಡಿಯಾಗಿ ಕಂಡು, ಲೋಕಹಿತ ಹಾದಿಯನ್ನು ವ್ಯಕ್ತಿಗಳು ಹಿಡಿದಿದ್ದಾರೆ; ಅಂಥ ಪರಿವರ್ತನೆ ಆಗಿದೆ. ಒಂದು ಜೀವಿಯಲ್ಲಿ ಈ ಪರಿವರ್ತನೆ ಆಗಬಲ್ಲುದಾದರೆ ಇಡೀ ಸಮಾಜದಲ್ಲಿಯೂ ಆಗಬಲ್ಲದು.. ನಾಳಿನ ಜಗತ್ತಿನಲ್ಲಿ ಬಡತನವಿರದು, ಯುದ್ಧವಿರದು, ರಕ್ತಕ್ರಾಂತಿಯಿರದು… ಕಟ್ಟಕಡೆಗೆ ವಿನಯಪೂರ್ಣವಾಗಿ ಮಾನವಲೋಕ ದೇವರಿಗೆ, ದೇವರ ನಿರಂತರವಾದ ಸಚೇತನ ನಿಯಮಕ್ಕೆ ಶರಣುಹೋದೀತು."

(ಹರಿಜನ ಪತ್ರಿಕೆ, ಆಗಸ್ಟ್ 16, 1942)

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	02.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896 ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋಯರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್‌ನ ಕೋರ್ ನೇತೃತ್ವ	1899 ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906 ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915
ಸಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ,	

ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿಗಾಗಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಸೇವೆಗಾಗಿ ನಿಧಿ ಸಂಗ್ರಹಣೆ	1933
ಹರಿಜನ್ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00
24.	ಸ್ವಾತಂತ್ರ್ಯ	25–00
25.	ಅಸ್ಪೃಶ್ಯತೆ	30–00
26.	ಒಳ್ಳೆಯ ಜೀವನ	25–00

27.	ಪ್ರಾರ್ಥನೆ	25–00
28.	ಗಾಂಧೀ ಮತ್ತು ಕರ್ನಾಟಕ	200–00
29.	ಸತ್ಯ	30–00
30.	ವಿದ್ಯಾರ್ಥಿಗಳಿಗಾಗಿ	30–00
31.	ಸರ್ವೋದಯ	30–00
32.	ಖಾದಿ ಗ್ರಾಮೋದ್ಯೋಗ	30–00
33.	ನನ್ನ ಬಾಲ್ಯದ ನೆನಪುಗಳು	30–00
34.	ಗ್ರಾಮರಾಜ್ಯ ಆಡಳಿತ	5–00
35.	ನನ್ನ ಕನಸಿನ ಸ್ವರಾಜ್ಯ	5–00
36.	ಗಾಂಧೀ ಮತ್ತು ಹಾಸ್ಯ	20–00
37.	ನನ್ನ ಆದರ್ಶಗ್ರಾಮ	5–00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	48–00
39.	ಸತ್ಯಾಗ್ರಹಿ	40–00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
43.	ಸತ್ಯಾಗ್ರಹ	5–00
44.	ಹಿಂದ್ ಸ್ವರಾಜ್	5–00
45.	ಆರೋಗ್ಯ	5–00
46.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
47.	ಬಹುರೂಪಿ ಗಾಂಧಿ	10–00
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
49.	ಕೃತಯುಗಿ ವಿನೋಬಾ ಭಾವೆ	15–00
50.	ಮೋಹನ ತರಂಗ	40–00
51.	ನಮ್ಮ ಗಾಂಧಿ ತಾತ	5–00

52.	ಗೀತಾ ಪ್ರವಚನ	80–00
53.	ಜೆ.ಪಿ. ಜೀವನ ಹಾದಿ	45–00
54.	ಗಣ್ಯರು ಕಂಡಂತೆ ಗಾಂಧಿ	20.0
55.	ಗೀತಾಮಾತೆ	80.00
56.	ಲೋಕ ಚಿಂತಕರು	145.00
57.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
58.	ಮಹದೇವ ದೇಸಾಯಿ	63.00
59.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
60.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
61.	Temple & Mosque	10–00
62.	Rastrapita Mahatma Gandhi	25–00
63.	Swarajya of My Dreams	5–00
64.	Gandhi My Grand Father	5–00
65.	Grand Pa Gandhi	5–00
66.	Relevance of Gandhi	20–00
67.	Vinoba Sage of the age	20.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-09-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927 ರಿಂದ ದಿ. 23-02-1927 ರವರೆಗೆ
● ನಿಪ್ಪಾಣಿ	ದಿ. 27-03-1927 ರಿಂದ ದಿ. 31-03-1927 ರವರೆಗೆ

● ಬೆಳಗಾವಿ	ದಿ. 01-04-1927
	ದಿ. 18-04-1027 ರಿಂದ
	ದಿ. 19-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ
	ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಮೈಸೂರು	ದಿ. 19-07-1927 ರಿಂದ
	ದಿ. 21-07-1927 ರವರೆಗೆ
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 22-07-1927
● ಮೈಸೂರು	ದಿ. 23-07-1927
● ಬೆಂಗಳೂರು	ದಿ. 24-07-1927 ರಿಂದ
	ದಿ. 30-07-1927 ರವರೆಗೆ
● ಕ್ಲೋಸ್‌ಪೇಟೆ (ರಾಮನಗರ)	ದಿ. 31-07-1927
● ಕಾನಕಾನಹಳ್ಳಿ (ಕನಕಪುರ)	
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ
	ದಿ. 11-08-1927 ರವರೆಗೆ
	ದಿ. 12-08-1927
● ದಾವಣಗೆರೆ	
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927

● ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
● ಆಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
● ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಭದ್ರಾವತಿ, ತರೀಕೆರೆ	ದಿ. 18-08-1927
● ಬೀರೂರು, ಕಡೂರು	
● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು	ದಿ. 20-08-1927
● ಅರಸೀಕೆರೆ	
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934

● ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ
● ಪೊನ್ನಂಪೇಟೆ, ಹುದಿಕೇರಿ	ದಿ. 22-02-1934
● ವಿರಾಜಪೇಟೆ, ಬೆಳ್ಳೂರು	ದಿ. 23-02-1934
● ಸೋಮವಾರ ಪೇಟೆ	
● ಗುಂಡುಕಟ್ಟಿ	
● ಮಡಿಕೇರಿ, ಸಂಪಾಜೆ, ಸುಳ್ಯ	ದಿ. 24-02-1934
● ಪುತ್ತೂರು, ಉಪ್ಪಿನಂಗಡಿ	
● ವಿಠಲಗಬ್ಬ, ಕಲ್ಲಡ್ಕ, ಪಾಣೆ	
● ಮಂಗಳೂರು, ಬಂಟ್ವಾಳ	
● ಮಂಗಳೂರು	
● ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಾಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ	ದಿ. 25-02-1934
● ಕುಂದಾಪುರ	ದಿ. 26-02-1934
● ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ	ದಿ. 27-02-1934
● ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ	ದಿ. 28-02-1934
● ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು	ದಿ. 01-03-1934
● ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು	ದಿ. 02-03-1934

- ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ — ದಿ. 03-03-1934
- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ — ದಿ. 04-03-1934
- ಬೆಳಗಾವಿ — ದಿ. 05-03-1934
- ಬೆಳಗಾವಿ — ದಿ. 06-03-1934
- ಬೆಳಗಾವಿ, ಯಮಕನಮರಡಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ — ದಿ. 07-03-1934
- ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ (ವಿಜಯಪುರ), ತಿಕೋಟ, ತೊರವಿ ಇಳಕಲ್ — ದಿ. 08-03-1934
- ನಂದಿ ಬೆಟ್ಟ — 10-05-1936 ರಿಂದ 30-05-1936 ರವರೆಗೆ
- ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ ಕೋಲಾರ, ಬಂಗಾರ ಪೇಟೆ, ಕೆ. ಜಿ. ಎಫ್ — 31-05-1936
- ಬೆಂಗಳೂರು — 01-06-1936 ರಿಂದ 12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ — 16-04-1937 ರಿಂದ 21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು	**Seven Social Sins**
ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Leprocy**
ವಿದ್ಯಾರ್ಥಿಗಳು	**Students**

ಈ ಕೃತಿಯನ್ನು ಓದಿದ ಮತ್ತು ಓದಿಸಿ ಕೇಳುವ ಪ್ರತಿಯೊಬ್ಬರೂ, ನೊಂದವರ ನೋವನ್ನು ನಿವಾರಿಸಲು ನಡುಕಟ್ಟಿ ನಿಲ್ಲಲಾರದೆ ಇರರು. ಹಾಗೆ ಆಕಾಶದಲ್ಲಿ ಮಿನುಗುವ ನಕ್ಷತ್ರಗಳಾಗಿ ವಿದೇಶಿ ಬಳಗದವರು ನಮಗೆ ಸದಾ ದಾರಿ ತೋರುವ ಬೆಳಕಾಗಿದ್ದಾರೆ

- ಡಾ. ವೂಡೇ ಪಿ. ಕೃಷ್ಣ

ಗಾಂಧಿ ಬಳಗದ ವಿದೇಶಿಯರಲ್ಲಿ ಪ್ರಮುಖವಾಗಿ ಮಹಿಳೆಯರು ಗಾಂಧಿ ಅವರ ಸಿದ್ಧಾಂತ, ಸರಳತೆ, ಸ್ವದೇಶಿ ಜೀವನಕ್ಕೆ ತಮ್ಮನ್ನು ತೆತ್ತುಕೊಂಡು, ಭಾರತದಲ್ಲಿ ಸೇವಾನಿರತರಾಗಿ ನೆಲೆನಿಂತ ಈ ಘಟ್ಟ ಭಾರತದ ಚರಿತ್ರೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆಯುವಂಥಹದಾಗಿದೆ. ಇಂಥಹ ಕೃತಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಗಾಗಿ ಬರೆದ, ಕೆ.ಎಸ್. ನಾರಾಯಣ ಸ್ವಾಮಿ ಅವರು ಅವಿಸ್ಮರಣೀಯರಾಗಿದ್ದಾರೆ. ಮುನ್ನುಡಿಯನ್ನು ಬರೆದು ಕೃತಿಯ ಮೌಲ್ಯವನ್ನು ಔನತ್ಯಕ್ಕೇರಿಸಿದ ಜಿ.ನಾ. ಮಂಗಳ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

- ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ISBN NO : 978-81-941136-4-5